ರಾಮಾಯಣ ಸಂಗ್ರಹಂ

ಎಸ್. ಜಿ. ಗೋವಿಂದರಾಜ ಅಯ್ಯಂಗಾರ್ಯರಿಂದ
ವಿರಚಿತವಾದುದು

ರಾಜಚರಿತವಿಶಾರದ ರಾವ್ ಸಾಹೇಬ್
ಕಂಚಿ ಹಯವದನರಾವ್, ಬಿ.ಎ., ಬಿ.ಎಲ್.
ಅವರ ಮುನ್ನುಡಿಯೊಡನೆ

ಪ್ರಕಾಶಕರು :
...ಗ್ ಅಂಡ್ ಪಬ್ಲಿಷಿಂಗ್ ಕಂಪೆನಿ, ಲಿಮಿಟೆಡ್
...ರು ರೋಡ್, ಬೆಂಗಳೂರು ಸಿಟಿ
೧೯೩೩

ರಾಮಾಯಣ ಸಂಗ್ರಹಂ

ಎಸ್. ಜಿ. ಗೋವಿಂದರಾಜ ಅಯ್ಯಂಗಾರ್ಯರಿಂದ
ವಿರಚಿತವಾದುದು

ರಾಜಚರಿತವಿಶಾರದ ರಾವ್ ಸಾಹೇಬ್
ಕಂಚಿ ಹಯವದನರಾವ್, ಬಿ.ಎ., ಬಿ.ಎಲ್.
ಅವರ ಮುನ್ನುಡಿಯೊಡನೆ

ಪ್ರಕಾಶಕರು :
ಬೆಂಗಳೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಕಂಪೆನಿ, ಲಿಮಿಟೆಡ್
ಮೈಸೂರು ರೋಡ್, ಬೆಂಗಳೂರು ಸಿಟಿ
೧೯೩೩

ಬೆಲೆ

PUBLISHERS' NOTE

Praktana Vimarsa Vichakshana Karnataka Prachya Vidyavaibhava Rao Bahadur R. Narasimhachar, M.A., M.R.A.S., Director of Archæological Researches in Mysore (Rtd.), and Author of *Karnataka Kavicharite* and other works, writes under date 29th May 1933 after a perusal of this book :— "Mr. S. G. Govindaraja Iyengar is a well-known writer of good Kannada prose. The style of the book is simple and chaste and the diction dignified."

BANGALORE,
9-6-1933.

THE PUBLISHERS.

ಪ್ರಕಾಶಕರ ಸೂಚನೆ

ಮೈಸೂರು ಸರಕಾರದ ಪ್ರಾಚೀನಲಿಪ್ಯನ್ವೇಷಣಶಾಖೆಯ ಮುಖ್ಯಾಧಿಕಾರಪದವಿಯನ್ನು ಅಲಂಕರಿಸಿ, ಈಗ ವಿಶ್ರಾಂತಿ ಸುಖವನ್ನು ಅನುಭವಿಸುತ್ತಿರುವ, 'ಕರ್ಣಾಟಕ ಕವಿಚರಿತ್ರೆ'ಕಾರರಾದ ಪ್ರಾಕ್ತನ ವಿಮರ್ಶ ವಿಚಕ್ಷಣ ಕರ್ಣಾಟಕ ಪ್ರಾಚ್ಯ ವಿದ್ಯಾವೈಭವ ರಾವ್ ಬಹದ್ದೂರ್ ಶ್ರೀಮಾನ್ ಆರ್. ನರಸಿಂಹಾಚಾರ್ಯರ್, ಎಂ.ಎ., ಎಂ.ಆರ್.ಎ.ಎಸ್. ರವರು ಈ ಪುಸ್ತಕವನ್ನು ಓದಿಸಿ ಕೇಳಿದ ತರುವಾಯ, ೨೯-೫-೧೯೩೩ರಲ್ಲಿ ನಮಗೆ ಬರೆದ ಪತ್ರದಲ್ಲಿ ಈ ರೀತಿ ಅಪ್ಪಣೆ ಕೊಡಿಸಿದ್ದಾರೆ:—"ಶ್ರೀಮಾನ್ ಎಸ್. ಜಿ. ಗೋವಿಂದರಾಜ ಅಯ್ಯಂಗಾರ್ಯರ್‌ರು ಕನ್ನಡದಲ್ಲಿ ಒಳ್ಳೆಯ ಗದ್ಯವನ್ನು ಬರೆಯುವುದರಲ್ಲಿ ಹೆಸರಾದವರು. ಈ ಪುಸ್ತಕದ ಶೈಲಿಯು ಶುದ್ಧವಾಗಿಯೂ ಸುಲಭವಾಗಿಯೂ ಇದೆ. ಬರೆದಿರುವ ರೀತಿಯು ಗಂಭೀರವಾಗಿರುತ್ತದೆ."

ಬೆಂಗಳೂರು,
೯-೬-೧೯೩೩.

ಪ್ರಕಾಶಕರು.

ಮುನ್ನುಡಿ

ಈ ಭರತಖಂಡದಲ್ಲಿರುವ ಹಿಂದೂ ಜನಸಮುದಾಯಕ್ಕೆಲ್ಲ ರಾಮಾಯಣವು ಬಹುಪೂಜ್ಯವಾದ ಗ್ರಂಥ. ಇದು ಈ ಖಂಡದಲ್ಲಿ ಪ್ರಚಲಿತವಾಗಿರುವ ಸಕಲ ಭಾಷೆಗಳಲ್ಲಿಯೂ ಬರೆಯಲ್ಪಟ್ಟಿರುತ್ತದೆ. ಪಾಶ್ಚಾತ್ಯರು ಕೂಡ, ಈ ಗ್ರಂಥವನ್ನು ತಮ್ಮ ತಮ್ಮ ಭಾಷೆಗಳಿಗೆ ಪರಿವರ್ತಿಸಿಕೊಂಡಿದ್ದಾರೆ.

ಇದು ಹಿಂದೂ ಜನಾಂಗದ ನಡೆನುಡಿಗಳಿಗೂ, ರೀತಿ ನೀತಿಗಳಿಗೂ ಮಾದರಿಯಾಗಿರುವ ಗ್ರಂಥ. ಇದರಲ್ಲಿರುವ ಒಂದೊಂದು ವಿಷಯವನ್ನು ಹಿಡಿದು, ಕವಿಗಳು ವಿಸ್ತಾರವಾಗಿ ಹಲವು ಗ್ರಂಥಗಳನ್ನು ರಚಿಸಿದ್ದಾರೆ. ಆಸ್ತಿಕರಾದ ಹಿಂದೂ ಜನರು, ಪ್ರತಿನಿತ್ಯವೂ ರಾಮಾಯಣವನ್ನು ಪಾರಾಯಣಮಾಡುತ್ತಾರೆ. ಹಿಂದೆ ಮನೆಗಳಲ್ಲಿ, ಮುದುಕರು ಸಂಜೆಯ ವೇಳೆ, ಮಕ್ಕಳನ್ನು ಹತ್ತಿರ ಕೂರಿಸಿಕೊಂಡು, ಈ ಕಥೆಯನ್ನು ಅವರಿಗೆ ಹೇಳುತ್ತಿದ್ದರು.

ಈಗಣ ಕಾಲದಲ್ಲಿ, ಜನರ ಜೀವನಕಾರ್ಯವು ತುಂಬ ವ್ಯತ್ಯಸ್ತವಾಗಿದೆ. ಇಂಗ್ಲಿಷ್ ಭಾಷೆಯು ವಿಶೇಷವಾಗಿ ಬಳಕೆಗೆ ಬಂದು, ದೇಶಭಾಷೆಯ ವಿಷಯದಲ್ಲಿ ಜನರಿಗೆ ಅಭಿಮಾನವು ಕಮ್ಮಿಯಾಗುತ್ತ ಬಂದಿದೆ. ಪ್ರಕೃತದಲ್ಲಿ ಸಂಸ್ಕೃತಭಾಷೆಯನ್ನು ಓದಿ, ಪಂಡಿತರಾಗಿ, ಅದೇ ಭಾಷೆಯಲ್ಲಿ ಬರೆದಿರುವ ರಾಮಾಯಣವನ್ನು ಪಾರಾಯಣಮಾಡಿ ಆನಂದಪಡುವ ಯೋಗವು, ಹಲವು ಕಾರಣಗಳಿಂದ ಅನೇಕಜನರಿಗೆ ಸಿಕ್ಕುವುದಿಲ್ಲ. ಪರಂತು, ಇಂಥ ಅತ್ಯುತ್ಕೃಷ್ಟವಾದ, ಜನರ ನಲ್ನಡತೆಗೆ ಆದರ್ಶಪ್ರಾಯವಾದ, ರಾಮಾಯಣವನ್ನು ಸಕಲರೂ ಅವಶ್ಯವಾಗಿ ಓದಲೇ ಬೇಕು.

ಜೀವನಕಾರ್ಯದಲ್ಲಿ ದಿನವನ್ನೆಲ್ಲ ಕಳೆಯಬೇಕಾಗಿರುವ ಅದ್ಯಸ್ಥಿತಿಯಲ್ಲಿ, ಜನರಿಗೆ—ಸಂಸ್ಕೃತಗ್ರಂಥವನ್ನು ಓದುವ ಮಾತು

ಹಾಗಿರಲಿ—ದೇಶಭಾಷೆಯಲ್ಲಿರುವ ಗ್ರಂಥವನ್ನೂ ಪೂರ್ತಿಯಾಗಿ ಓದುವುದಕ್ಕೆ ಹೊತ್ತಿಲ್ಲ. ಅವರಿಗೆ ರಾಮಾಯಣವೇನೆಂದು ತಿಳಿಯದಿರುವುದು ಬಲು ಹೀನಾಯ. ಈ ಕೊರತೆಯನ್ನು ಹೋಗಲಾಡಿಸಲಿಕ್ಕಾಗಿ, ರಾಮಾಯಣದ ಕಥೆಯನ್ನು ಸಂಗ್ರಹವಾಗಿ, ಶುದ್ಧವಾದ ತಿಳಿಗನ್ನಡದಲ್ಲಿ ಬರೆದಿದೆ. ಸಂಗ್ರಹವಾಗಿ ಬರೆದಿದ್ದರೂ ಕಥೆಯಲ್ಲಿ ಲೋಪವೇನೂ ಇರುವುದಿಲ್ಲ.

ಇದನ್ನು ಬರೆದವರು ಶ್ರೀಮಾನ್ ಎಸ್. ಜಿ. ಗೋವಿಂದರಾಜ ಅಯ್ಯಂಗಾರ್ಯರು. ಇವರು "ಪ್ರಿಂರೋಜ ವಿಜಯಂ", "ತಾಮಸ ಪ್ರಭು ಚರಿತಂ", "ಶ್ರೀಕೃಷ್ಣರಾಜರಾಜತಸಾಮ್ರಾಜ್ಯವೈಭವಂ", "ಶ್ರೀಕೃಷ್ಣ ಸೇವಾವ್ರತಂ", "ಮೈಸೂರು ರಾಜವಂಶಾನುವರ್ಣನಂ", "ಶ್ಮಶಾನಶೋಕಂ", "ಶ್ರೀಮಾಲಿಕಾಸ್ತೋತ್ರಂ", "ಪ್ರಾಬೋಧಕೀ ಸ್ತೋತ್ರಂ", ಮುಂತಾದ ಗ್ರಂಥಗಳನ್ನು ಬರೆದಿದ್ದಾರೆ. ಕನ್ನಡದ ಕವಿತೆಗಾಗಿ ಇವರಿಗೆ ಶ್ರೀಮನ್ಮಹಾರಾಜರವರ ಪಾರಿತೋಷಿಕವೂ, ಬೆಂಗಳೂರು ಪೌರಸಭೆಯವರ ಸ್ವರ್ಣಪದಕವೂ ಬಂದಿವೆ.

ಈ ರಾಮಾಯಣಸಂಗ್ರಹದ ಶೈಲಿಯು ಸುಲಭವಾಗಿರುವುದಲ್ಲದೆ ಶುದ್ಧವಾಗಿಯೂ ಇದೆ. ಇದರ ಮುದ್ರಣವು ಮುದ್ದು. ಇದರಲ್ಲಿ ಅಂದವಾಗಿರುವ ಚಿತ್ರಪಟಗಳಿವೆ. ಈ ಗ್ರಂಥವು, ಲೋವರ್ ಸೆಕೆಂಡರಿ, ಅಪ್ಪರ್ ಸೆಕೆಂಡರಿ, ಎಸ್.ಎಸ್.ಎಲ್.ಸಿ., ಮುಂತಾದ ಪರೀಕ್ಷೆಗಳಿಗೆ ಪಠ್ಯಪುಸ್ತಕವಾಗಿರಲು ತಕ್ಕುದಾಗಿದೆ. ನಿತ್ಯಕಾರ್ಯಕಲಾಪಗಳ ದೆಸೆಯಿಂದ ವಿಶೇಷವಾಗಿ ಅವಕಾಶವು ದೊರೆಯದಿರುವ ಆಸ್ತಿಕರಾದ ಸ್ತ್ರೀಪುರುಷಪಾಠಕವರ್ಗಕ್ಕೆ, ಈ ಗ್ರಂಥವು ರಾಮಾಯಣದ ಸಾರವನ್ನು ಅಲ್ಪಕಾಲದಲ್ಲಿ ಸುಲಭವಾಗಿ ತಿಳಿಸತಕ್ಕುದಾಗಿರುತ್ತದೆ.

ಬೆಂಗಳೂರು,
ಶ್ರೀಮುಖ ಸಂ॥
ಜ್ಯೇಷ್ಠ ಶು॥ ದ್ವಿತೀಯೆ.

ಕಂಚಿ ಹಯವದನರಾವ್.

ವಿಷಯಸೂಚಿಕೆ

		ಪುಟ
೧.	ಬಾಲಕಾಂಡ	೧
೨.	ಅಯೋಧ್ಯಾಕಾಂಡ	೨೨
೩.	ಅರಣ್ಯಕಾಂಡ	೪೫
೪.	ಕಿಷ್ಕಿಂಧಾಕಾಂಡ	೬೦
೫.	ಸುಂದರಕಾಂಡ	೭೪
೬.	ಯುದ್ಧಕಾಂಡ	೯೨
	ಟಿಪ್ಪಣಿ	೧೨೩

ಚಿತ್ರಪಟಗಳು

			ಪುಟ
ಸೀತಾಕಲ್ಯಾಣ	..	..	೨೦
ಸೀತಾರಾಮಲಕ್ಷ್ಮಣರು ಗಂಗಾ ನದಿಯನ್ನು ದಾಟುವುದು	..	..	೩೮
ಸೀತಾಹೇಮಮೃಗ	..	..	೫೩
ಸಮುದ್ರ ತೀರದಲ್ಲಿ ಹನುಮದಾದಿಗಳು ಪ್ರಾಯೋಪವೇಶಮಾಡುವುದು		..	೭೧
ಲಂಕಾದಹನ	..	..	೮೮
ಶ್ರೀರಾಮಪಟ್ಟಾಭಿಷೇಕ	..	..	೧೨೦

ಶ್ರೀಃ

ಜಯತು ಭಗವಾನ್

ರಾಮಾಯಣ ಸಂಗ್ರಹಂ

ಬಾಲಕಾಂಡ

ಉತ್ತರ ಕೋಸಲವೆಂಬ ನಾಡಿನಲ್ಲಿ ಅಯೋಧ್ಯೆಯೆಂಬ ಪಟ್ಟಣವೊಂದು ಇದ್ದಿತು. ಅದರಲ್ಲಿ ಒಳ್ಳೆಯ ಗುಣಶಾಲಿಯಾದ ದಶರಥನೆಂಬ ಅರಸನೊಬ್ಬನು ದೊರೆತನವನ್ನು ಮಾಡುತ್ತಿದ್ದನು. ಆ ದೊರೆಗೆ ಮೂವರು ಹೆಂಡಿರು. ಹಿರಿಯ ಹೆಂಡತಿಗೆ ಕೌಸಲ್ಯೆಯೆಂದು ಹೆಸರು; ನಡುಕಲ ರಾಣಿಯನ್ನು ಸುಮಿತ್ರೆ ಎಂದು ಕರೆಯುತ್ತಿದ್ದರು; ಕಿರಿಯ ಅರಸಿತಿಯನ್ನು ಕೈಕೇಯಿ ಎಂದು ಕೂಗುವರು. ದೊರೆಯು ಈ ಮೂವರು ಹೆಂಡಿರ ಕೂಡ ಬಹುಕಾಲದ ವರೆಗೆ ಸುಖವಾಗಿದ್ದನು. ಅವನಿಗೆ ಯಾವ ಹೆಂಡತಿಯಿಂದಲೂ ಮಕ್ಕಳಾಗಲಿಲ್ಲ.

ದಶರಥನು ಚಿಂತಿಸತೊಡಗಿದನು. ನನಗೆ ವಯಸ್ಸು ಕಳೆಯುತ್ತ ಬಂದಿದೆ. ನನ್ನ ಬಳಿಕ ಈ ರಾಜ್ಯವನ್ನು ಆಳುವುದಕ್ಕೆ ಒಂದು ಮಗು ವಾಗಲಿ ಹುಟ್ಟಲಿಲ್ಲವಲ್ಲ! ಇದುವರೆಗೂ ನಡೆದುಕೊಂಡು ಬರುತ್ತಿದ್ದ ನಮ್ಮ ಈ ವಂಶವು ನನ್ನೊಡನೆಯೇ ನಿಂತುಹೋಗುತ್ತದೆಯಲ್ಲ, ಎಂದು ಬಲು ಪೇಚಾಡಿ, ತನ್ನ ಕುಲಪುರೋಹಿತರಾದ ವಸಿಷ್ಠರ ಬಳಿಗೆ ಬಂದು, ಅವರೊಡನೆ ತನ್ನ ಸಂಕಟವನ್ನು ಹೇಳಿಕೊಂಡನು. ವಸಿಷ್ಠಮುನಿಯು ದೊರೆಯ ದುಃಖವನ್ನು ಕಂಡು ಮನಗರಗಿ—"ಅರಸೇ, ಇದಕ್ಕಾಗಿ ನೀನು ಇಷ್ಟೊಂದು ದುಃಖಪಡಬೇಕೆ? ನೀನು ಪುತ್ರಕಾಮೇಷ್ಟಿಯನ್ನು ಮಾಡು; ನಿನಗೆ ಮಕ್ಕಳು ಹುಟ್ಟುತ್ತಾರೆ" ಎಂದು ಹೇಳಿದನು. ಪುರೋಹಿತರ ಮಾತನ್ನು ಕೇಳಿ ದೊರೆಗೆ ಬಲು ಸಂತೋಷವಾಯಿತು.

ದಶರಥರಾಜನು ಪುತ್ರಕಾಮೇಷ್ಟಿಯನ್ನು ಶಾಸ್ತ್ರದಲ್ಲಿ ಹೇಳಿರುವ ಮೇರೆಗೆ ಮಾಡಿದನು. ಯಜ್ಞವೆಲ್ಲವೂ ಮುಗಿದ ಬಳಿಕ, ಬೆಂಕಿಯ ಕೊಂಡದಿಂದ ಬಂಗಾರದಂತೆ ಹೊಳೆಯುವ ಮೆಯ್ಯ ಪುರುಷನೊಬ್ಬನು ಎದ್ದು ಬಂದನು. ಅವನ ಕಯ್ಯಲ್ಲಿ ಒಂದು ಚಿನ್ನದ ಪಾತ್ರವು ಕಂಗೊಳಿಸುತ್ತಿದ್ದಿತು. ಆ ಪಾತ್ರದ ತುಂಬ ದಿವ್ಯವಾದ ಪಾಯಸವು ಘಮಘಮಿಸುತ್ತಿದ್ದಿತು. ಆ ಪುರುಷನು, ಮಕ್ಕಳಾಗಬೇಕೆಂದು ಆಸೆಪಡುತ್ತಿದ್ದ ದಶರಥನ ಕಯ್ಗೆ, ಅಮೃತದಂತಿರುವ ಪಾಯಸವನ್ನು ತುಂಬಿದ ಆ ಪಾತ್ರವನ್ನು ಕೊಟ್ಟನು.

ಬಳಿಕ ದೊರೆಯು, ಆ ಪಾಯಸದಲ್ಲಿ ಅರೆ ಪಾಲನ್ನು ಹಿರಿಯ ರಾಣಿಯಾದ ಕೌಸಲ್ಯೆಗೂ, ಉಳಿದ ಅರೆ ಪಾಲನ್ನು, ತನ್ನ ಮೋಹದ ಹೆಂಡತಿಯಾದ ಕಿರಿಯ ರಾಣಿ ಕೈಕೇಯಿಗೂ, ಕೊಟ್ಟುಬಿಟ್ಟನು. ನಡುಕಲ ರಾಣಿಯ ಪಾಲಿಗೆ ಸೊನ್ನೆಯು ಬಿದ್ದಿತು. ಆ ಇಬ್ಬರು ರಾಣಿಯರೂ, ಸುಮಿತ್ರೆಯೆಂಬ ತಮ್ಮ ಸವತಿಯ ಸ್ಥಿತಿಯನ್ನು ನೋಡಿ, ಕನಿಕರಪಟ್ಟು, ಅಯ್ಯೋ, ಪಾಪ, ನೀನೂ ತೆಗೆದುಕೊ ಎಂದು ಹೇಳಿ, ತಮ್ಮ ಪಾಲಿನಲ್ಲಿ ಅರ್ಧ ಅರ್ಧ ಭಾಗವನ್ನು ತೆಗೆದು ಅವಳಿಗೆ ಕೊಟ್ಟರು. ಈ ರೀತಿಯಾಗಿ, ಮೂವರು ರಾಣಿಯರೂ ಆ ಪಾಯಸವನ್ನು ಸ್ವೀಕರಿಸಿದರು. ದಶರಥನು ಯಜ್ಞವನ್ನು ಮುಗಿಸಿ, ಮಂಗಳಸ್ನಾನವನ್ನು ಮಾಡಿದನು. ಯಜ್ಞಕ್ಕಾಗಿ ಬಂದಿದ್ದವರೆಲ್ಲರೂ, ಅವರವರ ಊರುಗಳಿಗೆ ಹೊರಟು ಹೋದರು. ದಶರಥನು, ತನ್ನ ಆಶೆಯನ್ನು ನೆರವೇರಿಸಿಕೊಂಡು, ಸಂತೋಷದಿಂದ ಅಯೋಧ್ಯೆಗೆ ಪಯಣಮಾಡಿದನು.

ಇತ್ತ ಮೂವರು ರಾಣಿಯರೂ ಬಸಿರಿಯರಾದರು. ಅವರ ಮೈ ಕೈ ಕಾಲುಗಳು ಬಾಡುತ್ತ ಬಂದುವು. ಅವರು ತೊಟ್ಟಿದ್ದ ಒಡವೆಗಳನ್ನೆಲ್ಲ ಸಡಿಲಿಸಿಬಿಟ್ಟರು. ದಿನಗಳು ತುಂಬುತ್ತ ಬಂದಹಾಗೆಲ್ಲ, ಅವರ ಮುಖಗಳೂ ಮೆಯ್ಯೂ, ಬಿಳುಪೇರುತ್ತ ಬಂದುವು. ಅವರ ಸಣ್ಣ ನಡುವು ದಪ್ಪನಾಯಿತು. ಅವರ ಹೊಟ್ಟೆಯು ಆಲದೆಲೆಯಂತೆ ಆಯಿತು. ಎಲ್ಲರಿಗೂ ಒಂಬತ್ತು ತಿಂಗಳುಗಳು ತುಂಬಿದುವು.

ಹೀಗಿರುವಾಗ, ಸೂರ್ಯನು ಮೇಷರಾಶಿಯಲ್ಲಿರಲು, ಗುರುವು

ಚಂದ್ರನ ಸಂಗಡವಿರುತ್ತಿರಲು, ಕರ್ಕಾಟಕ ಲಗ್ನದಲ್ಲಿ, ನವಮಿ ತಿಥಿ ಪುನರ್ವಸೂ ನಕ್ಷತ್ರದ ದಿವಸ, ಅಯೋಧ್ಯಾ ಪಟ್ಟಣದಲ್ಲಿ ದಶರಥನ ಹಿರಿಯ ರಾಣಿಯಾದ ಕೌಸಲ್ಯೆಯು, ಮುದ್ದಾದ ಗಂಡು ಮಗುವೊಂದನ್ನು ಹಡೆದಳು. ಕಿರಿಯ ರಾಣಿಗೆ ಒಂದು ಗಂಡು ಕೂಸಾಯಿತು. ನಡುಕಲ ರಾಣಿಯು ಅವಳಿ ಗಂಡುಮಕ್ಕಳನ್ನು ಹೆತ್ತಳು. ಕೌಸಲ್ಯೆಯ ಮಗುವಿಗೆ ರಾಮನೆಂದೂ, ಸುಮಿತ್ರೆಯ ಅವಳಿ ಮಕ್ಕಳಿಗೆ ಲಕ್ಷ್ಮಣ ಶತ್ರುಘ್ನರೆಂದೂ, ಕೈಕೇಯಿಯ ಮಗುವಿಗೆ ಭರತನೆಂದೂ ಹೆಸರಿಟ್ಟರು. ಈ ನಾಲ್ಕು ಮಂದಿ ಮಕ್ಕಳೂ ತುಂಬ ಗುಣವಂತರಾಗಿ ಬೆಳೆಯುತ್ತಿದ್ದರು.

ಒಂದು ದಿವಸ, ದಶರಥ ಮಹಾರಾಜನ ಸಭೆಗೆ, ವಿಶ್ವಾಮಿತ್ರಮುನಿಗಳು ಬಿಜಯಮಾಡಿಸಿದರು. ಅವರನ್ನು ಕಂಡ ಕೂಡಲೇ, ರಾಜನು ಆಸನದಿಂದ ಎದ್ದುನಿಂತು, ಮರ್ಯಾದೆಯನ್ನು ಮಾಡಿ ಕುಳ್ಳಿರಿಸಿ, ಬಂದ ಕಾರ್ಯವೇನೆಂದು ವಿನಯದಿಂದ ಕೇಳಿದನು. ಆಗ, ಮಹಾನುಭಾವನಾದ ವಿಶ್ವಾಮಿತ್ರಮುನಿಯು, ದಶರಥನನ್ನು ನೋಡಿ, ಎಲೈ ರಾಜನೇ, ಕೇಳು, ನಾನು ಒಂದು ಯಜ್ಞವನ್ನು ಮಾಡಬೇಕೆಂದಿದ್ದೇನೆ. ಅದನ್ನು ಮಾಡಗುಡದೆ, ರಾಕ್ಷಸರು ಅಡಿಗಡಿಗೆ ತಡೆಗಟ್ಟುತ್ತಿದ್ದಾರೆ. ನಿನ್ನ ಮಗನಾದ ವಿನಯಶಾಲಿ ರಾಮನ ಮತ್ತು ಲಕ್ಷ್ಮಣನ ಸಹಾಯದಿಂದ, ಆ ರಾಕ್ಷಸರ ತಂಟೆಯನ್ನು ನೀಗಿಕೊಂಡು, ಯಜ್ಞವನ್ನು ಮುಗಿಸಿ, ಕೃತಾರ್ಥನಾಗಬೇಕೆಂದು ಇದ್ದೇನೆ. ನೀನು ಆ ಮಕ್ಕಳನ್ನು ನನ್ನ ಸಂಗಡ ಕಳುಹಿಸಿಕೊಡುತ್ತೀಯಾ? ಎಂಬುದಾಗಿ ಕೇಳಿದನು.

ಈ ರೀತಿ, ಕೇಳುವುದಕ್ಕೆ ಕಷ್ಟವಾಗುವಂತೆ ನುಡಿದ ವಿಶ್ವಾಮಿತ್ರರ ಮಾತನ್ನು ಕೇಳಿ, ಮಕ್ಕಳೆಂದರೆ ತುಂಬ ಅಕ್ಕರೆಯಿಂದಿದ್ದ ರಾಜನು ಸಂಕಟಪಟ್ಟುಕೊಂಡು, ಅವರೊಡನೆ ಇಂತೆಂದನು: ಸ್ವಾಮಿನ್ ಮಹಾನುಭಾವರೇ, ನನ್ನ ಮಕ್ಕಳು ಇನ್ನೂ ಹಾಲುಗಲ್ಲದ ಹಸುಳೆಗಳು. ಅವರು ನಿಮ್ಮ ಯಜ್ಞವನ್ನು ರಕ್ಷಣೆಮಾಡಬಲ್ಲರೇ? ಯಜ್ಞಕ್ಕೆ ತಡೆ ಮಾಡುವ ಬಲಶಾಲಿಗಳಾದ ಆ ರಾಕ್ಷಸರನ್ನು ಕೊಲ್ಲುವುದಕ್ಕೆ ಅವರಿಂದ ಆದೀತೇ? ನಾನು ತುಂಬ ಕಷ್ಟಪಟ್ಟು, ಈ ಮಕ್ಕಳನ್ನು ಮುಪ್ಪಿನ

ಕಾಲದಲ್ಲಿ ಪಡೆದೆನು. ಅವರನ್ನು ತಮ್ಮ ಸಂಗಡ ಕಳುಹಿಸಲಾರೆನೆಂದು ಹೇಳಿ ಬಲು ಬಗೆಯಿಂದ ಅಂಗಲಾಚಿಕೊಂಡನು. ದೊರೆಯು ಎಷ್ಟು ಕೇಳಿಕೊಂಡರೂ ವಿಶ್ವಾಮಿತ್ರರು ಬಿಡಲಿಲ್ಲ. ಅದನ್ನು ಕಂಡು ದಶರಥ ರಾಜನ ಪುರೋಹಿತರಾದ ವಸಿಷ್ಠರು, ಅಯ್ಯಾ ದೊರೆಯೇ, ಮಹಾ ಭಾಗ್ಯಶಾಲಿಯಾದ ಈ ವಿಶ್ವಾಮಿತ್ರಮುನಿಯ ಮಾತನ್ನು ತೆಗೆದು ಹಾಕಬಾರದು; ಇವರೊಂದಿಗೆ ರಾಮಲಕ್ಷ್ಮಣರನ್ನು ಕಳುಹಿಸಿ ಕೊಟ್ಟು, ಇವರಿಗೆ ಗೌರವವನ್ನು ಕೊಡು; ನಿನ್ನ ಮಕ್ಕಳಾದ ರಾಮ ಲಕ್ಷ್ಮಣರ ಮೂಲಕ, ಈ ಲೋಕದಲ್ಲಿ, ರಾಕ್ಷಸರ ಸುಳಿವೇ ಇಲ್ಲ ದಂತಾಗುತ್ತದೆ, ಎಂದು ದಶರಥರಾಯನಿಗೆ ಧೈರ್ಯವನ್ನು ಹೇಳಿದರು. ಬಳಿಕ ರಾಜನು, ಗಾಧಿರಾಜನ ಕುಮಾರರಾದ ವಿಶ್ವಾಮಿತ್ರಮುನಿ ಯೊಡನೆ, ರಾಮಲಕ್ಷ್ಮಣರಿಬ್ಬರನ್ನೂ ಕಳುಹಿಸಿದನು. ಮುನಿಗೆ ಬಹು ಸಂತೋಷವಾಯಿತು.

ಬಳಿಕ ವಿಶ್ವಾಮಿತ್ರರು, ರಾಜಕುಮಾರರಿಬ್ಬರನ್ನೂ ಕರೆದುಕೊಂಡು ಹೋಗುತ್ತ, ಅವರಿಗೆ ದಾರಿ ನಡೆದ ದಣಿವೂ, ಹಸಿವು ಬಾಯಾರಿಕೆಗಳೂ ತೋರದೆ ಇರುವುದಕ್ಕೋಸ್ಕರ, ಬಲೆ, ಅತಿಬಲೆ ಎಂಬ ಎರಡು ಮಂತ್ರ ಗಳನ್ನು ಹೇಳಿಕೊಟ್ಟರು. ಈ ರೀತಿಯಾಗಿ ಮಂತ್ರಗಳನ್ನು ಕಲಿತ ರಾಮಲಕ್ಷ್ಮಣರಿಗೆ ಅವರು ಒಂದು ತಾವನ್ನು ತೋರಿಸಿ, ಅಯ್ಯಾ ಕುಮಾರಕರಿರಾ, ಕೇಳಿರಿ; ಈ ಪ್ರದೇಶದಲ್ಲಿ ಪರಮೇಶ್ವರನು ತಪಸ್ಸನ್ನು ಮಾಡುತ್ತಿದ್ದನು. ಮನ್ಮಥನು, ಅವನ ತಪಸ್ಸು ಸಾಗದ ಹಾಗೆ, ತಡೆಗಳನ್ನು ಮಾಡಿದನು. ಪರಮೇಶ್ವರನಿಗೆ ಅವನ ಮೇಲೆ ಬಲು ಸಿಟ್ಟುಬಂದಿತು. ಕೂಡಲೇ ಅವನು ತನ್ನ ಹಣೆಗಣ್ಣನ್ನು ತೆರೆದನು. ಅದರಿಂದ ಬೆಂಕಿಯು ಹುಟ್ಟಿ, ಮನ್ಮಥನನ್ನು ಸುಟ್ಟು ಬೂದಿಮಾಡಿ ಬಿಟ್ಟಿತು. ಇಲ್ಲಿ, ಮನ್ಮಥನ ಅಂಗ(ದೇಹ)ವು ತೊಲಗಿಹೋದ ಕಾರಣ, ಈ ಪ್ರದೇಶಕ್ಕೆ ಅಂಗವೆಂದು ಹೆಸರಾಯಿತು, ಎಂದು ಹೇಳಿದರು. ಬಳಿಕ ಮೂವರೂ, ಮಾನಸಸರೋವರದಿಂದ ಹುಟ್ಟಿದ ಸರಯೂ ನದಿಯನ್ನು ದಾಟಿ, ಮಲದಕರೂಶವೆಂಬ ದೇಶವನ್ನು ಹೊಕ್ಕರು. ಆಗ ಗಾಧಿಪುತ್ರರು ಅರಸುಗುವರರನ್ನು ನೋಡಿ, ಮಕ್ಕಳಿರಾ, ಕೇಳಿರಿ,

ಪೂರ್ವದಲ್ಲಿ, ಸುಕೇತುವೆಂಬ ಯಕ್ಷನಿಗೆ, ಬ್ರಹ್ಮನ ವರದಿಂದ ತಾಟಕೆ ಯೆಂಬ ಬಲು ಚೆಲುವೆಯಾದ ಮಗಳೊಬ್ಬಳು ಹುಟ್ಟಿದಳು. ಅವಳನ್ನು ಸುಂದನೆಂಬ ಒಬ್ಬನು ಮದುವೆಯಾದನು. ಅವಳ ಹೊಟ್ಟೆಯಲ್ಲಿ ಮಾರೀಚ ನೆಂಬ ಮಗನಾದನು. ಒಂದು ಕಾಲದಲ್ಲಿ, ಸುಂದನು ಅಗಸ್ತ್ಯಮುನಿ ಯಿಂದ ಹತನಾದನು. ತಂದೆಯು ಸಾಯಲಾಗಿ, ಮಾರೀಚನು ಕೋಪ ದಿಂದ ಅಗಸ್ತ್ಯರನ್ನು ತಿರಸ್ಕಾರಮಾಡಿದನು. ಅವನ ಈ ಕೆಟ್ಟ ಚಾಳಿ ಯನ್ನು ಕಂಡು, ಅಗಸ್ತ್ಯರು ಕಡುಮುಳಿದು, ಎಲಾ ನೀಚ, ನೀನು ರಾಕ್ಷಸನಾಗು ಎಂದು ಶಪಿಸಿ, ತಾಟಕೆಯನ್ನು ಕುರಿತು, ಎಲೌ ದುಷ್ಟೇ, ನಿನ್ನ ಈ ಚೆಲ್ವಿಕೆಯು ಹಾಳಾಗಲಿ. ನೀನು ವಿಕಾರರೂಪ ವುಳ್ಳವಳಾಗಿ, ನರಮಾಂಸವನ್ನು ತಿನ್ನುವಳಾಗು, ಎಂದು ಬಯ್ದರು. ಆ ತಾಟಕೆಗೆ ಸಾವಿರ ಆನೆಗಳ ಬಲವಿದೆ; ಅವಳೂ, ಅವಳ ಮಗ ಮಾರೀಚನೂ, ನಮ್ಮ ಆಶ್ರಮವಿರುವೆಡೆಯಲ್ಲಿ, ತುಂಬ ಕಿರುಕುಳವನ್ನು ಕೊಡುತ್ತಿದ್ದಾರೆ; ಅವಳನ್ನು ನೀನು ಕೊಂದುಹಾಕು. ಹೆಂಗುಸನ್ನು ಹೇಗೆ ಹೊಡೆದು ಕೊಲ್ಲಲಿ, ಎಂದು ನೀನು ಶಂಕಿಸಬೇಡ. ಹಿಂದೆ ವಿರೋಚನನ ಮಗಳಾದ ಮಂಥರೆಯೆಂಬವಳು ಲೋಕಕ್ಕೆ ಉಪದ್ರವ ವನ್ನು ಮಾಡುತ್ತಿದ್ದಳು. ಅವಳನ್ನು ಇಂದ್ರನು ಸಂಹಾರಮಾಡಿದನು. ಪರಶುರಾಮನು, ತನ್ನ ತಾಯಾದ ರೇಣುಕೆಯ ತಲೆಯನ್ನು ಕಡಿದನು, ಎಂದು ಹೇಳಿ, ರಾಮನ ಮನಸ್ಸಿಗೆ ತೋರಿದ ಸಂದೇಹವನ್ನು ನೀಗಿಸಿದರು.

ಈ ರೀತಿ, ವಿಶ್ವಾಮಿತ್ರರು ಹೇಳಿದ ಪೂರ್ವವೃತ್ತಾಂತವನ್ನು ಕೇಳಿ, ತಾಟಕೆಯನ್ನು ಸಂಹಾರ ಮಾಡುತ್ತೇನೆಂದು ಒಪ್ಪಿಕೊಂಡು, ರಾಮನು ತನ್ನ ಬಿಲ್ಲಿನ ಹೆದೆಯನ್ನು ಮಿಡಿದು ಠಂಕಾರಮಾಡಿದನು. ಕೂಡಲೇ ಕೆನ್ನೀರಿಂದ ಮೆಯ್ಯೆಲ್ಲ ನನೆದು, ಭಯಂಕರಾಕಾರವುಳ್ಳ, ಪ್ರಾಣಿ ಹಿಂಸಕಳಾದ, ಆ ತಾಟಕೆಯು ವಿಶ್ವಾಮಿತ್ರಮುನಿಯ ಹಾದಿಯನ್ನು ಅಡ್ಡಗಿಸಿ ನಿಂತುಕೊಂಡಳು. ಆಗಲೇ, ರಾಮನು ಹೆದೆಯಲ್ಲಿ ಬಾಣವನ್ನು ಹೂಡಿ, ಆ ರಾಕ್ಷಸಿಯ ಮೇಲೆ ಪ್ರಯೋಗಮಾಡಿದನು. ಆ ಬಾಣದ ಪೆಟ್ಟಿನಿಂದ ತಾಟಕೆಯು ಸತ್ತಳು. ಶ್ರೀರಾಮನು, ಇನ್ನುಮುಂದೆ ಮಾಡುವ ರಾಕ್ಷಸ ಸಂಹಾರಕ್ಕೆ ಇದು ಅಂಕುರಾರ್ಪಣವಾಯಿತು.

ಈ ರೀತಿ ತಾಟಕೆಯನ್ನು ಕೊಂದುದಕ್ಕಾಗಿ ಬಹು ಸಂತೋಷ ಪಟ್ಟು, ವಿಶ್ವಾಮಿತ್ರರು, ರಾಮನಿಗೆ ಜೃಂಭಕ ಮುಂತಾದ ಅಸ್ತ್ರ ಮಂತ್ರ ಗಳನ್ನು ಉಪದೇಶಮಾಡಿ, ಮುಂದೆ ಹೋಗುತ್ತ, ಬ್ರಹ್ಮಲೋಕ ದಂತಿರುವ ಒಂದು ಪ್ರದೇಶವನ್ನು ಆ ರಾಜಪುತ್ರರಿಗೆ ತೋರಿಸಿ, ಈ ಪ್ರಕಾರವಾಗಿ ಹೇಳಿದರು.

ಮಕ್ಕಳಿರಾ ಕೇಳಿರಿ, ಶುದ್ಧಮನಸ್ಸುಳ್ಳ ಋಷಿಗಳು, ಪ್ರತಿದಿನವೂ ಭಗವಂತನನ್ನು ಧ್ಯಾನಿಸುತ್ತ, ಸಂಸಾರ ತಾಪತ್ರಯಗಳಿಲ್ಲದೆ ತಪಸ್ಸನ್ನು ಮಾಡುತ್ತಿರುವ ಈ ತಪೋವನದಲ್ಲಿ ವಾಮನನು, ಬ್ರಹ್ಮಚಾರಿಯಾಗಿ, ಬಲಿಯನ್ನು ಗೆಲ್ಲುವ ಸಲುವಾಗಿ, ತಪಸ್ಸನ್ನು ಮಾಡಿದನು. ಇಂದ್ರಾದಿ ದೇವತೆಗಳ ಸಂಕಟವನ್ನು ಹೋಗಲಾಡಿಸುವುದಕ್ಕಾಗಿ, ತಪಸ್ಸನ್ನು ಮಾಡಿದ ಶ್ರೀ ವಾಮನನ ಆಶ್ರಮದ, ಉದ್ದವಾದ ಮರಗಳು ಅಗೋ, ಅಲ್ಲಿ ಕಾಣುತ್ತಿವೆ, ನೋಡಿದಿರಾ.

ಎಂದು, ಬಗೆಬಗೆಯಾದ ಕಥೆಗಳನ್ನು ವಿಶ್ವಾಮಿತ್ರರು ಕಿವಿ ಗಿಂಪಾಗುವಂತೆ ಹೇಳುತ್ತ ಬರುತ್ತಿರಲು, ಕಲ್ಲು ಮುಳ್ಳುಗಳಿಂದ ತುಂಬಿ ರುವ ಕಾಡುದಾರಿಯಲ್ಲಿ ನಡೆಯುತ್ತಿದ್ದ ರಾಮಲಕ್ಷ್ಮಣರು ಕೇಳುತ್ತ, ಹಾದಿಯನ್ನು ನಡೆದ ಬಳಲಿಕೆಯನ್ನು ಕೊಂಚವೂ ಲೆಕ್ಕಿಸಲಿಲ್ಲ.

ಅನಂತರ ವಿಶ್ವಾಮಿತ್ರರು, ತಮ್ಮ ಸ್ಥಾನವಾದ ಸಿದ್ಧಾಶ್ರಮ ವನ್ನು ಪ್ರವೇಶಿಸಿ ಯಜ್ಞಕಾರ್ಯದಲ್ಲಿ ತೊಡಗಿದರು. ಆ ಸಮಯ ದಲ್ಲಿ, ವಿಶ್ವಾಮಿತ್ರರ ಶಿಷ್ಯರು, ಅಂತರಿಕ್ಷದಲ್ಲಿ ಯಮಭಟರಂತೆ ಸುಳಿ ದಾಡುತ್ತಿದ್ದ ಸುಬಾಹು, ಮಾರೀಚ ಮುಂತಾದ ರಾಕ್ಷಸರ ತಂಡವನ್ನು ಕಂಡು, ಅಂಜಿ, ಹಿಡಿದಿದ್ದ ದರ್ಭೆಯನ್ನೂ ಸಮಿತ್ತುಗಳ ಕಟ್ಟನ್ನೂ ಬಿಸುಟು, ಯುದ್ಧಮಾಡುವುದಕ್ಕೆ ಸಿದ್ಧವಾಗಿದ್ದ ರಾಮನ ಬಳಿಗೆ ಓಡಿಬಂದು, ಹೀಗೆ ಹೇಳಿದರು.

ಅಯ್ಯಾ, ರಾಜಕುಮಾರನೇ, ರಾಕ್ಷಸರು ಬೆಟ್ಟದ ಕೋಡು ಗಲ್ಲುಗಳನ್ನು ಕಿತ್ತುತಂದು, ಸುತ್ತಲೂ ಎಸೆಯುತ್ತಿದ್ದಾರೆ; ಕಿಲಕಿಲ ವೆಂದು ನಗುತ್ತಾರೆ; ಕೋಪದಿಂದ ಕೈಗಳನ್ನು ಹೊಸೆಯುತ್ತಿದ್ದಾರೆ; ಅಡಿಗಡಿಗೆ ಇತ್ತಲೂ ಅತ್ತಲೂ ಸುಳಿದಾಡುತ್ತಾರೆ; ಸಂಭ್ರಮದಿಂದ

ಕುಣಿಯುತ್ತಾರೆ; ನೆಲದ ಮೇಲೆ ರಕ್ತವನ್ನು ಸುರಿಯುತ್ತಾರೆ; ಕರುಳ ಮಾಲೆಯಿಂದ ತಲೆಗೂದಲನ್ನು ಎತ್ತಿಕಟ್ಟಿದ್ದಾರೆ; ಆಕಾಶದಲ್ಲಿ ಸಂಚರಿಸುವ ಜಂತುಗಳನ್ನೆಲ್ಲ ಸಂಕಟಪಡಿಸುತ್ತಿದ್ದಾರೆ; ನಮಗೆ ಕೈಕಾಲುಗಳು ಆಡುವುದಿಲ್ಲ, ತುಂಬ ಅಂಜಿಕೆಯಾಗಿದೆ; ಈ ನಮ್ಮ ಗುರುಗಳ ಯಜ್ಞವನ್ನು ಸಾಂಗವಾಗಿ ನೆರವೇರುವಂತೆ ಮಾಡು, ಎಂದು ಬಿನ್ನವಿಸಿದರು.

ಹೀಗೆ, ಅಂಜಿಕೆಯಿಂದ ಓಡಿಬಂದು, ತೊದಲುತ್ತ ನುಡಿದ ವಿಶ್ವಾಮಿತ್ರರ ಶಿಷ್ಯರನ್ನು ನೋಡಿ, ರಾಮನು, ಮುನಿಗಳಿರಾ ಹೆದರ ಬೇಡಿರಿ; ಆ ರಾಕ್ಷಸರನ್ನು ನಾನು ಬಲಿಹಾಕಿಬಿಡುತ್ತೇನೆ, ಎಂದು ಸಂತಯಿಸಿ, ಮಾರೀಚನಮೇಲೆ ವಾಯವ್ಯಾಸ್ತ್ರವನ್ನು ಎಸೆದನು. ಅದು ಅವನನ್ನು ತರಗೆಲೆಯಂತೆ ಹೊತ್ತುಕೊಂಡು ಹೋಗಿ, ನಡುಗಡಲೊಳಗೆ ಕೆಡಹಿತು. ಅವನು, ಹೊರಗೆ ಬರುವುದಕ್ಕೆ ಹೆದರಿ, ನೀರಮನುಷ್ಯನ ಹಾಗೆ ಜಲದಲ್ಲಿ ಅಡಗಿಕೊಂಡನು. ಯುದ್ಧದಲ್ಲಿ ಆಸಕ್ತನಾದ ಸುಬಾಹು ವೆಂಬವನು, ರಾಮನ ಬಾಣದಿಂದ ಹೊಡೆಯಲ್ಪಟ್ಟು, ಯಮಪಟ್ಟಣಕ್ಕೆ ಹೋದನು. ಹೀಗೆ ರಾಕ್ಷಸರೆಲ್ಲರೂ ಸತ್ತು, ಯಜ್ಞವು ಸುಮುಖ ವಾಗಿ ನೆರವೇರಲು, ವಿಶ್ವಾಮಿತ್ರರು ಮಂಗಳಸ್ನಾನವನ್ನು ಮಾಡಿ, ಜಯಲಕ್ಷ್ಮಿಯೊಡಗೂಡಿದ ರಾಮನಿಗೆ, ಜನಕನ ಯಜ್ಞಭೂಮಿಯಲ್ಲಿ ಸಿಕ್ಕಿದ ಸೀತಾದೇವಿಯನ್ನು ಸೇರಿಸಬೇಕೆಂದು ಬಯಸಿ, ಮಿಥಿಲಾ ಪಟ್ಟಣವನ್ನು ಕುರಿತು ಪಯಣಮಾಡಿದರು.

ಪ್ರಯಾಣಸಮಯದಲ್ಲಿ, ರಾಮನನ್ನು ಕುರಿತು, ಕೌಶಿಕಮುನಿಯು ಅಯ್ಯಾ ಕುಮಾರ, ಕೇಳು. ಪೂರ್ವದಲ್ಲಿ ಬ್ರಹ್ಮನ ಮಗನಾದ ಕುಶನೆಂಬ ರಾಜರ್ಷಿಯೊಬ್ಬನಿದ್ದನು. ಅವನಿಗೆ ಕುಶಾಂಬ, ಕುಶನಾಭ, ಧೂರ್ತ ರಜಸ, ವಸುವೆಂಬ ನಾಲ್ವರು ಮಕ್ಕಳು ಹುಟ್ಟಿದರು. ಆ ನಾಲ್ವರೂ ಕ್ರಮವಾಗಿ ಕೌಶಾಂಬೀ, ಮಹೋದಯ, ಧರ್ಮಾರಣ್ಯ, ಗಿರಿವ್ರಜ ಗಳೆಂಬ ಊರುಗಳನ್ನು ಕಟ್ಟಿಸಿದರು. ಕುಶನಾಭನೆಂಬ ಎರಡನೆಯ ಮಗನಿಗೆ, ಘೃತಾಚಿಯೆಂಬವಳಲ್ಲಿ ನೂರು ಹೆಣ್ಣುಮಕ್ಕಳಾದರು. ಆ ಹುಡುಗಿಯರು, ಯೌವನವತಿಯರಾಗಿ ಅಂತಃಪುರದ ತೋಟದಲ್ಲಿ

ಸುಳಿದಾಡುತ್ತಿರಲು, ವಾಯುವು, ತನ್ನನ್ನು ಮದುವೆಯಾಗಿರೆಂದು ಅವರನ್ನು ಕೇಳಿದನು. ನಾವು ನಮ್ಮ ತಂದೆಯ ಪೋಷಣೆಯಲ್ಲಿದ್ದೇವೆ; ಅವನನ್ನು ಕೇಳಿಕೊಳ್ಳಿರಿ, ಎಂದು ಅವರು ಉತ್ತರವಿತ್ತರು. ಅದನ್ನು ಕೇಳಿ, ವಾಯುವಿಗೆ ಕೋಪವು ಬಂದಿತು. ಅವನು, ಅವರ ಕೈಕಾಲುಗಳನ್ನೆಲ್ಲ ಸೆಳೆದು ಹಿಡಿದು, ಅವರ ರೂಪನ್ನು ವಿಕಾರವಾಗುವಂತೆ ಮಾಡಿಬಿಟ್ಟನು. ಹೆಣ್ಣುಮಕ್ಕಳು ವಾಯುಚೇಷ್ಟೆಯಿಂದ ವಿಕಾರರೂಪಿಗಳಾದರೆಂದು ತಿಳಿದರೂ, ಕುಶನಾಭನು ಕೋಪಗೊಳ್ಳದೆ, ಅವರನ್ನು ಚೂಳಿಯ ಮಗನಾದ, ಸೋಮದೆಯೆಂಬವಳ ಹೊಟ್ಟೆಯಲ್ಲಿ ಹುಟ್ಟಿದ, ಬ್ರಹ್ಮದತ್ತನೆಂಬ ರಾಜನಿಗೆ ಮದುವೆಮಾಡಿಕೊಟ್ಟನು. ಬ್ರಹ್ಮದತ್ತನು ಅವರನ್ನು ಮುಟ್ಟಿದ ಕೂಡಲೇ, ಆ ಹೆಣ್ಣುಮಕ್ಕಳ ವಿಕಾರರೂಪು ಹೋಯಿತು. ಅವರು ಮೊದಲಂತೆ ಚೆಲುವೆಯರಾದರು.

ಇತ್ತ ಕುಶನಾಭನು, ತನಗೆ ಗಂಡುಮಕ್ಕಳಾಗಬೇಕೆಂದು ಬಯಸಿ, ತನ್ನ ತಂದೆಯಾದ ಕುಶನ ಅನುಗ್ರಹದಿಂದ ನನ್ನ ತಂದೆಯಾದ ಗಾಧಿಯನ್ನು ಪಡೆದನು.

ಹೀಗೆ, ವಿಶ್ವಾಮಿತ್ರರ ಜನ್ಮವೃತ್ತಾಂತವನ್ನು ಕೇಳಿ, ಶ್ರೀರಾಮನು ಆ ರಾತ್ರಿಯನ್ನು ಒಂದು ನಿಮಿಷದಂತೆ ಕಳೆದು, ಕೆಂಪು ದಾಸವಾಳದ ಹೂವಿನ ಬಣ್ಣದಂತೆ ಕೆಂಪಾದ ಪ್ರಾತಃಕಾಲದಲ್ಲಿ, ಶೋಣಾನದಿಯೊಳಗೆ ನಿತ್ಯಕರ್ಮಗಳನ್ನು ಮಾಡಿ, ಜಪಾನುಷ್ಠಾನಗಳನ್ನು ಮುಗಿಸಿಕೊಂಡಿದ್ದ ವಿಶ್ವಾಮಿತ್ರರ ಸಂಗಡ, ಗಂಗಾನದಿಯ ಹಾದಿಯಲ್ಲಿ ಹೊರಟನು. ಹೋಗುತ್ತ ಹೋಗುತ್ತ, ಸ್ವಭಾವವಾಗಿ ಶುದ್ಧವಾದ ನೀರನ್ನುಳ್ಳುದಾಗಿ, ತನ್ನಲ್ಲಿ ಮುಳುಗಿದ ಜನರಿಗೆ ಮೋಕ್ಷವನ್ನು ಕೊಡತಕ್ಕುದಾಗಿ, ವೇದಪ್ರತಿಪಾದ್ಯವಾದುದಾಗಿ, ಕಂಗೊಳಿಸುವ ಗಂಗಾನದಿಯ ಬಳಿಗೆ ಬಂದು, ಶ್ರೀರಾಮನು ಕೌಶಿಕಮುನಿಯನ್ನು ನೋಡಿ, ಸ್ವಾಮಿನ್ ಗುರುಗಳೇ, ಈ ಗಂಗಾನದಿಯು ಹುಟ್ಟಿದ ರೀತಿಯನ್ನು ನನಗೆ ತಿಳಿಸಿ ಅನುಗ್ರಹಮಾಡಬೇಕು, ಎಂದು ಬೇಡಿಕೊಂಡನು. ವಿಶ್ವಾಮಿತ್ರಮುನೀಶ್ವರರು, ಆ ವೃತ್ತಾಂತವನ್ನು ಹೇಳುವುದಕ್ಕೆ ಉಪಕ್ರಮಮಾಡಿ, ಇಂತೆಂದರು.

ಕೇಳಯ್ಯ ದಶರಥಕುಮಾರ, ಪೂರ್ವದಲ್ಲಿ ಮೇರುವಿಗೆ ಮನೋರಮೆಯೆಂಬ ಮಗಳಿದ್ದಳು. ಅವಳನ್ನು ಹಿಮವಂತನು ಮದುವೆಯಾದನು. ಅವಳ ಬಸುರಲ್ಲಿ ಮಂದಾಕಿನೀ, ಪಾರ್ವತೀ ಎಂಬ ಇಬ್ಬರು ಹೆಣ್ಣುಮಕ್ಕಳು ಹುಟ್ಟಿದರು. ದೇವತೆಗಳು, ಹಿಮವಂತನ ಸಮ್ಮತಿಯಿಂದ, ಮಂದಾಕಿನಿಯನ್ನು ಸ್ವರ್ಗಕ್ಕೆ ಕರೆದುಕೊಂಡುಹೋದರು. ಗಿರಿರಾಜನು, ತನ್ನ ಎರಡನೆಯ ಮಗಳಾದ ಪಾರ್ವತಿಯನ್ನು, ಪರಮೇಶ್ವರನಿಗೆ ಕೊಟ್ಟು ವಿವಾಹಮಾಡಿದನು. ಒಂದು ಕಾಲದಲ್ಲಿ ಶಿವನೂ ಪಾರ್ವತಿಯೂ ಏಕಾಂತದಲ್ಲಿ ಇರುತ್ತಿದ್ದರು. ದೇವತೆಗಳ ಪ್ರಾರ್ಥನೆಯಂತೆ ಶಿವನು ತನ್ನ ತೇಜಸ್ಸನ್ನು ನೆಲದ ಮೇಲೆ ಬಿಟ್ಟನು. ಅದನ್ನು ಅಗ್ನಿಯು ಧರಿಸಿದನು. ಇತ್ತ, ಪಾರ್ವತಿಯು, ತನಗೆ ಮಕ್ಕಳಾಗದಂತೆ ಮಾಡಿದ ದೇವತೆಗಳ ಮೇಲೆ ಕೋಪಗೊಂಡು, ನಿಮಗೆ ನಿಮ್ಮ ಹೆಂಡಿರಲ್ಲಿ ಮಕ್ಕಳಾಗದೆ ಹೋಗಲಿ, ಎಂದು ಶಪಿಸಿದಳು. ಭೂಮಿಯನ್ನು ನೋಡಿ, ಎಲೇ, ನಾನು ಧರಿಸಬೇಕಾದ ಶಿವನ ತೇಜಸ್ಸನ್ನು ನೀನು ಧರಿಸಿದ ಕಾರಣ, ನಿನಗೆ ಹಲವರು ಗಂಡಂದಿರಾಗಲಿ, ಎಂದು ಬಯ್ದಳು. ಈ ಕಡೆ, ತಾರಕಾಸುರನನ್ನು ಕೊಲ್ಲುವುದಕ್ಕಾಗಿ ಸೇನಾನಿಯು ಹುಟ್ಟಬೇಕಾದುದರಿಂದ, ಬ್ರಹ್ಮಾದಿಗಳು ಅಗ್ನಿಯನ್ನು ಕರೆದು, ನೀನು ಧರಿಸಿರುವ ಶಿವವೀರ್ಯವನ್ನು ಮಂದಾಕಿನಿಯಲ್ಲಿ ಇಳುಹು, ಎಂದರು. ಮಂದಾಕಿನಿಯು, ಅದನ್ನು ಧಾರಣೆಮಾಡಲಾರದೆ, ಹಿಮವತ್ಪರ್ವತದ ತಪ್ಪಲೊಳಗಿದ್ದ ಜೊಂಡುಹುಲ್ಲಿನ ಪೊದೆಯಲ್ಲಿ ತಳ್ಳಿಬಿಟ್ಟಳು. ಅಲ್ಲಿ ಮಗುವು ಹುಟ್ಟಿತು. ಅದಕ್ಕೆ ಹಾಲ ಕೊಡುವುದಕ್ಕೋಸ್ಕರ, ದೇವತೆಗಳು ಆರುಮಂದಿ ಮಾತೃಕೆಯರನ್ನು ಕಳುಹಿದರು. ಆಗ, ತಾರಕವೈರಿಯಾದ ಆ ಕುಮಾರನು, ಆರುಮುಖಗಳನ್ನು ಮಾಡಿಕೊಂಡು, ಅವರ ಸ್ತನ್ಯಪಾನಮಾಡಿದನು.

ಎಲೈ ರಾಜಕುಮಾರ, ಮಂದಾಕಿನಿಯು ಮೂರು ವಿಧವಾದ ಸಂಗತಿಯನ್ನು, ಈಗ ನಿನಗೆ ಹೇಳುತ್ತೇನೆ ಕೇಳು, ಪೂರ್ವದಲ್ಲಿ ಸೂರ್ಯವಂಶದ ಅರಸಾದ ಸಗರನೆಂಬವನು ಅಯೋಧ್ಯೆಯಲ್ಲಿ ರಾಜ್ಯವಾಳುತ್ತಿದ್ದನು. ಅವನಿಗೆ ಕೇಶಿನಿಯೆಂದೂ, ಸುಮತಿಯೆಂದೂ ಇಬ್ಬರು

ಹೆಂಡಿರು. ಭೃಗುಮುನಿಗಳ ವರದಿಂದ, ಕೇಶಿನಿಯ ಗರ್ಭದಲ್ಲಿ, ಅಸಮಂಜನೆಂಬ ಮಗನು ಹುಟ್ಟಿದನು. ಸುಮತಿಗೆ ಅರುವತ್ತು ಸಾವಿರ ಗಂಡು ಮಕ್ಕಳಾದರು. ಕೇಶಿನಿಯ ಮಗನಾದ ಅಸಮಂಜನು, ಬಲು ಕೇಡುಗನಾಗಿ, ಪ್ರಜೆಗಳಿಗೆಲ್ಲ ಕಂಟಕನಾಗಿದ್ದನು. ಈ ಕಾರಣದಿಂದ ಅವನನ್ನು ಸಗರನು ತ್ಯಾಗಮಾಡಿದನು.

ಒಂದು ಸಮಯದಲ್ಲಿ, ಸಗರರಾಜನು, ಅಶ್ವಮೇಧಯಾಗಮಾಡಬೇಕೆಂದು ಬಯಸಿ, ಯಜ್ಞದ ಕುದುರೆಯನ್ನು ಸಂಚಾರಕ್ಕಾಗಿ ಹೊರವಡಿಸಿದನು. ಸಗರನ ಯಜ್ಞವು ಸಾಂಗವಾಗಿ ನಡೆದರೆ, ತನ್ನ ಪದವಿಯು ತಪ್ಪಿಹೋದೀತು, ಎಂದು ಹೆದರಿ, ಇಂದ್ರನು ರಾಕ್ಷಸವೇಷದಿಂದ ಬಂದು, ಆ ಕುದುರೆಯನ್ನು ಕದ್ದುಕೊಂಡು ಹೋದನು. ಆ ನಷ್ಟವಾದ ಕುದುರೆಯನ್ನು ಹುಡುಕಬೇಕೆಂದು, ಸಗರರಾಜನ ಕಿರಿಯ ರಾಣಿಯಾದ ಸುಮತಿಯ ಅರುವತ್ತುಸಾವಿರ ಮಕ್ಕಳೂ ಹೊರಟರು. ಅವರು, ಪರ್ವತಸಮೇತವಾದ ಭೂಮಿಯನ್ನು ತಮ್ಮ ಉಗುರುಗಳಿಂದ ಬಗಿದು, ಪಾತಾಳಲೋಕವನ್ನು ಪ್ರವೇಶಮಾಡಿ, ಅಲ್ಲಿ ತಪೋಪವಾಸಾದಿ ನಿಯಮಗಳಿಂದ ತಮವನ್ನು ನಾಶಪಡಿಸುತ್ತಿದ್ದ ಕಪಿಲಮುನಿಯ ಬಳಿಯಲ್ಲಿ ಕಟ್ಟಲ್ಪಟ್ಟಿದ್ದ ತಮ್ಮ ಕುದುರೆಯನ್ನು ಕಂಡು, ಇವನೇ ಕುದುರೆಗಳ್ಳನೆಂದು ತಿಳಿದು, ಆ ಮುನಿಯನ್ನು ಬಹುವಾಗಿ ಬಾಧಿಸಿದರು. ಆ ಬಾಧೆಯಿಂದ ಕೋಪಗೊಂಡು, ಕಪಿಲಮಹರ್ಷಿಯು ಕಣ್ಣನ್ನು ತೆರೆಯಲಾಗಿ, ಅದರಿಂದ ಹೊರಟ ಬೆಂಕಿಯ ದೆಸೆಯಿಂದ ಅಷ್ಟುಮಂದಿಯೂ ಸುಟ್ಟು ಬೂದಿಯಾದರು. ತನ್ನ ಮಕ್ಕಳು ಏನಾದರು ಎಂಬುದನ್ನು ತಿಳಿಯದೆ, ಸಗರನು, ಅಸಮಂಜನ ಮಗನಾದ ಅಂಶುಮಂತನನ್ನು ಕರೆದು, ಅಪ್ಪಾ, ನಿನ್ನ ಚಿಕ್ಕಪ್ಪಂದಿರು ಏನಾದರೋ ಕಾಣೆ; ನೀನಾದರೂ ಆ ಕುದುರೆಯನ್ನು ಹುಡುಕಿಕೊಂಡು ಬಾ, ಎಂದನು. ಅವನು, ತಾತನ ಅಪ್ಪಣೆಯಂತೆ ಹೊರಟು, ತನ್ನ ಚಿಕ್ಕಪ್ಪಂದಿರು ಮಾಡಿದ್ದ ಹಳ್ಳದ ಹಾದಿಯಲ್ಲಿ, ಪಾತಾಳಕ್ಕೆ ಹೋದನು. ಅಲ್ಲಿ, ಅರುವತ್ತು ಸಾವಿರ ಜನರೂ ಉರಿದು ಬೂದಿಯಾಗಿರುವುದನ್ನು ಕಂಡು, ದುಃಖದಿಂದ ಕಂಬನಿಗರೆಯುತ್ತ, ಅವರಿಗೆಲ್ಲ ಜಲತರ್ಪಣಮಾಡಬೇಕೆಂದು

ಅತ್ತಿತ್ತ ತಿರುಗುತ್ತಿದ್ದಾಗ, ತಮ್ಮ ಯಜ್ಞಾಶ್ವವು ಕಣ್ಣಿಗೆ ಕಾಣಿಸಿತು. ಅಷ್ಟರಲ್ಲಿ, ಗರುಡನು ಅಂಶುಮಂತನಿಗೆ ಕಾಣಿಸಿಕೊಂಡು, ಅಯ್ಯಾ ಕುಮಾರ, ನೀನು ದೇವಗಂಗಾನದಿಯನ್ನು ಇಲ್ಲಿಗೆ ತಂದು, ಈ ಬೂದಿಯ ರಾಶಿಯನ್ನು ಅದರಲ್ಲಿ ಕದಡಿದರೆ, ಇವರಿಗೆಲ್ಲ ಸದ್ಗತಿಯುಂಟಾದೀತು, ಎಂದು ಹೇಳಿದನು.

ತದನಂತರ, ಅಂಶುಮಂತನು ಕುದುರೆಯನ್ನು ತಂದು, ಸಗರನಿಗೆ ಒಪ್ಪಿಸಿ, ಅವನ ಅರುವತ್ತು ಸಾವಿರ ಮಕ್ಕಳಿಗೂ ಉಂಟಾದ ದುರ್ಗತಿಯನ್ನು ತಿಳುಹಿಸಿದನು. ತಾನು ಹಿಡಿದಿದ್ದ ಯಜ್ಞವನ್ನು ಮುಗಿಸಿ, ಸಗರರಾಜನು ಪುತ್ರ ಶೋಕದಿಂದ ಮೃತ್ಯುವಶನಾದನು.

ಸಗರನ ತರುವಾಯ, ಅಂಶುಮಂತನು ಬಹುಕಾಲದ ವರೆಗೆ ಅರಸಾಗಿದ್ದು, ಬಳಿಕ ತನ್ನ ಮಗ ದಿಲೀಪನಿಗೆ ಪಟ್ಟಗಟ್ಟಿ, ಗಂಗಾನದಿಯನ್ನು ಭೂಮಿಗೆ ತರಬೇಕೆಂಬ ಉದ್ದೇಶದಿಂದ, ಹಿಮಾಲಯದಲ್ಲಿ ತಪಸ್ಸನ್ನು ಮಾಡಬೇಕೆಂದು ಹೊರಟುಹೋದನು. ಅವನ ತಪಸ್ಸಿಂದ ಕಾರ್ಯವು ಸಫಲವಾಗಲಿಲ್ಲ. ಇತ್ತ, ದಿಲೀಪನೂ ರಾಜ್ಯಭಾರಮಾಡಿ ಕಾಲಾಧೀನನಾದನು.

ಅವನ ಮಗ ಭಗೀರಥನು, ತರುವಾಯ ಅರಸಾದನು. ಅವನು, ತನ್ನ ಪೂರ್ವಜರಿಗಾದ ದುರ್ಗತಿಯ ವೃತ್ತಾಂತವನ್ನು ಕೇಳಿ, ದೇವಗಂಗೆಯನ್ನು ಭೂಲೋಕಕ್ಕೆ ತರಬೇಕೆಂದು ಸಂಕಲ್ಪಿಸಿಕೊಂಡನು. ತರುವಾಯ, ಅವನು ಗೋಕರ್ಣ ಕ್ಷೇತ್ರಕ್ಕೆ ಹೋಗಿ, ಅಲ್ಲಿ ಮಹಾದೇವನನ್ನು ಕುರಿತು, ಕಠಿಣವಾದ ತಪಸ್ಸನ್ನು ಮಾಡಿದನು. ಆತನ ತಪಸ್ಸಿಗೆ ಮೆಚ್ಚಿ ಪರಮಶಿವನು, ದೇವಗಂಗೆಯನ್ನು ತನ್ನ ತಲೆಯಲ್ಲಿ ಆತುಕೊಳ್ಳುವುದಾಗಿ ಮಾತನ್ನು ಕೊಟ್ಟನು.

ಬಳಿಕ, ಎತ್ತ ನೋಡಿದರೂ ಜಲಮಯವಾಗಿ, ಅಲೆಯಿಂದಲೂ, ನೊರೆಯಿಂದಲೂ, ಸುಳಿಯಿಂದಲೂ ಅಂಜಿಕೆಯುಂಟುಮಾಡುತ್ತ, ಗಂಗೆಯು ವೇಗದೊಡನೆ, ದೇವಲೋಕದಿಂದ ಪರಶಿವನ ಜಡೆಗಾಡಿನಲ್ಲಿ ಧುಮ್ಮಿಕ್ಕಿದಳು. ಹೀಗೆ ಅತ್ಯಾರ್ಭಟದಿಂದ ಬಂದ ಮಂದಾಕಿನಿಯ ಸೊಕ್ಕನ್ನು ಅಡಗಿಸಬೇಕೆಂದು, ಶಿವನು, ಅದನ್ನು ಜಡೆಯಲ್ಲಿ ತಡೆದು

ಬಿಟ್ಟನು. ಅಲ್ಲಿ ಗಂಗೆಯು, ಹುಲ್ಲ ಮೇಲೆ ಬಿದ್ದ ಮಂಜಿನ ಹನಿಯಂತೆ ಆಗಿಹೋಯಿತು. ಇತ್ತ, ಭಗೀರಥನು ನದಿಯನ್ನು ಕಾಣದೆ, ಅಯ್ಯೋ, ದುರದೃಷ್ಟವೇ, ಎಂದು ಸಂಕಟಪಟ್ಟು, ಮರಳಿ ಹರನನ್ನು ಸ್ತುತಿಸಿದನು. ಹರನು ಗಂಗೆಯನ್ನು ಬಿಂದು ಸರಸ್ಸಿನಲ್ಲಿ ಬಿಟ್ಟನು. ಅದು, ಅಲ್ಲಿಂದ ಏಳು ಕವಲುಗಳಾಗಿ ಒಡೆಯಿತು. ಅವುಗಳಲ್ಲಿ ಮೂರು ಕವಲುಗಳು ಪೂರ್ವಕ್ಕೂ, ಮೂರು ಪಶ್ಚಿಮಕ್ಕೂ ಪ್ರವಹಿಸಿದುವು. ಉಳಿದ ಒಂದು ಕವಲು ಮಟ್ಟಿಗೆ, ಭಗೀರಥನ ಹಿಂದೆ ಹೊರಟು, ಹಾದಿಯಲ್ಲಿ ಸಿಕ್ಕಿದ ಜಹ್ನುಮುನಿಯ ಯಜ್ಞಭೂಮಿಯನ್ನು ಮುಳುಗಿಸಿಬಿಟ್ಟಿತು. ಆ ಮುನಿಯು ಮುಳಿದು, ಆ ನದಿಯನ್ನೆಲ್ಲ ಕುಡಿದು ಬಿಟ್ಟನು. ಬಳಿಕ ಭಗೀರಥನು ಬೇಡಿಕೊಳ್ಳಲು, ಮುನಿಯು ಶಾಂತನಾಗಿ, ಆ ನದಿಯನ್ನು ತನ್ನ ಕಿವಿಯಿಂದ ಈಚೆಗೆ ಹೊರಡಿಸಿದನು. ಈ ಕಾರಣದಿಂದ, ಅದಕ್ಕೆ ಜಾಹ್ನವೀ ಎಂದು ಹೆಸರಾಯಿತು. ತರುವಾಯ ಭಗೀರಥನು, ಆ ನದಿಯನ್ನು ಪಾತಾಳಕ್ಕೆ ಕೊಂಡುಹೋಗಿ, ಅಲ್ಲಿ ಕಪಿಲಕೋಪದಿಂದ ಉರಿದು ಬೂದಿಯಾಗಿದ್ದ, ಸಗರನ ಅರುವತ್ತು ಸಾವಿರ ಮಕ್ಕಳಿಗೂ ಸದ್ಗತಿಯನ್ನು ಕಾಣಿಸಿದನು. ಈ ರೀತಿಯಾಗಿ, ತನ್ನ ಪಿತಾಮಹನ ಚಿಕ್ಕಪ್ಪಂದಿರಿಗೆ ಮೋಕ್ಷವನ್ನು ಉಂಟುಮಾಡಿ, ಭಗೀರಥನು ತನ್ನ ಸಂಕಲ್ಪವನ್ನು ಬಿಡದೆ ನಡೆಸಿ, ಅಯೋಧ್ಯೆಗೆ ಹೋಗಿ ರಾಜ್ಯವನ್ನು ಪರಿಪಾಲಿಸುತ್ತಿದ್ದನು.

ಎಂದು ವಿಶ್ವಾಮಿತ್ರರು ಹೇಳಿದ ಗಂಗೆಯ ಉತ್ಪತ್ತಿಯನ್ನು ಕೇಳಿ, ಆ ನದಿಯನ್ನು ದಾಟಿ, ಮುಂದೆ ಒಂದು ದೊಡ್ಡ ಪಟ್ಟಣವನ್ನು ನೋಡಿ, ಗುರುಗಳೇ, ಇದು ಯಾರ ನಗರಿ? ಎಂದು ರಾಮನು ಬೆಸಗೊಳ್ಳಲಾಗಿ, ವಿಶ್ವಾಮಿತ್ರರು ಹೇಳತೊಡಗಿದರು.

ರಾಮಾ, ಕೇಳು, ಪೂರ್ವದಲ್ಲಿ ಅಮೃತಕ್ಕೋಸ್ಕರ ದೇವತೆಗಳೂ ದೈತ್ಯರೂ ಜಗಳವಾಡುತ್ತಿರಲು, ಮಹಾವಿಷ್ಣುವು ಮೋಹಿನಿಯ ವೇಷದಿಂದ ದೈತ್ಯರನ್ನು ಮರುಳುಮಾಡಿ, ಇಂದ್ರನಿಂದ ಅವರನ್ನೆಲ್ಲ ಸಂಹಾರಮಾಡಿಸಿದನು. ತನ್ನ ಮಕ್ಕಳೆಲ್ಲರೂ ಸಾಯಲು, ದಿತಿಯು ಬಹು ಕೋಪದಿಂದ, ಇಂದ್ರನನ್ನು ಕೊಲ್ಲುವ ಮಗನನ್ನು ಪಡೆಯ

ಬೇಕೆಂದು ಬಯಸಿ, ತನ್ನ ಪತಿಯಾದ ಕಶ್ಯಪರ ಅಪ್ಪಣೆಯಂತೆ, ಕುಶ ಪ್ಲವವೆಂದು ಕರೆಯಲ್ಪಡುತ್ತಿದ್ದ ಈ ಸ್ಥಳದಲ್ಲಿ ಬಹುಕಾಲ ತಪಸ್ಸನ್ನು ಮಾಡಿದಳು. ಇಂದ್ರನು ಅದಕ್ಕೆ ಪ್ರತೀಕಾರವನ್ನು ಮಾಡಬೇಕೆಂದು, ದಿತಿಗೆ ಬೇಕಾದ ಶುಶ್ರೂಷೆಯನ್ನು ಮಾಡುತ್ತ, ಅವಳ ಹತ್ತಿರ ಸಮಯ ವನ್ನು ಕಾಯುತ್ತ ಇದ್ದನು. ಒಂದು ದಿವಸ ದಿತಿಯು, ಕಾಲಿನ ಕಡೆಗೆ ತಲೆಯನ್ನು ಇಟ್ಟುಕೊಂಡು ನಿದ್ರಿಸುತ್ತಿದ್ದಳು. ಅದನ್ನು ಕಂಡು, ಇದೀಗ ತಕ್ಕ ಸಮಯವೆಂದುಕೊಂಡು, ಇಂದ್ರನು ಅವಳ ಗರ್ಭವನ್ನು ಹೊಕ್ಕು, ಅಲ್ಲಿದ್ದ ಗರ್ಭ ಪಿಂಡವನ್ನು ಏಳು ತುಂಡುಗಳಾಗಿ ಕತ್ತರಿಸಿ ಹೊರಗೆ ಬಂದನು. ದಿತಿಯು ಈ ಸಮಾಚಾರವನ್ನು ತಿಳಿದು, ಆ ಏಳು ತುಂಡುಗಳನ್ನೂ, ಏಳು ಮರುತ್ತುಗಳಾಗುವಂತೆ ಇಂದ್ರನಿಂದ ಮಾಡಿಸಿ, ತಾನು ಸ್ವರ್ಗಕ್ಕೆ ಹೋದಳು. ಬಳಿಕ, ಇಕ್ಷ್ವಾಕುರಾಜನಿಂದ ಅಲಂಬುಸೆಯ ಗರ್ಭದಲ್ಲಿ ಹುಟ್ಟಿದ ವಿಶಾಲನೆಂಬ ರಾಜನು, ಇಲ್ಲಿ ಒಂದು ಊರನ್ನು ಕಟ್ಟಿಸಿ, ಅದಕ್ಕೆ ತನ್ನ ಹೆಸರನ್ನೇ ಇರಿಸಿ, ಅದನ್ನು ವಿಶಾಲಾ ಎಂಬುದಾಗಿ ಕರೆದನು, ಎಂದು ಆ ನಗರದ ವಿಷಯವನ್ನು ರಾಮನಿಗೆ ಹೇಳಿ, ಪೂಜ್ಯರಾದ ವಿಶ್ವಾಮಿತ್ರರು ಆ ಊರ ಅರಸಾದ ಸುಮತಿಯೆಂಬವನಿಂದ ಸತ್ಕೃತರಾಗಿ, ರಾಮಲಕ್ಷ್ಮಣರೊಡನೆ ಆ ಇರುಳನ್ನು ಅಲ್ಲಿ ಕಳೆದು, ಮರುದಿವಸ ಮಿಥಿಲಾಪುರಿಗೆ ಪಯಣ ಮಾಡಿದರು. ಹಾದಿಯಲ್ಲಿ ಸಿಕ್ಕಿದ ಮಹಾತಪಸ್ವಿಗಳಾದ ಗೌತಮರ ಆಶ್ರಮವನ್ನು ರಾಮಲಕ್ಷ್ಮಣರಿಗೆ ತೋರಿಸಿ, ವಿಶ್ವಾಮಿತ್ರರು ಇಂತೆಂದರು.

ಎಲೈ ರಾಜಪುತ್ರರಿರಾ, ಕೇಳಿರಿ. ಇಲ್ಲಿ ಇಂದ್ರನು, ಗೌತಮರ ಹೆಂಡತಿಯೊಡನೆ ಸಲ್ಲದ ಕೆಲಸವನ್ನು ಮಾಡಿದನು. ಅದನ್ನು ತಿಳಿದು ಆ ಮುನಿಯು ಕೋಪಿಸಿಕೊಂಡು, ನಿನ್ನ ಗಂಡಸುತನವು ಬಿದ್ದು ಹೋಗಲಿ, ಎಂದು ಇಂದ್ರನಿಗೆ ಶಾಪಕೊಟ್ಟು ತನ್ನ ಹೆಂಡತಿಯನ್ನು ಕಲ್ಲಾಗಿ ಹೋಗು ಎಂದು ಶಪಿಸಿದನು. ತರುವಾಯ ಕೋಪವು ಅಡಗಲು, ಆ ಮುನಿಯು ಹೆಂಡತಿಯನ್ನು ನೋಡಿ, ಇಲ್ಲಿಗೆ ಶ್ರೀರಾಮನು ಬಂದು ತನ್ನ ಪಾದವನ್ನು ನಿನಗೆ ಸೋಕಿಸಿದಾಗ, ಈ ಶಾಪವು

ಬಿಡುವುದು, ಎಂದು ಅನುಗ್ರಹಿಸಿ, ತಪಸ್ಸನ್ನು ಮಾಡುವುದಕ್ಕಾಗಿ ಹಿಮಾಲಯಪರ್ವತಕ್ಕೆ ಹೊರಟುಹೋದನು. ಇತ್ತ ದೇವತೆಗಳು, ಇಂದ್ರನಿಗೆ ಶಾಪಬಂದು ಅವನ ಗಂಡಸುತನವು ಹೋದುದನ್ನು ತಿಳಿದು, ಪಿತೃದೇವತೆಗಳ ಅನುಗ್ರಹದಿಂದ ಇಂದ್ರನ ಗಂಡಂಗವಿದ್ದೆಡೆಗೆ, ಒಂದು ಕುರಿಯ ಗಂಡಂಗವನ್ನು ತಂದು ಜೋಡಿಸಿದರು. ಇಗೋ, ಇದೇ, ಕಲ್ಲಾಗಿರುವ, ಅಹಲ್ಯೆಯೆಂಬ ಗೌತಮರ ಹೆಂಡತಿ; ಇದಕ್ಕೆ ನಿನ್ನ ಪಾದವನ್ನು ಸೋಕಿಸು, ಎಂದು ರಾಮನಿಗೆ ಕೌಶಿಕರು ಹೇಳಿದರು. ರಾಮನು, ಆ ಶಿಲೆಯನ್ನು, ತನ್ನ ಪಾದದಿಂದ ಮೆಟ್ಟಿದನು. ಕೂಡಲೇ, ಅಹಲ್ಯೆಯು ಶಾಪಮುಕ್ತಳಾಗಿ, ನಿಜರೂಪದಿಂದ ಹೊರಟುಬಂದಳು. ಇನ್ನು ಶಾಪಮುಕ್ತಳಾದ ತಮ್ಮ ಹೆಂಡತಿಯನ್ನು ಗೌತಮರು ಸ್ವೀಕರಿಸಲಿ, ಎಂದು ಹೇಳಿ, ವಿಶ್ವಾಮಿತ್ರರು ರಾಜಪುತ್ರರೊಡನೆ ಗೌತಮರ ಆಶ್ರಮವನ್ನು ಹೊಕ್ಕರು. ಅಲ್ಲಿ ಅಹಲ್ಯಾ ಗೌತಮರ ಉಪಚಾರವನ್ನು ಕೈಕೊಂಡು, ಮಿಥಿಲಾಪುರದ ಹೊರವಳಯದಲ್ಲಿದ್ದ ಜನಕನ ಯಜ್ಞಶಾಲೆಗೆ ಹೋದರು. ಜನಕರಾಯನು ಅವರನ್ನೆಲ್ಲ ಸತ್ಕರಿಸಿದನು. ಆಗ ವಿದೇಹರಾಜರ ಕುಲಪುರೋಹಿತನಾದ ಶತಾನಂದನೆಂಬ ಗೌತಮಪುತ್ರನು, ರಾಮನನ್ನು ಕುರಿತು, ಈ ಪ್ರಕಾರ ಹೇಳತೊಡಗಿದನು.

ಅಯ್ಯಾ ರಾಜಕುಮಾರ, ಕೇಳು, ಈ ವಿಶ್ವಾಮಿತ್ರರು ಪೂರ್ವದಲ್ಲಿ ಕ್ಷತ್ರಿಯರಾಗಿದ್ದರು. ಒಂದು ದಿನ, ಇವರು ಬೇಟೆಗೆ ಹೋಗಿದ್ದು ಬರುವಾಗ ವಸಿಷ್ಠಮುನಿಯ ಆಶ್ರಮಕ್ಕೆ ಹೋದರು. ವಸಿಷ್ಠರು ಇವರಿಗೆಲ್ಲ ಬಹು ರುಚಿಯಾದ ಹಲವು ಬಗೆಯ ಆಹಾರ ಸಾಮಗ್ರಿಗಳನ್ನು ಕೊಟ್ಟು ಸತ್ಕರಿಸಿದರು. ಹೀಗೆ ಸತ್ಕರಿಸಿದುದೆಲ್ಲವೂ ಕಾಮಧೇನುವಿನ ಶಕ್ತಿಯಿಂದುಂಟಾದುದೆಂದು ತಿಳಿದು, ಈ ವಿಶ್ವಾಮಿತ್ರರು ಆ ಹಸುವನ್ನು ನನಗೆ ಕೊಡಿರಿ, ಎಂದು ವಸಿಷ್ಠರನ್ನು ಕೇಳಿದರು. ಅವರು ಒಪ್ಪಲಿಲ್ಲ. ಇವರು ಅದನ್ನು ಬಲಾತ್ಕಾರದಿಂದ ಹಿಡಿದೆಳೆದರು. ಆ ಧೇನುವು, ತನ್ನ ಸಾಮರ್ಥ್ಯದಿಂದ ಅಪಾರಸೇನೆಯನ್ನು ಉಂಟುಮಾಡಿ, ತನ್ಮೂಲಕ, ಇವರನ್ನೂ ಇವರ ಕಡೆಯವರನ್ನೂ ಬಡಿದು ಓಡಿಸಿಬಿಟ್ಟಿತು.

ಇವರು, ಹೇಗಾದರೂ ಆ ಹಸುವನ್ನು ಕೊಂಡು ಹೋಗಲೇಬೇಕೆಂದು ನಿಶ್ಚಯಿಸಿ, ತಪೋಬಲದಿಂದ ಸಂಪಾದಿಸಿದ್ದ ಮಂತ್ರಾಸ್ತ್ರಗಳನ್ನೆಲ್ಲ ವಸಿಷ್ಠರ ಮೇಲೆ ಪ್ರಯೋಗಮಾಡಿದರು. ಅವರು ಅವುಗಳನ್ನೆಲ್ಲ ತಮ್ಮ ಬ್ರಹ್ಮ ದಂಡವೊಂದರಿಂದಲೇ ಪರಿಹರಿಸಿಕೊಂಡರು. ಅದನ್ನು ಕಂಡು, ಈ ವಿಶ್ವಾಮಿತ್ರರು ದುಃಖಿತರಾಗಿ ಬ್ರಾಹ್ಮಬಲವೇ ಬಲ; ಕ್ಷತ್ರಿಯ ಬಲ ವನ್ನು ಸುಡು, ಎಂದು ಹೇಳಿ, ಬ್ರಹ್ಮತೇಜಸ್ಸನ್ನು ಸಾಧಿಸುವುದಕ್ಕಾಗಿ ದಕ್ಷಿಣ ದಿಕ್ಕಿಗೆ ಹೋಗಿ ಕಠಿಣವಾದ ತಪಸ್ಸನ್ನು ಮಾಡಿದರು.

ಇತ್ತ, ಸೂರ್ಯವಂಶದ ದೊರೆಯಾದ ತ್ರಿಶಂಕುವೆಂಬವನೊಬ್ಬನು, ಈ ದೇಹದೊಡನೆಯೇ ಸ್ವರ್ಗಕ್ಕೆ ಹೋಗಬೇಕೆಂದು ಬಯಸಿ, ಅದಕ್ಕೆ ಬೇಕಾದ ಯಜ್ಞವನ್ನು ಮಾಡಿಸಬೇಕೆಂದು ವಸಿಷ್ಠರನ್ನು ಕೇಳಿ ಕೊಂಡನು. ಅವರು ಆ ರೀತಿ ಮಾಡುವುದಕ್ಕೆ ಆಗುವುದಿಲ್ಲ, ಎಂದು ಹೇಳಿದರು. ರಾಜನು ಅಷ್ಟಕ್ಕೇ ಸುಮ್ಮನಾಗಲಿಲ್ಲ. ಅವನು ವಸಿಷ್ಠರ ಮಕ್ಕಳಾದ ಮಹೋದಯ ಮುಂತಾದವರ ಬಳಿಗೆ ಹೋಗಿ, ನೀವಾದರೂ ನನ್ನ ಆಸೆಯನ್ನು ನಡೆಸಿಕೊಡಬೇಕು, ಎಂದು ಅವರನ್ನು ಬಹುವಾಗಿ ನಿರ್ಬಂಧಪಡಿಸಿದನು. ಅವನ ನಿರ್ಬಂಧದಿಂದ ಮುಳಿದು, ಮಹೋದಯಾದಿಗಳು ರಾಜನನ್ನು ನೋಡಿ, ಈ ರೀತಿ ನಮ್ಮನ್ನು ಕಾಡುತ್ತಿರುವ ನೀನು ಚಂಡಾಲನಾಗು, ಎಂದು ಶಪಿಸಿದರು. ಕೂಡಲೇ ತ್ರಿಶಂಕುರಾಜನು ಚಂಡಾಲನಾಗಿ, ವಿಶ್ವಾಮಿತ್ರರ ಬಳಿಗೆ ಹೋದರೆ ತನ್ನ ಕೋರಿಕೆಯು ನಡೆಯದಿರದು ಎಂದು ನಂಬಿ, ಅವರಲ್ಲಿ ತನ್ನ ಸುದ್ದಿ ಯನ್ನೆಲ್ಲ ಹೇಳಿಕೊಂಡನು. ಅವನ ಮನೋರಥವನ್ನು ಪೂರ್ತಿಮಾಡ ಬೇಕೆಂದು ವಿಶ್ವಾಮಿತ್ರರು ಒಂದು ಯಜ್ಞವನ್ನು ಆರಂಭಿಸಿದರು. ಆ ಯಜ್ಞಕ್ಕೆ, ಇವರ ಭಯದಿಂದ ಕೆಲವರು ಬ್ರಾಹ್ಮಣರು ಮಟ್ಟಿಗೆ ಬಂದರು. ಯಜ್ಞವನ್ನು ಮಾಡುವವನು ಚಂಡಾಲ, ಮಾಡಿಸುವವನು ಕ್ಷತ್ರಿಯ, ನಾವೇಕೆ ಅದಕ್ಕೆ ಹೋಗಬೇಕು, ಎಂದು ವಸಿಷ್ಠರ ಮಕ್ಕಳೊಬ್ಬರೂ ಹೋಗಲಿಲ್ಲ. ವಿಶ್ವಾಮಿತ್ರರಿಗೆ ಕೋಪವುಂಟಾಯಿತು. ಈ ಯಜ್ಞಕ್ಕೆ ಬಾರದ ವಸಿಷ್ಠರ ಮಕ್ಕಳೆಲ್ಲರೂ ನಾಯನ್ನು ತಿನ್ನಲಿ, ಎಂದು ಶಾಪ ಕೊಟ್ಟರು. ದೇವತೆಗಳೊಬ್ಬರೂ ಬರಲಿಲ್ಲ. ಇದಕ್ಕೆಲ್ಲ ಇವರು ಹೆದರ

ತಕ್ಕವರೇ! ರಾಜವೇಷವು ಹೋಗಿ, ಚಂಡಾಲನಾಗಿ, ನೀಲವಸ್ತ್ರವುಟ್ಟಿದ್ದ ತ್ರಿಶಂಕುವನ್ನು, ಇವರು ತಮ್ಮ ತಪೋಬಲದಿಂದ, ಸ್ವರ್ಗಕ್ಕೆ ಏರಿಸಿದರು. ಸ್ವರ್ಗಕ್ಕೆ ಬರುತ್ತಿರುವ ಚಂಡಾಲನನ್ನು ಕಂಡು, ಇಂದ್ರನಿಗೆ ಬಹು ಕೋಪವು ಬಂದಿತು. ಅವನು, ತ್ರಿಶಂಕುವನ್ನು ಸ್ವರ್ಗದಿಂದ ತಳ್ಳಿಸಿ ಬಿಟ್ಟನು. ಇವರು ಅವನನ್ನು ತಮ್ಮ ತಪೋಬಲದಿಂದ ಗಗನದಲ್ಲಿಯೇ ನಿಲ್ಲಿಸಿ, ಬೇರೆ ಸ್ವರ್ಗವನ್ನೇ ಉಂಟುಮಾಡುತ್ತೇನೆ, ಇಂದ್ರನೇ ಇಲ್ಲದಂತೆ ಮಾಡುತ್ತೇನೆ, ಎಂದು ದೇವತೆಗಳ ಮೇಲೆ ಕೋಪಿಸಿದರು. ಅವರೆಲ್ಲರೂ ಇವರನ್ನು ಬಲು ಬಗೆಯಿಂದ ಬೇಡಿಕೊಂಡರು. ತರುವಾಯ, ಇವರು ಆ ಕಾರ್ಯವನ್ನು ನಿಲ್ಲಿಸಿ, ಇಲ್ಲಿ ತಮ್ಮ ತಪಸ್ಸಿಗೆ ತಡೆಯಾಯಿ ತೆಂದು, ಪಶ್ಚಿಮ ದಿಕ್ಕಿನ ಪುಷ್ಕರದಲ್ಲಿ, ಬಹುಳವಾಗಿ ತಪಸ್ಸನ್ನು ಮಾಡಿದರು.

ಆ ಕಾಲದಲ್ಲಿ, ಅಂಬರೀಷರಾಯನು, ತನ್ನ ಯಜ್ಞಪಶುವು ನಷ್ಟ ವಾದ ಕಾರಣದಿಂದ, ಆ ಪಾಪ ಪರಿಹಾರಕ್ಕೋಸ್ಕರ ನರಪಶುವೊಂದನ್ನು ತರುವಂತೆ ಜನರನ್ನು ಕಳುಹಿದ್ದನು. ಅವರು ಎಲ್ಲೆಲ್ಲಿಯೂ ಹುಡುಕಿ, ಕೊನೆಗೆ, ಕಡುಬಡವನಾಗಿದ್ದ ರುಚಿಕನೆಂಬ ಬ್ರಾಹ್ಮಣನಿಗೆ, ನೂರಾರು ಗೋಗಳನ್ನು ಕೊಟ್ಟು, ಅವನ ನಡುಕಲ ಮಗನಾದ ಶುನಶ್ಶೇಫನನ್ನು ಕರೆದುಕೊಂಡು ಹೋಗುತ್ತಿದ್ದರು. ಅವನು ಈ ಮಹಾನುಭಾವರ ಬಳಿಗೆ ಬಂದು, ನನ್ನನ್ನು ರಕ್ಷಿಸಬೇಕು, ಎಂದು ಕೇಳಿಕೊಂಡನು. ಇವರು, ಹಾಗೆಯೇ ಆಗಲಿ, ಎಂದು ಶುನಶ್ಶೇಫನಿಗೆ ಅಭಯವನ್ನು ಕೊಟ್ಟು, ತನ್ನ ಮಕ್ಕಳಾದ ಹವಿಷ್ಯಂದಾದಿಗಳನ್ನು ಕರೆದು, ಇವನಿಗೆ ಬದಲಾಗಿ ನೀವು ಯಾರಾದರೂ ಹೋಗಿ, ಇವನ ಪ್ರಾಣಗಳನ್ನು ಉಳಿಸಿರಿ, ಎಂದರು. ಆ ಮಕ್ಕಳು, ತಂದೆಯ ಮಾತನ್ನು ಕೇಳಲಿಲ್ಲ. ಇವರು ಕುಪಿತರಾಗಿ ನೀವೂ ವಸಿಷ್ಠರ ಮಕ್ಕಳಂತೆ ಶ್ವಾನಭಕ್ಷಕರಾಗಿರಿ, ಎಂದು ಬಯ್ದು, ಇಂದ್ರೋಪೇಂದ್ರಪ್ರೀತ್ಯರ್ಥವಾದ ಎರಡು ಶ್ಲೋಕಗಳನ್ನು ಶುನಶ್ಶೇಫನಿಗೆ ಉಪದೇಶಿಸಿ, ತನ್ಮೂಲಕ ಅಂಬರೀಷನಿಗೂ ಶುನಶ್ಶೇಫನಿಗೂ ಇಷ್ಟವು ಸಿದ್ಧಿಸುವಂತೆ ಮಾಡಿದರು.

ಬಳಿಕ, ಇವರಿಗೆ ಮೇನಕೆಯೆಂಬವಳ ಪರಿಚಯವಾಯಿತು.

ಅವಳೊಡನೆ ಸುಖವಾಗಿರಬೇಕೆಂದು ಬಯಸಿ, ಇವರು ಬಹುಕಾಲದ ವರೆಗೆ ತಪಸ್ಸಿನ ಗೋಜಿಗೇ ಹೋಗಲಿಲ್ಲ.

ತರುವಾಯ ಇವರಿಗೆ ಜ್ಞಾನೋದಯವಾಯಿತು. ಇವರು ಅಯ್ಯೋ, ಏನ ಮಾಡಿಬಿಟ್ಟೆ? ತಪಸ್ಸೆಲ್ಲಾ ಹಾಳಾಯಿತಲ್ಲ, ಎಂದು ವ್ಯಥೆ ಪಟ್ಟುಕೊಂಡು, ಉತ್ತರದ ಹಿಮವತ್ಪರ್ವತದಲ್ಲಿ ಕೌಶಿಕೀ ಎಂಬ ನದಿಯ ತೀರದಲ್ಲಿ ಅತ್ಯುಗ್ರವಾದ ತಪಸ್ಸನ್ನು ಮಾಡಿದರು. ಇವರ ತಪಸ್ಸನ್ನು ಕೆಡಿಸಬೇಕೆಂದು, ಇಂದ್ರನು ಇವರ ಬಳಿಗೆ, ರಂಭೆಯೆಂಬ ಅಪ್ಸರಸ್ಸನ್ನು ಕಳುಹಿದನು. ಇವರು ಅವಳನ್ನು ಕಂಡು, ಕೋಪದಿಂದ, ನೀನು ಕಲ್ಲಾಗಿ ಹೋಗು, ಎಂದು ಶಪಿಸಿದರು.

ಇವರು, ಮತ್ತೆ ಪೂರ್ವದಿಕ್ಕಿನಲ್ಲಿ, ತಮ್ಮ ಉಸಿರನ್ನು ತಡೆದು ನಿಲ್ಲಿಸಿ, ಉಗ್ರವಾಗಿ ತಪಸ್ಸನ್ನು ಮಾಡಿದರು. ಇವರ ತಪಸ್ಸಿನ ವೇಗಕ್ಕೆ ಹೆದರಿ, ದೇವತೆಗಳು ಬ್ರಹ್ಮನಿಗೆ ಮೊರೆಯಿಟ್ಟರು. ಕಮಲಾಸನನು ಇವರ ಬಳಿಗೆ ಬಂದು, ಮಗನೇ, ನೀನು ಜಿತೇಂದ್ರಿಯನಾಗಿ ತಪಸ್ಸನ್ನು ಮಾಡಿದ್ದೀಯೆ. ಆದುದರಿಂದ ನೀನು ಬ್ರಹ್ಮರ್ಷಿಯಾಗಿದ್ದೀಯೆ ; ನಿನ್ನ ಪ್ರತಿಕಕ್ಷಿಯಾದ ವಸಿಷ್ಠನೂ ನಿನ್ನನ್ನು ಬ್ರಹ್ಮರ್ಷಿಯೆನ್ನಲಿ, ಎಂದು ವರವನ್ನು ಕೊಟ್ಟನು. ಇವರು, ವಸಿಷ್ಠರಿಂದ ಉಪನಯನಾದಿ ಸಂಸ್ಕಾರವನ್ನು ಪಡೆದು, ಬ್ರಹ್ಮ ತೇಜಸ್ಸಿಂದ ಕಂಗೊಳಿಸಿದರು.

ಈ ಪ್ರಕಾರ, ಜನಕಪುರೋಹಿತನಾದ ಶತಾನಂದನಿಂದ ಹೊಗಳಲ್ಪಟ್ಟ ವಿಶ್ವಾಮಿತ್ರರು, ದಶರಥಕುಮಾರರಾದ ರಾಮಲಕ್ಷ್ಮಣರೊಡನೆ ಆ ರಾತ್ರಿಯನ್ನು ಅಲ್ಲಿ ಕಳೆದು, ಮರುದಿನ ಪ್ರಾತರ್ವಿಧಿಗಳನ್ನು ತೀರಿಸಿಕೊಂಡು, ರಾಮಲಕ್ಷ್ಮಣರನ್ನು ನೋಡಬೇಕೆಂಬ ಆಸೆಯಿಂದ, ರಾಜಬೀದಿಯ ಇಕ್ಕೆಲದ ಮಂದಿರ ಗವಾಕ್ಷಗಳಿಂದ ಸುಂದರಿಯರು ನೋಡುತ್ತಿರಲು, ಮಿಥಿಲಾ ನಗರಿಯನ್ನು ಹೊಕ್ಕು, ರಾಮಲಕ್ಷ್ಮಣರೊಡನೆ ಇಂತೆಂದರು.

ಎಲೈ ಕುಮಾರಕರಿರಾ, ಈ ಊರಲ್ಲಿ, ಯಜ್ಞಮಾಡಬೇಕೆಂದು ಸನ್ನಾಹಮಾಡಿಕೊಂಡ, ಈ ಜನಕರಾಜನ ಪುಣ್ಯದಿಂದ, ರತ್ನಗರ್ಭೆಯಾದ ಭೂಮಿಯು, ಸೀತೆಯೆಂಬ ಕನ್ಯಾರತ್ನವನ್ನು ಹೆತ್ತಳು.

ಮಕ್ಕಳಿರಾ, ಈ ನಗರದ ವೈಭವವನ್ನು ಏನೆಂದು ಬಣ್ಣಿಸಲಿ! ಯಾರಿಗೆ ಸಮುದ್ರದ ನೀರೇ ಉಡುವ ಸೀರೆಯೋ, ಚಿನ್ನದ ಬೆಟ್ಟವೇ ಕೂರುವ ಪೀಠವೋ, ಸಗರನ ಮಕ್ಕಳಿಗೆಲ್ಲ ಸುಗತಿಯನ್ನು ಕೊಟ್ಟ ದೇವ ಗಂಗೆಯೇ ಕೊರಲ ಹಾರವೋ, ಆದಿವರಾಹನ ಕೋರದಾಡೆಯೇ ಕ್ರೀಡಾಶೈಲವೋ, ಅಂಥ ಭೂಮಿದೇವಿಗೆ ಈ ಪುರವು ಹೆರಿಗೆಯ ಮನೆ ಯಾಯಿತು. ಈ ಊರಲ್ಲಿ, ಸೀತೆಯ ಮದುವೆಗೋಸ್ಕರ, ವರಪರೀಕ್ಷೆ ಮಾಡಬೇಕೆಂದು ಜನಕರಾಜನು, ಯಾರಿಂದಲೂ ಬಾಗಿಸುವುದಕ್ಕಾಗದ ಒಂದು ಬಿಲ್ಲನ್ನು ಇರಿಸಿ, ಅದನ್ನು ಬಾಗಿಸಿದವರಿಗೆ, ಸೀತೆಯನ್ನು ಕೊಡು ತ್ತೇನೆಂದು ಪ್ರಕಟಿಸಿದ್ದಾನೆ.

ಎಂದು, ಈ ರೀತಿಯಾಗಿ ಹೇಳುತ್ತ, ವಿಶ್ವಾಮಿತ್ರರು ಸುಧರ್ಮೆ ಯೆಂಬ ದೇವಸಭೆಯಂತಿರುವ, ಜನಕರಾಜನ ಸಭೆಗೆ, ರಾಮಲಕ್ಷ್ಮಣ ರೊಡನೆ ಹೋದರು. ಅಲ್ಲಿ ರಾಜನು ಇವರೆಲ್ಲರಿಗೂ ಸತ್ಕಾರಮಾಡಿ ದನು. ಬಳಿಕ ಜನಕನು, ವಿಶ್ವಾಮಿತ್ರರೊಡನೆ ಸ್ವಾಮಿಾ, ನಮ್ಮ ವಂಶ ದಲ್ಲಿ ಶ್ರೇಷ್ಠನಾದ ದೇವರಾತನಿಗೆ ಇಂದ್ರನಿಂದ ಕೊಡಲ್ಪಟ್ಟ ಒಂದು ಬಿಲ್ಲು ಇದೆ. ಅದನ್ನು ಮುಖ್ಯವಾಗಿ ಸೀತೆಯ ಮದುವೆಗೆ, ವರಪರೀಕ್ಷಾರ್ಥ ವಾಗಿ ಇಟ್ಟಿದ್ದೇನೆ; ಪರಾಂಬರಿಸಬೇಕು, ಎಂದು ಬಿಲ್ಲನ್ನು ತೋರಿಸಿದನು. ವಿಶ್ವಾಮಿತ್ರರು ರಾಮನನ್ನು ನೋಡಿ, ಮಗೂ, ಈ ಬಿಲ್ಲನ್ನು ಎತ್ತಿ ಹೆದೆಯನ್ನು ಏರಿಸು, ಎಂದರು.

ರಾಮನು, ಹೆದೆಯನ್ನು ಏರಿಸುವುದಕ್ಕಾಗಿ, ಬಿಲ್ಲನ್ನು ಬಾಗಿಸಿದನು. ಈ ಪರಾಕ್ರಮದಿಂದ ಸೂರ್ಯವಂಶಕ್ಕೇ ಕೀರ್ತಿಯುಂಟಾಯಿತು. ಅವನು ಬಿಲ್ಲನ್ನು ಬಾಗಿಸಿದುದರಿಂದ, ಅಹಂಕಾರಿಗಳಾದ ಅರಸರ ತಲೆ ಗಳೆಲ್ಲವೂ ಬಾಗಿಹೋದುವು. ಅವನು ಬಿಲ್ಲನ್ನು ಮಟ್ಟಿಗೆ ಸೆಳೆದನೇ? ಅದರೊಡನೆ ಸೀತೆಯ ಮನಸ್ಸನ್ನೂ ಸೆಳೆದುಬಿಟ್ಟನು.

ಈ ರೀತಿ ಬಾಗಿಸಲ್ಪಟ್ಟ ಬಿಲ್ಲು, ನಡುವಿಗೆ ಸರಿಯಾಗಿ ಮುರಿದು ಹೋಯಿತು. ಆ ಶಬ್ದವನ್ನು ಕೇಳಿ ಎಲ್ಲರೂ ನಡುಗಿದರು.

ಆಗ ಜನಕನು, ಸೀತಾ ಸ್ವಯಂವರಕ್ಕಾಗಿ, ದಶರಥನನ್ನು ಕರೆತರು ವಂತೆ, ದೂತರನ್ನು ಕಳುಹಿದನು. ದಶರಥನು ಪುರೋಹಿತರ ಸಮ್ಮತಿ

ಯಂತೆ ಮಿಥಿಲೆಗೆ ಹೊರಟನು. ಅವನ ವೈಭವವನ್ನು ಏನೆಂದು ವರ್ಣಿಸಲಿ! ಅವನ ಕೀರ್ತಿಯನ್ನು ದೇವಲೋಕದವರು ಹಾಡುತ್ತಾರೆ. ಅವನು ಶ್ರೀ ಮಹಾವಿಷ್ಣು ಸ್ವರೂಪನಾದ ರಾಮನಿಗೆ ತಂದೆ. ರಾಕ್ಷಸರ ಕಾಟದಿಂದ ತಲ್ಲಣಿಸುವ ಇಂದ್ರನು, ದಶರಥನ ಬಂಡಿಯ ಮೇಲಿರುವ ಬಾವುಟವನ್ನು ಕಂಡ ಕೂಡಲೇ ನಿರ್ಭಯವಾಗಿ ಸಂಚರಿಸುವನು. ಇತ್ತ ಜನಕನು, ಸಾಂಕಾಶ್ಯ ಪಟ್ಟಣದಲ್ಲಿರುವ ತನ್ನ ತಮ್ಮ ಕುಶಧ್ವಜನ ಹುಡುಗಿಯರಿಬ್ಬರಿಗೂ ಮದುವೆಮಾಡಿಬಿಡೋಣವೆಂದು, ಅವನನ್ನೂ ಕರೆಸಿದ್ದನು.

ಬಳಿಕ ಜನಕ ಕುಶಧ್ವಜರಿಂದ ಸತ್ಕೃತನಾದ ದಶರಥನು, ತನ್ನ ನಾಲ್ವರು ಮಕ್ಕಳಿಂದಲೂ ವಿವಾಹ ದೀಕ್ಷಾಂಗವಾದ ಗೋದಾನ ಮಂಗಳವನ್ನು ಮಾಡಿಸಿದನು. ತರುವಾಯ, ತಂದೆಯ ಅನುಜ್ಞೆಯಂತೆ ರಾಮನು ಸೀತೆಯನ್ನು ಸ್ವೀಕರಿಸಿದನು. ಆಮೇಲೆ ಜನಕನು, ಲಕ್ಷ್ಮಣನ ಗುಣಗಳಿಗೆ ಮನಸೋತು, ತನ್ನ ಪುತ್ರಿಯಾದ ಊರ್ಮಿಳೆಯನ್ನು ಅವನಿಗೆ ಕೊಟ್ಟು ಮದುವೆಮಾಡಿದನು. ತದನಂತರ, ಕುಶಧ್ವಜನ ಕುವರಿಯರಾದ ಮಾಂಡವೀ ಶ್ರುತಕೀರ್ತಿಯರನ್ನು ಭರತನೂ ಶತ್ರುಘ್ನನೂ ವಿವಾಹವಾದರು.

ಕುಮಾರಕರ ವಿವಾಹಕಾರ್ಯವು ನಿರ್ವಿಘ್ನವಾಗಿ ನೆರವೇರಿತು. ದಶರಥನು ಮಕ್ಕಳೊಡನೆಯೂ, ಸೊಸೆಯರೊಡನೆಯೂ, ಅಯೋಧ್ಯೆಗೆ ಹೊರಟನು. ನಡುದಾರಿಯಲ್ಲಿ, ಕ್ಷತ್ರಿಯರನ್ನು ನಿರ್ಮೂಲಮಾಡಿ, ಆ ರಕ್ತದಿಂದ ಪಿತೃಗಳಿಗೆ ತರ್ಪಣವನ್ನು ಮಾಡಿದ, ಮಹಾತಪಸ್ವಿಯೂ, ಕೋಪಶೀಲನೂ ಆದ ಪರಶುರಾಮನು, ನಾರಬಟ್ಟೆಯನ್ನು ಉಟ್ಟು ಧನುರ್ಬಾಣಧಾರಿಯಾಗಿ, ಇವರ ಇದಿರಿಗೆ ಬಂದನು. ಅವನನ್ನು ಕಂಡೊಡನೆಯೇ ಎಲ್ಲರೂ ಹೆದರಿದರು. ದಶರಥನಿಗೆ ಉಸಿರೇ ಇಲ್ಲದಂತಾಯಿತು. ಆದರೂ ಅವನು ಮಹರ್ಷಿಗಳೊಡನೆ, ಭಾರ್ಗವರಾಮನಿಗೆ ಪೂಜಾದಿಗಳನ್ನು ಮಾಡಿ, ಸ್ವಾಮಿೞಾ, ಮಹಾನುಭಾವರೇ, ತಮಗೆ ಕುಶಲವೇ, ಎಂದು ಬೆಸಗೊಂಡನು.

ಈ ಪರಿಯಿಂದ ಮೃದುವಾಗಿ ಮಾತಾಡಿದ ದಶರಥನ ನುಡಿಗೆ



ಕಿವಿಗೊಡದೆ, ಗೌರವದಿಂದ ತಲೆಬಾಗಿ ನಿಂತಿದ್ದ ರಾಮನೊಡನೆ ಪರಶು ರಾಮರು ನುಡಿಯತೊಡಗಿ, ಎಲಾ, ನೀನು ಹಳೆಯದಾದ ಶಿವ ಧನುಸ್ಸನ್ನು ಮುರಿದುಹಾಕಿ ಹೆಸರನ್ನು ಗಳಿಸಿಕೊಂಡೆಯಲ್ಲವೇ? ನಿನಗೆ ನನ್ನ ಕೊಡಲಿಗಡಿತದ ಸವಿಯು ಇನ್ನೂ ಪಾಪ, ತಿಳಿದಿಲ್ಲ. ನನ್ನ ಬಳಿ ಯಿರುವ, ಈ ವೈಷ್ಣವ ಚಾಪದಿಂದ, ನಿನ್ನ ಬಾಹುಬಲವನ್ನು ಅಡಗಿಸ ಲಿಕ್ಕೆ ಬಂದಿದ್ದೇನೆ, ಗೊತ್ತಾಯಿತೋ, ಎಂದು ಗರ್ಜಿಸಿದರು.

ಕೂಡಲೇ ದಶರಥರಾಮನು, ಪರಶುರಾಮರ ಕಯ್ಯಿಂದ ವೈಷ್ಣವ ಚಾಪವನ್ನು ತೆಗೆದುಕೊಂಡು, ಹೆದೆಯೇರಿಸಿ, ಬಾಣವನ್ನು ಹೂಡಿ, ಅಯ್ಯೋ ಪಾಪ! ಇವರು ತಪಸ್ವಿಗಳು, ಇವರನ್ನು ಹೊಡೆದು ಕೊಲ್ಲ ಬಾರದು, ಎಂದು ಮರುಕದಿಂದ, ಪರಶುರಾಮನ ಮೇಲೆ ಕೈಮಾಡಲಿಲ್ಲ.

ರಾಮನು, ವೈಷ್ಣವ ಚಾಪವನ್ನು ಬಾಗಿಸಿದ ಕೂಡಲೇ, ಪರಶು ರಾಮರ ತಲೆಯು ಬಾಗಿಹೋಯಿತು. ಆಗ ರಾಮನು, ತಾನು ಹೂಡಿದ್ದ ಬಾಣದಿಂದ, ಪರಶುರಾಮರ ಪರಗತಿಯನ್ನು ತಡೆದುಬಿಟ್ಟನು. ಇದು ನ್ಯಾಯವೇ. ಮಹಾನುಭಾವರಾದವರಿಗೆ ಅಪರಾಧಮಾಡಿದರೆ, ಅಪರಾಧಕ್ಕೆ ತಕ್ಕ ಫಲವು ಆಗದೆ ಹೋದೀತೇ? ಶ್ರೀರಾಮನ ಮಾರ್ಗಕ್ಕೆ ಅಡ್ಡಲಾಗಿ ಬಂದು, ಪರಶುರಾಮನು, ತನ್ನ ಆಮುಷ್ಮಿಕ ಮಾರ್ಗವನ್ನೇ ಹಾಳುಮಾಡಿಕೊಂಡನು.

ಈ ರೀತಿಯಾಗಿ ಜಮದಗ್ನಿಕುಮಾರನಾದ ಪರಶುರಾಮನನ್ನು ಜಯಿಸಿ, ಹಾವಿನ ಮೆಯ್ಯಂತೆ ಸೊಗಸಾಗಿರುವ ತೋಳುಗಳನ್ನುಳ್ಳ ರಾಮನನ್ನು, ದಶರಥನು ಬಾರಿಬಾರಿಗೂ ಬಿಗಿದಪ್ಪಿ, ಅವನ ತಲೆಯನ್ನು ವಾಸನಿಸಿ, ಕಂದಕದಂತೆ ಊರನ್ನು ಬಳಸಿಕೊಂಡು ಹರಿಯುವ ಸರಯೂ ನದಿಯಿಂದ ಕಂಗೊಳಿಸುವ ಅಯೋಧ್ಯಾಪುರವನ್ನು, ಪುತ್ರರೊಡನೆಯೂ ಸೊಸೆಯರೊಡನೆಯೂ ಪ್ರವೇಶಿಸಿದನು.

ಇತ್ತ, ನಾಲ್ವರು ಕುಮಾರಕರೂ, ತಮ್ಮ ತಮ್ಮ ಮಡದಿಯರ ಸಂಗಡ, ಸುಖವಾಗಿ ಬಾಳುತ್ತಿದ್ದರು.

ಎಂಬಲ್ಲಿಗೆ ರಾಮಾಯಣ ಸಂಗ್ರಹದಲ್ಲಿ ಬಾಲಕಾಂಡವು.

ಅಯೋಧ್ಯಾಕಾಂಡ

ಗುಣಶಾಲಿಗಳಾದ ಪುತ್ರರಿಂದ ಕೂಡಿ, ದಶರಥನು, ಸಕಲ ರಾಜರುಗಳಿಗಿಂತ ಹೆಚ್ಚಾಗಿ ಸುಖದಿಂದಿದ್ದನು. ಇತ್ತ, ವೃದ್ಧನಾದ ಕೇಕಯ ರಾಜನು, ತನ್ನ ಮಗಳ ಮಗನಾದ ಭರತನನ್ನು ನೋಡಬೇಕೆಂಬ ಆಸೆಯಿಂದ, ಅವನನ್ನು ಕರೆದುಕೊಂಡು ಬರಹೇಳಿ, ತನ್ನ ಮಗ ಯುಧಾಜಿತ್ ಎಂಬವನನ್ನು ಅಯೋಧ್ಯೆಗೆ ಕಳುಹಿಸಿದನು. ಅವನ ಸಂಗಡ, ದಶರಥನು, ಭರತಶತ್ರುಘ್ನರೆಂಬ ಇಬ್ಬರು ಮಕ್ಕಳನ್ನೂ ಕಳುಹಿಸಿಕೊಟ್ಟನು.

ಸೋದರಮಾವನಾದ ಯುಧಾಜಿತ್ತಿನೊಡನೆ ಭರತಶತ್ರುಘ್ನರಿಬ್ಬರೂ ಕೇಕಯಪುರಕ್ಕೆ ಪಯಣಮಾಡಿದ ತರುವಾಯ, ದಶರಥನು, ಮೂರು ಲೋಕಕ್ಕೂ ಒಡೆಯನಾದ ರಾಮನಿಗೆ, ತನ್ನ ರಾಜ್ಯ ಮಾತ್ರದ ಅರಸುತನವನ್ನು ಕೊಡಬೇಕೆಂದು ಬಗೆದು, ಸುಮಂತ್ರ ಮುಂತಾದ ಮಂತ್ರಿಗಳೊಡನೆ ಚೆನ್ನಾಗಿ ಆಲೋಚನೆ ಮಾಡಿ, ಹಳಬರೂ ಬುದ್ಧಿವಂತರೂ ಆದ ಪ್ರಜಾಮುಖಂಡರನ್ನು ಕರೆಯಿಸಿ, ಅವರೊಡನೆ ಇಂತೆಂದನು.

ಎಲೈ ಪ್ರಜಾಪ್ರಮುಖರಿರಾ, ನಮ್ಮ ಹಿಂದಣವರಾದ ಇಕ್ಷ್ವಾಕು ಮೊದಲಾದ ಅರಸರು, ಒಳ್ಳೆಯ ಬುದ್ಧಿವಂತರಾಗಿಯೂ, ನೀತಿಮಾರ್ಗದಲ್ಲಿ ನಡೆಯುವವರಾಗಿಯೂ, ಸಕಲ ಪ್ರಾಣಿಗಳಲ್ಲಿಯೂ ದಯಾಪರರಾಗಿಯೂ, ಗೌರವಶಾಲಿಗಳಾಗಿಯೂ, ಕೀರ್ತಿಯುಕ್ತರಾಗಿಯೂ, ಪ್ರಜೆಗಳ ಸಂಕಟವನ್ನು ಪರಿಹರಿಸುವವರಾಗಿಯೂ, ರಾಜ್ಯವನ್ನು ಪಾಲಿಸುತ್ತಾ ಸುಖವಾಗಿದ್ದು, ದೇವಲೋಕಕ್ಕೆ ಹೋದರೆಂಬ ವಿಷಯವು, ತಮಗೆಲ್ಲರಿಗೂ ತಿಳಿದೇ ಇದೆ. ಈಗ ನಾವೂ, ಅವರು ನಡೆದು ಸವೆದ ಹಾದಿಯಲ್ಲಿಯೇ ನಡೆಯುತ್ತ ಬರುತ್ತಿದ್ದೇವೆ. ಪ್ರಜೆಗಳನ್ನು ಶಾಸ್ತ್ರ ಮರ್ಯಾದೆಯಂತೆ ಪಾಲಿಸುತ್ತಿದ್ದೇವೆ. ಈ ನಮ್ಮ ರಾಜ್ಯಭಾರಕ್ರಮದ ಫಲವನ್ನು ಪ್ರತ್ಯಕ್ಷವಾಗಿ ಅನುಭವಿಸುತ್ತಿರುವ ನೀವುಗಳೆಲ್ಲರೂ, ಇದಕ್ಕೆ ಸಾಕ್ಷಿಗಳಾಗಿ ಇದ್ದೀರಿ. ನಿಮಗೆ ಸಮ್ಮತಿಯಾದ ಹಾದಿಯಲ್ಲಿ ರಾಜ್ಯವನ್ನು ಪಾಲಿಸಬೇಕೇ ಹೊರತು, ಅದಕ್ಕೆ ವಿರೋಧವಾಗಿ ಯಾರೂ

ನಡೆಯಲಾಗದು. ಈಗ ನಿಮ್ಮಲ್ಲಿ ನಾವು ವಿಜ್ಞಾಪಿಸಿಕೊಳ್ಳಬೇಕಾದ ವಿಷಯವೊಂದು ಇದೆ. ಅದನ್ನು ನೀವೆಲ್ಲರೂ ಸಾವಧಾನದಿಂದ ಲಾಲಿಸ ಬೇಕು. ನಮಗೆ ಎಷ್ಟು ಕೀರ್ತಿಯು ಬಂದಿದ್ದರೇನು? ನಾವು ಎಷ್ಟು ಪರಾಕ್ರಮಿಗಳಾಗಿದ್ದರೆ ತಾನೇ ಏನು? ನಮ್ಮ ದೇಹಕ್ಕೆ ಮುಪ್ಪುತಟ್ಟಿದೆ. ನಾವು ಎಷ್ಟು ಪ್ರಯತ್ನಮಾಡಿದರೂ, ಅದರ ಹಿಡಿತದಿಂದ ತಪ್ಪಿಸಿಕೊಳ್ಳ ಲಿಕ್ಕಾಗುವುದಿಲ್ಲ. ನಮಗೆ ವಯಸ್ಸು ಕಳೆಯುತ್ತ ಬಂದಿರುವುದರಿಂದ, ನಾವು ಬಹುಕಾಲದಿಂದ ಆಳುತ್ತ ಬಂದಿರುವ ನಮ್ಮ ರಾಜ್ಯದ ಭಾರವನ್ನು, ನಮ್ಮ ಹಿರಿಯ ಮಗನಾದ ರಾಮನ ಮೇಲೆ ಇರಿಸಿ, ತಮ್ಮ ಅಪ್ಪಣೆಯನ್ನು ಪಡೆದು, ತಪೋವನದಲ್ಲಿ ಇದ್ದುಕೊಂಡು ವಿಶ್ರಾಂತರಾಗಬೇಕೆಂದಿದ್ದೇವೆ. ನಮ್ಮ ರಾಮನು, ಸಕಲ ರಾಜರನ್ನೂ ಮಟ್ಟುಗೊಳಿಸಿದ ಪರಶುರಾಮ ರನ್ನೂ ಜಯಿಸಿ, ಮಹಾಪರಾಕ್ರಮಿಯೆನಿಸಿಕೊಂಡಿದ್ದಾನೆ; ಅವನು ಬಲು ಒಳ್ಳೆಯವನು; ಪ್ರಜೆಗಳ ಪ್ರೀತಿಯನ್ನು ಸಂಪಾದಿಸಿದ್ದಾನೆ; ಅವನಲ್ಲಿ ಮಾತ್ಸರ್ಯವೆಂಬುದೇ ಇಲ್ಲ. ಅವನಿಗೆ ನಾವು ಪಟ್ಟಾಭಿಷೇಕವನ್ನು ಮಾಡಬೇಕೆಂದಿದ್ದೇವೆ. ಈ ವಿಚಾರದಲ್ಲಿ ನಿಮ್ಮೆಲ್ಲರ ಅಭಿಪ್ರಾಯವೇನು?

ಹೀಗೆಂದು ಕೇಳಿದ ದಶರಥನ ಮಾತಿಗೆ, ಪ್ರಜಾಪ್ರಮುಖರೆಲ್ಲರೂ ಅತ್ಯಂತ ಸಂತೋಷಪಟ್ಟವರಾಗಿ, ಪ್ರಭುವೇ, ತಾವು ಅಪ್ಪಣೆಕೊಡಿಸಿದ ಮಾತು, ತಮ್ಮ ಪ್ರಜೆಗಳಾದ ನಮ್ಮೆಲ್ಲರಿಗೂ ತುಂಬ ಸಮರ್ಪಕ ವಾಗಿದೆ, ಎಂದು ಒಂದೇ ಕೊರಲಿಂದ ಎಲ್ಲ ಕಡೆಯಲ್ಲಿಯೂ ಪ್ರತಿಧ್ವನಿಯು ಹುಟ್ಟುವ ಹಾಗೆ ಕೋಲಾಹಲ ಮಾಡಿದರು. ದೇಶದ ಜನರೆಲ್ಲರೂ, ಬೇಗನೆ ರಾಮನಿಗೆ ಪಟ್ಟಾಭಿಷೇಕವಾಗುವುದನ್ನು ನಾವು ನೋಡು ತ್ತೇವೆ, ಎಂದು ಸಂತೋಷಚಿತ್ತರಾದರು.

ಇತ್ತ ದಶರಥನು, ರಾಜ್ಯಾಭಿಷೇಕವಿಚಾರದಲ್ಲಿ ತನ್ನ ಅಭಿಪ್ರಾ ಯವೇ ಪ್ರಜೆಗಳಿಗೂ ಸಮ್ಮತವಾಯಿತೆಂದು ಆನಂದಪರವಶನಾಗಿ, ಅದನ್ನು ಹೊರಗಾಣಿಸದೆ, ಸುಮಂತ್ರನೇ ಮೊದಲಾದ ಮಂತ್ರಿಗಳನ್ನು ನೋಡಿ, ಎಲೈ ಜಾಣರಾದ ಮಂತ್ರಿಗಳಿರಾ, ನಾವು ಇನ್ನೂ ಊರನ್ನು ಬಿಟ್ಟು ಕಾಡಿಗೆ ಹೋಗಿರುವುದಿಲ್ಲ; ನ್ಯಾಯಮಾರ್ಗದಲ್ಲಿ ಪ್ರಜೆಗಳನ್ನು ರಕ್ಷಿಸುತ್ತಾ ಇದ್ದೇವೆ; ನಮ್ಮ ಕುಮಾರನಾದ ರಾಮನು ಇನ್ನೂ

ಸಣ್ಣವನು. ಅವನಿಗೆ ರಾಜ್ಯವನ್ನು ಆಳುವುದಕ್ಕೆ ತಕ್ಕ ಶಕ್ತಿಯು ಇನ್ನೂ ಬಂದಿರುವುದಿಲ್ಲ. ಹೀಗಿದ್ದರೂ, ಪ್ರಜೆಗಳು ರಾಮನ ಮೇಲೆ ಇಷ್ಟು ಅತಿಶಯವಾದ ಪ್ರೀತಿಯನ್ನು ಇಟ್ಟಿದ್ದಾರೆಯಲ್ಲ. ಇದೇನು ಆಶ್ಚರ್ಯ! ಎಂದು ಪ್ರಶ್ನೆಮಾಡಿದನು.

ಪ್ರಜೆಗಳ ಇಷ್ಟದಂತೆ, ರಾಮನನ್ನು ರಾಜನನ್ನಾಗಿ ಮಾಡಬೇಕೆಂದು ಬಯಸಿ, ದಶರಥನು ಹೇಳಿದ ಮಾತನ್ನು ಕೇಳಿ, ಮಂತ್ರಿಗಳು ವಿನಯದಿಂದ ತಲೆಬಾಗಿ, ಮಹಾರಾಜ, ಲಾಲಿಸಬೇಕು. ತಾವು ರಾಜ್ಯವನ್ನು ನ್ಯಾಯ ಮಾರ್ಗದಲ್ಲಿ ಪಾಲಿಸುತ್ತಿದ್ದರೂ, ಪ್ರಜೆಗಳು ತಮ್ಮ ಕುಮಾರನಲ್ಲಿ ಅತ್ಯಂತ ಪ್ರೀತಿಯಿಂದಿದ್ದಾರೆ, ಎಂಬುವ ವಿಷಯದಲ್ಲಿ ನಮಗೆ ಆಶ್ಚರ್ಯವು ತೋರುವುದಿಲ್ಲ. ಬೆಳುದಿಂಗಳನ್ನು ಪಾನಮಾಡುವ ಚಕೋರಗಳು ಚಂದ್ರನನ್ನು ಪ್ರೀತಿಸುತ್ತವೆಯೋ, ಇಲ್ಲ ಚಂದ್ರನ ಹುಟ್ಟಿಗೆ ಕಾರಣವಾದ ಕ್ಷೀರಸಮುದ್ರವನ್ನು ಪ್ರೀತಿಸುತ್ತವೆಯೋ ಅಪ್ಪಣೆಯಾಗಬೇಕು.

ಎಂದು ಅರಸನೂ ಮಂತ್ರಿಗಳೂ ಮಾತನಾಡಿದ ಬಳಿಕ, ಸಕಲ ಶಾಸ್ತ್ರದ ಸಾರವನ್ನೂ ಬಲ್ಲ ವಸಿಷ್ಠರ ಅಪ್ಪಣೆಯ ಪ್ರಕಾರ, ಪಟ್ಟಾಭಿಷೇಕಕ್ಕೆ ಬೇಕಾದ ಪುಣ್ಯತೀರ್ಥಗಳು, ಮಂಗಳ ಕಲಶ, ಸಿಂಹಾಸನ, ಛತ್ರ ಚಾಮರ ಮುಂತಾದ ವಸ್ತುಗಳನ್ನು ಜತೆಗೊಳಿಸುವುದಕ್ಕಾಗಿ, ಮಂತ್ರಿಗಳೂ ಪ್ರಜೆಗಳೂ ಸಡಗರದಿಂದ ಓಡಾಡುತ್ತಿದ್ದರು.

ಇತ್ತ, ಪಟ್ಟಾಭಿಷೇಕಕ್ಕೆ ಬೇಕಾದ ವಸ್ತುಗಳೆಲ್ಲವೂ ಅಣಿಯಾಗುತ್ತಿರಲು, ದಶರಥನು ರಾಮನನ್ನು ಕರೆದು, ಬಹುಸಂತೋಷದಿಂದ ಮಗೂ, ನೀನು ವಿನಯಾದಿ ಸುಗುಣಗಳುಳ್ಳವನಾಗಿ ಇರುತ್ತೀಯೆ; ನಿನಗೆ ಆದಷ್ಟು ಬೇಗನೆ ಯುವರಾಜಪಟ್ಟವನ್ನು ಕಟ್ಟುತ್ತೇನೆ, ಎಂದು ಹೇಳಿದನು. ತಂದೆಯ ಮಾತನ್ನು ಕೇಳಿ, ರಾಮನು ತನ್ನ ತಾಯ ಬಳಿಗೆ ಹೋಗಿ, ಅವಳಿಗೆ ಈ ಸುದ್ದಿಯನ್ನು ತಿಳಿಸಿ ತನ್ನ ಮನೆಗೆ ಬರುತ್ತಿದ್ದನು. ಆಗ ಪೂಜ್ಯರಾದ ವಸಿಷ್ಠಮುನೀಶ್ವರರು ಬಂದು, ಮಹದಾನಂದದಿಂದ, ಪಟ್ಟಾಭಿಷೇಕಕ್ಕೆ ಆರಂಭದಲ್ಲಿ, ರಾಮನ ಕಯ್ಗೆ ಕಂಕಣವನ್ನು ಕಟ್ಟಿದರು. ಆಗ ಮಂಗಳವಾದ್ಯಗಳು ಮೊಳಗಿದುವು. ಪ್ರಜೆಗಳ ಸಂಭ್ರಮವನ್ನು ಅಷ್ಟು ಇಷ್ಟು, ಎಂದು ಹೇಳಲಾಗುತ್ತಿರಲಿಲ್ಲ.

ಹೀಗೆ, ಪ್ರಜೆಗಳೆಲ್ಲರೂ ರಾಮನ ಪಟ್ಟಾಭಿಷೇಕದ ಸಂಭ್ರಮದಲ್ಲಿ ಇರುತ್ತಿರಲು, ಮಂಥರೆಯೆಂಬ ಕೈಕೇಯಿಯ ದಾಸಿಯೊಬ್ಬಳು ತನ್ನ ಒಡತಿಯ ಬಳಿಗೆ ಬಂದು, 'ತಿಳಿನೀರಿನ ಕೊಳವನ್ನು ಕಾಡು ಕೋಣನು ಕದಡುವಂತೆ' ಅವಳ ಮನಸ್ಸು ದಯೆಯಿಲ್ಲದೆ ಕಠಿಣವಾಗುವಂತೆ ಮಾಡಿಬಿಟ್ಟಳು. ಮಂಥರೆಯು ಕೈಕೇಯಿಯನ್ನು ನೋಡಿ, ತಾಯೇ, ಹಿಂದೆ ದಂಡಕಾವನದೊಳಗೆ, ವೈಜಯಂತವೆಂಬ ಪುರದಲ್ಲಿ ಇದ್ದ ಶಂಬರನೆಂಬ ರಾಕ್ಷಸನೊಡನೆ ನಮ್ಮ ಮಹಾರಾಜರು ಯುದ್ಧಮಾಡುತ್ತಿರುವಾಗ, ರಾಕ್ಷಸನ ಪೆಟ್ಟಿನಿಂದ ಮಹಾರಾಜರು ಗಾಯಗಂಡು ಬಳಲಿಹೋದುದು ತಮಗೆ ನೆನಪಿದೆಯೇ? ಆ ಕಾಲದಲ್ಲಿ, ತಾವು ಮಹಾರಾಜರನ್ನು ರಣಭೂಮಿಯಿಂದ ಆಚೆಗೆ ಕರೆದುಕೊಂಡು ಹೋಗಿ, ಅವರ ಸಂಕಟವನ್ನು ಮಟ್ಟುಮಾಡಿದುದು ಜ್ಞಾಪಕವುಂಟೇ? ತಮ್ಮ ಸಮಯೋಚಿತವಾದ ಕಾರ್ಯವನ್ನು ಕಂಡು, ಮಹಾರಾಜರು ಸಂತೋಷಪಟ್ಟವರಾಗಿ, ತಮಗೆ ಎರಡು ವರಗಳನ್ನು ಕರುಣಿಸಿದರಲ್ಲವೇ? ಈಗ, ತಾವು ಆ ಎರಡು ವರಗಳನ್ನೂ ಮಹಾರಾಜರಿಂದ ಕೊಳ್ಳೋಣವಾಗಲಿ; ಮೊದಲನೆಯ ವರದಿಂದ, ಭರತನಿಗೆ ಪಟ್ಟಾಭಿಷೇಕವಾಗಬೇಕು; ಎರಡನೆಯದರಿಂದ, ರಾಮನು ಹದಿನಾಲ್ಕು ವರ್ಷಕಾಲ, ಕಾಡಿನಲ್ಲಿ ಇರುವಂತೆ ಆಗಬೇಕು. ಈಗ ದೊರೆಯು, ರಾಮನಿಗೆ ಪಟ್ಟವನ್ನು ಕಟ್ಟಬೇಕೆಂದು, ಅಣಿಮಾಡುತ್ತಿದ್ದಾನೆ. ಈ ಸಮಯವನ್ನು ಬಿಟ್ಟರೆ, ನೀವು ನಿಮ್ಮ ಮಗುವಿನ ತಲೆಯಮೇಲೆ, ಕಲ್ಲನ್ನು ಎಳೆದುಬಿಡುತ್ತೀರಿ; ಇಗೋ, ಹೇಳಿದ್ದೇನೆ. ನಿಮ್ಮ ಬುದ್ಧಿಯು ನಿಮ್ಮ ಕಯ್ಯಲ್ಲಿರಲಿ. ನಾಳೆ ರಾಮನು ರಾಜನಾಗಿ ಹೋದರೆ, ನಿಮಗಾಗುವ ಗತಿ ಗೊತ್ತೇ ಇದೆ, ಎಂದು ತನ್ನ ಒಡತಿಯ ಕಿವಿಯಲ್ಲಿ ವಿಷದ ಮಾತನ್ನು ಹಿಂಡಿದಳು.

ಕೈಕೇಯಿಯು ಸ್ವಭಾವವಾಗಿ ಒಳ್ಳೆಯವಳು. ಮಂಥರೆಯ ಮಾತನ್ನು ಕೇಳಿ ಅವಳಿಗೆ ರಾಜ್ಯದ ಆಸೆಯು ಹುಟ್ಟಿತು. ಹೇಗಾದರೂ ಮಾಡಿ, ತನ್ನ ಮಗನೇ ದೊರೆಯಾಗುವಂತೆ ಮಾಡಬೇಕೆಂದು, ಅವಳು ಗೊತ್ತುಮಾಡಿಕೊಂಡಳು.

ರಾಜನಿಗೆ ಅವಳು ಮೋಹದ ರಾಣಿ. ರಾಜನು ಮುದುಕ. ಅವನಿಗೆ

ಸ್ತ್ರೀ ಚಾಪಲ್ಯವಿದ್ದಿತು. ಸ್ತ್ರೀ ಚಾಪಲ್ಯದವನಿಗೆ ಬುದ್ಧಿಯು ಯಾವಾಗಲೂ ಮಟ್ಟು; ಹೆಂಗುಸರು, ತಮ್ಮ ಹಟವನ್ನು ಸಾಧಿಸಬೇಕಾದರೆ, ಮಾಡುವ ಮಂತ್ರ ತಿಳಿಯದೇ? ಸರಿ; ಕೈಕೇಯಿಯು ತಲೆಗೂದಲನ್ನು ಬಿಚ್ಚಿಕೊಂಡು, ಒಡವೆಗಳನ್ನೆಲ್ಲ ತೆಗೆದು ಬಿಸುಟು, ಮಾಸಿದ ಸೀರೆಯುಟ್ಟು, ಕೋಪದ ಕೋಣೆಯಲ್ಲಿ ಮೊಗವಡಿಯಾಗಿ ಬಿದ್ದುಕೊಂಡಳು. ದೊರೆಯು ಇವಳ ಮನೆಗೆ ಹೋದನು. ಇವಳು ಕೋಪಗೊಂಡು ಮಲಗಿದ್ದಾಳೆ. ಇವಳಿಗೆ ಏನೇನೋ ಹೇಳಿದ, ಇವಳು ಕೇಳಲಿಲ್ಲ. ಕೊನೆಗೆ, ನೀನು ಏನ ಕೇಳಿದರೂ ಅದನ್ನು ನಿನಗೆ ಕೊಡುತ್ತೇನೆ, ಎಂದು ದೊರೆಯು ಹೇಳಿದನು. ಆ ಮಾತು ಕಿವಿಗೆ ಬಿದ್ದ ಕೂಡಲೇ, ಕೈಕೇಯಿಯು ತನ್ನ ಮುಖದ ಮುಸುಕನ್ನು ಸಡಲಿಸಿ, ಅರಸರು ಈ ಮಾತಿಗೆ ತಪ್ಪುವರಲ್ಲವಷ್ಟೆ? ಎಂದು ಕೇಳಿದಳು. ಹೆಂಡತಿಯ ಕೋಪವು ಇಳಿದು, ಅವಳು ತನಗೆ ಅನುಕೂಲೆಯಾದರೆ ಸಾಕೆಂದಿದ್ದ ಅರಸನು, ಅವಳನ್ನು ನೋಡಿ, ಪ್ರಿಯೇ, ಸೂರ್ಯವಂಶದ ರಾಜರು ಎಂದಿಗೂ ಸಟೆ ಹೇಳುವುದಿಲ್ಲ; ನನ್ನ ಮಗ ರಾಮನ ಆಣೆಗೂ, ನೀನು ಕೇಳುವುದನ್ನು ನಡೆಸಿಕೊಡುತ್ತೇನೆ, ಎಂದನು.

ಕೈಕೇಯಿಯ ರೊಟ್ಟಿಯು ಜಾರಿ ತುಪ್ಪದಲ್ಲಿ ಬಿದ್ದಿತು. ಅವಳು ಕೈಕೊಂಡಿದ್ದ ವೇಷದ ಮುನಿಸನ್ನು ಬಿಟ್ಟು, ರಾಜನೊಡನೆ ಮಂದಹಾಸದಿಂದ ಮಾತನಾಡಿ ಅವನನ್ನು ಆನಂದಪಡಿಸಿ, ಮಂಥರೆಯು ತನಗೆ ಕಲಿಸಿಕೊಟ್ಟಿದ್ದ ಎರಡು ವರಗಳನ್ನೂ ಈಗ ನಡೆಸಿಕೊಡಬೇಕೆಂದು ಕೇಳಿದಳು.

ಸತ್ಯಸಂಧನಾದ ದಶರಥನ ಕಿವಿಗಳಿಗೆ, ಕೈಕೇಯಿಯ ಮಾತು ಕಾದ ಸೀಸವನ್ನು ಸುರಿದಂತೆ ಆಯಿತು. ದೊರೆಯು ಕೂಡಲೇ ಮೂರ್ಛಿತನಾದನು. ಬಲು ಹೊತ್ತಿನ ಮೇಲೆ ಅವನಿಗೆ ಜ್ಞಾನವು ಬಂದಿತು. ಆಗ ಅವನು ಕೈಕೇಯಿಯನ್ನು ನೋಡಿ, ಎಲೇ, ರಾಮನು ಪಟ್ಟಾಭಿಷೇಕಕ್ಕಾಗಿ ಕಯ್ಗೆ ಕಟ್ಟಿಕೊಂಡಿರುವ ಕಂಕಣವನ್ನು ಕಿತ್ತು ಹಾಕಿ, ಸದ್ದಿಲ್ಲದೆ ಕಾಡಿಗೇನೋ ಹೊರಟುಹೋಗುತ್ತಾನೆ. ರಾಮನಿಗೆ ಪಟ್ಟವಾದೀತು, ನಾವು ಕಂಡೇವು, ಎಂದಿದ್ದ ಪುರಜನರು ಹೇಗೆ ತಾನೇ ಅವನು ವನಕ್ಕೆ ಹೋಗುವುದನ್ನು ಕಂಡು ಸಹಿಸಿಯಾರು? ಸತ್ಯಕ್ಕೆ ಕಟ್ಟುಬಿದ್ದು ನಾನೇನೋ ರಾಮನ ಅಗಲಿಕೆಯನ್ನು ಸಹಿಸುತ್ತೇನೆ.

ಒಳ್ಳೆಯ ಕೆಲಸಕ್ಕೆ ಕಲ್ಲ ಹಾಕಿದಳೆಂಬ ಈ ದೂರನ್ನು ನೀನು ಹೇಗೆ ಹೊರುತ್ತೀಯೋ ಕಾಣೆ; ಎಲೆ ಕಲ್ಲೆದೆಯುವಳೇ, ನನ್ನ ಮುದ್ದು ಮಗನಾದ ರಾಮನು ಇಲ್ಲದೆ ಹೋದರೆ, ನನ್ನ ಪ್ರಾಣಗಳು ನಿಲ್ಲುವುದಿಲ್ಲ. ನೀನು ನನ್ನ ಪ್ರಾಣಗಳನ್ನು ಹಿಂಡಬೇಕೆಂದೇ ನನಗೆ ಹೆಂಡತಿಯಾದೆಯಾ, ಎಂದು ಪಲತೆರದಿಂದ ಹಂಬಲಿಸಿದನು.

ತನ್ನ ಹಟವನ್ನೇ ಸಾಧಿಸಬೇಕೆಂದಿದ್ದ ಕೈಕೇಯಿಯು, ಗಂಡನ ಸಂಕಟವನ್ನು ಕಂಡು, ಮರುಗುವ ಪಾಪವುಂಟೇ! ಅವಳು ದೊರೆಯನ್ನು ಅಪಹಾಸ್ಯಮಾಡುತ್ತ, ಒಡೆಯರೇ, ಮಗನನ್ನು ಅಗಲಬೇಕಲ್ಲ ಎಂದುಕೊಂಡು, ನೀವು ನನಗೆ ಕೊಟ್ಟಿರುವ ವರಗಳನ್ನು ಕೊಡದೆ ಹೋದರೆ, ಆ ನಿಮ್ಮ ಧರ್ಮಶಾಸ್ತ್ರಗಳಿಗೆಲ್ಲ ಇಗೋ, ಒಂದು ದೊಡ್ಡ ನಮಸ್ಕಾರ ಮಾಡುತ್ತೇನೆ. ಹಗೆಗಳಿಗೆ ಭೀಕರವಾದ ಪರಾಕ್ರಮವುಳ್ಳವರೇ, ಆಡಿದ ಮಾತಿಗೆ ತಪ್ಪಬಾರದೆಂದು, ತನ್ನ ಮೆಯ್ಯ ಕಂಡವನ್ನೇ ಕತ್ತರಿಸಿ ಗಿಡುಗನಿಗೆ ಕೊಟ್ಟು, ಪಾರಿವಾಳದ ಪ್ರಾಣವನ್ನು ಉಳುಹಿದ ಸತ್ಯವಂತನಾದ ಆ ಶಿಬಿರಾಯನ ಕತೆಯನ್ನು, ನೀವು ಎಂದಾದರೂ ಕೇಳಿ ಇದ್ದೀರಾ? ಅಲರ್ಕನೆಂಬ ಮತ್ತೊಬ್ಬ ದೊರೆಯು, ವೇದವೇದಾಂಗ ಪಾರಂಗತನಾದ, ಯಾವನೋ ಒಬ್ಬ ಬ್ರಾಹ್ಮಣನು, ಎರಡು ಕಣ್ಣುಗಳೂ ಇಲ್ಲದೆ ತನ್ನ ಬಳಿಗೆ ಬಂದು, ನನಗೆ ಕಣ್ಣುಗಳನ್ನು ಕೊಡು ಎಂದು ಪ್ರಾರ್ಥಿಸಲು, ಆ ಮಾತಿಗೆ ಸಿಟ್ಟಾದನೇ? ಹಿಂದು ಮುಂದು ನೋಡಿದನೇ? ಕೂಡಲೇ, ಆ ಬ್ರಾಹ್ಮಣನನ್ನು ಸತ್ಕರಿಸಿ, ತನ್ನ ಎರಡು ಕಣ್ಣುಗಳನ್ನೂ ಅವನಿಗೆ ಕೊಟ್ಟುಬಿಟ್ಟನು, ಎಂದು ಹೇಳಿದಳು.

ಅವಳು ಮತ್ತೂ, ಅರಸರೇ, ಶಂಬರಾಸುರನೊಡನೆ ತಾವು ಹೋರಾಡುವಾಗ, ತಮಗೆ ಉಂಟಾದ ಸಂಕಟವನ್ನು ನಾನು ಪರಿಹಾರ ಮಾಡಿದೆನು. ಅದಕ್ಕಾಗಿ ಸಂತೋಷಪಟ್ಟು, ತಾವಾಗಿಯೇ ನನಗೆ ಎರಡು ವರಗಳನ್ನು ಅನುಗ್ರಹಿಸಿದಿರಿ. ತಮ್ಮ ಮಾತುಗಳು ಕಲ್ಲಿನಲ್ಲಿ ಕೆತ್ತಿದ ಅಕ್ಷರಗಳಂತೆ ನೆಲೆಯಾಗಿರುವುವು. ಈ ಸಂದರ್ಭದಲ್ಲಿ, ಅವು ನೀರಿನ ಮೇಲೆ ಬರೆದ ಲಿಪಿಗಳಂತೆ, ಆಗಬಹುದೇ? ನನಗೆ ನೀವು ಕೊಟ್ಟ ಮಾತನ್ನು ನಡೆಸಿಕೊಟ್ಟರೂ ಸರಿ; ನಡೆಸಿಕೊಡದೆ ಇದ್ದರೂ ಸರಿ; ರಾಮನ

ತಾಯಿಗೆ ಗೌರವವುಂಟಾಗುವುದನ್ನು ಕಂಡರೆ, ನನ್ನ ಹೊಟ್ಟೆಯು ಉರಿಯುತ್ತದೆ. ನೀವು ಪಟ್ಟಾಭಿಷೇಕದ ಏರ್ಪಾಡನ್ನು ಕೂಡಲೇ ನಿಲ್ಲಿಸಿಬಿಡಬೇಕು; ಇಲ್ಲದಿದ್ದರೆ, ನಾನು ವಿಷವನ್ನು ತಿಂದು, ನಿಮ್ಮ ಮುಂದೆಯೇ ಪ್ರಾಣಗಳನ್ನು ಬಿಡುತ್ತೇನೆ ಎಂದಳು.

ಹೀಗೆ ಮಾತಾಡಿದ ಕೈಕೇಯಿಯನ್ನು ನೋಡಿ, ದೊರೆಯು ಎಲೆ ದುಷ್ಟೇ, ನಿನಗೆ ಮಾನವಿಲ್ಲ, ಮರ್ಯಾದೆಯಿಲ್ಲ, ಮರುಕವೆಂಬುದು ಇಲ್ಲವೇ ಇಲ್ಲ; ನೀನು ಏನನ್ನು ಬಗುಳುತ್ತಿದ್ದೀಯೆ! ನಿನಗೆ ಕೆಟ್ಟ ಹೆಸರು ತಪ್ಪುವುದಿಲ್ಲ. ಇನ್ನು ರಾಮನಿಗೆ ತಂದೆಯಿರುವುದಿಲ್ಲ. ಎಲೆ ಕೆಡುಕಳೇ, ನನಗೆ ಮುಪ್ಪಿನಲ್ಲಿ, ನಿನ್ನ ದೆಸೆಯಿಂದ, ಮಕ್ಕಳು ಹತ್ತಿರವಿಲ್ಲದಂತಾದರು. ನಿನ್ನ ಮಗನು ನನಗೆ ಅಪರಕರ್ಮವನ್ನು ಮಾಡಬೇಡ. ಎಲೆ ಹೆಂಗುಸೇ, ರಾಮನು ಮರದ ತೊಗಟೆಯಿಂದಾದ ಬಟ್ಟೆಯನ್ನಾದರೂ ಉಟ್ಟಾನು. ಅಡವಿಯ ಗಿಡದ ನೆರಳೊಳಗಾದರೂ ಕುಳಿತಾನು. ಆದರೆ ನಿನ್ನ ಮನಸ್ಸಿಗಿಂತ ಗಟ್ಟಿಯಾಗಿರುವ ಕಲ್ಲುಗಳ ಮೇಲೆ ಅವನು ಹೇಗೆ ತಾನೇ ನಿದ್ರಿಸಲಾಪನು?

ಎಂದು ದೊರೆಯು, ಕೈಕೇಯಿಗೆ ಎಷ್ಟೋ ಹೇಳಿ ನೋಡಿದನು, ಬಯ್ದನು; ನಯದಿಂದ ಕೇಳಿಕೊಂಡನು. ಮಂಥರೆಯು ವಿಷದ ಮಾತಿನಿಂದ ಬುದ್ಧಿಗೆಟ್ಟಿದ್ದ, ಅವಳ ಎದೆಯು, ಕೊಂಚವೂ ಮೆತ್ತಗಾಗಲಿಲ್ಲ. ಬೆಳುದಿಂಗಳು ಸೋಕಿದೊಡನೆಯೇ, ಕರಗಿ ಹೋಗುವ ಚಂದ್ರಕಾಂತಶಿಲೆಯು, ಕಸಕಡ್ಡಿಗಳಿಂದ ಚೆನ್ನಾಗಿ ಮುಚ್ಚಿ ಹೋಗಿದ್ದರೆ, ಹೇಗೆ ತಾನೇ ಕರಗೀತು?

ದೊರೆಯು ಪಾಪ, ಏನ ಮಾಡಿಯಾನು! ಕೊಟ್ಟ ಮಾತನ್ನು ನಡೆಸದೆ ಇರುವುದಕ್ಕಿಲ್ಲ; ಏನ ಮಾಡಿದರೂ ಕೈಕೇಯಿಯು ತನ್ನ ಹಿಡಿದ ಹಟವನ್ನು ಬಿಡಳು. ಹೇಗಿದ್ದರೂ ರಾಮನನ್ನು ಅಗಲಲೇ ಬೇಕಾಗುತ್ತದೆ. ಈಗಲಾದರೂ ಕೊಂಚ ಹೊತ್ತು ಅವನನ್ನು ಕಣ್ಣಾತುಂಬ ನೋಡೋಣವೆಂದುಕೊಂಡು, ಮಗನನ್ನು ಕರೆದುತಾರೆಂದು ಸುಮಂತ್ರನಿಗೆ ಹೇಳಿದನು. ಅವನು, ರಾಜಾಜ್ಞೆಯಂತೆ, ರಾಮನನ್ನು ಅರಸನ ಬಳಿಗೆ ಕರೆದುಕೊಂಡು ಬಂದನು. ರಾಮನು ತಂದೆಗೆ ವಂದನೆಮಾಡಿ,

ಅವನ ಮುಖವು ಕಳೆಗೆಟ್ಟಿರುವುದನ್ನು ಕಂಡು, ದಿಗಿಲುಬಿದ್ದು, ಮಹಾರಾಜರ ಮುಖವು ಕಾಂತಿಹೀನವಾಗಿ ಏತಕ್ಕೆ ಇದೆ? ಎಂದು ಕೈಕೇಯಿಯನ್ನು ಬೆಸಗೊಂಡನು.

ಆ ಮಾತಿಗೆ, ಕೇಡಾಳಿಯಾದ ಕಿರಿಯ ರಾಣಿಯು, ರಾಮನನ್ನು ಕುರಿತು, ಮಗನೇ ಕೇಳಪ್ಪ, ನಿಮ್ಮ ತಂದೆಯವರು ನನಗೆ ಹಿಂದೆ ಎರಡು ವರಗಳನ್ನು ಕೊಟ್ಟಿದ್ದರು. ಅದನ್ನು ಈಗ ನಡೆಸಿಕೊಡಬೇಕೆಂದು ನಾನು ಅವರನ್ನು ಬೇಡಿದೆನು. ಅವರು, ಮಗನ ಮೇಲಣ ಮಮತೆಯಿಂದ, ತಮ್ಮ ಮಾತಿನಂತೆ ನಡೆಯಲಾರದೆಯೂ, ಮಾತನ್ನು ತಪ್ಪಲಾರದೆಯೂ ಸಂಕಟಪಡುತ್ತಿದ್ದಾರೆ. ಮೊದಲನೆಯ ವರವೇನೆಂದರೆ, ನನ್ನ ಮಗ ಭರತನಿಗೆ ಪಟ್ಟಾಭಿಷೇಕವನ್ನು ಮಾಡಬೇಕೆಂಬುದು; ಎರಡನೆಯದರ ಪ್ರಕಾರ, ನೀನು ಹದಿನಾಲ್ಕು ವರ್ಷಗಳವರೆಗೆ ಅಡವಿಯಲ್ಲಿ ವಾಸ ಮಾಡುತ್ತ ಇರಬೇಕೆಂಬುದು, ಎಂದು ಬದಲನ್ನು ಹೇಳಿದಳು.

ಚಿಕ್ಕಮ್ಮನ ಮಾತನ್ನು ಕೇಳಿ, ರಾಮನೇನು ಹೆದರಿದನೇ? ರಾಜ್ಯವು ತನಗಾಗುವುದಿಲ್ಲವಲ್ಲ, ಎಂದು ಸಂಕಟಪಟ್ಟನೇ? ಹಾಗೆ ಮಾಡುವುದು ನಮ್ಮಂಥ ತಿಳಿವಿಲ್ಲದ ಸ್ವಾರ್ಥಪರರಾದವರ ಕೆಲಸ. ರಾಮನು ಮಹಾನುಭಾವ. ಕೈಕೇಯಿಯ ನುಡಿಯನ್ನು ಕೇಳಿ, ಅವನು ಸಂತೋಷಪಟ್ಟುಕೊಂಡು, ಕೈಗಳನ್ನು ಜೋಡಿಸಿಕೊಂಡು ಚಿಕ್ಕಮ್ಮನೊಡನೆ ಇಂತೆಂದನು.

ತಾಯೇ, ನಿನ್ನ ಭರತನು ರಾಜ್ಯವಾಳುವುದಕ್ಕೆ ಹೆದರುತ್ತಾನೆಯೇ? ಪಾವನವಾದ ವನಕ್ಕೆ ಹೋಗಬೇಕಲ್ಲ ಎಂದು ನನಗೇನಾದರೂ ಅಂಜಿಕೆಯೇ? ಈ ಅಲ್ಪ ವಿಚಾರಕ್ಕಾಗಿ, ನಮ್ಮ ತಂದೆಯವರು ಏಕೆ ಸಂಕಟಪಡಬೇಕು? ನಮ್ಮ ಪೂರ್ವಿಕರಾದ ಭಗೀರಥಾದಿಗಳು ಸಾಧನೆಮಾಡಿದ ಪ್ರತಿಜ್ಞಾಕಾರ್ಯಗಳಿಗಿಂತ, ಈ ಕೆಲಸವು ಏನು ದೊಡ್ಡದೇ? ನಾನೂ ಭರತನೂ, ನಮ್ಮ ತಂದೆಯ ಮಾತನ್ನು ನಡೆಸದೆ ಹೋದರೆ, ನಾವು ಮಕ್ಕಳಾಗಿ ಅವರ ಹೊಟ್ಟೆಯಲ್ಲಿ ಹುಟ್ಟಿ ಪ್ರಯೋಜನವೇನು? ಅದಿರಲಿ, ತಾಯೇ, ನೀವು ನಿಮ್ಮ ಮಗನ ಮೇಲೆ ರಾಜ್ಯವಾಳುವುದೆಂಬ ದೊಡ್ಡ ಭಾರವನ್ನು ಹೊರಿಸಿ, ಕಾಡಿಗೆ ಹೋಗುವುದೆಂಬ ಸಣ್ಣ ಕೆಲಸವನ್ನು

ನನಗೆ ನೇಮಿಸಿ, ನನ್ನಲ್ಲಿ ಹೇರಳವಾದ ಪಕ್ಷಪಾತವನ್ನು ತೋರಿಸಿದ್ದೀರಿ. ಭರತನಿಗೆ ಪಟ್ಟಾಭಿಷೇಕವನ್ನು ಮಾಡುತ್ತೇನೆ, ಎಂದು ನನ್ನ ಸಂಗಡ ಹೇಳುವುದಕ್ಕೆ, ತಂದೆಯವರಿಗೆ ಏಕೆ ಸಂಕೋಚ? ಭರತನಿಗೆ ಅಭಿಷೇಕ ಮಾಡಬೇಕೆಂಬ ಅವರ ಇಷ್ಟವು, ನನಗೂ ಸಮ್ಮತವೇ, ಎಂದು ಹೇಳಿದನು.

ಆ ಸಮಯದಲ್ಲಿ, ದಶರಥನು, ಸಿಡಿಲು ಹೊಡೆದ ಬೆಟ್ಟದಂತೆ, ದುಃಖವು ಅತಿಶಯವಾಗಲು, ಮೂರ್ಛೆಹೋಗಿ, ದೊಪ್ಪನೆ ಬಿದ್ದು ಬಿಟ್ಟನು. ಆಗ ಕೈಕೇಯಿಯು, ರಾಮ, ತಂದೆಯ ಮಾತಿನಂತೆ ನೀನು ನಡೆಯಪ್ಪ, ಎಂದಳು. ಜಗತ್ಪರಿಪಾಲಕನಾದ ರಾಮನು, ತಾಯ ಅಪ್ಪಣೆಯಂತೆ ವನಕ್ಕೆ ಹೊರಡುವುದಾಗಿ ನಿಶ್ಚಯಿಸಿ, ತನ್ನ ಮಾತೆ ಯಾದ ಕೌಸಲ್ಯೆಯ ಮನೆಗೆ ಬಂದು, ಅವಳಿಗೆ ನಮಸ್ಕಾರಮಾಡಿ, ಅಮ್ಮಾ, ನನಗೆ ಪಟ್ಟಾಭಿಷೇಕವು ನೆರವೇರದೆ ನಿಂತುಹೋಯಿತು; ನಾನು ಅಡವಿಗೆ ಹೊರಡಬೇಕಾಗಿದೆ, ನೀನು ಬೇಗ ಅಪ್ಪಣೆಯನ್ನು ಕೊಡು, ಎಂದು ಕೈಕೇಯಿಯ ಮನೆಯಲ್ಲಿ ನಡೆದ ಸುದ್ದಿಯನ್ನೆಲ್ಲ ತಿಳಿಸಿದನು.

ಮಗನ ನುಡಿಗಳನ್ನು ಕೇಳಿ, ನಂಜೂಡಿದ ಬಾಣದಿಂದ ಹೊಡೆ ಯಲ್ಪಟ್ಟ ಹೆಣ್ಣು ಜಿಂಕೆಯಂತೆ ತತ್ತರಿಸುತ್ತ, ಕೌಸಲ್ಯೆಯು ಮೂರ್ಛೆ ಹೋದಳು. ಕೊಂಚ ಹೊತ್ತಾದ ಮೇಲೆ ಅವಳಿಗೆ ಪ್ರಜ್ಞೆಯು ಬಂದಿತು. ಅವಳು ದುಃಖದಿಂದ, ಇದೇನಪ್ಪ ಮಗನೇ, ನೀನು ಲೋಕೋಪಕಾರಿ ಯಲ್ಲವೇ? ಸಕಲ ಶುಭಲಕ್ಷಣಗಳಿಂದ ಕೂಡಿದವನಲ್ಲವೇ? ನಮ್ಮ ಪುರೋಹಿತರಾದ ವಸಿಷ್ಠರು ಮಹಾಜ್ಞಾನಿಗಳಲ್ಲವೇ? ಅವರೇ ನಿನ್ನ ಕಯ್ಗೆ ಕಂಕಣವನ್ನು ಕಟ್ಟಿದರಲ್ಲೋ. ಅಡವಿಯಲ್ಲಿ ಗೆಡ್ಡೆ ಗೆಣಸು ಗಳನ್ನು ಅಗೆದು ತಿನ್ನುತ್ತ ಇರು, ಎಂದು ನಿನಗೆ ಕಂಕಣವನ್ನು ಕಟ್ಟಿದ ರೇನೋ? ಎಂದು ಬಹುವಾಗಿ ಪ್ರಲಾಪಿಸಿದಳು.

ಕೌಸಲ್ಯೆಯ ಪ್ರಲಾಪವನ್ನು ಕೇಳಿ, ಲಕ್ಷ್ಮಣನು ಬಹುಕೋಪ ಗೊಂಡವನಾಗಿ, ಭೋಗೈಶ್ವರ್ಯಾದಿಗಳಿಂದ ಇಂದ್ರನಂತೆ ಕಂಗೊಳಿಸುವ ರಾಮನ ಬಳಿಗೆ ಬಂದು, ಅಣ್ಣಾ, ನೀವು ಅಡವಿಗೆ ಹೋಗುವುದು

ತರವಲ್ಲ; ದುಷ್ಟೆಯಾದ ಕೈಕೇಯಿಯ ಮಾತಿಂದಲೂ, ತಟ್ಟಿರುವ ಮುಪ್ಪಿನಿಂದಲೂ, ಬುದ್ಧಿಗೆಟ್ಟ ಈ ದೊರೆಯು ಹೇಳಿದ ಮಾತಿನಮೇರೆಗೆ, ನೀವು ಅರಸುತನವನ್ನು ಬಿಸುಟು ಅಡವಿಗೆ ಹೋಗಕೂಡದು. ತಂದೆಯ ಮಾತನ್ನು ಕೇಳಬಾರದೋ? ಎಂದು ನೀವು ಕೇಳಬಹುದು. ಅರಸುತನವನ್ನು ನನಗೆ ಕೊಡಬೇಕು, ಎಂದು ನೀವು ತಂದೆಯನ್ನು ಬಲಾತ್ಕರಿಸಲಿಲ್ಲ. ಅವರೇ ಸಂತೋಷದಿಂದ ನಿಮಗೆ ರಾಜ್ಯಭಾರವನ್ನು ವಹಿಸುತ್ತೇನೆ ಎಂದರು. ಈಗ, ಅವರು ನಿಮಗೆ ಮೊದಲೇ ಕೊಟ್ಟುಬಿಟ್ಟಿರುವ ಅರಸುತನವನ್ನು, ನಿಮ್ಮಿಂದ ಮರಳಿ ತೆಗೆದುಕೊಳ್ಳುವುದು, ಎಂದಿಗೂ ನ್ಯಾಯವಲ್ಲ. ತಂದೆಯ ಮಾತನ್ನು ನಡೆಸದಿರುವುದೆಂಬ ಅನ್ಯಾಯವನ್ನು ಮಾಡಿದರೂ, ವರ್ಣಾಶ್ರಮಗಳನ್ನು ಶಾಸ್ತ್ರ ರೀತಿಯಿಂದ ರಕ್ಷಿಸಿಕೊಂಡು ಬಂದರೆ, ಅದರಿಂದ ಅರಸರಿಗೆ ಸದ್ಗತಿಯುಂಟು. ಮನುಷ್ಯನು, ಸ್ವಪೌರುಷದಿಂದ ಕೆಲಸವನ್ನು ಮಾಡಿದ ಹೊರತು ಪುರುಷಾರ್ಥವನ್ನು ಪಡೆಯಲಾರನು. ಎಲೈ ಮಹಾಪರಾಕ್ರಮಿಯೇ, ನೀವು ಅಡವಿಯಲ್ಲಿ ತೊಳಲಿ, ನಿಮ್ಮ ಪಾದಾರವಿಂದಗಳನ್ನು ಏಕೆ ಕಂದಿಸಬೇಕು. ನಾನು ಬಾಣವನ್ನು ಹೂಡಿ, ಮರುಳನೂ, ಸ್ತ್ರೀವ್ಯಸನಿಯೂ, ಮುದುಕನೂ, ತಿಳಿಗೇಡಿಯೂ ಆದ ನಮ್ಮ ತಂದೆಯನ್ನು, ಈಗಲೇ ಕೊಂದುಬಿಡುತ್ತೇನೆ, ಎಂದು ಗರ್ಜಿಸಿದನು.

ಹೀಗೆ ಕೋಪದಿಂದ ನುಡಿದ ಲಕ್ಷ್ಮಣನ ಮಾತನ್ನು ಕೇಳಿ, ಶ್ರೀರಾಮನು, ತಮ್ಮಾ, ಸೂರ್ಯವಂಶದ ಅರಸರು ತಂದೆಯ ಮಾತನ್ನು ಮೀರುವವರೇ ಅಲ್ಲ; ಇತರ ರಾಜರು ಕೂಡ, ಆ ಮರ್ಯಾದೆಯನ್ನು ನಡೆಸಿಕೊಂಡು ಬಂದಿದ್ದಾರೆ. ಕಂಡುಮುನಿ, ಪರಶುರಾಮ, ಪೂರು ಮುಂತಾದ ಮಹನೀಯರು, ತಂದೆಯ ಅಪ್ಪಣೆಯಂತೆ ಗೋಹತ್ಯೆ, ಮಾತೃವಧೆ, ಯೌವನವಿನಿಮಯ ಮುಂತಾದ, ಮಾಡಬಾರದ ಕಾರ್ಯವನ್ನೆಲ್ಲ ಮಾಡಿದರು. ಅವರಿಗೆ ಅದರಿಂದ ಗೌರವವುಂಟಾಯಿತು. ಪೂರ್ವಿಕರು ಅಂಥ ಕಾರ್ಯಗಳನ್ನೆಲ್ಲ, ತಂದೆಯ ಮಾತಿಗೆ ಕಟ್ಟುಬಿದ್ದು ಮಾಡಿರುವಾಗ, ಈ ವನವಾಸವನ್ನು ಮಾಡುವುದೇನು ದೊಡ್ಡದು? ಎಂದು ಹೇಳಿ, ಅವನ ಕೋಪವನ್ನು ಸಮಾಧಾನಪಡಿಸಿದನು.

ಬಳಿಕ ಪುತ್ರವತ್ಸಲೆಯಾದ ಕೌಸಲ್ಯೆಯು, ರಾಮನನ್ನು ನೋಡಿ, ಮಗನೇ, ನಿನ್ನ ಕೂಡ ನನ್ನನ್ನೂ ಅಡವಿಗೆ ಕರೆದುಕೊಂಡು ಹೋಗಪ್ಪ, ಎಂದು ಗಳಗಳನೆ ಅತ್ತಳು. ಆಗ ರಾಮನು, ತಾಯಿಗೆ ಕೈಜೋಡಿಸಿ, ಅಮ್ಮಾ, ನನ್ನ ಮಾತನ್ನು ಕೊಂಚ ಕೇಳಬೇಕು. ನಾನು ಅರಣ್ಯಕ್ಕೆ ಹೊರಟುಹೋಗುತ್ತೇನೆ. ತಂದೆಯವರಿಗೆ ಇದೊಂದು ದುಃಖ; ಚಿಕ್ಕಮ್ಮನು, ತನ್ನ ಮಾತಿನ ವೇಗದಿಂದ, ಅವರ ಜೀವಕ್ಕೆ ತುಂಬ ಗಾಸಿ ಮಾಡಿದ್ದಾಳೆ. ಅವರ ತಾರಿಹೋದ, ದುಃಖದಿಂದ ಬೆಂದ, ಶರೀರವನ್ನು ನೀನು ನೋಡಿಕೊಳ್ಳದಿದ್ದರೆ, ಅವರ ಗತಿಯೇನು? ಆದಕಾರಣ ನನ್ನೊಡನೆ ಕಾಡಿಗೆ ಬರುತ್ತೇನೆಂದು ನೀನು ಹಟವನ್ನು ಹಿಡಿಯದೆ ಇಲ್ಲಿಯೇ ಇರು, ಎಂದು ಮಾತೆಯನ್ನು ಸಂತಯಿಸಿದನು. ಬಳಿಕ ಕೌಸಲ್ಯೆಯು ಮಗನನ್ನು ಬಗೆ ಬಗೆಯಾಗಿ ಹರಸಿ ಬೀಳ್ಕೊಟ್ಟಳು.

ಇತ್ತ ರಾಮನು, ಮಾತೆಯನ್ನು ಬೀಳ್ಕೊಂಡು, ಸೀತೆಯ ಅಂತಃಪುರಕ್ಕೆ ಹೋದನು. ಆಗ ಸೀತೆಯು, ಪಟ್ಟಾಭಿಷೇಕಕ್ಕೆ ಬೇಕಾದಂತೆ ಅಲಂಕಾರವನ್ನು ಮಾಡಿಕೊಳ್ಳುತ್ತ, ಸಂತೋಷದಿಂದಿದ್ದಳು. ಅಂಥ ತನ್ನ ಪ್ರಿಯತಮೆಯಾದ ಹೆಂಡತಿಗೆ, ತಾನು ವನಕ್ಕೆ ಹೊರಡಬೇಕೆಂಬ ಸುದ್ದಿಯನ್ನು ಹೇಳಿ, ರಾಮನು ದುಃಖವುಂಟುಮಾಡಿದನು. ತರುವಾಯ, ಆಕೆಯು ತನ್ನೊಡನೆ ಅಡವಿಗೆ ಹೊರಡುವುದಕ್ಕೆ ಅಣಿಯಾಗುವೆನೆಂದು ಹೇಳಲು, ರಾಮನು ಅವಳನ್ನು ನೋಡಿ, ಎಲೆ ಎನ್ನ ಮುದ್ದೇ, ಜನಕರಾಜನ ಮಗಳೇ, ನೀನು ಬಹು ಸುಕುಮಾರಿ; ನಿನ್ನ ಕೋಮಲವಾದ ಶರೀರವನ್ನು, ಕಾಡಿನಲ್ಲಿ ಬಾಡಿಸುವುದನ್ನು ಕಂಡು, ನಾನು ಹೇಗೆ ಸಹಿಸುವೆನು? ಅಡವಿಯೊಳಗೆ ತೋಳಗಳು, ಜಿಂಕೆಗಳ ಹಿಂದುಗಡೆಯನ್ನು ಕಚ್ಚಿ ರಕ್ತವನ್ನು ಹೀರಿ, ನೋಡಲಿಕ್ಕೆ ಅಂಜಿಕೆಯುಂಟುಮಾಡುತ್ತವೆ. ಅಡವಿಯು ಕಲ್ಲುಮುಳ್ಳುಗಳಿಂದ ತುಂಬಿದೆ. ಹಾದಿಯು ಸರಿಯಾಗಿಲ್ಲ. ನಿನ್ನಂಥ ಸುಕುಮಾರಿಯಾದ ಅರಸುಮಗಳು, ವನಕ್ಕೆ ಬರುವುದುಂಟೇ? ಬೇಡ, ಇಲ್ಲಿಯೇ ನಿಲ್ಲುವಳಾಗು, ಎಂದು ಬಲು ಬಗೆಯಾಗಿ ಹೇಳಿದನು. ಅವಳು ತನ್ನ ಹಟವನ್ನು ಬಿಡಲಿಲ್ಲ. ಅವಳಂತೆಯೇ ಲಕ್ಷ್ಮಣನೂ ಸಂಗಡ ಹೊರಡುವುದಕ್ಕೆ ಅನುವಾದನು.

ತರುವಾಯ ರಾಮನು, ವಸಿಷ್ಠಪುತ್ರರಾದ ಸುಯಜ್ಞರೆಂಬ ತನ್ನ ಆಚಾರ್ಯರಿಗೆ, ಸಕಲಾಭರಣಗಳನ್ನೂ, ಸಾವಿರ ಆನೆಗಳೊಡನೆ ತನಗೆ ಸೋದರಮಾವನು ಕೊಟ್ಟಿದ್ದ ಶತ್ರುಂಜಯವೆಂಬ ಗಜವನ್ನೂ, ದಾನ ಮಾಡಿ, ಲಕ್ಷ್ಮಣನನ್ನು ಕುರಿತು, ತಮ್ಮಾ, ಎರಡು ಬಿಲ್ಲುಗಳನ್ನೂ, ಎರಡು ಕವಚಗಳನ್ನೂ, ಎರಡು ಬತ್ತಳಿಕೆಗಳನ್ನೂ, ಎರಡು ಖಡ್ಗ ಗಳನ್ನೂ, ಜನಕಯಜ್ಞದಲ್ಲಿ ನನಗೆ ವರುಣನು ಕೊಟ್ಟ ಆಯುಧಗಳೆಲ್ಲ ವನ್ನೂ ತೆಗೆದುಕೊಂಡು ನನ್ನೊಡನೆ ಬಾ, ಎಂದು ಹೇಳಿದನು. ಇತ್ತ ಸೀತೆಯು, ತಾನು ತೊಟ್ಟಿದ್ದ ಒಡವೆಗಳನ್ನೆಲ್ಲ, ಸುಯಜ್ಞರ ಹೆಂಡತಿಗೆ ಕೊಟ್ಟುಬಿಟ್ಟಳು.

ತ್ರಿಜಟನೆಂಬ ದರಿದ್ರಬ್ರಾಹ್ಮಣನೊಬ್ಬನು, ರಾಮನ ಬಳಿಗೆ ಬಂದು, ತನಗೆ ಏನನ್ನಾದರೂ ಕೊಡಬೇಕೆಂದು ಬೇಡಿದನು. ಆಗ ರಾಮನು, ಅವನ ಕಯ್ಗೆ ಒಂದು ದೊಣ್ಣೆಯನ್ನು ಕೊಟ್ಟು, ಇದನ್ನು ನಿನ್ನಿಂದ ಆಗುವಷ್ಟು ದೂರಕ್ಕೆ ಎಸೆಯೆಂದನು. ಆ ಬ್ರಾಹ್ಮಣನು ಹಾಗೆಯೇ ಮಾಡಿದನು. ಆ ದೊಣ್ಣೆಯು ಹೋಗಿ ಬಿದ್ದವರೆಗೆ, ಇರುವ ಗೋವ್ರಜ ವನ್ನೆಲ್ಲ, ರಾಮನು ಆ ಬ್ರಾಹ್ಮಣನಿಗೆ ಕೊಟ್ಟು, ಕಪಿಂಜಲ ಮುಂತಾದ ಮಿಕ್ಕ ಬ್ರಾಹ್ಮಣರಿಗೆಲ್ಲ, ಹಲವು ಬಗೆಯಾಗಿ ಧನವನ್ನು ದಾನಮಾಡಿದನು. ತರುವಾಯ ಲಕ್ಷ್ಮಣನು, ತನ್ನಲ್ಲಿ ಇದ್ದ ಹಣವನ್ನೆಲ್ಲ, ಕೌಸಲ್ಯೆಯನ್ನು ಆಶ್ರಯಿಸಿಕೊಂಡಿದ್ದ ಪುರೋಹಿತನೊಬ್ಬನಿಗೆ ಕೊಟ್ಟನು.

ಈ ಪರಿಯಾಗಿ, ತಮ್ಮಲ್ಲಿ ಇದ್ದ ವಸ್ತ್ರಭೂಷಣ ಧನಗಳನ್ನು ಅವರು ಬ್ರಾಹ್ಮಣರಿಗೆ ದಾನಮಾಡಿ, ವನಕ್ಕೆ ಹೊರಡುವುದಕ್ಕೆ ಅಣಿಯಾದರು. ಅವರನ್ನು ಕಂಡು, ಆವೂರ ಹೆಂಗಳೆಲ್ಲರೂ ನಿಟ್ಟುಸಿರನ್ನು ಬಿಡುತ್ತ, ಕಣ್ಣೀರನ್ನು ಸುರಿಸುತ್ತ ಸಂಕಟಪಟ್ಟರು. ನಮ್ಮೊಡನೆ ಯಾರೂ ಬರ ಕೂಡದೆಂದು, ಪರಿಜನಗಳಿಗೆಲ್ಲ ಹೇಳಿ, ಸೀತಾರಾಮಲಕ್ಷ್ಮಣರು ಅಂತಃ ಪುರದಿಂದ ಹೊರವಟ್ಟರು.

ಸೀತೆಯನ್ನು ದೇವತೆಗಳು ಕೂಡ ನೋಡಿದವರಲ್ಲ; ಹೀಗಿರುವಾಗ, ಅವಳನ್ನು ಮನುಷ್ಯರು ನೋಡಬಾರದೆಂದು ಚಿಂತಿಸಿ, ಬ್ರಹ್ಮನು, ಜನರಿಗೆ ಕಣ್ಣು ಕಾಣದಿರುವಂತೆ, ನೀರನ್ನು ತುಂಬಿ ಮುಚ್ಚಿಬಿಟ್ಟನು. ಸೀತೆಯು

ಸನ್ನೊಡನೆ ಕಾಡಿಗೆ ಬರುತ್ತಾಳೆ; ಲಕ್ಷ್ಮಣನೂ ಬರುತ್ತಾನೆ. ನಾನು ಅವರಿಬ್ಬರಿಗೂ ಬೇಡವೆಂದು ಎಷ್ಟೋ ಹೇಳಿ ನೋಡಿದೆನು. ಅವರು ಸಂಗಡ ಬರಲೇಬೇಕೆಂದು ಹಟ ಹಿಡಿದಿದ್ದಾರೆ, ಎಂದು ಮಹಾರಾಜನಿಗೆ ತಿಳಿಸುವುದಕ್ಕಾಗಿ, ರಾಮನು ಮತ್ತೆ ದಶರಥನ ಅರಮನೆಯನ್ನು ಹೊಕ್ಕನು. ಆಗ ಅರಸನು, ಮರುಳು ಹಿಡಿದವನಂತೆ ಆಸನದಿಂದ ಕೆಳಗೆ ಬಿದ್ದು, ಶೋಕ ವೇಗದಿಂದ ಮೂರ್ಛಿತನಾದನು. ಬಳಿಕ ಚೇತರಿಸಿಕೊಂಡು ಎದ್ದು ರಾಮಾ, ನಾನೂ ಕೌಸಲ್ಯೆಯೂ ನಿನ್ನ ಸಂಗಡಲೇ ವನಕ್ಕೆ ಬರುತ್ತೇವೆ; ನಮ್ಮನ್ನೂ ಕರೆದುಕೊಂಡು ಹೋಗೋ, ಎಂದು ಬಹು ಸಂಕಟದಿಂದ ಅತ್ತನು. ಆಗ ಸುಮಂತ್ರನು ಕೈಕೇಯಿಯನ್ನು ನೋಡಿ, ದೇವೀ, ರಾಮನಿಗೆ ಪಟ್ಟಾಭಿಷೇಕವಾಗಕೂಡದು, ಎಂದು ಪಟ್ಟುಹಿಡಿಯಬೇಡ ತಾಯೇ. ಪೂರ್ವದಲ್ಲಿ, ಒಬ್ಬ ಮುನೀಶ್ವರನ ಅನುಗ್ರಹದಿಂದ ನಿಮ್ಮ ತಂದೆಗೆ, ಸಕಲ ಪ್ರಾಣಿಗಳ ಮಾತೂ ತಿಳಿಯುವ ಶಕ್ತಿಯಿದ್ದಿತು. ಒಂದು ದಿನ ನಿನ್ನ ತಾಯಿತಂದೆಗಳು ಮಲಗಿರುವಾಗ, ಮಂಚದ ಮೇಲೆ ಇರುವೆಗಳು ಸಂಚರಿಸುತ್ತ ಪರಸ್ಪರವಾಗಿ ಮಾತಾಡಿಕೊಂಡುವು. ಆ ಮಾತಿನ ಅಭಿಪ್ರಾಯವನ್ನು ತಿಳಿದು, ನಿಮ್ಮ ತಂದೆಯು, ಇದೇನು, ಅಜ್ಞಾನಿಗಳಾದ ಇರುವೆಗಳು ಕೂಡ ಹೀಗೆ ಮಾತಾಡುತ್ತಿವೆ, ಎಂದು ನಕ್ಕನು. ಮಗ್ಗುಲಲ್ಲಿ ಮಲಗಿದ್ದ ನಿಮ್ಮ ತಾಯಿಯು, ಏಕೆ ನಕ್ಕಿರಿ? ಎಂದು ಗಂಡನನ್ನು ಕೇಳಿದಳು. ಅದನ್ನು ಹೇಳಿದರೆ ನಾನು ಸತ್ತು ಹೋಗುತ್ತೇನೆ; ಆ ಮಾತನ್ನು ಬಿಡು, ಎಂದು ಬಗೆಬಗೆಯಾಗಿ ಅವನು ಹೇಳಿದನು. ಅವಳು ಕೇಳಲಿಲ್ಲ; ಅಡಿಗಡಿಗೆ ಅದನ್ನು ಹೇಳಿ, ಹೇಳಿ, ಎಂದು ಗಂಡನನ್ನು ಬಹುವಾಗಿ ಪೀಡಿಸಿದಳು. ದೊರೆಗೆ ಕೋಪವು ಬಂದಿತು. ಅವನು ಅವಳನ್ನು ತಿರಸ್ಕರಿಸಿದನು. ದೇವೀ, ನೀನು ನಿನ್ನ ತಾಯಂತೆ ಆಗಬೇಡವ್ವ, ಎಂದು ಹೇಳಿದನು.

ಇತ್ತ ಕೈಕೇಯಿಯು, ದಶರಥನೊಡನೆ, ಸಗರರಾಜನು ತನ್ನ ಮಗನನ್ನು ತ್ಯಜಿಸಲಿಲ್ಲವೇ; ನೀವೂ ನಿಮ್ಮ ಮಗನನ್ನು ತ್ಯಜಿಸಿಬಿಡಿರಿ, ಎಂದು ಹೇಳಿ, ಅವನನ್ನು ಪರಿಪರಿಯಾಗಿ ಪೀಡಿಸಿದಳು.

ಆ ಮಾತನ್ನು ಕೇಳಿ, ಸಿದ್ಧಾರ್ಥಕನೆಂಬ ಮಂತ್ರಿಯು ಸಹಿಸಲಾರದೆ,

ತಾಯೇ, ಅಸಮಂಜಸನು ಊರ ಮಕ್ಕಳನ್ನು ನದಿಗೆ ತಳ್ಳಿ, ಪ್ರಜೆಗಳಿಗೆ ಕಿರುಕುಳವನ್ನು ಉಂಟುಮಾಡಿದುದರಿಂದ, ಅವನನ್ನು ಸಗರನು ಪರಿತ್ಯಾಗ ಮಾಡಿದನು. ಅದು ಸಮಂಜಸವಾಯಿತು. ಸಕಲಗುಣಾಭಿರಾಮನಾದ ರಾಮನನ್ನು ಅಡವಿಗೆ ಅಟ್ಟುವುದು, ಹೇಗೆ ಸಮಂಜಸವಾದೀತು, ಎಂದು ಗಜರಿದನು.

ತರುವಾಯ ದಶರಥನು, ಮಗನನ್ನು ನೋಡಿ, ಮಗೂ, ನೀನು ಪರಿಜನರೊಡನೆ ಅಡವಿಗೆ ಹೋಗು, ಎಂದನು. ಅದಕ್ಕೆ ರಾಮನು ಅಪ್ಪಾ, ನನಗೆ ಪರಿಜನರೇತಕ್ಕೆ? ಒಂದೆರಡು ಪಿಕಾಸಿ ಗುದ್ದಲಿಗಳನ್ನೂ ಗೂಡೆಗಳನ್ನೂ, ಕೊಡಿಸಿದರೆ ಸಾಕು; ನಮಗೆ ಉಡುವುದಕ್ಕೆ ನಾರು ಮಡಿಗಳನ್ನು ಕೊಡಿಸಬೇಕು, ಎಂದು ಬೇಡಿದನು. ಕೂಡಲೇ ಕೈಕೇಯಿಯು, ಮೂವರಿಗೂ ನಾರುಮಡಿಗಳನ್ನು ತಂದುಕೊಟ್ಟಳು. ರಾಮನು ನಾರುಮಡಿಯನ್ನು ಉಟ್ಟನು. ಅದನ್ನು ಕಂಡು, ಎಲ್ಲರೂ ಗೊಳೋ, ಎಂದು ಅತ್ತರು. ಸೀತೆಯು ವಲ್ಕಲವನ್ನು ಉಡಕೂಡದೆಂದು ವಸಿಷ್ಠರು ತಡೆದರು.

ನಾನು ಹೋಗಿಬರುತ್ತೇನೆ, ಅಪ್ಪಣೆ ಕೊಡಬೇಕು, ಎಂದು ಸೀತೆಯು ಕೌಸಲ್ಯೆಗೆ ನಮಸ್ಕಾರಮಾಡಿದಳು. ಅವಳು ಸೀತೆಯನ್ನು ಅಪ್ಪಿಕೊಂಡು, ಮಗಳೇ, ಬೇಸಗೆಯ ಬಿಸಿಲಲ್ಲಿ ಅಡವಿಯ ನೆಲವೆಲ್ಲ ಕಾಯ್ದು ಅಡಿಯಿಡುವುದಕ್ಕೆ ಆಗದಿರಲು, ಅಂಥ ನೆಲದಲ್ಲಿ ನೀನು ಹೇಗೆ ತಾನೇ ನಡೆದೀಯೆ? ಸುಕುಮಾರಿಯಾದ ನೀನು, ಕಾಡುಹಾದಿಯಲ್ಲಿ ನಡೆದು, ಬಿಸಿಲಿಂದ ಬೆಂದು, ಬಸವಳಿವುದನ್ನು ಕಂಡು, ಯಾರು ತಾನೇ ಸಂಕಟಪಡದೆ ಇದ್ದಾರು? ಎಂದು ಶೋಕದಿಂದ ಪ್ರಲಾಪಿಸಿದಳು.

ತರುವಾಯ ಸೀತಾವಲ್ಲಭನು, ಲಕ್ಷ್ಮಣನೊಡನೆ ತಂದೆಗೂ, ತಾಯಿಯರಿಗೂ ನಮಸ್ಕರಿಸಿ, ಪರಿಜನರು ಯಾರೂ ಸಂಗಡ ಬರ ಕೂಡದು, ಎಂದು ಎಲ್ಲರನ್ನೂ ತಡೆದು, ಹೊರಟನು. ಸುಮಂತ್ರನು ಅರಸನ ಅಪ್ಪಣೆಯಂತೆ ರಥವನ್ನು ತಂದು ಬಾಗಿಲಲ್ಲಿ ನಿಲ್ಲಿಸಿದನು. ಅದರಲ್ಲಿ ಸೀತಾರಾಮಲಕ್ಷ್ಮಣರು ಕುಳಿತರು. ಸುಮಂತ್ರನು ಕುದುರೆಗಳನ್ನು ಚಪ್ಪರಿಸಿದನು. ರಥವು ಹೊರಟಿತು. ಇತ್ತ ದಶರಥನು, ಪುರದಿಂದ

ಹೊರಟ ರಾಮನ ರಥವು, ತನ್ನ ಕಣ್ಣಿಗೆ ಕಾಣುತ್ತಿದ್ದವರೆಗೂ ನೋಡಿ, ಅದು ಕಣ್ಮರೆಯಾಗಲು, ಕಂಬನಿಯನ್ನು ಸುರಿಸುತ್ತ ಮೂರ್ಛಿತನಾಗಿ ಬಿದ್ದನು. ಪರಿಜನರು ಮಾಡಿದ ಉಪಚಾರದಿಂದ ಪ್ರಜ್ಞೆಯುಂಟಾಯಿತು. ನನಗೆ ಕೌಸಲ್ಯೆಯ ಬಳಿಯಲ್ಲಿ ಇರುವುದು ಇಷ್ಟ ಎಂದು ಹೇಳಿ, ದೊರೆಯು ಕೌಸಲ್ಯೆಯ ಅಂತಃಪುರಕ್ಕೆ ಹೊರಟುಹೋದನು.

ಬಳಿಕ ರಾಮನು, ತನ್ನ ಸಂಗಡ ಹೆಂಗುಸರು, ಮಕ್ಕಳು, ಮುದುಕರು ಮೊದಲಾದ ಪುರಜನರೆಲ್ಲರೂ ಬರುತ್ತಿರಲು, ರಥವನ್ನು ಮೆಲ್ಲನೆ ನಡೆಸುತ್ತ, ಹೊತ್ತು ಮುಳುಗುವ ವೇಳೆಗೆ ಸರಿಯಾಗಿ, ತಮಸಾನದಿಯ ದಡದಲ್ಲಿ ನಿಲ್ಲಿಸಿದನು. ಕತ್ತಲಾಯಿತು; ಬಂದಿದ್ದ ಪ್ರಜೆಗಳೆಲ್ಲರೂ ಅಲ್ಲಿ ವಿಶ್ರಮಿಸಿಕೊಂಡರು. ಅರ್ಧರಾತ್ರಿಯಲ್ಲಿ ಎಲ್ಲರೂ ಚೆನ್ನಾಗಿ ನಿದ್ರಿಸುತ್ತಿರಲು, ರಾಮನು ಸುಮಂತ್ರನ ಕೂಡ ಆಲೋಚನೆಮಾಡಿ, ಸೀತಾಲಕ್ಷ್ಮಣ ಸಮೇತನಾಗಿ, ಹೋದ ದಾರಿಯು ಯಾರಿಗೂ ತಿಳಿಯದಂತೆ, ರಥವನ್ನು ಹಂಬು ಎಲೆ ಮುಂತಾದುವುಗಳಿಂದ ತುಂಬಿದ ಹಾದಿಯಲ್ಲಿ ವೇಗವಾಗಿ ನಡೆಸುತ್ತ, ವೇದಶ್ರುತಿ, ಗೋಮತಿ, ಸ್ಯಂದಿಕೆಗಳೆಂಬ ಹೊಳೆಗಳನ್ನು ಹಾಯ್ದು, ಗಂಗಾತೀರದಲ್ಲಿರುವ ಶೃಂಗಿಬೇರಪುರಕ್ಕೆ ಬಂದು, ಒಂದು ತಪಸೀಗಿಡದ ಕೆಳಗೆ ಇಳಿದನು.

ಆವೂರಿಗೆ ದೊರೆಯಾದ ಗುಹನು ಬಂದು, ರಾಮನನ್ನು ಕಂಡು, ಅವನು ವನಕ್ಕೆ ಬಂದ ಕಾರಣವನ್ನು ತಿಳಿದು, ಸಂತೋಷದಿಂದಲೂ ದುಃಖದಿಂದಲೂ ಕೂಡಿದವನಾಗಿ, ಮಿತ್ರಾ, ನೀನು ತಂದೆಯನ್ನು ಬಿಟ್ಟು ಬಂದಿದ್ದೀಯೆ. ನಿನ್ನೊಡನೆ ನನಗೆ ಸರಿಯಾಗಿ ಮಾತಾಡಲಿಕ್ಕೆ ಬಾರದು. ಈ ಪ್ರಾಂತ್ಯವು ಪವಿತ್ರವಾದ ಗಂಗಾತೀರದಲ್ಲಿದೆ. ಇಲ್ಲಿ ಅನೇಕ ಮುನಿಜನರು ತಪಸ್ಸನ್ನು ಮಾಡುತ್ತಿದ್ದಾರೆ. ಇಗೋ, ನನ್ನ ರಾಜ್ಯವನ್ನು ನೀನು ಕೈಕೊಂಡು, ನನಗೆ ನಿನ್ನ ದಾಸ್ಯವನ್ನು ಕರುಣಿಸು. ಇದರಿಂದ, ನೀನು ತಂದೆಯ ಮಾತನ್ನು ಕೇಳಿದಂತೆಯೂ ಆಗುತ್ತದೆ; ನನ್ನ ಮನೋರಥವನ್ನೂ ಸಲ್ಲಿಸಿದಂತೆಯೂ ಆಗುತ್ತದೆ, ಎಂದು ಬಹುಪ್ರಕಾರದಿಂದ ಪ್ರಾರ್ಥಿಸಿದನು. ಅದಕ್ಕೆ ರಾಮನು, ಗೆಳೆಯಾ ಕೇಳು, ನಿನ್ನ ನುಡಿಗಳು ಬಲು ಸೊಗಸಾಗಿವೆ; ನಿನಗೆ ಭಕ್ತಿಯು ಅತಿಶಯವಾಗಿದೆ. ನಾನು

ಚಿಕ್ಕಮ್ಮನ ಮಾತಿನಂತೆ ನಾರುಮಡಿಯನ್ನು ಉಡಬೇಕು; ರಾಜ್ಯ ಕಾರ್ಯವನ್ನು ಮಾಡಲಾಗದು, ಎಂದು ಅವನನ್ನು ಸಂತವಿಟ್ಟು, ಗುಹನೊಡಗೂಡಿ, ಗಂಗಾತೀರದ ಒಂದು ಮರದ ಅಡಿಯಲ್ಲಿ ಬೀಡನ್ನು ಬಿಟ್ಟನು.

ಆ ವೇಳೆಗೆ ಸಂಜೆಯಾಯಿತು. ಹೂಗಳ ಸೊಗಸುಗಂಪಿಂದ ಕೂಡಿದ ತಂಗಾಳಿಯು, ಮೆಲ್ಲಮೆಲ್ಲನೆ ಬೀಸತೊಡಗಿತು. ಅರಣ್ಯವಾಸಕ್ಕಾಗಿ ಬಂದಿರುವ ರಾಮಾದಿಗಳನ್ನು ನೋಡಬಾರದೆಂದು, ಸೂರ್ಯನು ಪಶ್ಚಿಮ ಪರ್ವತದ ಹಿಂದೆ ಮರೆಯಾದನು. ರಾಮನು ಸಂಧ್ಯಾವಂದನೆಯನ್ನು ಮಾಡಿ, ಆ ಮರದ ಬುಡದಲ್ಲಿ, ಲಕ್ಷ್ಮಣನು ಹಾಸಿದ್ದ ತರಗೆಲೆಯ ಹಾಸಿಗೆಯಲ್ಲಿ ಸೀತೆಯೊಡನೆ ಪವಡಿಸಿದನು. ಈ ಸ್ಥಿತಿಯನ್ನು ನೋಡಿ, ದುಃಖದಿಂದ ಕಂಬನಿಗರೆಯುತ್ತ, ಗುಹನು ರಾತ್ರಿಯೆಲ್ಲ ನಿದ್ದೆಮಾಡದೆ ಲಕ್ಷ್ಮಣನೊಡನೆ ಮಾತಾಡುತ್ತಿದ್ದನು.

ಬೆಳಗಾಯಿತು. ಹೊತ್ತು ಮೂಡಿತು. ರಾಮಲಕ್ಷ್ಮಣರು, ಆಲದ ಹಾಲನ್ನು ತರಿಸಿ, ಅದರಿಂದ ತಲೆಯ ಕೂದಲನ್ನು ಜಡೆಗಟ್ಟಿಕೊಂಡು, ಸೀತೆಯೊಡನೆ ಗಂಗಾತೀರಕ್ಕೆ ಹೋಗಿ, ಸಗರನ ಮಕ್ಕಳಿಗೆ ಸದ್ಗತಿಯಿತ್ತು, ಭಗೀರಥನ ಮನೋರಥವನ್ನು ನೆರವೇರಿಸಿದ ಸುರನದಿಗೆ ನಮಸ್ಕಾರಮಾಡಿ, ಸುಮಂತ್ರನನ್ನು ಅಲ್ಲಿಯೇ ನಿಲ್ಲಬೇಕೆಂದು ಹೇಳಿ, ಗುಹನು ತರಿಸಿದ ನಾವೆಯನ್ನು ಏರಿದರು.

ಬಳಿಕ ರಾಮನು ಗುಹನನ್ನು ಅಲ್ಲಿಯೇ ನಿಲ್ಲಬೇಕೆಂದು ನಿರ್ಬಂಧಿಸಿ, ಗಂಗಾನದಿಯನ್ನು ಬೇಗ ದಾಟಿ, ಸಕಲ ಸಸ್ಯಪೂರ್ಣವಾದ ವತ್ಸದೇಶವನ್ನು ಹೊಕ್ಕು, ತನ್ನ ಬಿಲ್ಲ ಜಾಣ್ಮೆಯಿಂದ, ಹಂದಿ ಮೊದಲಾದ ನಾಲ್ಕು ಮೃಗಗಳನ್ನು ಹೊಡೆದು, ಮೂವರೂ ಆ ಮಾಂಸವನ್ನು ಭುಜಿಸಿ, ಒಂದು ಮರದ ಕೆಳಗೆ ಮಲಗಿಕೊಂಡು ಆ ರಾತ್ರಿಯನ್ನು ಕಳೆದರು.

ಮರುದಿವಸ, ಅವರು ಕಾಡುಹಾದಿಯಲ್ಲಿ ನಡೆದು ಹೋಗುತ್ತ, ಪ್ರಯಾಗಕ್ಷೇತ್ರದಲ್ಲಿ, ಭರದ್ವಾಜಾಶ್ರಮವನ್ನು ಸೇರಿದರು. ಅವರ ಬರುವಿಕೆಯಿಂದ ಮುನಿಗೆ ಬಹುಳಾನಂದವಾಯಿತು. ಸೀತಾರಾಮ



ಲಕ್ಷ್ಮಣರು, ಮುನಿಯು ತೋರಿದ ಮಾರ್ಗದಿಂದ ಚಿತ್ರಕೂಟಪರ್ವತವನ್ನು ಸೇರಬೇಕೆಂದು ಹೊರಟು, ಯಮುನಾನದಿಯನ್ನು ಹರುಗೋಲಿಂದ ದಾಟಿ, ಸದಾ ಶಾಂತಮಯವಾಗಿಯೂ, ನಿರ್ವೈರವಾಗಿಯೂ, ಮುನಿಜನಾವಾಸವಾಗಿಯೂ ಇರುವ ಚಿತ್ರಕೂಟಪರ್ವತವನ್ನು ಸೇರಿದರು. ಅಲ್ಲಿ ಪ್ರಶಸ್ತವಾದ ತಾವಲ್ಲಿ, ಲಕ್ಷ್ಮಣನು ಅಂದವಾದ ಗುಡಿಸಲನ್ನು ರಚಿಸಿದನು. ಕೋಗಿಲೆಗಳು ಕಿವಿಗಿಂಪಾಗಿ ಪಂಚಮಸ್ವರದಿಂದ ಕೂಗುತ್ತಿರಲು, ಸೀತಾಸಮೇತನಾಗಿ, ರಾಮನು ಅಯೋಧ್ಯೆಯ ರಾಜಭೋಗವನ್ನೆಲ್ಲ ಚಿತ್ರಕೂಟದಲ್ಲಿ ಬಹುಕಾಲ ಅನುಭವಿಸುತ್ತಿದ್ದನು.

ಇತ್ತ ಸುಮಂತ್ರನು, ವನವಾಸದ ಕಷ್ಟದಿಂದ ರಾಮನು ಬೇಸತ್ತು ನನ್ನನ್ನು ಕರೆದಾನು, ಎಂದು ಚಿಂತಿಸಿ, ಕೆಲವು ದಿನಗಳವರೆಗೆ ಗುಹನೊಡನೆ ಇದ್ದನು. ರಾಮನು ಬರುವ ಸುಳಿವೇ ಇಲ್ಲ. ಸುಮಂತ್ರನು ನಿರಾಶನಾಗಿ, ಮರಳಿ ಅಯೋಧ್ಯೆಗೆ ಏಕಾಕಿಯಾಗಿ ರಥದಲ್ಲಿ ಬಂದನು. ರಾಮವಿರಹದಿಂದ ಶೋಕಿತರಾದ ಜನರು, ಇದೇನು! ರಾಮನಿಲ್ಲದೆ ತೇರು ಮಾತ್ರ ಬರುತ್ತಿದೆಯೆಂದು ನೋಡುತ್ತಿದ್ದರು. ಸುಮಂತ್ರನು ದೊರೆಯ ಮನೆಯ ಬಾಗಿಲಲ್ಲಿ ರಥವನ್ನು ನಿಲ್ಲಿಸಿ, ಪ್ರಾಣವು ಹೋಗುವುದರಲ್ಲಿರುವ ದಶರಥನಿಗೆ ನಮಸ್ಕಾರಮಾಡಿದನು. ಅವನನ್ನು ನೋಡಿ ದಶರಥನು ಮೂರ್ಛಿತನಾದನು. ಕೌಸಲ್ಯೆ ಸುಮಿತ್ರೆಯರ ಉಪಚಾರದಿಂದ ಚೇತರಿಸಿಕೊಂಡು, ರಾಜನು ಸುಮಂತ್ರನನ್ನು ನೋಡಿ, ಅಪ್ಪಾ, ರಾಮನು ಹೇಗೆ ಇದ್ದನು? ಸೀತೆಯೇನೆಂದಳು? ಲಕ್ಷ್ಮಣನು ಏನ ಮಾಡಿದನು, ಎಂದು ಕೇಳಿದನು. ಸುಮಂತ್ರನು ದುಃಖದಿಂದ ಮಾತನಾಡಲಾರದೆ, ತಡೆದು ತಡೆದು, ದೇವ, ಏನ ಹೇಳಲಿ? ನಾನು ಕಲ್ಲೆದೆಯವನು. ನಿಮ್ಮ ಮಕ್ಕಳು, ಸಂಗಡ ಬಂದ ಜನರನ್ನು ವಂಚಿಸಿ, ಪಯಣ ಹೊರಟು, ಸೀತೆಯನ್ನು ಕಾಪಿಡುತ್ತ, ಗಂಗಾ ನದಿಯ ತೀರದ ವನವನ್ನು ಹೊಕ್ಕರು. ಅಲ್ಲಿ ರಾಮಲಕ್ಷ್ಮಣರು, ಬೇಡರಿಂದ ತರಲ್ಪಟ್ಟ ಆಲದ ಹಾಲಿಂದ ತಮ್ಮ ತಲೆಗೂದಲನ್ನು ಜಟೆಯಾಗಿ ಮಾಡಿಕೊಂಡರು. ತನ್ನ ಪತಿಯ ಸಂಗಡ ಹೋಗುತ್ತಿದ್ದ ಸೀತೆಯು ಸಂತುಷ್ಟೆಯಾಗಿದ್ದಳು.

ಲಕ್ಷ್ಮಣನು, ಸೀತಾರಾಮರಿಗೆ ಚಿಗುರ ಹಾಸುಗೆಯನ್ನು ಮಾಡಿಕೊಟ್ಟು, ಇರುಳೆಲ್ಲವೂ ನಿದ್ದೆಮಾಡದೆ ಚಾಪಪಾಣಿಯಾಗಿ ಅವರನ್ನು ರಕ್ಷಿಸುತ್ತಿದ್ದನು, ಎಂದನು. ಹೀಗೆ ಹೇಳಿದ ಸುಮಂತ್ರನ ಮಾತನ್ನು ಕೇಳಿ, ದಶರಥನಿಗೆ ಹೃದಯದಲ್ಲಿ ಅಂಬು ನಾಟಿದಂತಾಯಿತು. ಸಂಜೆಯಾಯಿತು. ಪುತ್ರವಿರಹದಿಂದ ತಪಿಸುತ್ತಿದ್ದ ಕೌಸಲ್ಯೆಗೆ, ಅರಸನು ಸಮಾಧಾನ ವಚನವನ್ನು ನುಡಿಯುತ್ತ, ಕೌಸಲ್ಯೇ, ಕೇಳು, ನಾನು ಹಿಂದೆ ಒಂದು ಸಮಯದಲ್ಲಿ, ಸರಯೂನದಿಯ ದಡದ ದಟ್ಟವಾದ ಅಡವಿಯನ್ನು, ಬೇಟೆಯಾಡಬೇಕೆಂದು, ಹೊಕ್ಕೆನು. ಆಗ ಒಬ್ಬನು ನದಿಯಲ್ಲಿ ಗಡಿಗೆಯಿಂದ ನೀರನ್ನು ಮೊಗೆಯುತ್ತಿದ್ದನು. ಆ ಸದ್ದು, ನೀರನ್ನು ಸೊಂಡಿಲಲ್ಲಿ ತುಂಬಿಕೊಳ್ಳುವ ಆನೆಯ ಸದ್ದಿನಂತೆ, ನನಗೆ ಕೇಳಿಸಿತು. ನಾನು ಶಬ್ದಭೇದಿ ಎಂಬ ಬಾಣವನ್ನು ಎಸೆದೆನು. ಅದು ನೀರನ್ನು ಮೊಗೆಯುತ್ತಿದ್ದವನಿಗೆ ತಗುಲಿತು. ಅವನು, ಕುರುಡರೂ ಹಣ್ಣು ಮುದುಕರೂ ಆಗಿದ್ದ ತನ್ನ ತಂದೆತಾಯಿಗಳಿಗೆ ನೀರನ್ನು ಕೊಂಡು ಹೋಗಬೇಕೆಂದಿದ್ದನು. ನಾನು ಅವನ ಬಳಿಗೆ ಹೋಗಿ, ಅವನಿಗೆ ನಟ್ಟಿದ್ದ ಬಾಣವನ್ನು ತೆಗೆದೆನು. ಆಗ ಅವನು ಅರಸೇ, ನಾನು ಬ್ರಾಹ್ಮಣನು ಅಲ್ಲ; ನಿನಗೆ ಬ್ರಹ್ಮಹತ್ಯೆಯಿಲ್ಲ, ಎಂದು ಹೇಳಿ, ಪ್ರಾಣವನ್ನು ಬಿಟ್ಟನು. ನಾನು ಈ ಸುದ್ದಿಯನ್ನು ಆ ಮುದುಕರಿಗೆ ತಿಳಿಸಿದೆನು. ಅವರು, ನಮ್ಮನ್ನೂ ಮಗನ ಶವದೊಂದಿಗೆ ಸುಟ್ಟುಬಿಡು; ನೀನು ನಿಷ್ಕಾರಣವಾಗಿ ನಮ್ಮ ಮಗನನ್ನು ಕೊಂದು ನಮಗೆ ಸಂಕಟವುಂಟುಮಾಡಿದೆಯಾದುದರಿಂದ, ನೀನೂ ಮಗನನ್ನು ಅಗಲಿ ಸಾಯಿ, ಎಂದು ಶಾಪಕೊಟ್ಟರು. ಅದು ತಪ್ಪದು, ಎಂದು ಹೇಳಿ, ರಾಮನನ್ನು ಚಿಂತಿಸುತ್ತ ಪ್ರಾಣಗಳನ್ನು ಬಿಟ್ಟನು.

ದೊರೆಯು ಸತ್ಯಸಂಧನೆಂದು ಅಂತಃಪುರಜನರು ಅವನ ಗುಣವನ್ನು ನೆನೆದು ಶೋಕಾತಿರೇಕದಿಂದ ಅತ್ತರು. ರಾಜನ ಮರಣಕ್ಕೆ ಕೈಕೇಯಿಯೇ ಮೂಲವೆಂದು ಅವಳನ್ನು ಬೈದರು. ರಾಮನ ಸದ್ಗುಣವನ್ನು ಕೊಂಡಾಡಿ ಹಲುಬಿದರು.

ಬೆಳಗಾಯಿತು; ವಸಿಷ್ಠರು ಬಂದು, ರಾಜನ ದೇಹವನ್ನು ಎಣ್ಣೆ

ಯಲ್ಲಿ ಇಡಿಸಿ, ಅರಸು ಸತ್ತ ಸುದ್ದಿಯು ಊರಿಗೆ ತಿಳಿಯದಂತೆ ಕಟ್ಟು ಮಾಡಿ, ವೇಗಶಾಲಿಗಳಾದ ದೂತರನ್ನು ಕರೆದು, ನೀವು ಕೇಕಯ ಪುರಕ್ಕೆ ಹೋಗಿ, ಭರತಶತ್ರುಘ್ನರನ್ನು ಈಗಲೇ ಕರೆದುತರುವುದು, ಎಂದು ಅಪ್ಪಣೆಮಾಡಿದರು. ಆ ದೂತರು, ವಾಯುವೇಗದಿಂದ ಕೇಕಯ ಪುರಕ್ಕೆ ಹೋಗಿ, ಅಲ್ಲಿ ದುಸ್ಸ್ವಪ್ನವನ್ನು ಕಂಡು ಪರಿತಪಿಸುತ್ತಿದ್ದ ಭರತನಿಗೆ, ಗುರುಗಳ ಅಪ್ಪಣೆಯನ್ನು ಬಿನ್ನವಿಸಿದರು. ಕೂಡಲೇ ಭರತ ಶತ್ರುಘ್ನರು ತಮ್ಮ ತಾತ, ಮಾವ ಮುಂತಾದವರನ್ನು ಬೀಳ್ಕೊಂಡು, ಎಂಟು ದಿವಸಗಳಲ್ಲಿ ಅಯೋಧ್ಯೆಗೆ ಬಂದರು. ಊರಲ್ಲಿ ಯಾವ ಸಂಭ್ರಮವೂ ಇಲ್ಲ; ಎಲ್ಲರೂ ಏನೋ ಒಂದು ರೀತಿಯಾಗಿ ಇದ್ದರು. ಭರತನು ಬಂದು, ಸುಡುಗಾಡಿನಂತಿರುವ ದೊರೆಯ ಮನೆಗೆ ಹೋಗಿ, ಅರಸನನ್ನು ಕಾಣದೆ, ಅಪ್ಪನು ಎಲ್ಲಿ? ಎಂದು ತನ್ನ ತಾಯನ್ನು ಕೇಳಿದನು. ಅವಳು ಮಗನೇ, ನಿಮ್ಮ ಅಪ್ಪನು ಸತ್ತುಹೋದ; ನಿನ್ನ ಅಣ್ಣನು ಸೀತಾ ಲಕ್ಷ್ಮಣರ ಸಂಗಡ ವನಕ್ಕೆ ಹೋದ; ಈ ರಾಜ್ಯಕ್ಕೆ ನೀನೇ ದೊರೆ; ಯಾರ ಕಾಟವೂ ಇಲ್ಲದೆ ಸುಖವಾಗಿ ರಾಜ್ಯವಾಳು, ಎಂದಳು. ಆ ಮಾತನ್ನು ಕೇಳಿ, ಭರತನಿಗೆ ದುಃಖವೂ ಕೋಪವೂ ಉಂಟಾದುವು. ಅವನು ತಾಯನ್ನು ನೋಡಿ ಅಮ್ಮಾ, ನೀನು ಇಂಥ ನೀಚಕಾರ್ಯ ವನ್ನು ಮಾಡಬಹುದೇ? ನಾವು ನಿನ್ನನ್ನು ತಾಯಿಯೆನ್ನುವುದಕ್ಕೆ ಹೇಗಾದೀತು? ನೀನು ದೊಡ್ಡ ದೂರಿನ ಹೊರೆಯನ್ನು ಹೊತ್ತಿದ್ದೀಯೆ; ನಿನ್ನನ್ನು ನೋಡಬಾರದು. ಯಾವಾಗಲೂ ಕಳಂಕವಿಲ್ಲದಿದ್ದ ನಮ್ಮ ವಂಶವನ್ನು ನೀನು ಹಾಳುಮಾಡಿಬಿಟ್ಟೆ. ಇದ್ದ ಒಬ್ಬ ಮಗನನ್ನು ಅಗಲಿ, ಕೌಸಲ್ಯೆಯು ಹೇಗೆ ಸಹಿಸಿಕೊಂಡು ಇದ್ದಾಳು! ನೀನು, ಎರಡು ವರಗಳೆಂಬ ಎರಡು ನಾಲಗೆಗಳಿಂದ, ರಾಜನ ಪ್ರಾಣವಾಯು ವನ್ನು ಹೀರಿದ ನಾಗಿಣಿಯಾಗಿದ್ದೀಯೆ; ಎಲ್ಲಿಯಾದರೂ ಊರ ಹೊರಗೆ ಸುಡುಗಾಡಿನಲ್ಲಿ ನೀನು ಇರಬೇಕು. ಎಲೈ ನೀತಿಗೆಟ್ಟವಳೇ, ಮಾಸ ಹೀನೆಯೇ, ಹೋಗು, ಹೋಗು, ಎಂದು ಶತ್ರುಘ್ನನೊಡನೆ ಅರಮನೆ ಯಿಂದ ಹೊರಟು, ಪುರೋಹಿತರು ಹೇಳಿದ ಮೇರೆಗೆ, ತಂದೆಗೆ ಅಪರ ಕಾರ್ಯವನ್ನೆಲ್ಲ ಮಾಡಿದನು.

ತಂದೆಗೆ ಮಾಡತಕ್ಕ ಶ್ರಾದ್ಧ ಕರ್ಮಗಳೆಲ್ಲವೂ ಮುಗಿಯಿತು. ತರುವಾಯ ಭರತನು, ರಾಮನ ಬಳಿಗೆ ಹೋಗಬೇಕೆಂದು ಪುರಜನರ ಸಮ್ಮತಿಯನ್ನು ಕೇಳಿದನು. ಪುರಜನರು ಮುಂತಾಗಿ ಸಕಲರೂ, ನೀನು ರಾಜನಾಗಬೇಕೆಂದು ಅವನನ್ನು ಪ್ರಾರ್ಥಿಸಿದರು. ಅದಕ್ಕೆ ಭರತನು, ಸಚಿವರಿರಾ, ಪ್ರಜೆಗಳಿರಾ, ನಿಮ್ಮ ಮಾತು ನನಗೆ ಪೂಜ್ಯ ವಾದುದು. ದಂಡಕಾವನದಲ್ಲಿ, ರಾಮನ ಬಳಿ, ಒಂದು ಗುಡಿಸಲನ್ನು ಕಟ್ಟಿಕೊಂಡಿರುವುದಕ್ಕೆ ನನಗೆ ಇಂಬುದೊರೆಯದೆ ಹೋದಾಗ ನೋಡೋಣ, ಎಂದು ಹೇಳಿ, ರಾಮದರ್ಶನಕ್ಕಾಗಿ ಹೊರಟನು. ಆಗ, ಸಕಲರಿಗೂ ಸಂಕಟವುಂಟುಮಾಡಿ, ದೊರೆಯ ಮರಣಕ್ಕೆ ಕಾರಣಳಾದ ಮಂಥರೆಯು ಈಚೆಗೆ ಬಂದಳು. ಅವಳನ್ನು ಕಂಡ ಕೂಡಲೇ, ಶತ್ರುಘ್ನ ನಿಗೆ ಮಿತಿಮೀರಿ ಕೋಪವು ಬಂದಿತು. ಅವಳ ಮುಡಿಯನ್ನು ಹಿಡಿದೆಳೆದು, ಇವಳನ್ನು ತುಂಡು ಮಾಡಿಬಿಡುತ್ತೇನೆ, ಎಂದು ಅವನು ಅಬ್ಬರಿಸಿದನು. ಅವನನ್ನು ಕೌಸಲ್ಯೆಯು ತಡೆದು, ಈ ತೊತ್ತನ್ನು ಏಕೆ ನದೆಬಡಿಯು ತ್ತೀಯೆ? ಮಗೂ, ಇವಳನ್ನು ಬಿಟ್ಟುಬಿಡು, ಎಂದು ಸಮಾಧಾನ ಪಡಿಸಿದಳು.

ಇತ್ತ ಭರತನು, ರಾಮದರ್ಶನಾರ್ಥವಾಗಿ ಸಕಲ ಸೈನ್ಯವನ್ನೂ, ಮಾತೃವರ್ಗವನ್ನೂ, ಪರಿಜನ ಪುರಜನಗಳನ್ನೂ ಕೂಡಿಕೊಂಡು, ಪಯಣ ಹೊರಟು, ಭರದ್ವಾಜರ ಆಶ್ರಮವನ್ನು ಹೊದ್ದಿದನು. ಆ ಮುನಿವರರು ಭರತನಿಗೂ, ಅವನೊಡನೆ ಬಂದಿದ್ದ ಸಕಲರಿಗೂ, ಸೇನೆಗೂ, ದಿವ್ಯವಾದ ಆತಿಥ್ಯವನ್ನು ಮಾಡಿದರು. ಭರತನು ಅವರ ಆತಿಥ್ಯವನ್ನು ಸ್ವೀಕರಿಸಿ, ಅವರು ತೋರಿದ ಹಾದಿಯಲ್ಲಿ ಹೊರಟು, ಚಿತ್ರಕೂಟಪರ್ವತದ ತಪ್ಪಲಲ್ಲಿ ಬೀಡನ್ನು ಬಿಟ್ಟನು.

ಸಕಲ ಸೇನೆಯನ್ನೂ ಅಲ್ಲಿಯೇ ನಿಲ್ಲಿಸಿ, ಭರತನು, ಗುಹನೊಡನೆ ರಾಮನಿರುವ ಸ್ಥಲವನ್ನು ಹುಡುಕುತ್ತ, ಹೊಸದಾಗಿ ರಚಿಸಿದ್ದ ಪರ್ಣ ಶಾಲೆಯನ್ನೂ, ಮರಗಳ ಕೊಂಬೆಗಳಲ್ಲಿ ಒಣಗಹಾಕಿರುವ ನಾರುಮಡಿ ಗಳನ್ನೂ, ಇರಿಸಿರುವ ಬಿಲ್ಲು ಬಾಣಗಳನ್ನೂ, ಅತಿಥಿಗಳಿಗೆ ಉಣಲಿಕ್ಕೆ ಲೆಂದು ಲಕ್ಷ್ಮಣನು ತಂದು ಒಟ್ಟಿರುವ ಕಂದಮೂಲಗಳನ್ನೂ, ಸೀತೆಯ

ಪದಸ್ಪರ್ಶದಿಂದ ಪಾವನವಾದ ಆಶ್ರಮವನ್ನೂ ಕಂಡು, ಆಹಾ! ಈ ಸೌಭಾಗ್ಯವು ಅಯೋಧ್ಯೆಯಲ್ಲಿ ಏನಿದ್ದೀತು? ಎಂದು ವಿಸ್ಮಿತನಾಗಿ ಅಲ್ಲಿಗೆ ಹೋದನು.

ಅಲ್ಲಿ ಶಾಂತಿಯ ಮನೆಯೋ, ಪುಣ್ಯದ ಸಾಕಾರವೋ, ಗುಣಗಳ ಗಣಿಯೋ, ಧರ್ಮದ ಮೂರ್ತಿಯೋ, ಎಂಬಂತೆ ನೀರುಂಡ ಮೇಘದಂತೆ ಕಪ್ಪಾಗಿ, ಕಮಲದಂತೆ ನಯನಗಳನ್ನುಳ್ಳ ಸೀತಾಪತಿಯಾದ ರಾಮನು, ನಾರಮಡಿಯುಟ್ಟು ಕುಳ್ಳಿರುವುದನ್ನು ಕಂಡು, ಭರತನು, ಬಿಸಿಲಿನ ಬೇಗೆಯಿಂದ ಬಾಯಾರಿದವನಿಗೆ, ತಿಳಿನೀರು ದೊರೆತಂತೆ ಸಂತೋಷಪಟ್ಟು, ಶ್ರೀರಾಮನ ಪಾದಗಳಲ್ಲಿ ದಂಡದಂತೆ ಬಿದ್ದುಬಿಟ್ಟನು. ತರುವಾಯ ಎದ್ದು, ದಶರಥವೃತ್ತಾಂತವನ್ನು ರಾಮನಿಗೆ ತಿಳಿಸಲು, ಅವನು ಪಿತೃಶೋಕದಿಂದ ಹಂಬಲಿಸಿದನು. ಬಳಿಕ ವಸಿಷ್ಠರ ಅಪ್ಪಣೆಯಂತೆ ರಾಮಲಕ್ಷ್ಮಣರು ಗಂಗಾನದಿಯಲ್ಲಿ ಪಿತೃತರ್ಪಣವನ್ನು ಮಾಡಿದರು. ತರುವಾಯ ಭರತನು, ಊರಿಗೆ ಬಂದು ರಾಜನಾಗಬೇಕೆಂದು, ರಾಮನನ್ನು ಬಲು ಬಗೆಯಾಗಿ ಪ್ರಾರ್ಥಿಸಿದನು. ರಾಮನು ಅದಕ್ಕೆ ಒಪ್ಪಲಿಲ್ಲ. ಅವನು ಭರತನನ್ನು ನೋಡಿ ವತ್ಸ, ತಂದೆಯು ಹೇಳಿರುವಂತೆ ನಾವಿಬ್ಬರೂ ನಡೆಯಲೇ ಬೇಕು; ನೀನು ಸುಮ್ಮನೆ ನನ್ನನ್ನು ನಿರ್ಬಂಧಪಡಿಸಬೇಡ, ಎಂದು ಹೇಳಿದನು.

ಈ ರೀತಿ ತನ್ನ ಪ್ರಾರ್ಥನೆಯು ವ್ಯರ್ಥವಾಗಲು, ಭರತನು ರಾಮನನ್ನು ನೋಡಿ, ಅಣ್ಣಾ, ನನಗೆ ನಿಮ್ಮ ಪಾದುಕೆಗಳನ್ನಾದರೂ ಅನುಗ್ರಹಿಸಬೇಕು, ಎಂದು ಬೇಡಿದನು. ರಾಮನು ಪಾದುಕೆಗಳನ್ನು ಕರುಣಿಸಿದನು. ಭರತನು, ಅವನ್ನು ಭಕ್ತಿಯಿಂದ ತನ್ನ ತಲೆಯ ಮೇಲೆ ಇರಿಸಿಕೊಂಡು, ಮರಳಿ ಊರಿಗೆ ಬಂದು, ತಾನೂ ನಾರುಮಡಿಯನ್ನು ಉಟ್ಟು, ರಾಜಭೋಗವನ್ನು ಬಿಟ್ಟು, ನಂದಿಗ್ರಾಮದಲ್ಲಿದ್ದುಕೊಂಡು, ಅಣ್ಣನು ಊರಿಗೆ ಬರುವವರೆಗೂ ನಾನು ಊರನ್ನು ಮೆಟ್ಟುವುದಿಲ್ಲ, ಎಂದು ಪ್ರತಿಜ್ಞೆಮಾಡಿದನು.

ಇತ್ತ ರಾಮನು, ಸೀತಾಲಕ್ಷ್ಮಣ ಸಹಿತನಾಗಿ, ಸುಜನಬಾಧಾಕರರಾದ ರಾಕ್ಷಸರನ್ನು ಸಂಹರಿಸುವುದಕ್ಕಾಗಿ, ಅರಣ್ಯವನ್ನು ಹೊಕ್ಕು,

ಅಲ್ಲಿ ಅತ್ರಿ ಮುಹರ್ಷಿಗಳ ಆತಿಥ್ಯವನ್ನು ಕೊಂಡನು. ಅನಸೂಯೆಯೆಂಬ ಆ ಮುನಿಪತ್ನಿಯು, ಸೀತೆಗೆ ತನ್ನ ಒಡವೆಗಳನ್ನೆಲ್ಲ ಕೊಟ್ಟಳು. ಈ ರೀತಿ ಸತ್ಕೃತನಾಗಿ, ಭೂಭಾರಪರಿಹಾರಕ್ಕೋಸ್ಕರ, ಶ್ರೀರಾಮನು ದಂಡಕಾರಣ್ಯವನ್ನು ಪ್ರವೇಶಿಸಿದನು.

ಎಂಬಲ್ಲಿಗೆ ರಾಮಾಯಣ ಸಂಗ್ರಹದಲ್ಲಿ ಅಯೋಧ್ಯಾಕಾಂಡವು.

ಅರಣ್ಯಕಾಂಡ

ಶ್ರೀರಾಮನು, ಸೀತಾಲಕ್ಷ್ಮಣಸಮೇತನಾಗಿ, ನಡೆಯುವ ನೀಲಗಿರಿಯ ಚೆಂದದಿಂದ ಒಪ್ಪುತ್ತ, ಕಯ್ಯಲ್ಲಿ ಬಿಲ್ಲು ಬಾಣಗಳನ್ನು ಹಿಡಿದು, ರಾಕ್ಷಸರ ಪೀಡೆಯನ್ನು ಅಡಗಿಸುವುದಕ್ಕೋಸ್ಕರ ದಂಡಕಾರಣ್ಯವನ್ನು ಪ್ರವೇಶಿಸಿ, ಹೋಮಧೂಮದ ಸುವಾಸನೆಯಿಂದಲೂ, ದಣಿವಾರಿಸುವ ರಮ್ಯವಾದ ಜಲಾಶಯಗಳಿಂದಲೂ, ಕಂಗೊಳಿಸುವ ಆಶ್ರಮಗಳನ್ನು ಹೊಕ್ಕು, ಅಲ್ಲಿಯ ಮುನಿಗಳಿಂದ ಸತ್ಕೃತನಾಗಿ ಸಂಚರಿಸುತ್ತಿದ್ದನು.

ಹೀಗಿರುವಾಗ, ಬಹು ಕೋಪಿಷ್ಠನಾದ ವಿರಾಧನೆಂಬ ರಾಕ್ಷಸನು ಒಂದು ದೊಡ್ಡದಾದ ತ್ರಿಶೂಲವನ್ನು ಹಿಡಿದು, ಇವರ ಹಾದಿಗೆ ಅಡ್ಡಲಾಗಿ ಬಂದು ನಿಂತನು. ಅವನು ತ್ರಿಶೂಲದ ಮುಮ್ಮೊನೆಗಳಲ್ಲಿಯೂ ಅನೇಕ ಮೃಗಗಳ ಹೆಣಗಳನ್ನು ಪೋಣಿಸಿಕೊಂಡಿದ್ದನು. ಈ ರೀತಿ ಭಯಂಕರನಾಗಿದ್ದ ಆ ರಾಕ್ಷಸನು, ಇವರ ಬಳಿಗೆ ನೆಟ್ಟಗೆ ಬಂದು, ಇವರ ಸಂಗಡವಿದ್ದ ಸೀತೆಯನ್ನು ಎತ್ತಿಕೊಂಡು, ಇವರನ್ನು ನೋಡಿ, ಇಂತೆಂದನು.

ಎಲೌ ಮನುಷ್ಯರಿರಾ, ನೀವು ಯಾರು? ಎಲ್ಲಿಂದ ಬಂದಿರಿ? ನಿಮ್ಮ ಆಚಾರವು ವಿಚಿತ್ರವಾಗಿದೆ; ನಾರುಬಟ್ಟೆಯನ್ನು ಉಟ್ಟಿದ್ದೀರಿ; ಮುಡಿಯನ್ನು ಜಡೆಗಟ್ಟಿದ್ದೀರಿ; ಕಯ್ಯಲ್ಲಿ ಬಿಲ್ಲು ಬಾಣಗಳನ್ನು ಹಿಡಿದಿದ್ದೀರಿ; ಇದು ಏನು ವೇಷ? ನಿಮ್ಮೊಡನೆ ಬಂದಿರುವ ಈ ಸುಂದರಿ ಯಾರು? ಎಂದು ಕೇಳಿದನು.

ಶ್ರೀರಾಮನು, ಅವನಿಗೆ ತಮ್ಮ ಸುದ್ದಿಯನ್ನೆಲ್ಲ ತಿಳಿಸಿ, ವಿರಾಧನ ನಡುವಿನಲ್ಲಿ ಭಯದಿಂದ ಹದುಗಿಹೋಗಿರುವ ಸೀತೆಯನ್ನು ನೋಡಿದವನಾಗಿ, ಲಕ್ಷ್ಮಣನೊಡಗೂಡಿ, ಅವನ ಎದೆಗೆ ಬಾಣಗಳನ್ನು ಎಸೆದನು. ಬ್ರಹ್ಮನ ಪ್ರಸಾದದಿಂದ ಬಂದ ಅಂಗಿಯನ್ನು ತೊಟ್ಟಿದ್ದ, ವಿರಾಧನ ಎದೆಯ ಮೇಲೆ ಬಿದ್ದ, ರಾಮಲಕ್ಷ್ಮಣರ ಬಾಣಗಳೆಲ್ಲವೂ ಮೊಂಡಾಗಿ ಬಿದ್ದುಹೋದುವು. ಅವನು, ಸೀತೆಯನ್ನು ಕೆಳಗೆ ಇಳುಹಿ, ತಾನು ಹಿಡಿದಿದ್ದ ತ್ರಿಶೂಲವನ್ನು ರಾಮನ ಮೇಲೆ ಪ್ರಯೋಗಿಸಿದನು. ರಾಮನು, ಹರಿತವಾದ ಬಾಣಗಳನ್ನು ಎಸೆದು, ಆ ತ್ರಿಶೂಲವನ್ನು ತುಂಡು

ತುಂಬಾಗಿ ಮಾಡಿದನು. ಅದನ್ನು ಕಂಡು ದೇವತೆಗಳು ಸಂತೋಷ ಪಟ್ಟರು. ತ್ರಿಶೂಲವು ಮುರಿದು ಹೋದುದರಿಂದ, ವಿರಾಧನು ಕಡು ಮುಳಿದು, ರಾಮಲಕ್ಷ್ಮಣರಿಬ್ಬರನ್ನೂ ತನ್ನ ಹೆಗಲ ಮೇಲೆ ಕುಳ್ಳಿರಿಸಿ ಕೊಂಡು ನಡೆದನು. ಅವನನ್ನು ಕೊಲ್ಲುವುದಕ್ಕೆ ಲಕ್ಷ್ಮಣನು ಅನುವಾದನು.

ಅದನ್ನು ಕಂಡು ರಾಮನು, ತಮ್ಮಾ, ಇವನನ್ನು ಈಗಲೇ ಕೊಲ್ಲ ಬೇಡ; ನಾವು ಹೋಗಬೇಕಾದ ಹಾದಿಯನ್ನೇ ಇವನೂ ಹಿಡಿದಿದ್ದಾನೆ. ಆದಷ್ಟು ದೂರ ನಮ್ಮ ಹಾದಿಯು ಸಾಗಲಿ; ಆಮೇಲೆ ಇವನನ್ನು ಕೊಲ್ಲೋಣ, ಎಂದು ಲಕ್ಷ್ಮಣನನ್ನು ತಡೆದನು.

ಇಷ್ಟರಲ್ಲಿ ಸೀತೆಯು ದಿಗ್ಭ್ರಾಂತೆಯಾಗಿ, ಎಲಾ ರಾಕ್ಷಸ, ಅವರಿಬ್ಬರನ್ನೂ ಬಿಟ್ಟುಬಿಡೋ, ನಿನಗೆ ಬೇಕಾದರೆ ನನ್ನನ್ನು ತಿನ್ನೋ, ಎಂದು ಕಲ್ಮರಗಳು ಕರಗುವಂತೆ ರೋದನಮಾಡಿದಳು. ಅವಳ ದುಃಖ ವನ್ನು ಕಂಡು, ರಾಮಲಕ್ಷ್ಮಣರು ಕತ್ತಿಗಳನ್ನು ಹಿರಿದುಕೊಂಡು ವಿರಾಧನ ಎರಡು ತೋಳುಗಳನ್ನೂ ಕತ್ತರಿಸಿ ಹಾಕಿದರು; ಮತ್ತೆ ಅವನ ಮೇಲೆ ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸಿ, ಅವನ ಎದೆಯನ್ನು ಜಾಲಂದರದಂತೆ ಮಾಡಿಬಿಟ್ಟರು. ಇಷ್ಟಾದರೂ ವಿರಾಧನು ಸಾಯಲಿಲ್ಲ. ರಾಮಲಕ್ಷ್ಮಣರು, ಅವನ ರಕ್ತದಿಂದ ತೋದುಹೋದ ನೆಲದಲ್ಲಿ, ದೊಡ್ಡದಾದ ಆಳವಾದ ಹಳ್ಳವನ್ನು ತೋಡಿ, ಅದರೊಳಗೆ ಅವನ ದೇಹವನ್ನು ತಳ್ಳಿಬಿಟ್ಟರು. ಅವರು ಹಳ್ಳವನ್ನು ತೋಡು ತ್ತಿದ್ದಾಗ, ವಿರಾಧನಿಗೆ ಹಿಂದಣ ನೆನಪು ಬಂದಿತು. ಅವನು ರಾಮನನ್ನು ನೋಡಿ, ರಾಮಾ, ನಾನು ತುಂಬುರುವೆಂಬ ಗಂಧರ್ವನು; ಒಂದು ದಿನ ಕುಬೇರನ ಸೊಸೆಯಾದ ರಂಭೆಯನ್ನು ದುರ್ಬುದ್ಧಿಯಿಂದ ಹಿಡಿದುಕೊಂಡೆನು. ಈ ಸಮಾಚಾರವು ಕುಬೇರನಿಗೆ ತಿಳಿಯಿತು. ಅವನು ಕೋಪಗೊಂಡು, ನೀನು ರಾಕ್ಷಸನಾಗು, ಎಂದು ನನ್ನನ್ನು ಶಪಿಸಿ, ರಾಮನು ಅರಣ್ಯಕ್ಕೆ ಬಂದು, ನಿನ್ನನ್ನು ಹೊಡೆದು, ನಿನ್ನ ದೇಹವನ್ನು ಹಳ್ಳಕ್ಕೆ ತಳ್ಳಿದಾಗ, ಈ ಶಾಪವು ಹೋಗಲಿ, ಎಂದು ಅನುಗ್ರಹಿಸಿದನು. ಈಗ, ನಿನ್ನ ಕೃಪೆಯಿಂದ ನನಗೆ ಶಾಪವಿಮೋಚನೆ

ಯಾಯಿತು. ಅಪ್ಪಣೆಯಾದರೆ, ನಾನು ನನ್ನ ಸ್ಥಾನಕ್ಕೆ ಹೋಗುತ್ತೇನೆ, ಎಂದು ಹೇಳಿ ಅವನು ಗಂಧರ್ವಲೋಕಕ್ಕೆ ಹೊರಟುಹೋದನು.

ವಿರಾಧನನ್ನು ಸಂಹರಿಸಿದ ಬಳಿಕ, ಶ್ರೀರಾಮನು, ಸೀತಾಲಕ್ಷ್ಮಣರ ಸಂಗಡ, ಶರಭಂಗಮುನೀಶ್ವರರ ಆಶ್ರಮಕ್ಕೆ ಹೋದನು. ಅವರು ಮಹಾತಪಸ್ವಿಗಳು. ಅವರಿಗೆ ಇಂದ್ರನು ಮೈದೋರಿ, ಸ್ವಾಮಿಾ, ನಿಮ್ಮ ತಪಸ್ಸು ಪೂರ್ಣವಾಯಿತು; ಇನ್ನು ನೀವು ಸ್ವರ್ಗಕ್ಕೆ ಬಿಜಯ ಮಾಡಿಸಬಹುದು, ಎಂದು ಹೇಳಿದನು. ನಾನು ಶ್ರೀರಾಮನನ್ನು ಕಂಡ ಮೇಲೆ ಬರುತ್ತೇನೆ, ಎಂದು ಅವರು ಇಂದ್ರನಿಗೆ ಹೇಳಿ, ಅವನನ್ನು ಕಳು ಹಿಸಿದರು. ಅವರು ಈಗ, ತಮ್ಮ ಆಶ್ರಮಕ್ಕೆ ಬಂದಿರುವ ರಾಮನನ್ನು ಕಂಡು, ಸಂತೋಷಪಟ್ಟು, ಅವನಿಗೆ ಸತ್ಕಾರಮಾಡಿ, ಅವನ ಸಾನ್ನಿಧ್ಯ ದಿಂದ ಪವಿತ್ರವಾದ ಹೋಮಾಗ್ನಿಯಲ್ಲಿ, ತಮ್ಮ ದೇಹವನ್ನು ತ್ಯಾಗ ಮಾಡಿದರು.

ತರುವಾಯ ರಾಮನು, ಸುತೀಕ್ಷ್ಣರ ಆಶ್ರಮಕ್ಕೆ ಹೋಗಿ, ಅವರಿಂದ ಪೂಜಿತನಾಗಿ, ಅವರ ನಿಯಮನದಂತೆ, ಅಲ್ಲಿಂದ ಅಗಸ್ತ್ಯರ ಆಶ್ರಮವನ್ನು ಕುರಿತು ಪಯಣಮಾಡಿದನು.

ಮಾರ್ಗದಲ್ಲಿ, ಮರಗಳು ಉದ್ದವಾಗಿ ಬೆಳೆದು, ಮೋಡಗಳು ಕವಿ ದಿರುವಂತೆ, ಅಂತರಿಕ್ಷದಲ್ಲಿ ಒತ್ತಾಗಿ ಕಾಣುತ್ತಿರುವ ಆಶ್ರಮದ ತಾವನ್ನು ರಾಮನು ಸೀತೆಗೆ ತೋರುತ್ತ, ಪ್ರಿಯೇ, ಅಗೋ ನೋಡು; ಅಗಸ್ತ್ಯರ ಆಶ್ರಮವು ಕಾಣಬರುತ್ತಿದೆ. ಅವರ ಮಹಿಮೆಯನ್ನು ನಾನು ಹೇಗೆ ಬಣ್ಣಿಸಲಿ? ಅವರು ಕಡಲ ನೀರನ್ನೆಲ್ಲ ಕುಡಿದುಬಿಟ್ಟರು! ಇತ್ತ ನೋಡು, ಆನೆಯ ಸೊಂಡಿಲಿಂದ ಎಳೆಯಲ್ಪಟ್ಟು, ಬಾಗಿದ ಕೊಂಬೆಯುಳ್ಳ, ಈ ಮರವನ್ನು ಕಂಡೆಯಾ? ಇದು, ಈ ಮುನಿಯ ಕಯ್ಯ ಸನ್ನೆಯಿಂದ, ತಲೆವಾಗಿದ ವಿಂಧ್ಯಪರ್ವತವನ್ನು ಅನುಕರಿಸುವಂತೆ ಕಾಣುತ್ತಿದೆ. ಈ ಕಡೆ ಕಟಾಕ್ಷವನ್ನು ಸುಳಿಸು. ಬಾಯನ್ನು ಅಗಲವಾಗಿ ತೆರೆದು, ನಾಲಗೆ ಗಳನ್ನು ನೀಡಿಕೊಂಡಿರುವ ಈ ಹೆಬ್ಬಾವುಗಳನ್ನು ನೋಡಿದೆಯಾ? ಕಾಡಾನೆಗಳು, ಇವುಗಳ ನಿಡುನಾಲಗೆಗಳನ್ನು ಹಾದಿಯೆಂದು ಭ್ರಮಿಸಿ, ನೆಟ್ಟಗೆ ಇವುಗಳ ಹೊಟ್ಟೆಗಳನ್ನು ಸೇರಿ, ಅಲ್ಲಿಂದ ಈಚೆಗೆ ಬರಲಾರದೆ,

ಅಲ್ಲಿಯೇ ಜೀರ್ಣವಾಗಿ, ಈ ಮುನಿಯು ಹೊಟ್ಟೆಯಲ್ಲಿ ಜೀರ್ಣವಾದ ವಾತಾಪಿಯೆಂಬ ರಾಕ್ಷಸನ ಗತಿಯನ್ನು, ನೆನಪಿಗೆ ತರುತ್ತಿವೆ. ಈ ಕಡೆ ಪರಾಂಬರಿಸು, ಈ ಮುನಿಯು, ಬಲಗಯ್ಯಲ್ಲಿ ಸಮುದ್ರದ ನೀರನ್ನೆಲ್ಲ ಇರಿಸಿಕೊಂಡು, ಆ ನೀರಿನ ಮೇಲೆ ಕವಿದಿದ್ದ ಮೋಡಗಳನ್ನು, ನೊಣಗಳನ್ನು ಓಡಿಸುವ ಪ್ರಕಾರದಲ್ಲಿ, ಎಡಗಯ್ಯಿಂದ ಓಡಿಸಿಬಿಡಲು, ಅವು ಆಕಾಶದಲ್ಲಿ ಹಾರಲಾರದೆ, ಈ ಮುನಿಯ ಆಶ್ರಮಪ್ರಾಂತ್ಯದ ಅಲ್ಪವಾದ ಕೆರೆಕಟ್ಟೆಗಳ ಹತ್ತಿರ, ಕಾಡೆಮ್ಮೆಗಳ ರೂಪದಿಂದ ಸಂಚರಿಸುತ್ತಿವೆ, ಎಂದು ಅಲ್ಲಿಯ ಸೊಬಗನ್ನೆಲ್ಲ ತೋರುತ್ತ, ಅಗಸ್ತ್ಯಮುನಿಯ ಆಶ್ರಮವನ್ನು ಪ್ರವೇಶಿಸಿದನು.

ಅಲ್ಲಿ, ಸಕಲಮುನಿಗಳಿಂದ ಬಳಸಲ್ಪಟ್ಟು, ಕೋಪದಿಂದ ನಹುಷ ರಾಜನಿಗೆ ಸರ್ಪವಾಗು, ಎಂದು ಶಾಪವಿತ್ತ, ವಿಂಧ್ಯಪರ್ವತದ ತಲೆವಾಗಿಸಿದ, ಕಡಲನೀರನ್ನೆಲ್ಲ ಕುಡಿದು ಅದಕ್ಕೆ ಆಳವಿಲ್ಲೆನಿಸಿದ, ಜಠರಾಗ್ನಿಯಿಂದ ವಾತಾಪಿಯನ್ನು ಜೀರ್ಣಮಾಡಿದ, ಮಹಾತ್ಮರಾದ, ಬ್ರಹ್ಮತೇಜಸ್ಸಿಂದ ಕಂಗೊಳಿಸುವ, ಅಗಸ್ತ್ಯರನ್ನು ಕಂಡು, ಅವರಿಗೆ ಶ್ರೀರಾಮನು ಸಾಷ್ಟಾಂಗವಾಗಿ ನಮಸ್ಕಾರಮಾಡಿದನು.

ರಾಮನ ಬರುವಿಕೆಯಿಂದ, ಅಗಸ್ತ್ಯರಿಗೆ ಅತ್ಯಾನಂದವಾಯಿತು. ಅವರು ಅವನನ್ನು ಬಹುವಾಗಿ ಹರಸಿ, ತಮ್ಮಲ್ಲಿ ಇದ್ದ ವೈಷ್ಣವ ಚಾಪ, ಬ್ರಹ್ಮಾಸ್ತ್ರ, ಚಿನ್ನದ ಒರೆಯುಳ್ಳ ಕತ್ತಿ, ಅಕ್ಷಯತೂಣೀರ ಮುಂತಾದುವುಗಳನ್ನು ಅವನಿಗೆ ಅನುಗ್ರಹಿಸಿ, ಅವನನ್ನು ನೋಡಿ, ಅಪ್ಪಾ, ನೀನು ಈ ಗೋದಾವರೀತೀರದಲ್ಲಿರುವ ಪಂಚವಟಿಯಲ್ಲಿ ವಾಸಮಾಡಿಕೊಂಡಿರು, ಎಂದು ಹೇಳಿ ಕಳುಹಿಸಿಕೊಟ್ಟರು.

ತರುವಾಯ ರಾಮನು, ಪಂಚವಟಿಗೆ ಹೋಗಿ, ಅಲ್ಲಿ ಲಕ್ಷ್ಮಣನು ಕಟ್ಟಿಕೊಟ್ಟ ಒಂದು ಗುಡಿಸಲಲ್ಲಿ ವಾಸಮಾಡಿಕೊಂಡು, ಕೆಲವು ಕಾಲವನ್ನು ಕಳೆದನು.

ಅಲ್ಲಿ ಪರ್ವತಾಕಾರವಾದ, ಬಹುಬಲಶಾಲಿಯಾದ, ಜಟಾಯು ವೆಂಬ ಒಂದು ಹದ್ದು ಇದ್ದಿತು. ಅದನ್ನು ಕಂಡು ರಾಮನು ವಿಸ್ಮಿತನಾಗಿ, ಅಗಸ್ತ್ಯರು ಸಮುದ್ರದ ನೀರನ್ನು ಕುಡಿದು ಬಿಡಲು, ತನಗೆ

ಇರುವುದಕ್ಕೆ ಸ್ಥಳವಿಲ್ಲದೆ, ಮೈನಾಕಪರ್ವತವೇನಾದರೂ ಬಂದು ಅವ ರನ್ನು ಆಶ್ರಯಿಸುತ್ತಿದೆಯೋ, ಎಂದು ಚಿಂತಿಸಿದನು. ಆಗ ಜಟಾಯುವು ರಾಮನನ್ನು ನೋಡಿ, ಕುಮಾರ, ನಾನೂ ನಿಮ್ಮ ಅಪ್ಪನೂ ಬಾಲ್ಯ ಸ್ನೇಹಿತರು, ಎಂದು ತನ್ನ ವೃತ್ತಾಂತವನ್ನೆಲ್ಲ ಹೇಳಿದನು. ಅಂದಿನಿಂದ, ರಾಮನು ಜಟಾಯುವನ್ನು ಪಿತೃಭಾವದಿಂದ ಗೌರವಿಸುತ್ತಿದ್ದನು.

ಮಾಗೆಯು ಬಂದಿತು. ಭೂಮಿಯು ಚಳಿಯನ್ನು ತಾಳಲಾರದೆ, ಬಿಳಿಯ ಕಂಬಳಿಯನ್ನು ಹೊದೆದಿರುವಳೋ ಎಂಬಂತೆ, ಎಲ್ಲಿ ನೋಡಿದರೂ ಮಂಜು ದಟ್ಟವಾಗಿ ಕವಿಯಿತು. ಜನರ ತುಟಿಗಳು ಬಿರಿದು, ಚಳಿ ಯಿಂದ ಹಲ್ಲುಗಳು ತಾಟಿಸುತ್ತಿದ್ದುವು. ಪುಣ್ಯವಂತರು ಇಟ್ಟಿಗೆ ಗಾರೆಗಳಿಂದ ಕಟ್ಟಿದ ಕೋಣೆಗಳೊಳಗೆ, ದಪ್ಪನಾದ ತೆರೆಗಳನ್ನು ಇಳಿಯ ಬಿಟ್ಟು, ಮೃದುವಾದ ಕಂಬಳಿಗಳನ್ನು ಹೊದೆದು, ಹೊಗೆಯಾಡದ ಕೆಂಡ ಗಳಿರುವ ಅಗ್ಗಿಷ್ಟಿಕೆಯ ಮುಂದೆ ಕುಳಿತು, ಬೆಚ್ಚಗೆ ಕಾಯಿಸಿಕೊಳ್ಳುತ್ತ ಕಾಲವನ್ನು ನೂಕುತ್ತಿದ್ದರು.

ಈ ರೀತಿಯಾಗಿದ್ದ ಮಾಗೆಯ ಕಾಲದಲ್ಲಿ, ಒಂದು ದಿನ, ರಾಮನು ತನ್ನ ಪರ್ಣಶಾಲೆಯಲ್ಲಿ ಕುಳಿತುಕೊಂಡಿದ್ದನು. ಆ ಸಮಯದಲ್ಲಿ ಶೂರ್ಪಣಖಿಯೆಂಬ ರಾಕ್ಷಸಿಯೊಬ್ಬಳು, ಆ ಗುಡಿಸಲ ಬಳಿಗೆ ಬಂದು ಒಳಗೆ ಕುಳಿತಿದ್ದ ರಾಮನನ್ನು ಕಂಡು, ಅಹಹ! ಇವನು ಎಷ್ಟು ಸುಂದರನು. ಇವನ ಕೈಹಿಡಿದ ಹೆಣ್ಣೇ ಪುಣ್ಯಶಾಲಿಯೆಂದುಕೊಂಡು, ಒಳಗೆ ಹೋಗಿ, ಎಲೌ ಸುಂದರಾಂಗ, ನಿನ್ನನ್ನು ನೋಡಿ ನಾನು ಮರುಳಾದೆನು. ನೀನು ನನ್ನನ್ನು ಸ್ವೀಕರಿಸಿ ಸುಖಪಡಿಸು, ಎಂದು ಕೇಳಿದಳು. ಅದಕ್ಕೆ ರಾಮನು, ಎಲೆ ಹೆಂಗುಸೇ, ನೀನು ಯಾರು? ನಾನು ಮದುವೆಯಾಗಿದ್ದೇನೆ; ಹೆಂಡತಿಯು ಸಮೀಪದಲ್ಲಿಯೇ ಇದ್ದಾಳೆ. ಅಗೋ, ಅಲ್ಲಿ ನನ್ನ ತಮ್ಮನು ಇದ್ದಾನೆ. ಅವನು ರಸಿಕನು; ಒಳ್ಳೆಯ ಹರೆಯದವನು; ಸ್ಫುರದ್ರೂಪಿ; ಇಲ್ಲಿ ಅವನಿಗೆ ಹೆಂಡಿರಿಲ್ಲ; ನೀನು ಅವನ ಬಳಿಗೆ ಹೋಗು, ಎಂದನು. ಶೂರ್ಪಣಖಿಯು ಲಕ್ಷ್ಮಣನನ್ನು ಹೊದ್ದಿ, ಅವನಿಗೆ ತನ್ನ ಆಸೆಯನ್ನು ತಿಳಿಸಿದಳು. ಇವಳನ್ನು ಅಪಹಾಸ್ಯಮಾಡ ಬೇಕೆಂದು ಬಗೆದು, ಲಕ್ಷ್ಮಣನು ಅವಳೊಡನೆ, ಎಲೆ ತರುಣೀ, ನಾನು

ರಾಮನ ಸೇವಕನು. ನೀನು ನನ್ನನ್ನು ಮದುವೆಯಾದರೆ, ಅವನ ಊಳಿಗವನ್ನು ಮಾಡಬೇಕಾಗುತ್ತದೆ. ನೀನು ಅವನನ್ನೇ ಮದುವೆಯಾಗು; ಆಗ ನಾನು ನಿನ್ನ ಸೇವೆಯನ್ನೂ ಮಾಡುತ್ತೇನೆ. ಅವನ ಹೆಂಡತಿಯು, ಕಾಡಿನಲ್ಲಿ ಅಲೆದಲೆದು, ಬಳಲಿದ್ದಾಳೆ; ನೀನು ಅವನ ಬಳಿಗೇ ಹೋಗು; ಅವನು ತನ್ನ ಹೆಂಡತಿಯನ್ನು ಬಿಟ್ಟು, ನಿನ್ನನ್ನೇ ಸ್ವೀಕರಿಸುತ್ತಾನೆ, ಎಂದನು.

ಶೂರ್ಪಣಖೆಯು ಜಾಣೆಯಲ್ಲ. ಇವರ ಮಾತಿನ ಮರ್ಮವನ್ನರಿಯದೆ, ಅವಳು ಇಲ್ಲಿಂದ ಅಲ್ಲಿಗೂ, ಅಲ್ಲಿಂದ ಇಲ್ಲಿಗೂ ನಡೆದು, ಸಾಕಾಗಿ ಹೋದಳು. ಕೊನೆಗೆ ಅವಳ ಕಣ್ಣಿಗೆ ಸೀತೆಯು ಬಿದ್ದಳು. ಅವಳನ್ನು ಕಂಡ ಕೂಡಲೇ, ಶೂರ್ಪಣಖೆಯು ಅತ್ಯಾಶ್ಚರ್ಯದಿಂದ ಕೂಡಿದವಳಾಗಿ, ಆಹಾ! ಇದು ಎಂಥ ರೂಪರಾಶಿ! ಅಂಥ ಸುಂದರಪುರುಷನಿಗೆ ಇವಳೀಗ ತಕ್ಕ ಹೆಂಡತಿ. ಸೃಷ್ಟಿಕರ್ತನಾದ ಬ್ರಹ್ಮನು, ನಮ್ಮ ಪಿತಾಮಹನು. ಅವನು ದಡ್ಡನೆಂದು ತೋರುತ್ತದೆ. ವೈರಾಗ್ಯ ಶಿಖಾಮಣಿಯಾದ ಇವನಿಗೆ, ಇಂಥ ಸುಂದರಿಯನ್ನು ಗಂಟಿಕ್ಕಿ ಭ್ರಷ್ಟನಾದನಲ್ಲ; ನನಗೆ ಈ ಸೌಂದರ್ಯವನ್ನು ಕೊಡದೆ ಹೋದನೇ, ಎಂದು ಚಿಂತಿಸಿ, ಕಡೆಗೆ, ಆಗದ ಹೋಗದ ಕೆಲಸಕ್ಕೆ ಚಿಂತಿಸಿ ಫಲವೇನು? ಎಂದು, ತನ್ನ ಇಷ್ಟಾರ್ಥವು ನೆರವೇರದೆ ಹೋದುದರಿಂದ, ಕೋಪಗೊಂಡು, ಸೀತೆಯನ್ನು ಕೊಂಡುಹೋಗಬೇಕೆಂದು ಬಯಸಿ, ಮುಂದುವಾಯ್ದಳು.

ಅವಳ ಇಂಗಿತವನ್ನು ಅರಿತು, ರಾಮನು ಲಕ್ಷ್ಮಣನಿಗೆ ಸನ್ನೆ ಮಾಡಿದನು. ಕಯ್ಯಲ್ಲಿ ಕತ್ತಿಯನ್ನು ಹಿಡಿದುಕೊಂಡು ಲಕ್ಷ್ಮಣನು ಬಂದು, ಮುಂದುವರಿಯುತ್ತಿದ್ದ ಆ ರಕ್ಕಸಿಯನ್ನು ತಡೆದು, ಅವಳ ಕಿವಿಗಳನ್ನೂ ಮೂಗನ್ನೂ ಕೊಯ್ದು ಅಲ್ಲಿಂದ ಓಡಿಸಿಬಿಟ್ಟನು.

ಸಲ್ಲದ ಆಸೆಮಾಡಿ, ಇಲ್ಲದ ಕೇಡನ್ನು ತಂದುಕೊಂಡ, ಶೂರ್ಪಣಖೆಯು, ಹೋ! ಎಂದು ಅರಚುತ್ತ, ದಂಡಕಾರಣ್ಯದ ಮಧ್ಯದಲ್ಲಿರುವ ಜನಸ್ಥಾನವೆಂಬ ಪ್ರದೇಶಕ್ಕೆ ಹೋಗಿ, ಅಲ್ಲಿ ಇದ್ದ ಖರನೆಂಬ ತನ್ನ ಅಣ್ಣನೊಡನೆ, ಅಲ್ಲದು ಸಲ್ಲದುದನ್ನೆಲ್ಲ ಸೇರಿಸಿ, ರಾಮಲಕ್ಷ್ಮಣರು ತನಗೆ ಈ ರೀತಿ ಮಾನಭಂಗಮಾಡಿದರು, ಎಂದು ದೂರಿದಳು.

ಖರನು, ಅವಳ ವಿಕಾರ ರೂಪನ್ನು ಸಾಕ್ಷಾತ್ತಾಗಿ ಕಂಡು, ಅವಳ ಬಾಯಿಂದ ಎಲ್ಲ ಸುದ್ದಿಯನ್ನೂ ತಿಳಿದು, ಇಂಥ ಕ್ರೂರ ಕೃತ್ಯವನ್ನು ಮಾಡಿದ, ಕೇಡಿಗರಾದ ರಾಮಲಕ್ಷ್ಮಣರನ್ನು ಹಿಡಿದು ತರುತ್ತೇನೆ, ಎಂದು ಶೂರ್ಪಣಖೆಗೆ ಸಮಾಧಾನ ಹೇಳಿ, ತನ್ನ ಬಳಿಯಿದ್ದ ಹದಿನಾಲ್ಕು ದಳವಾಯಿಗಳನ್ನೂ ಕರೆಯಿಸಿ, ನೀವು ನಿಮ್ಮ ಸೇನೆಯೊಡನೆ ಈಗಲೇ ಹೋಗಿ, ಇವಳಿಗೆ ಅಂಗವಿಕಾರಮಾಡಿದ ಆ ದುಷ್ಟರಿಬ್ಬರನ್ನೂ ಹಿಡಿದು ತನ್ನಿರಿ, ಎಂದು ಅವರಿಗೆ ಕಟ್ಟುಮಾಡಿದನು. ಆ ಸೇನಾಪತಿಗಳೆಲ್ಲರೂ ಖರನ ಅಪ್ಪಣೆಯಂತೆ, ಹದಿನಾಲ್ಕು ಸಾವಿರ ಜನ ರಾಕ್ಷಸಸೇನೆಯೊಡನೆ ಹೊರಟು, ಕಿವಿಮೂಗನ್ನು ಕಳೆದುಕೊಂಡವಳು ತೋರಿದ ಹಾದಿಯಿಂದ, ರಾಮನ ಆಶ್ರಮದ ಬಳಿಗೆ ಬರುತ್ತಿದ್ದರು.

ತನ್ನ ಪರ್ಣಶಾಲೆಯ ಬಳಿಗೆ ಬರುತ್ತಿದ್ದ ರಾಕ್ಷಸರ ಪಡೆಯನ್ನು ಕಂಡು, ಇದು ಶೂರ್ಪಣಖೆಯ ಕಡೆಯ ಸೇನೆಯೆಂದರಿದು, ರಾಮನು ಲಕ್ಷ್ಮಣನನ್ನು ನೋಡಿ, ತಮ್ಮಾ, ನೀನು ಸೀತೆಯನ್ನು ಎಚ್ಚರದಿಂದ ರಕ್ಷಿಸುತ್ತಿರು; ನಾನು ಇವರಿಗೆಲ್ಲ ಯಮನ ಊರಲ್ಲಿ ಬಿಡಾರಗಳನ್ನು ಬಿಡಿಸುತ್ತೇನೆ, ಎಂದು ಹೇಳಿ, ಧನುರ್ಬಾಣಪಾಣಿಯಾಗಿ ಆ ಸೇನೆಯನ್ನು ಇದುರಿಸಿದನು.

ಆ ಪಡೆಯೆಲ್ಲವೂ, ಒಮ್ಮೆಯೇ ರಾಮನ ಮೇಲೆ ಕವಿಯಿತು. ರಾಮನು ಬಾಣಪ್ರಯೋಗಮಾಡಿ, ಅಷ್ಟು ಜನರ ಕೈ, ಕಾಲು, ಕಣ್ಣು ನಾಲಗೆಗಳನ್ನೆಲ್ಲ ಬೇರೆ ಬೇರೆ ಮಾಡಿ, ಹದ್ದು ಕಾಗೆಗಳನ್ನು ಕರೆದು, ಇಗೋ, ಮುನಿಜನರನ್ನು ಹಿಂಸಿಸುವ ಕಯ್ಗಳು; ಇಗೋ, ಸಜ್ಜನರನ್ನು ಬಯ್ವ ನಾಲಗೆಯ ಬಣಬೆ; ಇಗೋ, ಪುಣ್ಯಾಶ್ರಮಗಳಿಗೆ ನುಗ್ಗಿ, ಅವನ್ನು ಅಪವಿತ್ರಮಾಡುವ ಕಾಲ್ಗಳ ಒಟ್ಟಿಲು; ಇಗೋ, ಹೆರರ ಹೆಂಗಳನ್ನು ದುರಭಿಪ್ರಾಯದಿಂದ ನೋಡುವ ಕಣ್ಗಳ ಮೆದೆ ಇವುಗಳನ್ನೆಲ್ಲ ತೃಪ್ತಿಯಾಗಿ ತಿಂದು, ಈ ಸ್ಥಲವನ್ನು ಶುದ್ಧಿಮಾಡಿರಿ, ಎಂದು ಅವುಗಳಿಗೆಲ್ಲ ತೋರಿಕೊಟ್ಟನೋ ಎಂಬಂತೆ, ಹದಿನಾಲ್ಕುಸಾವಿರ ಸೇನೆಯನ್ನೂ ಧ್ವಂಸ ಮಾಡಿಬಿಟ್ಟನು.


ಈ ಯುದ್ಧದಲ್ಲಿ, ಸೇನಾಪತಿಯಾದ ತ್ರಿಶಿರಸ್ಸಿನ ಶಿರಸ್ಸು ಕತ್ತರಿಸಿ

ಹೋಯಿತು. ಮತ್ತೊಬ್ಬ ಸೇನಾಧೀಶನಾದ ದೂಷಣನು ಗತಪ್ರಾಣನಾದನು.

ತನ್ನ ಸಮಸ್ತ ಸೇನಾಧಿಪತಿಗಳೂ, ಸೇನೆಯೂ, ಅಸಹಾಯಶೂರನಾದ ರಾಮನಿಂದ ಹತವಾದುದನ್ನು ಕಂಡು, ಖರನಿಗೆ ಅತ್ಯಂತಕೋಪವುಂಟಾಯಿತು. ಖರನು ಯುದ್ಧದಲ್ಲಿ ಮಹಾಪರಾಕ್ರಮಿ; ಅವನು ರಾಮನನ್ನು ನಿರ್ನಾಮನೆನಿಸಬೇಕೆಂದು ಬಗೆದು, ಬಿಲ್ಗಾರರು ತಲೆದೂಗುವಂತೆ, ರಾಮನೊಡನೆ ಸರಿಮಿಗಿಲಾಗಿ ಯುದ್ಧಮಾಡಿದನು. ರಾಮನು ಹಿಡಿದಿದ್ದ ಬಿಲ್ಲು, ಖರನ ಶರಪ್ರಯೋಗದಿಂದ ಮುರಿದು ಹೋಯಿತು. ರಾಮನ ಮುಖವು ರೋಷದಿಂದ ಕೆಂಪಾಯಿತು. ಅಗಸ್ತ್ಯರು ಕೊಟ್ಟಿದ್ದ ವೈಷ್ಣವ ಚಾಪವನ್ನು ಹಿಡಿದು, ಬ್ರಹ್ಮಾಸ್ತ್ರವನ್ನು ಹೂಡಿ, ರಾಮನು ಖರನ ಮೇಲೆ ಎಸೆದನು. ಆ ಬಾಣದಿಂದ ಗಾಸಿಯಾಗಿ, ಖರನು ಮರಣವನ್ನು ಹೊದ್ದಿದನು.

ಖರನೇ ಮೊದಲಾದ ದುಷ್ಟರು ಸತ್ತುಹೋದುದರಿಂದ, ತಪಸ್ವಿಗಳಾದ ದಂಡಕಾರಣ್ಯವಾಸಿಗಳಿಗೆ ಕಿರುಕುಳವು ತಪ್ಪಿತು.

ಇತ್ತ ಶೂರ್ಪಣಖೆಯು, ರಾಮನಿಂದ ಜನಸ್ಥಾನವೆಲ್ಲವೂ ನಿರ್ಜನಪ್ರದೇಶವಾದುದನ್ನು ಕಂಡು, ಕೋಪದಿಂದಲೂ, ದುಃಖದಿಂದಲೂ, ಲಂಕೆಗೆ ಹೋಗಿ, ತನ್ನ ಅಣ್ಣನಾದ ರಾಜಾ ರಾವಣನೊಡನೆ ರಾಮಲಕ್ಷ್ಮಣರ ವೃತ್ತಾಂತವನ್ನೂ, ಸೀತೆಯ ಚೆಲುವನ್ನೂ, ತನಗೆ ಅವರು ಮಾಡಿದ ಅಪಕಾರವನ್ನೂ, ಖರದೂಷಣಾದಿಗಳಾದ ಸಕಲ ರಾಕ್ಷಸಸೇನೆಯೂ ರಾಮನೊಬ್ಬನಿಂದಲೇ ಅಳಿದುದನ್ನೂ, ಅಳುತಳುತ ವಿಜ್ಞಾಪಿಸಿದಳು. ದಂಡಕಾರಣ್ಯದಲ್ಲಿ, ತನ್ನ ತಂಗಿಗೆ ರಾಮಲಕ್ಷ್ಮಣರು ಮಾಡಿದ ಪರಿಭವವನ್ನು ಕಂಡು, ಅವರ ಪರಾಕ್ರಮಾತಿಶಯವನ್ನು ಕೇಳಿ, ರಾಕ್ಷಸಚಕ್ರವರ್ತಿಯಾದ ರಾವಣನು ರೋಷದಿಂದ ಭೀಷಣನಾದನು. ತರುವಾಯ, ನೀತಿರಹಿತನಾದ ಅವನು, ಜನಸ್ಥಾನದ ರಕ್ಷಣೆಗೆ ಎಂಟುಮಂದಿ ರಾಕ್ಷಸವೀರರನ್ನು ಕಳುಹಿಸಿ, ಮಾರೀಚನ ಸಹಾಯದಿಂದ ಸೀತೆಯನ್ನು ಅಪಹರಿಸಬೇಕೆಂದು ನಿಶ್ಚಯಿಸಿ, ಅವನಿದ್ದೆಡೆಗೆ ಹೋದನು. ರಾವಣನು ತನ್ನಲ್ಲಿಗೆ ಬಂದಿರುವ ಕಾರಣವನ್ನು ತಿಳಿದು, ಮಾರೀಚನು,



ಅವನಿಗೆ ನಾನಾವಿಧದಿಂದ ಬುದ್ಧಿಹೇಳಿದನು. ರಾವಣನು, ಮಾರೀಚನ ಹಿತವಚನಗಳಿಗೆ ಕಿವಿಗುಡಲೇ ಇಲ್ಲ. ಆಗ ಮಾರೀಚನು, ನನಗೂ ನನ್ನ ತಮ್ಮನ ಗತಿಯೇ ದಕ್ಕೀತು ಎಂದುಕೊಂಡು, ಒಂದು ದಿವ್ಯವಾದ ಹೊಂಬಣ್ಣದ ಜಿಂಕೆಯಾಗಿ, ರಾವಣನೊಡನೆ ಪಂಚವಟಿಗೆ ಬಂದು, ಸೀತೆಯನ್ನು ಠಕ್ಕಿಸಬೇಕೆಂದು ಸಮಯವನ್ನು ಕಾಯುತ್ತಿದ್ದನು. ರಾವಣನು, ಆಕಾಶಮಾರ್ಗದಲ್ಲಿ ತನ್ನ ರಥವನ್ನು ನಿಲ್ಲಿಸಿ, ಸೀತೆಯ ಬಳಿ ರಾಮಲಕ್ಷ್ಮಣರು ಇರದಂತೆ ಎಂದು ಆದೀತು, ಎಂಬುದಾಗಿ ನಿರೀಕ್ಷಿಸುತ್ತಿದ್ದನು.

ಆ ಸಮಯದಲ್ಲಿ, ಹೊಂಬಣ್ಣದ ಹುಲ್ಲೆಯಾದ ಮಾರೀಚನು, ಅಲ್ಲಿ ಮೊನೆಯಾಗಿ ಬೆಳೆದಿರುವ ದರ್ಭೆಯ ಹುಲ್ಲುಗಳನ್ನು ಮೆಲ್ಲುತ್ತ, ರಾಮನ ಪರ್ಣಶಾಲೆಯನ್ನು ನೋಡುತ್ತ, ಬೆದರಿದಂತೆ ಓಡುತ್ತ, ನೀರ ಕುಡಿಯುತ್ತ, ಆಶ್ರಮಪ್ರದೇಶದಲ್ಲಿ ಸುಳಿದಾಡುತ್ತಿದ್ದನು. ಆ ಜಿಂಕೆಯನ್ನು ಜಾನಕಿಯು ನೋಡಿ, ಆಶ್ಚರ್ಯಪಟ್ಟು, ಆರ್ಯಪುತ್ರ, ಈ ಎರಳೆಯನ್ನು ನನಗೆ ಹಿಡಿದುಕೊಡಿರಿ; ನಾನು ಇದರೊಡನೆ ಆಟವಾಡುತ್ತ, ಮನದ ಬೇಸರವನ್ನು ಪರಿಹರಿಸಿಕೊಳ್ಳುತ್ತೇನೆ, ಎಂದು ರಾಮನಿಗೆ ಹೇಳಿದಳು. ಹೆಂಡತಿಯ ಅಭಿಲಾಷೆಯನ್ನು ನೆರವೇರಿಸದಿದ್ದರೆ ಆದೀತೇ? ಒಲ್ಲೆನೆಂದರೆ ಎಲ್ಲಿ ತನ್ನನ್ನು ಹೇಡಿಯೆಂದು ಜರೆದು ಮುಖವನ್ನು ಕಪ್ಪುಮಾಡಿಕೊಳ್ಳುವಳೋ ಎಂದು ಆಲೋಚಿಸಿ, ಹೊರಡುವ ಜನರಂತೆ, ರಾಮನು ಬಿಲ್ಲುಬಾಣಗಳನ್ನು ಕೊಂಡು, ಆ ಮೃಗದ ಹಿಂದೆ ಹೊರಟನು. ಅದು ಕಯ್ಗೆ ಸಿಕ್ಕುವಂತೆ ಹತ್ತಿರಕ್ಕೆ ಬರುತ್ತ, ಹತ್ತಿರ ಬಂದರೆ ಚಂಗನೆ ದೂರಕ್ಕೆ ಹಾರುತ್ತ, ರಾಮನು ಹತ್ತಿರ ಬರುವವರೆಗೂ ನಿಲ್ಲುತ್ತ, ಮತ್ತೆ ದೂರಕ್ಕೆ ಸರಿಯುತ್ತ, ಈ ಮೇರೆಗೆ ರಾಮನನ್ನು ಆಶ್ರಮದಿಂದ ಬಹುದೂರ ಪ್ರದೇಶಕ್ಕೆ ಎಳೆದುಕೊಂಡು ಹೋಯಿತು. ರಾಮನು ಅದರ ಹಿಂದೆ ಸುತ್ತಿ ಸುತ್ತಿ ದಣಿದನು. ಮೃಗವು ಕಯ್ಗೆ ಸಿಕ್ಕದೆ ಹೋಯಿತು. ರಾಮನು ಕೋಪಗೊಂಡು, ಬಿಲ್ಲಿನಲ್ಲಿ ಬಾಣವನ್ನು ಹೂಡಿ, ಆ ಜಿಂಕೆಯ ಮೇಲೆ ಪ್ರಯೋಗಮಾಡಿದನು. ಆ ಬಾಣವು ಜಿಂಕೆಗೆ ತಗುಲಿ, ಗಾಯದ ವೇದನೆಯನ್ನು ಸಹಿಸಲಾರದೆ, ಅದು ತನ್ನ ಮುನ್ನಿನ ಮಾರೀಚ

ರೂಪದಿಂದ ಪ್ರಾಣಗಳನ್ನು ತ್ಯಜಿಸಿತು. ಆ ಪ್ರಾಣಸಂಕಟದಲ್ಲಿಯೂ, ರಾವಣನಿಗೆ ಅನುಕೂಲವಾಗಲಿ ಎಂಬ ಬುದ್ಧಿಯಿಂದ, ಮಾರೀಚನು ಹಾ ಲಕ್ಷ್ಮಣಾ! ಹಾ ಸೀತೇ! ಎಂದು, ರಾಮನು ಸಂಕಟದಿಂದ ಕೂಗಿದ ರೀತಿಯಲ್ಲಿ, ಕೂಗಿಕೊಂಡನು.

ಹೀಗಿರಲು, ಆಶ್ರಮದಲ್ಲಿ ಇದ್ದ ಸೀತೆಗೆ ಆ ಕೂಗು ಕೇಳಿಸಿತು. ರಾಮನಿಗೆ ಏನೋ ವಿಪತ್ತು ಸಂಭವಿಸಿದೆ; ಈ ರೀತಿ ಆರ್ತನಾದಮಾಡುತ್ತಿದ್ದಾನೆ; ಅಯ್ಯೋ! ನನ್ನ ಪ್ರಾಣಕಾಂತನಿಗೇನಾಯಿತೋ ಕಾಣೆನಲ್ಲ, ಎಂದು ಸೀತೆಯು ಮನದಲ್ಲಿ ಮರುಗಿ, ಲಕ್ಷ್ಮಣಾ, ನಿನ್ನ ಅಣ್ಣನಿಗೆ ಏನೋ ಕೇಡಾಗಿದೆ; ಅವರು ಹೇಗಿದ್ದಾರೆ? ಏನಾಗಿದ್ದಾರೆ? ನೋಡಿಕೊಂಡು ಬಾ, ಬೇಗ ಹೋಗು, ಎಂದು ಲಕ್ಷ್ಮಣನನ್ನು ತ್ವರೆಪಡಿಸಿದಳು.

ಅದಕ್ಕೆ ಲಕ್ಷ್ಮಣನು, ತಾಯೇ, ನೀವು ಚಿಂತಿಸುವುದೇಕೆ? ಈ ಧ್ವನಿಯು ಬರಿಯ ಮೋಸ. ನಿಮ್ಮ ಯಜಮಾನರು ಈ ಬೂಟಾಟಿಕೆಯ ರಾಕ್ಷಸರಿಗೆಲ್ಲ ಅಂಜತಕ್ಕವರೇ; ಅವರು ಮಹಾಪರಾಕ್ರಮಿಗಳು; ತಾವು ಕೊಂಚ ಹೊತ್ತು ಸೈರಿಸಿಕೊಂಡಿರಿ; ಅವರು ಬಂದುಬಿಡುತ್ತಾರೆ, ಎಂದು ಅತ್ತಿಗೆಗೆ ಸಮಾಧಾನ ವಚನಗಳನ್ನು ಹೇಳಿದನು.

ಗಂಡನಿಗೆ ಏನೋ ಕಷ್ಟವುಂಟಾಗಿದೆಯೆಂದು ನಂಬಿದ್ದ ಸೀತೆಯು, ಹಿಂದುಮುಂದನ್ನು ಆಲೋಚನೆಮಾಡದೆ, ಲಕ್ಷ್ಮಣನು ಹೇಳಿದ ಮಾತುಗಳಿಗೆ ದುರಭಿಪ್ರಾಯವನ್ನು ಕಲ್ಪಿಸಿಕೊಂಡು, ಲಕ್ಷ್ಮಣನನ್ನು ನೋಡಿ, ಎಲಾ ದುರುಳ, ರಾಮನಿಗೆ ಕೇಡಾಗಬೇಕೆಂದು ಬಯಸುತ್ತಿದ್ದೆಯಾ? ಇದುವರೆಗೂ ನೀನು ಅವನಿಗೆ ಹಿತಕಾರಿಯೆಂದಿದ್ದೆ; ಈಗ ಗೊತ್ತಾಯಿತು. ನೀನು ನನ್ನನ್ನು ಆಶಿಸುತ್ತಿದ್ದೀಯೆ. ರಾಮನನ್ನು ಬಿಟ್ಟು ಬೇರೆ ಪುರುಷರನ್ನು ನಾನು ಕಾಲಿಂದಲೂ ಮುಟ್ಟುವಳಲ್ಲ; ತಿಳಿಯಿತೇ? ಎಂದು ಮಟ್ಟುಮೀರಿ, ಬಾಯಿಗೆ ಬಂದ ಮಾತುಗಳನ್ನೆಲ್ಲ ಆಡಿ, ಅವನ ಮನಸ್ಸಿಗೆ ಸಂಕಟವುಂಟುಮಾಡಿದಳು.

ಲಕ್ಷ್ಮಣನು ಶಾಂತಚಿತ್ತನು. ಅತ್ತಿಗೆಯು ತನ್ನನ್ನು ಕುರಿತು ಕಾರಣವಿಲ್ಲದೆ ಕಟೂಕ್ತಿಗಳನ್ನು ಆಡಿದರೂ, ಅವಳ ಮೇಲೆ ಮುಳಿಯಲಿಲ್ಲ. ಅವನು ಸೀತೆಯನ್ನು ನೋಡಿ, ತಾಯೇ, ನೀನು ಯಾವಾಗಲೂ

ನನ್ನೊಡನೆ ಮೃದುವಾದ ಮಾತುಗಳನ್ನೇ ಆಡುತ್ತಿದ್ದೆಯಲ್ಲ. ನಾನು ಇದುವರೆಗೂ, ನನ್ನ ತಾಯಿ ಹತ್ತಿರದಲ್ಲಿ ಇದ್ದಂತೆ, ನಿನ್ನ ಬಳಿಯಲ್ಲಿ ಇದ್ದುಕೊಂಡು ಆನಂದಪಡುತ್ತಿದ್ದೆನು. ಇದೇನು ವಿಧಿವಿಪರ್ಯಾಸವೋ? ಈ ಸಮಯದಲ್ಲಿ ನನ್ನನ್ನು ನಿಷ್ಕಾರಣವಾಗಿ ಮನಬಂದಂತೆ ಬಯ್ದು, ನೀನು ಕೈಕೇಯಿಯಂತೆ ಆಗಿದ್ದೀಯೆ. ಚಿಂತೆಯಿಲ್ಲ, ಹೇಗಾದರೂ ನೀನು ನನಗೆ ತಾಯಿ, ನಿನ್ನ ಅಪ್ಪಣೆಯಂತೆ ರಾಮನ ಬಳಿಗೆ ಹೊರಡುತ್ತೇನೆ, ಎಂದು ಹೇಳಿ ಆಶ್ರಮದಿಂದ ಹೊರಟನು.

ಈ ಸಮಯವನ್ನೇ ಕಾದಿದ್ದ ರಾವಣನು, ಅಂತರಿಕ್ಷದಿಂದ ಕೆಳಗೆ ಇಳಿದು, ತನ್ನ ಮನಸ್ಸಿನಲ್ಲಿರುವ ಅತಿಶಯವಾದ ರಾಗವನ್ನು ಹೊರಗೆಡವುವನಂತೆ, ಕಾವಿಯ ಬಟ್ಟೆಯುಟ್ಟು, ಸನ್ಯಾಸಿಯ ವೇಷದಿಂದ ರಾಮಾಶ್ರಮವನ್ನು ಹೊಕ್ಕು, ಅಲ್ಲಿ ಒಂಟಿಯಾಗಿದ್ದ ಸೀತೆಯನ್ನು ಕದ್ದುಕೊಂಡು ಹೋದನು.

ಆಗ ಸೀತೆಯು, ಭಯದಿಂದಲೂ ದುಃಖದಿಂದಲೂ, ಹಾ ರಾಮಾ, ನೀನು ಎಲ್ಲಿದ್ದೀಯೆ? ಏಕೆ ಬೇಗ ಬರಲೊಲ್ಲೆ? ಎಂದು ಗಟ್ಟಿಯಾಗಿ ಅಳುತ್ತ, ರಾಮನು ಬರುತ್ತಾನೆಯೋ ಎಂದು ಸುತ್ತಲೂ ನೋಡುತ್ತ, ತತ್ತರಿಸುತ್ತಿದ್ದಳು. ಅವಳ ಅಳುವಿಕೆಯನ್ನು ಕೇಳಿ, ಜಟಾಯುವು ಎಲಾ ರಾಕ್ಷಸ, ಹೆಂಗಳ್ಳ, ಅವಳನ್ನು ಬಿಡು, ಬಿಡು, ಎಂದು ಕೋಪದಿಂದ ಗರ್ಜಿಸುತ್ತ, ರಾವಣನ ಹಾದಿಯನ್ನು ತಡೆದು, ಅವನ ಸಾರಥಿಯನ್ನೂ ರಥದ ಕುದುರೆಗಳನ್ನೂ ಕೊಂದು, ತೇರಿನ ಗಾಲಿಗಳನ್ನು ಸಡಿಲಿಸಿ, ಅಚ್ಚುಗಳನ್ನು ಮುರಿದು, ಅವನು ತನ್ನ ಮೇಲೆ ಬಿಟ್ಟ ಆಯುಧಗಳನ್ನೆಲ್ಲ ಎರಕೆಗಳಿಂದ ಬಡಿದು ಹುಡಿಗುಟ್ಟಿ, ಅವನಿಗೆ ತುಂಬ ಗಾಸಿಮಾಡಿದನು. ರಾವಣನು ಆ ಹದ್ದಿನ ಉಪಟಳದಿಂದ ಕುಪಿತನಾಗಿ ತನ್ನ ಖಡ್ಗವನ್ನು ಹಿರಿದು, ಅದರಿಂದ ಜಟಾಯುವಿನ ಪಕ್ಷವನ್ನು ಛೇದಿಸಿಬಿಟ್ಟನು. ಜಟಾಯುವು ಪಕ್ಷವಿಚ್ಛೇದನದಿಂದ ಕಂಗೆಟ್ಟು, ದೊಪ್ಪನೆ ನೆಲದಲ್ಲಿ ಬಿದ್ದುಬಿಟ್ಟನು. ಬಳಿಕ ರಾವಣನು ಮತ್ತೊಂದು ರಥದಲ್ಲಿ ಸೀತೆಯನ್ನು ಇರಿಸಿಕೊಂಡು, ಲಂಕೆಗೆ ಹೋಗುತ್ತಿದ್ದನು. ಹಾದಿಯಲ್ಲಿ, ಋಷ್ಯಮೂಕಪರ್ವತದ ಮೇಲೆ, ಐವರು ಕಪಿನಾಯಕರು ಕುಳಿತಿದ್ದರು.

ಸೀತೆಯು ತನ್ನ ಒಡವೆಗಳನ್ನು ಕಳಚಿ, ಬಟ್ಟೆಯಲ್ಲಿ ಕಟ್ಟಿ, ಆ ಗಂಟನ್ನು ಅವರ ಮುಂದೆ ಬೀಳುವಂತೆ ಎಸೆದಳು. ರಾವಣನು ಇದೊಂದನ್ನೂ ನೋಡಲಿಲ್ಲ. ಅವನು ಲಂಕೆಗೆ ಹೋಗಿ, ಸೀತೆಯನ್ನು ಅಶೋಕವನ ವೆಂಬ ತನ್ನ ಉದ್ಯಾನದಲ್ಲಿ ಇಳುಹಿ, ಹಲವು ಮಂದಿ ರಾಕ್ಷಸಿಯರನ್ನು ಅವಳ ಮೇಲೆ ಕಾವಲುಹಾಕಿದನು.

ಇತ್ತ ರಾಮನು, ತನ್ನನ್ನು ಆಶ್ರಮದಿಂದ ಬಹುದೂರದವರೆಗೆ ಕೊಂಡು ಹೋಗಿ, ಕೊನೆಗೂ ಸಿಕ್ಕದೆ ಹೋದ ಆ ಮೋಸದ ಜಿಂಕೆ ಯನ್ನು ನಾಶಮಾಡಿ, ಪರ್ಣಶಾಲೆಗೆ ಬರುತ್ತಿದ್ದನು. ನಡುದಾರಿಯಲ್ಲಿ ಲಕ್ಷ್ಮಣನು ಸಿಕ್ಕಿ, ತನಗೂ ಸೀತೆಗೂ ನಡೆದ ಮಾತುಗಳನ್ನು ವಿವರಿಸಿ, ಸೀತೆಯ ಅಪ್ಪಣೆಯಂತೆ ತಾನು ಆಶ್ರಮವನ್ನು ಬಿಟ್ಟು ಹೊರಟುದನ್ನೂ, ತಿಳಿಸಿದನು. ಸೀತೆಯನ್ನು ನೋಡಬೇಕೆಂದು ರಾಮನು ಆತುರದೊಡನೆ ಪರ್ಣಶಾಲೆಗೆ ಬಂದನು.

ಒಳಗೆ ಒಬ್ಬರೂ ಇಲ್ಲ; ಬರಿಯ ಪರ್ಣಶಾಲೆ. ರಾಮನಿಗೆ ಬಹುದುಃಖವಾಯಿತು. ಅವನು ಅಯ್ಯೋ, ಇಲ್ಲಿ ಸೀತೆಯಿಲ್ಲವಲ್ಲ; ನನಗೆ ಎಂಥ ಕಷ್ಟವು ಬಂದಿತು. ಇಲ್ಲಿ ಆವುದೋ ಹಜ್ಜೆಯ ಗುರುತು ಕಾಣುತ್ತಿದೆ. ನಾನು ಜಿಂಕೆಯನ್ನು ತರಲಿಲ್ಲವೆಂದು ಮುನಿಸಿಕೊಂಡು ಸೀತೆಯು ಈ ಮರಗಳ ಹಿಂದೆ ಮರೆಸಿಕೊಂಡಿರಬಹುದೇ? ಎಲೆ ಸರಳ ಬುದ್ಧಿಯವಳೇ, ಸುಂದರಾನನೇ, ನಾನು ಇದುವರೆಗೂ ನಿನ್ನ ಬಯಕೆ ಯನ್ನು ಸಲ್ಲಿಸುತ್ತ, ನಿನ್ನೊಡನೆ ಇರಲಿಲ್ಲವೇ? ಈಗ ನನ್ನಮೇಲೆ ಮುನಿಸಿಕೊಳ್ಳಬಹುದೇ? ನಿನ್ನ ಅಗಲಿಕೆಯನ್ನು ನಾನು ಹೇಗೆ ತಾಳಲಿ? ಎಲೆ ಎರಳೆಗಣ್ಣ ಹೆಣ್ಣೇ, ಈ ಹುಲುಮೃಗವನ್ನು ತರಲಿಲ್ಲವೆಂದು ನಿನಗೇಕೆ ಕೊರತೆ? ಆ ಚಂದ್ರನಲ್ಲಿ ಇರುವ ಎರಳೆಯನ್ನೇ ತಂದು ಕೊಟ್ಟೇನು, ಎಂದು ಹಂಬಲಿಸಿ, ಊಹೂಂ, ಸೀತೆಯು ಜೀವದೊಡನೆ ಇಲ್ಲ; ಜೀವಿಸಿದ್ದರೆ ನನ್ನನ್ನು ನೋಡದೆ ಇರುವಳೇ? ಕ್ರೂರಮೃಗ ಗಳಿಂದ ಅವಳು ಹತಳಾಗಲಿಲ್ಲ; ಹಾಗಿದ್ದರೆ ನೆಲದಲ್ಲಿ ನೆತ್ತರ ಕಲೆಯಿರು ತ್ತಿದ್ದಿತು. ಒಂದುವೇಳೆ ಅವಳು ನದಿಯ ತೀರಕ್ಕೆ ಹೋಗಿದ್ದಾಳೆಯೇ? ಇಲ್ಲ, ಇಲ್ಲ, ನನ್ನನ್ನು ಬಿಟ್ಟು ಅವಳು ಹಾಗೆಲ್ಲ ಹೋಗುವಳಲ್ಲ;

ನಿಜವಾಗಿಯೂ ಅವಳನ್ನು ರಾಕ್ಷಸರಾರೋ ತಿಂದುಹಾಕಿರಬೇಕು, ಎಂದು ಪ್ರಲಾಪಿಸಿದನು.

ಹೀಗೆ, ಅಲ್ಲಿ ಇಲ್ಲಿ ಸೀತೆಯನ್ನು ಹುಡುಕುತ್ತ, ಲಕ್ಷ್ಮಣನೊಡನೆ ಸಂಕಟಪಟ್ಟುಕೊಂಡು ಬರುತ್ತಿರುವ ರಾಮನನ್ನು ಕಂಡು, ಕಂಠಗತ ಪ್ರಾಣನಾಗಿದ್ದ ಜಟಾಯುವು, ಎಲೈ ಕುಮಾರ, ರಾವಣನು ನನ್ನ ಎರಕೆಯನ್ನು ಕತ್ತರಿಸಿ, ನನ್ನನ್ನು ಕೆಡಹಿ, ಸೀತೆಯನ್ನು ಅಪಹರಿಸಿದನು, ಎಂದು ಹೇಳಿ ಮೃತನಾದನು.

ರಾಮನು, ಜಟಾಯುವಿಗೆ ತಿಲತರ್ಪಣವನ್ನು ಮಾಡಿ, ಲಕ್ಷ್ಮಣ ನೊಡನೆ ದಕ್ಷಿಣ ದಿಕ್ಕಿಗೆ ಹೊರಟನು. ಅಲ್ಲಿ ಅಯೋಮುಖಿಯೆಂಬ ರಾಕ್ಷಸಿಯು ಬಂದು, ನನ್ನನ್ನು ಮದುವೆಯಾಗು, ಎಂದು ಲಕ್ಷ್ಮಣ ನನ್ನು ಪೀಡಿಸಿದಳು. ಅವನು ಈ ರಾಕ್ಷಸಿಗೂ ಶೂರ್ಪಣಖೆಯ ಗತಿ ಯನ್ನೇ ಕಾಣಿಸಿದನು.

ತರುವಾಯ, ಅವರಿಬ್ಬರೂ ಕ್ರೌಂಚಾರಣ್ಯದ ಹಾದಿಯಲ್ಲಿ ಹೊರಟರು. ಅಲ್ಲಿ ಸ್ಥೂಲಶಿರಸ್ಸೆಂಬ ಮುನಿಯ ಶಾಪದಿಂದ, ರಾಕ್ಷಸ ರೂಪವನ್ನು ಪಡೆದಿದ್ದ ಕಬಂಧನೆಂಬವನು, ದೊಡ್ಡ ಹೆಬ್ಬಾವುಗಳೋ ಪಾದಿಯಲ್ಲಿ ಉದ್ದವಾಗಿದ್ದ ತನ್ನ ಎರಡು ತೋಳುಗಳಿಂದ, ರಾಮ ಲಕ್ಷ್ಮಣರಿಬ್ಬರನ್ನೂ ಬಿಗಿಯಾಗಿ ಹಿಡಿದುಕೊಂಡನು. ಅವರು ಎದೆ ಗೆಡದೆ, ಕತ್ತಿಗಳನ್ನು ಹಿರಿದುಕೊಂಡು, ಒಬ್ಬೊಬ್ಬರೂ ಕಬಂಧನ ಒಂದೊಂದು ತೋಳನ್ನು ಕತ್ತರಿಸಿಬಿಟ್ಟರು. ತದನಂತರ ಕಬಂಧನು ರಾಮನನ್ನು ನೋಡಿ, ನೀನು ಸೂರ್ಯಪುತ್ರನಾದ ಸುಗ್ರೀವನೊಡನೆ ಸ್ನೇಹವನ್ನು ಮಾಡಿಕೊಂಡು, ಸೀತೆಯನ್ನು ಪಡೆಯುವನಾಗು, ಎಂದು ಹೇಳಿ ಸುಗ್ರೀವನು ವಾಸವಾಗಿರುವ ಋಷ್ಯಮೂಕಪರ್ವತದ ಹಾದಿ ಯನ್ನು ರಾಮನಿಗೆ ತೋರಿದನು. ಬಳಿಕ ರಾಮಲಕ್ಷ್ಮಣರು ಕಬಂಧನ ಪ್ರಾರ್ಥನೆಯಂತೆ, ಅವನ ದೇಹವನ್ನು ಸುಟ್ಟುಹಾಕಿದರು.

ಬಳಿಕ ಶ್ರೀರಾಮನು, ಮತಂಗಾಶ್ರಮದಲ್ಲಿ ವಾಸವಾಗಿದ್ದ, ಶಬರಿ ಯೆಂಬ ವಿರಕ್ತೆಯಾದ ಸ್ತ್ರೀಯಿಂದ ಸತ್ಕೃತನಾಗಿ, ಅವಳು ಭಕ್ತಿಯಿಂದ ಅರ್ಪಿಸಿದ ಫಲಮೂಲಗಳನ್ನು ಭುಜಿಸಿ, ಅವಳ ಅನುಜ್ಞೆಯಂತೆ, ಹಲವು

ಹಕ್ಕಿಗಳ ಇಂಚರದಿಂದಲೂ, ಮೃಗಗಳ ವಿಹರಣದಿಂದಲೂ, ಮನೋಹರವಾದ ಅಡವಿಯನ್ನು ಹೊಕ್ಕು, ಅರಳಿದ ತಾವರೆಗಳ ಕಂಪಿನಿಂದಲೂ, ಮಾವಿನ ಹೂಗಳ ಸೊಗಡಿಂದಲೂ, ಅಲ್ಲಲ್ಲಿ ಸುಮಾನಕ್ಕಾಗಿ ನಿರ್ಮಿಸಿರುವ ಎಲೆವನೆಗಳಲ್ಲಿ ಹಾಯಾಗಿ ಕುಳಿತು, ವಾಯುಸೇವನೆ ಮಾಡುವ ಸುಖಪುರುಷರಿಂದಲೂ, ಹಂಸ ಮೊದಲಾದ ನೀರ್ವಕ್ಕಿಗಳ ಎರಕೆಗಳ ಹೊಡೆತದಿಂದ ಚದರುವ ನೀರುಳ್ಳ ಕೊಳಗಳಿಂದಲೂ, ಮೆಲ್ಲಮೆಲ್ಲನೆ ಬೀಸುತ್ತಿರುವ ತಂಗಾಳಿಯಿಂದಲೂ, ರಮ್ಯವಾದ ಪಂಪಾ ಸರೋವರದ ಬಳಿಗೆ, ಲಕ್ಷ್ಮಣ ಸಮೇತನಾಗಿ ಬಂದು ಸೇರಿದನು.

ಎಂಬಲ್ಲಿಗೆ ರಾಮಾಯಣ ಸಂಗ್ರಹದಲ್ಲಿ ಅರಣ್ಯಕಾಂಡವು.

ಕಿಷ್ಕಿಂಧಾ ಕಾಂಡ

ಮಹಾ ಯಶಸ್ವಿಯಾದ ಶ್ರೀರಾಮನು, ಸುಜನರ ಮನಸ್ಸಿನಂತೆ, ತಿಳಿಯಾದ ನೀರಿಂದ ಕೂಡಿರುವ, ಪಂಪಾ ಸರೋವರದ ಬಳಿಗೆ ಲಕ್ಷ್ಮಣ ಸಹಿತನಾಗಿ ಬಂದು ಸೇರಿ, ಸೀತೆಯ ಅಗಲಿಕೆಯೆಂಬ ಬೆಂಕಿಯಿಂದ ಬೆಂದು, ಬೆಂಡಾಗಿ ಸಂಕಟಪಡುತ್ತಿದ್ದನು.

ಆ ವೇಳೆಗೆ, ಆ ಸರೋವರ ಪ್ರದೇಶದಲ್ಲಿ ಬೆಳೆದಿದ್ದ ಇವಮ್ಮಾವು, ತೆಂಗು, ಅಡಕೆ ಮೊದಲಾದ ಹಲವು ಮರಗಳು ಚಿಗುರಿ ಹೂಬಿಡತೊಡಗಿದುವು. ಆ ಹೂಗಳ ಸೊಗಸುಗಂಪಿಗೆ ಮನಸೋತು, ತುಂಬಿಗಳು ಅತ್ತಲಿಂದ ಇತ್ತಲೂ, ಇತ್ತಲಿಂದ ಅತ್ತಲೂ ಹಾರುತ್ತ, ಝುಂಕಾರವಮಾಡುತ್ತಿದ್ದುವು. ಕೋಗಿಲೆಗಳು ಇವಮ್ಮಾವಿನ ಮರಗಳ ಮೇಲೆ ಕುಳಿತು, ಕುಹೂಂ, ಕುಹೂಂ ಎಂದು ಪಂಚಮ ಸ್ವರದಲ್ಲಿ ಕೂಗುತ್ತಿದ್ದುವು. ಮಲ್ಲಿಗೆ ಮುಂತಾದ ಪುಷ್ಪಗಳು, ಎತ್ತೆತ್ತಲೂ ಪರಿಮಳವನ್ನು ಬೀರುತ್ತಿದ್ದುವು. ತೆಂಕಣಿಂದ ಗಾಳಿಯು, ಮಂದ ಮಂದವಾಗಿ ಬೀಸತೊಡಗಿತು. ವಸಂತ ಋತುವು ಆರಂಭವಾಯಿತು.

ಆ ಚೈತ್ರಮಾಸದಲ್ಲಿ, ಪಂಪಾಸರೋವರದ ಬಳಿವಿಡಿದು ಶ್ರೀರಾಮನು ಸಂಚರಿಸುತ್ತ, ಸೀತೆಯು ಹತ್ತಿರವಿಲ್ಲದ ದುಃಖವು ಅಧಿಕವಾಗಲು, ಹಲುಬುತ್ತ ಲಕ್ಷ್ಮಣನೊಡನೆ ತಮ್ಮಾ, ನನ್ನ ಮನಸ್ಸಿಗೆ ಸಂಕಟವಾದರೆ ಅದನ್ನು ಸಲ್ಲಾಪಗಳಿಂದ ಕಳೆಯುತ್ತಿದ್ದ ಆ ಸೀತೆಯೆತ್ತ ಹೋದಳೋ? ನಾನು ಯಜ್ಞಮಾಡುವಾಗ ಪತ್ನಿಯಾಗಿದ್ದ ಆ ಜಾನಕಿಯೆಲ್ಲಿ? ಗುರುಜನಪೂಜಾ ಸಮಯದಲ್ಲಿ ನನಗೆ ಶಿಷ್ಯೆಯಾಗಿದ್ದ ಮೈಥಿಲಿಯೆಲ್ಲಿ? ನನಗೆ ದೇಹಾಲಸ್ಯವಾದಾಗ ಉಪಚರಿಸುತ್ತ ಸಂತೈಸುತ್ತಿದ್ದ ನನ್ನ ಹೆಂಡತಿಯೆಲ್ಲಿ ಇದ್ದಾಳೆ? ಲಕ್ಷ್ಮಣಾ, ಅವಳನ್ನು ಬಿಟ್ಟು ನಾನು ಇರಲಾರೆನಲ್ಲೋ. ಈಗ ವಸಂತಕಾಲವು ಪ್ರಾಪ್ತವಾಗಿ, ಅವಳು ಇಲ್ಲದೆ ನನ್ನ ಮನಸ್ಸು ಕಳವಳಗೊಳ್ಳುತ್ತಿದೆಯಲ್ಲ, ಎಂದು ಪ್ರಲಾಪಿಸುತ್ತಿದ್ದನು. ಆಗ ಲಕ್ಷ್ಮಣನು ರಾಮನನ್ನು ನೋಡಿ, ಅಣ್ಣಾ, ನೀವು ಹೀಗೆ ಪ್ರಾಕೃತರಂತೆ ಹಲುಬುವುದುಂಟೇ? ಪ್ರಲಾಪಿಸು

ವುದುಂಟೇ? ನೀವು ಪುರುಷಶ್ರೇಷ್ಠರು; ಈ ಶೋಕವನ್ನು ಕೊಂಚ ಕಾಲ ಸಹಿಸಬೇಕು, ಎಂದು ಸಮಯಕ್ಕೆ ತಕ್ಕಂತೆ, ವಿನಯದಿಂದ ಬಿನ್ನವಿಸಿದನು. ಲಕ್ಷ್ಮಣನ ಮಾತಿನಿಂದ, ರಾಮನು ತನ್ನ ದುಃಖ ವನ್ನು ಅಡಗಿಸಿಕೊಂಡನು.

ಹೀಗಿರುವಲ್ಲಿ, ಋಷ್ಯಮೂಕಗಿರಿಯಲ್ಲಿ ಇದ್ದ ಸುಗ್ರೀವನು, ಧನುರ್ಬಾಣ ಹಸ್ತರಾಗಿ, ಮುನಿವೇಷಧಾರಿಗಳಾಗಿ, ಸಂಚರಿಸುತ್ತಿದ್ದ ರಾಮಲಕ್ಷ್ಮಣರನ್ನು ಕಂಡು, ತಾನಿರುವ ಸ್ಥಳವನ್ನು ತಿಳಿದು ಬರುವಂತೆ ಕಳುಹಿರುವ ನಮ್ಮ ಅಣ್ಣನಾದ ವಾಲಿಯ ಗೂಢಚಾರರಿರಬಹುದೆಂದು ಹೆದರಿ, ಅವರು ತನ್ನನ್ನು ನೋಡುವುದಕ್ಕೆ ಆಗದಿರುವಂತೆ ಕೊಂಚ ಹಿಂಜರಿದನು.

ತರುವಾಯ ಸುಗ್ರೀವನು, ತನ್ನ ಹಿತಚಿಂತಕರಾದ ಮಂತ್ರಿಗಳನ್ನು ಬರಿಸಿ, ಅವರ ಸಂಗಡ ಚೆನ್ನಾಗಿ ಆಲೋಚನೆಮಾಡಿ, ರಾಮಲಕ್ಷ್ಮಣರ ಆಶಯವೇನಿರಬಹುದು ಎಂಬುದನ್ನು ತಿಳಿದುಬರುವಂತೆ, ವಾಯು ಪುತ್ರನಾದ ಹನುಮಂತನನ್ನು ಅವರ ಬಳಿಗೆ ಕಳುಹಿದನು. ಹನು ಮಂತನು, ಬ್ರಹ್ಮಚಾರಿಯಂತೆ ವೇಷವನ್ನು ಹಾಕಿಕೊಂಡು, ರಾಮ ಲಕ್ಷ್ಮಣರ ಬಳಿಗೆ ಬಂದನು. ಅವನ ಜನಕನು ವಾಯು; ವಿದ್ಯಾ ಗುರುವು ಸೂರ್ಯನು; ಮಹಾಬಲಶಾಲಿಯಾಗಿಯೂ ಬುದ್ಧಿಶಾಲಿ ಯಾಗಿಯೂ ಇದ್ದ ಆತನು, ರಾಮಲಕ್ಷ್ಮಣರನ್ನು ನೋಡಿ, ಎಲೌ ಯುವಕರಿರಾ, ನೀವು ಯಾರು? ನಿಮ್ಮ ಯೌವನವೂ ಮುನಿವೇಷವೂ ಬಲು ಚೆನ್ನಾಗಿದೆ. ನಿಮ್ಮ ಮಾತಿನ ಸವಿಯನ್ನು ನೋಡಬೇಕೆಂದು ನನ್ನ ಕಿವಿಗಳು ಆತುರಗೊಂಡಿವೆ. ಅದರ ರುಚಿಯನ್ನು ಮೊದಲು ತಾನೇ ನೋಡಬೇಕೆಂದು, ನನ್ನ ನಾಲಗೆಯು ತ್ವರೆಮಾಡುತ್ತಿದೆ. ಇಲ್ಲಿ ಸುಗ್ರೀವನೆಂಬ ವಾನರ ರಾಜನೊಬ್ಬನು ಇದ್ದಾನೆ. ಅವನು ತನ್ನ ಅಣ್ಣನಾದ ವಾಲಿಯಿಂದ ಓಡಿಸಲ್ಪಟ್ಟು, ಈ ಋಷ್ಯಮೂಕಪರ್ವತದಲ್ಲಿ ವಾಸಮಾಡುತ್ತಾನೆ. ಅವನಿಗೆ, ನಿಮ್ಮ ಸಂಗಡ ಸ್ನೇಹವನ್ನು ಬಳೆಯಿಸ ಬೇಕೆಂಬ ಆಸೆಯಿದೆ. ನಿಮ್ಮ ಸುದ್ದಿಯನ್ನು ತಿಳಿದುಬರುವಂತೆ ಅವನು ನನ್ನನ್ನು ಕಳುಹಿದ್ದಾನೆ. ನಾನು ನಿಮ್ಮೆಡೆಗೆ ಬ್ರಹ್ಮಚಾರಿಯ ವೇಷದಿಂದ

ಬಂದಿದ್ದೇನೆ. ನಾನು ಕಪಿ; ವಾಯುವಿನ ಮಗ, ಅಂಜನೆಯ ಬಸಿರಲ್ಲಿ ಬಂದವನು. ನನ್ನನ್ನು ಆಂಜನೇಯನೆಂದು ಕರೆಯುತ್ತಾರೆ, ಎಂದು ಅವರಿಗೆ ಪ್ರಿಯವಾಗುವಂತೆ ಹೇಳಿದನು. ಕಿವಿಗಳಿಗೆ ಅಮೃತ ವನ್ನು ಹಿಂಡಿದಂತೆ, ಆಪ್ಯಾಯನಕರವಾದ, ಆಂಜನೇಯನ ಮಾತನ್ನು ಕೇಳಿ, ಮಹಾನುಭಾವನಾದ ರಾಮನು ಸಂತೋಷಪಟ್ಟು, ತಮ್ಮನ ಸಂಗಡ, ಆಂಜನೇಯನ ಹೆಗಲಮೇಲೆ ಕುಳಿತುಕೊಂಡು ಸುಗ್ರೀವನು ಇದ್ದ ಸ್ಥಳಕ್ಕೆ ಹೋದನು. ಬಳಿಕ ಸುಗ್ರೀವನಿಗೂ ರಾಮನಿಗೂ ಅಗ್ನಿಸಾಕ್ಷಿಯಾಗಿ ಸ್ನೇಹವಾಯಿತು. ನಿನ್ನ ಹಗೆಯಾದ ವಾಲಿಯನ್ನು ಕೊಂದು, ತಾರೆಯೊಡನೆ ಅವನ ರಾಜ್ಯಭಾರವನ್ನು ನಿನಗೆ ಕೊಡು ತ್ತೇನೆ, ಎಂದು ರಾಮನು ಸುಗ್ರೀವನಿಗೆ ಮಾತನ್ನು ಕೊಟ್ಟನು. ಪ್ರತಿಯಾಗಿ ಸುಗ್ರೀವನು, ರಾವಣನಿಂದ ಅಪಹೃತಳಾದ ಸೀತೆಯು ತನ್ನ ಬಳಿಗೆ ಬಿಸುಟಿದ್ದ ಒಡವೆಗಳ ಗಂಟನ್ನು, ರಾಮನಿಗೆ ಕೊಟ್ಟನು. ಅವು ಗಳನ್ನು ಬಿಚ್ಚಿ ರಾಮನು ನೋಡಿದನು. ಅವನಿಗೆ ಸೀತೆಯ ನೆನಪು ಬಂದಿತು; ಗೋಳೋ ಎಂದು ಅತ್ತನು. ಅವನನ್ನು ನೋಡಿ ಲಕ್ಷ್ಮಣನು, ಅಣ್ಣಾ, ಮಹಾತ್ಮನಾದ ನೀನು ಹೀಗೆ ಹಲುಬುವುದು ತರವಲ್ಲ, ಎಂದು ಸಮಾಧಾನಪಡಿಸಿದನು. ರಾಮನು ಶಾಂತಚಿತ್ತನಾಗಿ, ಸುಗ್ರೀವನನ್ನು ನೋಡಿ ಮಿತ್ರನೇ, ವಾಲಿಗೂ ನಿನಗೂ ಹಗೆತನವೇಕೆ ಉಂಟಾಯಿತು, ಎಂದು ಕೇಳಿದನು.

ಸುಗ್ರೀವನು ರಾಮನನ್ನು ನೋಡಿ, ಗೆಳೆಯನೇ ಕೇಳು: ಹಿಂದೆ, ಶತ್ರುಸಂಹಾರಕನಾದ ವಾಲಿಯನ್ನು, ದುಂದುಭಿಯೆಂಬ ದಾನವನ ಸೋದರನಾದ ಮಾಯಾವೀ ಎಂಬವನು, ನನ್ನ ಸಂಗಡ ಯುದ್ಧ ಮಾಡು, ಎಂದು ನಿರ್ಬಂಧಪಡಿಸಿದನು. ಇಬ್ಬರಿಗೂ ಯುದ್ಧವಾಯಿತು. ವಾಲಿಯ ಬಲವನ್ನು ಕಂಡು ಮಾಯಾವಿಯು ಎದೆಗೆಟ್ಟನು. ಕೂಡಲೇ ಅವನು ಪಾತಾಳದ ಬಿಲಕ್ಕೆ ಓಡಿಹೋದನು. ವಾಲಿಯು ಅವನನ್ನು ಬೆನ್ನಟ್ಟಿದನು. ಮಾಯಾವಿಯನ್ನು ತರುಬಿಕೊಂಡು ಹೋಗುವಾಗ, ವಾಲಿಯು ನನ್ನನ್ನು ಆ ಬಿಲದ ಬಾಗಿಲಲ್ಲಿ ಕಾವಲಿರಿಸಿದನು. ನಾನು, ವಾಲಿಯು ಹಿಂದಿರುಗಿ ಬರುವುದನ್ನು ನಿರೀಕ್ಷಿಸುತ್ತ, ಬಹುಕಾಲದವರೆಗೆ

ಅಲ್ಲಿಯೇ ಇದ್ದೆನು. ಒಂದು ವರ್ಷವಾಯಿತು. ಬಿಲದ ಬಳಿಯಲ್ಲಿ ನೊರೆಗಟ್ಟಿಕೊಂಡು ಗಟ್ಟಿಯಾಗಿ ಇದ್ದ ಕೆನ್ನೀರನ್ನೂ ಮಾಂಸವನ್ನೂ ನೋಡಿದೆನು. ನಮ್ಮ ಅಣ್ಣ ವಾಲಿಯು ಹತನಾದನೆಂದು ತಿಳಿದು, ಮಾಯಾವಿಯು ಮತ್ತೆ ಬಿಲದಿಂದ ಈಚೆಗೆ ಬರದೆ ಇರಲೆಂದು, ಬಿಲದ ಬಾಯಿಗೆ ದೊಡ್ಡದಾದ ಕಲ್ಲ ಹಲಗೆಯನ್ನು ಮುಚ್ಚಿಬಿಟ್ಟೆನು.

ಬಳಿಕ ನಾನು ಕಿಷ್ಕಿಂಧೆಗೆ ಬಂದು, ವಾಲಿಯು ಸತ್ತನೆಂದು ಮಂತ್ರಿಗಳಿಗೆ ಹೇಳಿದೆನು. ಅವರು ನನಗೆ ಪಟ್ಟಾಭಿಷೇಕವನ್ನು ಮಾಡಿದರು. ವಾಲಿಗೆ ನಡೆಯಬೇಕಾದ ಅಪರಕರ್ಮಗಳೆಲ್ಲವೂ ನಡೆದು ಹೋದುವು.

ಇತ್ತ ವಾಲಿಯು, ಮಾಯಾವಿಯನ್ನು ಕೊಂದು, ಹಿಂದಿರುಗಿ ಬಂದು, ಬಿಲದ ಬಾಗಿಲಿಗೆ ಕಲ್ಲ ಹಲಗೆಯು ಮುಚ್ಚಿರುವುದನ್ನು ನೋಡಿದನು. ಅವನಿಗೆ ಅಪಾರವಾದ ಕೋಪವು ಉಂಟಾಯಿತು. ಅವನು ತನ್ನ ಬಾಹುಬಲದಿಂದ ಮುಚ್ಚಿದ್ದ ಹಲಗೆಯನ್ನು ಒಡೆದು ಕೊಂಡು ಈಚೆಗೆ ಬಂದನು. ಅವನು ನೆಟ್ಟಗೆ ಊರಿಗೆ ಬಂದು, ನನ್ನನ್ನು ನೋಡಿ, ಎಲೋ ದ್ರೋಹೀ, ಬಿಲದ ಬಾಗಿಲನ್ನು ಮುಚ್ಚಿಬಿಟ್ಟು, ನಾನು ಸತ್ತೆನೆಂದು ಹೇಳಿ, ಅರಸಾಗಲಿಕ್ಕೆ ಬಂದೆಯಾ, ಪಾಪೀ, ಎಂದು ಜರೆದನು. ನಾನು ಅವನ ಕಾಲಿಗೆ ಬಿದ್ದು ಅಣ್ಣಾ, ಬಿಲದ ಹತ್ತಿರ ರಕ್ತಪ್ರವಾಹವನ್ನು ಕಂಡು ನೀನು ಸತ್ತಿರಬೇಕೆಂದು ನಾನು ತಿಳಿದು, ಆ ರಾಕ್ಷಸನು ಹೊರಗೆ ಬಾರದೆ ಇರಲಿ, ಎಂದು ಬಿಲದ ಬಾಗಿಲನ್ನು ಮುಚ್ಚಿದೆನು, ಎಂದು ಎಷ್ಟೋ ಕೇಳಿಕೊಂಡೆನು. ನಾನು ತಪ್ಪನ್ನು ಮಾಡಲಿಲ್ಲ. ಆದರೂ ಅವನು ನನ್ನನ್ನು ಊರಲ್ಲಿ ಇರಗೊಡಲಿಲ್ಲ. ಅವನ ಅಂಜಿಕೆಯಿಂದ ನಾನು ಪಲಾಯನಮಾಡುತ್ತ, ಅವನು ಈ ಪರ್ವತಕ್ಕೆ ಬರುವುದಕ್ಕಿಲ್ಲ, ಎಂದು ಸಮಾಚಾರವನ್ನು ತಿಳಿದು, ಇಲ್ಲಿ ಸೇರಿಕೊಂಡು, ಅವನ ಕಾಟವಿಲ್ಲದೆ ಕಾಲವನ್ನು ತಳ್ಳುತ್ತಿದ್ದೇನೆ.

ವಾಲಿಯು ಇಲ್ಲಿಗೆ ಬಾರದಿರುವುದಕ್ಕೆ ಕಾರಣವನ್ನು ಹೇಳುತ್ತೇನೆ, ಕೇಳು. ಪೂರ್ವದಲ್ಲಿ ಒಂದು ದಿವಸ ಅಪರಿಮಿತ ಪರಾಕ್ರಮಶಾಲಿಯಾದ ವಾಲಿಯನ್ನು, ಕೋಣನ ಆಕಾರದ ದುಂದುಭಿಯೆಂಬ ದಾನವನು

ಇದಿರಿಸಿದನು. ಇಬ್ಬರಿಗೂ ಯುದ್ಧವಾಯಿತು. ವಾಲಿಯ ಹೊಡೆತವನ್ನು ತಾಳಲಾರದೆ, ದುಂದುಭಿಯು ಜೀವವನ್ನು ಬಿಟ್ಟನು. ತಾನು ಬಲಶಾಲಿಯೆಂದು, ಸೊಕ್ಕಿ, ವಾಲಿಯು ಆ ಹೆಣವನ್ನು ಎತ್ತಿ, ಮತಂಗ ಮುನಿಯ ಆಶ್ರಮಕ್ಕೆ ಬಿಸುಟನು. ಆಶ್ರಮ ಪ್ರದೇಶವೆಲ್ಲವೂ ದುಂದುಭಿಯ ರಕ್ತದಿಂದ ಕೆಂಪಾಯಿತು. ಅದನ್ನು ಕಂಡು, ಮತಂಗ ಮುನಿಯ ಮುಖವು ಕೋಪದಿಂದ ಕೆಂಪಾಯಿತು. ಅವರು, ಈ ರೀತಿಯಲ್ಲಿ ಮಾಡಿದವರಾರು ಎಂದು ತಿಳಿದು, ಇಲ್ಲಿಗೆ ಅವನು ಬರಕೂಡದು; ಬಂದರೆ ಸಾಯುವನು, ಎಂದು ಶಾಪವನ್ನು ಕೊಟ್ಟರು. ಆದುದರಿಂದ, ನಾನು ಇಲ್ಲಿ ನೆಮ್ಮದಿಯಾಗಿ ವಾಸಮಾಡುತ್ತ ಇದ್ದೇನೆ, ಎಂದು ಹೇಳಿದನು.

ಅವನು ಮತ್ತೆ ರಾಮನನ್ನು ನೋಡಿ, ಸ್ವಾಮೀ, ನಿಮ್ಮನ್ನು ಕಂಡು, ವಾಲಿಯ ಕಡೆಯವರು ಎಂದು ಅಂಜಿ, ನಿಮ್ಮ ವೃತ್ತಾಂತವನ್ನು ತಿಳಿದು ಬರುವಂತೆ, ನಾನು ಈ ಆಂಜನೇಯನನ್ನು ನಿಮ್ಮ ಬಳಿಗೆ ಕಳುಹಿದೆನು. ಈತನು, ನಿಮ್ಮನ್ನು ಇಲ್ಲಿಗೆ ಕರೆದುತಂದು, ನನ್ನೊಡನೆ ಸಖ್ಯವನ್ನು ಮಾಡಿಸಿ, ನನಗೆ ಸಂತೋಷವನ್ನು ಉಂಟುಮಾಡಿದನು. ನಿಮ್ಮಲ್ಲಿ ನಾನು ಸಂದೇಹಪಟ್ಟೆನು; ನಾನು ಕೆಟ್ಟುಹೋದವನು, ಕಳೆಗುಂದಿದವನು; ನನ್ನ ಅಪಚಾರವನ್ನು ತಾವು ಗಣಿಸಕೂಡದು, ಎಂದು ದೈನ್ಯದಿಂದ ವಿಜ್ಞಾಪಿಸಿಕೊಂಡನು.

ಈ ರೀತಿ, ಶೋಕದಿಂದ ಹೇಳಿದ ಸುಗ್ರೀವನ ಮಾತನ್ನು ಕೇಳಿ, ರಾಮನು, ಅವನನ್ನು ನೋಡಿ, ಅಯ್ಯ, ಕಪಿಸಾರ್ವಭೌಮ, ನೀನೇಕೆ ಹೆದರುತ್ತೀಯೆ; ನನ್ನ ಬಾಣವು ವಾಲಿಯನ್ನು ಬೇಗನೆ ಕೊಂದು ಹಾಕುವುದು, ಎಂದು ಹೇಳಿ, ತನ್ನ ಮಾತಿನಲ್ಲಿ ಅವನಿಗೆ ನಂಬುಗೆಯುಂಟಾಗಬೇಕೆಂದು, ಕಾಲ ಹೆಬ್ಬೆರಳಿಂದ, ದುಂದುಭಿಯ ಶವವನ್ನು ಬಹುದೂರಕ್ಕೆ ಚಿಮ್ಮಿದನು. ಹಗುರವಾದ ಈ ಬರಿಯ ಮೂಳೆಯ ಗೂಡನ್ನು ಚಿಮ್ಮಿದರೆ, ವಾಲಿಯನ್ನು ಸಂಹಾರಮಾಡುವುದಕ್ಕೆ ತಕ್ಕ ಶಕ್ತಿಯುಂಟೆಂದು ನಂಬುವುದಕ್ಕೆ ಆಗುವುದಿಲ್ಲ, ಎಂದು ಭಾವಿಸಿದ ಸುಗ್ರೀವನ ಅಭಿಪ್ರಾಯವನ್ನು ಅರಿತು, ಶ್ರೀರಾಮನು, ಪಾತಾಳದಿಂದ

ಆಕಾಶವನ್ನು ಮುಟ್ಟುವಂತೆ ಬಹುಬಲವಾಗಿ ಬೆಳೆದಿದ್ದ ಏಳು ತಾಳೆಯ ಮರಗಳನ್ನೂ, ಅವನ ಕೋರಿಕೆಯಂತೆ ಒಂದೇ ಬಾಣದಿಂದ, ಒಂದೇ ಬಾರಿಗೆ ಕಡಿದುಹಾಕಿದನು. ಆಗ ಸುಗ್ರೀವನಿಗೆ ನಂಬುಗೆಯು ಉಂಟಾಯಿತು.

ರಾಮನ ಬೆಂಬಲದಿಂದ ಸುಗ್ರೀವನು ಧೈರ್ಯಗೊಂಡು, ವಾಲಿಯನ್ನು ಯುದ್ಧಕ್ಕೆ ಕರೆದನು. ಇಬ್ಬರಿಗೂ ಘೋರವಾದ ಯುದ್ಧವು ಆಯಿತು. ಇದರಲ್ಲಿ, ವಾಲಿಗೂ ಸುಗ್ರೀವನಿಗೂ ರೂಪದಲ್ಲಿ ವ್ಯತ್ಯಾಸವಾವುದೂ ರಾಮನಿಗೆ ತೋರಲಿಲ್ಲ. ವಾಲಿಯ ಪರಾಕ್ರಮ ದಿಂದ ಸುಗ್ರೀವನು ಕಳೆಗುಂದಿ, ದೀನನಾಗಿ, ರಾಮನ ಬಾಣವು ಬಂದೀತೇ, ಬಂದೀತೇ ಎಂದು ನೋಡುತ್ತ, ಅಂಜಿ, ಬಹುದೂರ ಓಡಿ ಹೋದನು. ಹೀಗೆ ಓಡಿಹೋಗಿ, ನಾಚಿಕೆಯಿಂದ ತಲೆಬಾಗಿ, ಮಾತಾಡದೆ ನಿಂತಿದ್ದ ಸುಗ್ರೀವನನ್ನು ಕಂಡು, ಮರುಗಿ, ಬಿಲ್ಗಾರರಲ್ಲಿ ಶ್ರೇಷ್ಠ ನಾದ ರಾಮನು, ಅವರಿಬ್ಬರ ರೂಪವ್ಯತ್ಯಾಸವು ತಿಳಿದುಬರುವ ಹಾಗೆ, ಸುಗ್ರೀವನ ಕೊರಲಿಗೆ ಗಜಪುಷ್ಪಮಾಲೆಯೊಂದನ್ನು ಹಾಕಿದನು.

ಸುಗ್ರೀವನು, ಮತ್ತೆ ಕಿಷ್ಕಿಂಧೆಗೆ ಹೋಗಿ, ವಾಲಿಯನ್ನು ಮರಳಿ ಯುದ್ಧಕ್ಕೆ ಕರೆದನು. ವಾಲಿಯು ಕುಪಿತನಾಗಿ, ಮತ್ತೆ ಯುದ್ಧಕ್ಕೆ ಹೊರಟನು. ಆಗ, ಅವನ ಹೆಂಡತಿಯಾದ ತಾರೆಯು, ನಾಥ, ಈಗಲೇ ನಿಮ್ಮಿಂದ ಪೆಟ್ಟನ್ನು ತಿಂದು ಓಡಿಹೋದ ಸುಗ್ರೀವನು, ಪುನಃ ನಿಮ್ಮನ್ನು ಯುದ್ಧಕ್ಕೆ ಕರೆಯುವುದೆಂದರೆ ಏನು? ಅವನಿಗೆ ಯಾರ ಸಹಾಯವೋ ದೊರೆತಿರಬೇಕು. ಇಲ್ಲದಿದ್ದರೆ ಮತ್ತೆ ಕೂಗುವುದಕ್ಕೆ ಅವನಿಗೆ ಎದೆಯು ಇದ್ದೀತೇ? ನೀವು ಆಲೋಚನೆಯನ್ನು ಮಾಡಬೇಕು. ದುಡುಕಿ ಜಗಳಕ್ಕೆ ಹೋಗಬಾರದು, ಎಂದು ನಾನಾಪ್ರಕಾರವಾಗಿ ಗಂಡನಿಗೆ ಹೇಳಿದಳು. ಅವಳ ಮಾತಿಗೆ ಅವನು ಕಿವಿಗುಡಲಿಲ್ಲ. ಆಯುಸ್ಸು ತುಂಬಿದವನಿಗೆ, ಹಿತದ ಮಾತು ಸೊಗಸೀತೇ? ಅವನು ಯುದ್ಧಕ್ಕೆ ಹೊರಟನು. ಅವನಿಗೂ ಸುಗ್ರೀವನಿಗೂ ಯುದ್ಧವಾಯಿತು. ಆಗ ರಾಮನು ಪ್ರಯೋಗಿಸಿದ ಕೂರಂಬು, ಅವನ ಎದೆಯಲ್ಲಿ ನಾಟಿತು. ವಾಲಿಯು ನೆಲದಲ್ಲಿ ಬಿದ್ದುಬಿಟ್ಟನು.

ಇತ್ತ, ತಾರೆಗೆ ಈ ಸಮಾಚಾರವು ತಿಳಿಯಿತು. ಅವಳು ಶೋಕದಿಂದ ಕಣ್ಣೀರನ್ನು ಸುರಿಸುತ್ತ, ಕಿಷ್ಕಿಂಧೆಯಿಂದ ಹೊರಟು ಯುದ್ಧ ಭೂಮಿಗೆ ಬಂದಳು. ವಾಲಿಯು, ಬಾಣದ ಪೆಟ್ಟಿನಿಂದ ಕೆಳಗೆ ಬಿದ್ದು, ತನ್ನನ್ನು ಹಾಗೆ ಹೊಡೆದವರು ಯಾರು ಎಂದು ಕುತ್ತಿಗೆಯನ್ನು ಎತ್ತಿ ನೋಡುತ್ತಿದ್ದನು. ಮೇಲಕ್ಕೆ ಏಳುವುದಕ್ಕೆ ಆಗುತ್ತಿರಲಿಲ್ಲ. ಗಾಯದಿಂದ ಒಸರುವ ಕೆನ್ನೀರಿಂದ ಮೆಯ್ಯೆಲ್ಲಾ ಕೆಂಪಾಗಿದ್ದಿತು. ಬಿಲ್ಲನ್ನು ಹಿಡಿದು ತನ್ನ ಹತ್ತಿರ ನಿಂತಿದ್ದ ರಾಮನೊಂದಿಗೆ, ಅವನು ಮಾತನ್ನು ಆಡುತ್ತಿದ್ದನು.

ಈ ರೀತಿಯಿಂದಿದ್ದ ತನ್ನ ಗಂಡನನ್ನು ಅಪ್ಪಿಕೊಂಡು, ತಾರೆಯು, ಅವನ ತಲೆಯನ್ನು ತನ್ನ ತೊಡೆಯ ಮೇಲೆ ಇರಿಸಿಕೊಂಡು, ರಾಮನನ್ನು ನೋಡಿ, ಈ ಪರಿಯಿಂದ ಹೇಳತೊಡಗಿದಳು.

ರಾಮಾ, ನೀನು ಬಹುದಯಾಳುವಲ್ಲವೇ. ಕರುಣಾನಿಧಿಯೆಂದು ನಿನ್ನನ್ನು ಲೋಕವೇ ಕೊಂಡಾಡುತ್ತಿದೆಯಲ್ಲ. ಆ ದಯೆಯು ನನ್ನ ವಿಷಯದಲ್ಲಿ ಇಂಗಿಹೋಯಿತೇ? ನಾನು ಯಾವ ಪಾಪವನ್ನು ಮಾಡಿದ್ದೆನೋ? ನನ್ನ ಗಂಡನು ಈ ಸ್ಥಿತಿಯಲ್ಲಿ ಇರುವುದನ್ನು ನೋಡಿಯೂ ಬದುಕಿರುವ ನನ್ನನ್ನು, ರಾಕ್ಷಸಿಯೆಂದು ತಿಳಿದು ನೀನೇಕೆ ಹೊಡೆದು ಕೊಲ್ಲುವುದಿಲ್ಲ. ನನ್ನನ್ನು ಕೊಂದು ನನ್ನ ಗಂಡನೊಂದಿಗೆ ಸೇರಿಸು; ನಿನಗೆ ಪುಣ್ಯವು ಬರುತ್ತದೆ. ಅರಸರು ಬೇಟೆಯಾಡುವುದು ಉಂಟಲ್ಲವೇ. ನಾನು ಹೆಣ್ಣು ಕಪಿ; ನನ್ನನ್ನು ಏಕೆ ಕೊಲ್ಲಲೊಲ್ಲೆ. ಹೆಣ್ಣು ಕೋತಿಯೆಂದು ಬೇಡರು ಬಿಡುವುದುಂಟೇ?

ರಾಮಾ, ನಿನ್ನ ಗೆಳೆಯನಾದ ಸುಗ್ರೀವನು, ಋಷ್ಯಮೂಕಪರ್ವತದಲ್ಲಿ, ಭಯರಹಿತನಾಗಿ ಇದ್ದನು. ನನ್ನ ಗಂಡನು ಕೂಡ, ನನ್ನ ಹೃದಯವೆಂಬ ಗಿರಿದುರ್ಗದಲ್ಲಿ ವಾಸಮಾಡುತ್ತಿದ್ದಾನೆ; ನಿನ್ನ ಬಾಣವು ಆ ದುರ್ಗವನ್ನು ಭೇದಿಸಲಾರದು. ನನ್ನ ಎದೆಯು ವಜ್ರದ ಹಾಗೆ ಕಠಿಣವಾಗಿದೆ; ಅದನ್ನು ಬಾಣಗಳು ಒಡೆಯಲಾರವು.

ಎಂದು ಕಂಬನಿಗರೆಯುತ್ತ, ಬಹು ಪ್ರಕಾರವಾಗಿ ಪ್ರಲಾಪಿಸುತ್ತಿರುವ ತಾರೆಯನ್ನೂ, ಅವಳ ಒಡನಾಡಿಗಳನ್ನೂ ಕಂಡು, ಬುದ್ಧಿ

ತಿಳಿದವನಾಗಿ ವಾಲಿಯು ತನ್ನ ಮಗನಾದ ಅಂಗದನನ್ನು ರಾಮನಿಗೆ ಒಪ್ಪಿಸಿ, ತನ್ನ ಕುತ್ತಿಗೆಯಲ್ಲಿ ಇದ್ದ ಚಿನ್ನದ ಸರವನ್ನು ಸುಗ್ರೀವನ ಕೊರಲಿಗೆ ಹಾಕಿ, ಪ್ರಾಣಗಳನ್ನು ತೊರೆದನು.

ಬಳಿಕ ಅವನ ಆಶ್ರಿತರಾದ ಕಪಿಗಳೆಲ್ಲರೂ, ಹಾಹಾ! ಪರಾಕ್ರಮ ಶಾಲೀ, ವಾಲೀ, ರಾವಣನಂಥ ಬಲಶಾಲಿಯನ್ನು ಬಾಲದಿಂದ ಕಟ್ಟಿ ಹಾಕಿದ ನಿನ್ನ ಶಕ್ತಿಯು ಮೆತ್ತನಾಯಿತೇ? ಗೋಲಭನೆಂಬ ಗಂಧರ್ವ ನನ್ನು ಕೊಂದ ನಿನ್ನ ಬಲವು ಈಗ ಎಲ್ಲಿ ಹೋಯಿತು? ಅಯ್ಯೋ! ನಮಗೆ ಇನ್ನು ರಕ್ಷಕರಾರು? ಎಂದು ದಿಕ್ಕುಗೆಟ್ಟು ಮರುಗಿದರು. ರಾಮನು, ಅವರನ್ನೆಲ್ಲ ಸಂತೈಸಿ, ವಾಲಿಗೆ ಪ್ರೇತಕರ್ಮಗಳನ್ನು, ಯಥಾವಿಧಿಯಾಗಿ ಮಾಡಿಸಿದನು.

ಆಮೇಲೆ, ಸಕಲ ಕಪಿವೀರರೂ ಜಾಂಬವಂತನನ್ನು ಮುಂದಿಟ್ಟು ಕೊಂಡು, ಶ್ರೀರಾಮನ ಅಪ್ಪಣೆಯ ಮೇರೆಗೆ, ಸುಗ್ರೀವನಿಗೆ ಪಟ್ಟವನ್ನು ಕಟ್ಟಿದರು.

ಮಳೆಗಾಲವು ತಲೆದೋರಿತು. ಸುಗ್ರೀವನ ಪಟ್ಟಾಭಿಷೇಕ ಸಮಯದಲ್ಲಿ, ಕಿಷ್ಕಿಂಧಾ ಪಟ್ಟಣದೊಳಗೆ ಮಳೆಯು ಸುರಿಯಿತು. ರಾಜ ನಾದ ಬಳಿಕ, ಸುಗ್ರೀವನು, ರಾಮನನ್ನು ನೋಡಿ, ಸ್ವಾಮಿನ್, ಮಳೆ ಗಾಲವು ಕಳೆದ ತರುವಾಯ, ಸೀತೆಯನ್ನು ಹುಡುಕಿಸುತ್ತೇನೆ. ಅದು ವರೆಗೂ, ನೀವಿಬ್ಬರೂ ನಮ್ಮ ಊರಲ್ಲಿಯೇ ಇರಬೇಕು, ಎಂದು ಪ್ರಾರ್ಥನೆಮಾಡಿಕೊಂಡನು. ಆ ಮಾತಿಗೆ, ರಾಮನು, ಅಯ್ಯಾ ಸುಗ್ರೀವ, ಕೇಳು, ನಾನು ಊರಿಗೆ ಬರಕೂಡದು; ನಿನ್ನ ಮಾತನ್ನು ತೆಗೆದುಹಾಕಿದೆನೆಂದು ತಿಳಿಯಬೇಡ, ಎಂದು ಅವನನ್ನು ಸಮಾಧಾನ ಪಡಿಸಿದನು.

ಇತ್ತ, ಕಪ್ಪಾದ ಮೋಡಗಳು ಆಕಾಶದಲ್ಲಿ ಎತ್ತೆತ್ತಲೂ ದಟ್ಟವಾಗಿ ಕವಿದುಕೊಂಡುವು. ಗುಡುಗು ಘುಡುಘುಡಿಸುತ್ತಿದ್ದಿತು. ಅಡಿಗಡಿಗೆ, ಮಿಂಚು ಪಳಪಳನೆ, ಮುಗಿಲಲ್ಲಿ ಕಾಣಿಸುತ್ತಿದ್ದುವು. ಕರಿಯ ಮೋಡ ಗಳೆಂಬ ಎಲೆಗಳುಳ್ಳ, ಆಕಾಶವೆಂಬ ಆಲದ ಮರದಿಂದ, ನೆಲಕ್ಕೆ ಬೀಳಲು ಗಳು ಇಳಿದುಬರುತ್ತಿವೆಯೋ ಎಂಬಂತೆ, ಮಳೆಯು ಧಾರೆ ಧಾರೆಯಾಗಿ

ಸುರಿಯುತ್ತಿದ್ದಿತು. ಆಗ ರಾಮನು ಸೀತಾವಿಯೋಗವನ್ನು ಸಹಿಸಲಾರದೆ, ಲಕ್ಷ್ಮಣನನ್ನು ನೋಡಿ, ತಮ್ಮಾ, ಈ ಮಳೆಗಾಲದಲ್ಲಿ, ನವಿಲುಗಳು ಗರಿಗಳನ್ನು ಕೆದರಿಕೊಂಡು ಕೇಕೆಹಾಕುತ್ತ ಕುಣಿಯುತ್ತಿವೆ. ನದಿಗಳು ತುಂಬಿ ಹರಿಯುತ್ತಿವೆ. ದಡದಲ್ಲಿರುವ ಕದಂಬ ಮರದಿಂದ, ಹೂಗಳು ನೀರಲ್ಲಿ ಬಿದ್ದು, ಕೊಚ್ಚಿಕೊಂಡು ಹೋಗುತ್ತಿವೆ. ನೋಡು ಲಕ್ಷ್ಮಣಾ, ಈ ಮೋಡಗಳು, ಸಮುದ್ರದ ನೀರನ್ನು ಕುಡಿಯುವಾಗ ಸಮುದ್ರದ ಬೆಂಕಿಯೂ ತಮ್ಮ ಹೊಟ್ಟೆಗೆ ಸೇರಲಾಗಿ, ಹೊಟ್ಟೆಯುರಿಯಿಂದ ಕಂಗೆಟ್ಟು, ಆ ಬೆಂಕಿಯನ್ನು ಕಕ್ಕುತ್ತಿವೆಯೋ ಎಂಬಂತೆ, ಮಿಂಚು ಹಾಳಿಸುತ್ತಿದೆ. ಈ ಸಮಯದಲ್ಲಿ, ಸೀತೆಯಿಲ್ಲದಿರುವುದರಿಂದ, ನನ್ನ ಮನಸ್ಸು ತುಂಬ ತಳಮಳಗುಟ್ಟುತ್ತಿದೆ, ಎಂದು ಹೇಳುತ್ತ, ಲಕ್ಷ್ಮಣನ ಕಾಲೋಚಿತವಾದ ಮಾತಿನಿಂದ ಧೈರ್ಯಗೊಂಡು, ಆ ವರ್ಷಾಕಾಲವನ್ನು ಬಹುಪ್ರಯಾಸದಿಂದ ಕಳೆದನು.

ಮಳೆಯು ನಿಂತಿತು. ಮೋಡಗಳು ಬೆಳ್ಳಗಾದುವು. ಮಿಂಚಿನ ಸುಳಿವೇ ಇಲ್ಲ. ಗುಡುಗಿನ ಆಡಂಬರವು ಶಾಂತವಾಯಿತು. ನದಿಯಲ್ಲಿ ಬಂದಿದ್ದ ಪ್ರವಾಹವು ಇಳಿದುಹೋಯಿತು. ಅರಸರು ಜೈತ್ರಯಾತ್ರೆಗಾಗಿ ಹೊರಡುವುದಕ್ಕೆ ಅನುಕೂಲಕಾಲವು ತಲೆದೋರಿತು.

ಇತ್ತ, ಸುಗ್ರೀವನು ಅರಸುತನದ ಬಿಂಕದಿಂದಲೂ, ಹೆಂಗಳೊಡನಿರುವ ಆಸೆಯಿಂದಲೂ, ಸದಾ ಅಂತಃಪುರದಲ್ಲಿರುತ್ತ, ರಾಮನ ಕಾರ್ಯವನ್ನು ನೆರವೇರಿಸುವ ಪ್ರಯತ್ನವನ್ನೇ ಮಾಡಲಿಲ್ಲ. ಮಳೆಗಾಲವು ಕಳೆದುಹೋದರೂ, ಸುಗ್ರೀವನು ವಿಷಯಸುಖಾನುಭವದಿಂದ ಮೈಮರೆತಿರುವುದನ್ನು ಕಂಡು, ಶ್ರೀರಾಮನು, ಅವನಿಗೆ ಎಚ್ಚರಿಕೆಯನ್ನು ಕೊಡು, ಎಂದು ಲಕ್ಷ್ಮಣನನ್ನು ಕಳುಹಿದನು. ಲಕ್ಷ್ಮಣನು, ಸುಗ್ರೀವನ ತಾಮಸದಿಂದ ಕೋಪಗೊಂಡು, ಚಾಪಬಾಣಪಾಣಿಯಾಗಿ, ಕಿಷ್ಕಿಂಧೆಗೆ ಬಂದು, ಧನುಷ್ಟಂಕಾರಮಾಡಿದನು. ಲಕ್ಷ್ಮಣನ ಕೋಪೋದ್ದೀಪಿತವಾದ ಮುಖವನ್ನು ಕಂಡು, ಅವನ ಚಾಪಧ್ವನಿಯನ್ನು ಕೇಳಿ, ಕಪಿಗಳು ಕಂಗೆಟ್ಟರು. ಪ್ಲಕ್ಷ ಪ್ರಭಾಸರೆಂಬ ಸುಗ್ರೀವನ ಆಪ್ತ ಮಂತ್ರಿಗಳು, ಅರಸನನ್ನು ಎಚ್ಚರಿಸಿದರು. ಲಕ್ಷ್ಮಣನ ಕೋಪವನ್ನು


ಉಪಶಮಿಸುವುದಕ್ಕಾಗಿ, ಸುಗ್ರೀವನು ಜಾಣೆಯಾದ ತಾರೆಯನ್ನು ಕಳುಹಿದನು. ಅವಳು, ಲಕ್ಷ್ಮಣನಿಗೆ ಸಮಾಧಾನೋಕ್ತಿಗಳನ್ನು ಹೇಳಿದಳು. ಲಕ್ಷ್ಮಣನ ಮುಳಿಸು ಇಳಿದುಹೋಯಿತು.

ತರುವಾಯ ಸುಗ್ರೀವನು, ಲಕ್ಷ್ಮಣನೊಡನೆ ಶ್ರೀರಾಮನ ಬಳಿಗೆ ಬಂದು, ದೇವ, ಸಕಲ ಪರ್ವತಗಳಲ್ಲಿಯೂ ವಾಸಮಾಡುತ್ತಿರುವ ಕಪಿವೀರರನ್ನು, ಆಂಜನೇಯನು ಕರೆದು ತಂದಿರುತ್ತಾನೆ. ಆ ಪಡೆಯನ್ನು ಕೊಂಡು, ನೀನು ಬೇಗನೆ, ಸೀತಾಪಹಾರಿಯಾದ ರಾವಣನನ್ನು, ರಣದಲ್ಲಿ ಹೆಣಸಾಗಿಸಬಹುದು, ಎಂದು ವಿನಯದಿಂದ ವಿಜ್ಞಾಪನೆಮಾಡಿ, ಸೀತೆಯಿರುವೆಡೆಯನ್ನು ತಿಳಿದು ಬರುವುದಕ್ಕಾಗಿ, ಪೂರ್ವದಿಕ್ಕಿಗೆ ವಿನತನೆಂಬ ಕಪಿನಾಯಕನನ್ನೂ, ದಕ್ಷಿಣಕ್ಕೆ ಆಂಜನೇಯನನ್ನೂ, ಪಶ್ಚಿಮಕ್ಕೆ ಸುಷೇಣನನ್ನೂ, ಉತ್ತರಕ್ಕೆ ಶತಬಲಿಯನ್ನೂ ಕಳುಹಿಸಿದನು. ಅವರನ್ನು ಕಳುಹುವಾಗ, ಸುಗ್ರೀವನು, ಒಂದು ತಿಂಗಳೊಳಗೆ ನೀವು ಹೋದ ಕಾರ್ಯವನ್ನು ಮಾಡಿಕೊಂಡು ಬರಬೇಕು; ತಳುವಿದರೆ, ನಿಮ್ಮ ಜೀವವು ಉಳಿಯದು, ಎಂದು ಕಟ್ಟಪ್ಪಣೆಮಾಡಿದನು.

ಇತ್ತ, ಪೂರ್ವಪಶ್ಚಿಮೋತ್ತರದಿಕ್ಕುಗಳಿಗೆ, ಸೀತಾನ್ವೇಷಣಕ್ಕೋಸುಗ ಹೋಗಿದ್ದವರು, ತಿಂಗಳೊಳಗಾಗಿ ಸುಗ್ರೀವನ ಬಳಿಗೆ ಬಂದು, ನಮಗೆ ಸೀತೆಯ ನೆಲೆಯು ದೊರೆಯಲಿಲ್ಲ, ಎಂದು ಹೇಳಿಬಿಟ್ಟರು. ತೆಂಕಕಡೆ ಪಯಣಮಾಡಿದ ಹನುಮಜ್ಜಾಂಬವದಂಗದ ನಳನೀಲಾದಿ ಕಪಿವೀರರು, ಸೀತೆಯ ಸಮಾಚಾರವನ್ನು ತಿಳಿಯದೆ, ಮಗನು ಸತ್ತ ಕೋಪದಿಂದ ಸಕಲ ಚರಾಚರಗಳನ್ನೂ ಹಾಳುಮಾಡಿದ ಕಂಡುಮುನಿಯ ಕಾಡನ್ನು ದಾಟಿ, ಬೆಟ್ಟಗುಡ್ಡಗಳಲ್ಲಿ ತೊಳಲಿ, ಬಳಲಿ, ನೀರಡಿಕೆಯಿಂದ ಬೆಂಡಾಗಿ, ಅಂಗದನ ಅಭಿಲಾಷೆಯಂತೆ, ಜಲಪಕ್ಷಿಗಳು ಬರುತ್ತಿದ್ದ ಒಂದು ಬಿಲವನ್ನು ಹೊಕ್ಕರು. ಅದು ಅವರನ್ನು ಸ್ವಯಂಪ್ರಭೆಯೆಂಬವಳ ಗುಹೆಗೆ ಕೊಂಡುಹೋಯಿತು. ಅವರಿಗೆಲ್ಲ, ಸ್ವಯಂಪ್ರಭೆಯು ಸತ್ಕಾರಮಾಡಿ, ಬಳಿಕ ಎಲ್ಲರನ್ನೂ ಬಿಲದಿಂದ ಹೊರಗೆ ತಂದುಬಿಟ್ಟಳು. ತರುವಾಯ ಅವರೆಲ್ಲರೂ ನಮಗೆ ನಿಗುದಿಯಾಗಿದ್ದ ಒಂದು ತಿಂಗಳು ಮುಗಿದುಹೋಯಿತು; ನಾವು

ಊರಿಗೆ ಹೋದರೆ, ಸುಗ್ರೀವನು ನಮಗೆ ಕ್ರೂರವಾದ ದಂಡವನ್ನು ವಿಧಿಸುತ್ತಾನೆ. ನಾವೆಲ್ಲರೂ ಇಲ್ಲಿಯೇ ನಿರಾಹಾರಮಾಡಿ ಪ್ರಾಣಗಳನ್ನು ಬಿಡೋಣ, ಎಂದು ನಿಶ್ಚಯಿಸಿ, ಎಲ್ಲರೂ ರಾಮನ ವೃತ್ತಾಂತವನ್ನು ಹೇಳಿಕೊಂಡು, ರೋದಿಸುತ್ತಿದ್ದರು. ಅವರು ರಾಮವೃತ್ತಾಂತವನ್ನು ಹೇಳುವಾಗ, ಜಟಾಯುವೆಂಬ ಗೃಧ್ರನು ಸತ್ತ ಸುದ್ದಿಯಿರಲು, ಅದನ್ನು ಕೇಳಿ, ಆ ವಿಂಧ್ಯಪರ್ವತದಲ್ಲಿ ಇದ್ದ ಸಂಪಾತಿಯು ಹೊರಗೆ ಬಂದು, ಕಪಿವೀರರನ್ನು ನೋಡಿ, ನೀವು ಯಾರು? ಬಲಶಾಲಿಯಾದ ಜಟಾಯುವು ಸತ್ತನೆಂದು ಹೇಳುತ್ತಿದ್ದೀರಿ, ಎಂದು ಕೇಳಿದನು. ಅವರು, ನಡೆದ ವಿಷಯವನ್ನು ವಿವರಿಸಿದರು. ಆಗ, ಸಂಪಾತಿಯು ಜಟಾಯುವಿಗೆ ತಿಲೋದಕವನ್ನು ಕೊಟ್ಟು, ಅವರನ್ನು ನೋಡಿ, ಎಲೈ ವೀರರೇ ಹಿಂದೆ, ಒಂದು ದಿನ, ಆಹಾರವನ್ನು ತರುವುದಕ್ಕೋಸ್ಕರ ನಾನು ನನ್ನ ಮಗ ಸುಪಾರ್ಶ್ವನನ್ನು ಕಳುಹಿಸಿದ್ದೆನು. ವಿಂಧ್ಯಪರ್ವತದ ರಂಧ್ರದಿಂದ ರಾವಣನು ಸೀತೆಯನ್ನು ಕದ್ದುಕೊಂಡುಯ್ಯುತಿದ್ದನು, ಸೀತೆಯು ಅಳುತ್ತಿದ್ದಳು, ಎಂದು ಅವನು ನನಗೆ ಹೇಳಿದನು. ನೀವೇಕೆ ಹೀಗೆ ಎದೆಗೆಟ್ಟು ಅಳುತ್ತಿದ್ದೀರಿ? ಸೀತೆಯು ಲಂಕೆಯಲ್ಲಿ ಇದ್ದಾಳೆ. ನೀವು ಅಲ್ಲಿಗೆ ಹೋಗಿರಿ. ಎಲೈ ಧೈರ್ಯಶಾಲಿಗಳಿರಾ, ಕೇಳಿರಿ. ನಾನು, ಸೂರ್ಯತೇಜಸ್ಸಿನಿಂದ ಗರಿಗಳು ಸೀದು ಕೆಳಗೆ ಬಿದ್ದಾಗ, ನಿಶಾಕರನೆಂಬ ಮುನಿಯು, ನನ್ನ ಸಂಕಟವನ್ನು ಕಂಡು ಮರುಕಗೊಂಡು, ಎಲೈ ಗೃಧ್ರನೇ, ಮುಂದೆ ಇಲ್ಲಿಗೆ ರಾಮನ ಹೆಂಡತಿಯಾದ ಸೀತೆಯನ್ನು ಹುಡುಕಿಕೊಂಡು ಕಪಿವೀರರು ಬರುವರು. ಅವರಿಗೆ ಜಾನಕಿಯ ಸುದ್ದಿಯನ್ನು ನೀನು ತಿಳಿಸು; ಆಗ ನಿನ್ನ ಸೀದು ಹೋಗಿರುವ ಗರಿಗಳು ಎಂದಿನಂತೆ ಆಗುವುವು, ಎಂದು ಹೇಳಿದ್ದನು. ಆ ಮುನೀಶ್ವರನ ಮಾತು ಸಟೆಯಾಗದು; ನೀವು ರಾಮಪತ್ನಿಯನ್ನು ಕಂಡೀರಿ, ಎಂದು ಧೈರ್ಯವನ್ನು ಹೇಳಿದನು.

ಈ ಮೇರೆಗೆ, ಸ್ನೇಹಪೂರ್ವಕವಾಗಿ ಹೇಳಿದ ಸಂಪಾತಿಯ ಮಾತನ್ನು ಕೇಳಿ, ಮಹಾಪರಾಕ್ರಮಶಾಲಿಗಳಾದ ಅಂಗದನೇ ಮುಂತಾದ ಕಪಿವೀರರು, ಸೀತೆಯ ಸುದ್ದಿಯನ್ನು ತಿಳಿದು, ಹಿಡಿಯ



ಲಾರದಷ್ಟು ಆನಂದದಿಂದ ಕೂಡಿದವರಾಗಿ, ಸಂಪಾತಿಯು ಹೇಳಿದ ಹಾದಿಯಲ್ಲಿ, ಲಂಕಾಪಟ್ಟಣವನ್ನು ಹುಡುಕಿಕೊಂಡು ಹೊರಟರು. ಅವರ ಹಾದಿಯನ್ನು ವಿಶಾಲವಾದ ಸಮುದ್ರವು ತಡೆಯಿತು. ಅದನ್ನು ಕಂಡು ಕಪಿವೀರರು, ಎದೆಗೆಟ್ಟವರಾಗಿ, ಅಹಹಾ! ರಾಮ ಬಾಣವು ಅಮೋಘವಾದುದು; ಈ ಸಾಗರವು ಅಪಾರವಾದುದು. ಈಗ, ನಾವು ಏನ ಮಾಡುವುದು? ಎಂದು ಜೋಲುಮೊಗವನ್ನು ಮಾಡಿಕೊಂಡು ಮಾತಾಡದೆ ಕುಳಿತುಬಿಟ್ಟರು.

ಹೀಗೆ, ತಲೆತಗ್ಗಿಸಿಕೊಂಡು ಮಾತಾಡದೆ ಕುಳಿತ ಕಪಿವೀರರನ್ನು ನೋಡಿ, ಅಂಗದನು, ಎಲೈ ಅಭಿಮಾನಶಾಲಿಗಳಾದ ವೀರರಿರಾ, ಏಕೆ ಹೀಗೆ ಮಾತನಾಡದೆ ಸುಮ್ಮನೆ ಕುಳಿತಿದ್ದೀರಿ? ಈ ಸಾಗರವನ್ನು ಹೇಗೆ ದಾಟುವುದು, ಎಂದು ಅಂಜಿದಿರಾ? ನಿಮ್ಮ ಪೌರುಷವು ಏನಾಯಿತು? ಇದನ್ನು ದಾಟಿ, ಹಿಡಿದ ಕೆಲಸವನ್ನು ಮಾಡಿಕೊಂಡು ಬಾರದಿದ್ದರೆ, ನಿಮಗೆ ಅಪಕೀರ್ತಿಯು ತಟ್ಟುವುದಿಲ್ಲವೇ? ಆಗ, ಆ ಅಪಕೀರ್ತಿಯೆಂಬ ಕಡಲನ್ನು ನೀವು ಹೇಗೆತಾನೇ ದಾಟಲಾಪಿರಿ? ಎಂದು ಮೂದಲಿಸಿದನು. ಆಗ, ಗಜಗವಯಗವಾಕ್ಷಾದಿ ವೀರರು, ತಮ್ಮ ತಮ್ಮ ಹಾರುವ ಶಕ್ತಿಯನ್ನು ಒಕ್ಕಣಿಸಿದರು. ಬಳಿಕ, ಜಾಂಬವಂತನು, ಹನುಮಂತನನ್ನು ಅವರಿಗೆ ತೋರಿಸುತ್ತ, ಎಲೈ ಸೇನಾಪತಿಗಳಿರಾ, ಮುಂದೆ ಕಾರ್ಯವನ್ನು ಸಾಧಿಸುವುದಕ್ಕೆ ಆಗದ ನಿಮ್ಮ ಶಕ್ತಿಯನ್ನು ಹೇಳಿಕೊಳ್ಳುವುದರಿಂದ ಉಪಯೋಗವಿಲ್ಲ. ಸುಗ್ರೀವನ ಆಜ್ಞೆಯನ್ನು ಈತನು ಮನಸ್ಸಿಗೆ ತೆಗೆದುಕೊಂಡನಾದರೆ, ಈ ಸಮುದ್ರವನ್ನು ಮೇಕೆಯ ಪಾಟಿನೋಪಾದಿಯಲ್ಲಿ ಹಾರಬಲ್ಲನು; ಈತನು ಇನ್ನೂ ಕೂಸಾಗಿರುವಾಗಲೇ, ಆಗತಾನೇ ಹುಟ್ಟಿದ ಸೂರ್ಯನನ್ನು ಹಣ್ಣೆಂದು ತಿಳಿದು, ಹಿಡಿಯಲಿಕ್ಕೆ ನೆಗೆದನು. ಆಗ ಇಂದ್ರನು ಕೋಪದಿಂದ ಇವನ ಕಪಾಲಕ್ಕೆ ಹೊಡೆದನು. ನನ್ನ ಮಗನನ್ನು ಹೀಗೆ ಹೊಡೆದನಲ್ಲ, ಎಂದು ಮುಳಿದು, ವಾಯುವು ಎಲ್ಲಿಯೋ ಅಡಗಿಕೊಂಡನು. ಅದರಿಂದ, ಪ್ರಪಂಚವು ಉಳಿಯುವುದಕ್ಕೇ ಆಗಲಿಲ್ಲ. ಅದನ್ನು ಕಂಡು, ಬ್ರಹ್ಮನು ಬಂದು, ವಾಯುವಿನ ಸಂತೋಷಕ್ಕಾಗಿ ಇವನಿಗೆ ದೀರ್ಘಾಯುಸ್ಸನ್ನೂ,

ಬ್ರಹ್ಮಾಸ್ತ್ರಾದಿ ಬಾಣಗಳಿಂದ ಸಾಯದಿರುವ ವರವನ್ನೂ ಕೊಟ್ಟನು. ಬಾಲ್ಯದಲ್ಲಿಯೇ, ಅನೇಕ ಯೋಜನದೂರವಿರುವ ಸೂರ್ಯಮಂಡಲದ ಬಳಿಗೆ ನೆಗೆದ ಇವನಿಗೆ, ಅಲ್ಪದೂರವಾದ ಈ ಸಮುದ್ರವು ಯಾವ ಲೆಕ್ಕ? ಎಂದು ಆಂಜನೇಯನನ್ನು ಸ್ತೋತ್ರಮಾಡಿ ಉಬ್ಬಿಸಿದನು.

ಈ ಪ್ರಕಾರವಾಗಿ, ಜಾಂಬವನು ತನ್ನ ಶಕ್ತಿಯನ್ನು ವಿಶೇಷವಾಗಿ ಪ್ರಶಂಸೆಮಾಡಲು, ವಾಮನನು ತ್ರಿವಿಕ್ರಮನಾಗಿ ಬಳೆದ ರೀತಿಯಲ್ಲಿ, ಹನುಮಂತನು ತನ್ನ ಶರೀರವನ್ನು ದೊಡ್ಡದಾಗಿ ಮಾಡಿಕೊಂಡು, ಮಹೇಂದ್ರಪರ್ವತವನ್ನು ಏರಿ, ತನ್ನ ಹತ್ತಿರವಿದ್ದ ಅಂಗದಾದಿ ಸೇನಾಪತಿಗಳನ್ನು ಯಥೋಚಿತವಾಗಿ ಮನ್ನಿಸಿ, ಸಮುದ್ರವನ್ನು ದಾಟುವುದಕ್ಕೆ ಅಣಿಯಾದನು.

ಎಂಬಲ್ಲಿಗೆ ರಾಮಾಯಣ ಸಂಗ್ರಹದಲ್ಲಿ ಕಿಷ್ಕಿಂಧಾಕಾಂಡವು.

ಸುಂದರಕಾಂಡ

ಬಳಿಕ ಹನುಮಂತನು, ರಾವಣನಿಂದ ಒಯ್ಯಲ್ಪಟ್ಟ ಸೀತೆಯನ್ನು ಹುಡುಕುವುದಕ್ಕಾಗಿ, ಮಹೇಂದ್ರಪರ್ವತದಿಂದ ಬಹುವೇಗವಾಗಿ ಆಕಾಶಕ್ಕೆ ಹಾರಿದನು. ಹಾರುವುದಕ್ಕಾಗಿ ಚೆನ್ನಾಗಿ ಊರಿದ ಅವನ ಕೈಕಾಲುಗಳ ಭಾರವನ್ನು ತಡೆಯಲಾರದೆ, ಸದಾ ಹರಿಯುತ್ತಿರುವ ಬೆಟ್ಟದ ಹೊಳೆಗಳಿಂದ, ಆ ಮಹೇಂದ್ರಗಿರಿಯು, ಕಣ್ಬನಿಗಳನ್ನು ಸುರಿಸುತ್ತಿರುವಂತೆ ಕಾಣಿಸಿತು. ಅಂಜಿಕೆಯಿಂದ ಓಡುತ್ತಿರುವ ಜಿಂಕೆಗಳ ಗೊರಸಿನ ಹೊಡೆತದಿಂದ ಹುಡಿಯೆದ್ದ ಕೆಂಗಾವಿಯ ದೂಳಿಂದ ಮುಚ್ಚಲ್ಪಟ್ಟು, ಬೆಟ್ಟವು ನೆತ್ತರನ್ನು ಕಾರುವಂತೆ ತೋರಿತು. ಆಂಜನೇಯನ ಮೆಯ್ಯ ಭಾರದಿಂದ ಬಿದ್ದ ಗುಂಡುಕಲ್ಲುಗಳಿಂದ ಮುರಿದು ಬಿದ್ದ ಬೊಂಬುಗಳ ಸಂದಿನಲ್ಲಿ ಗಾಳಿಯು ತೂರಿ, ಸುಯ್ಯೆಂದು ಸದ್ದಾಗುತ್ತಿರಲು, ಪರ್ವತವು ಮೇಲುಸಿರನ್ನು ಬಿಡುವಂತೆ ಬೋಧೆಯಾಯಿತು. ಹೀಗೆ ಹಾರಿದ ಹನುಮಂತನ ವೇಗದಿಂದ, ಬೆಟ್ಟದಲ್ಲಿದ್ದ ಮರಗಳು ಬೇರೊಡನೆ ಕಿತ್ತುಹೋಗಿ, ತೊಪ್ಪತೊಪ್ಪನೆ ಕಡಲಲ್ಲಿ ಬಿದ್ದು, ಮುಂದೆ ಸೇತುವನ್ನು ಕಟ್ಟುವುದಕ್ಕಾಗಿ ನಟ್ಟಿರುವ ಗೂಟಗಳೋ, ಎಂಬಂತೆ ಇದ್ದುವು. ವೇಗದಿಂದ ಮುಂದುವರಿಯುತ್ತಿದ್ದ ಆಂಜನೇಯನನ್ನು ಸತ್ಕರಿಸಬೇಕೆಂದು, ಸಮುದ್ರಮಧ್ಯದಿಂದ ಮೈನಾಕನೆಂಬ ಬೆಟ್ಟವು ಮೇಲಕ್ಕೆ ಎದ್ದಿತು. ಅದನ್ನು ಕಂಡು ಮಾರುತಿಯು, ಇದಾವುದೋ ನಮ್ಮ ಹಾದಿಯನ್ನು ತಡೆಯುತ್ತಿದೆಯೆಂದು, ಅದನ್ನು ತನ್ನ ಎದೆಯಿಂದ ಕೆಳಗೆ ತಳ್ಳಿ, ಸರ್ರನೆ ಮುಂದೆ ಹೋದನು.

ಹಾಗೆ ಮುಂದುವರಿಯುತ್ತಿದ್ದ ಕಪಿವೀರನನ್ನು ಕಂಡು, ಮೈನಾಕನು, ಸವಿನುಡಿಗಳಿಂದ ಸಂತಯಿಸಿ, ಎಲೈ ಮಹಾನುಭಾವ, ನಿನ್ನ ಪ್ರಯಾಣದ ದಣಿವನ್ನು ಆರಿಸಬೇಕೆಂದು ನನ್ನನ್ನು ಸಮುದ್ರನು ಕಳುಹಿಸಿ ಇದ್ದಾನೆ; ನೀನು ಕೃಪೆಮಾಡಿ ನನ್ನಲ್ಲಿ ವಿಶ್ರಮಿಸಿಕೊಂಡು, ಮುಂದೆ ಪ್ರಯಾಣಮಾಡು; ನಿನ್ನ ತಂದೆಯಾದ ವಾಯುವು, ನನ್ನನ್ನು ಇಂದ್ರನ ಭೀತಿಯಿಂದ ಕಾಪಿಟ್ಟಿದ್ದಾನೆ. ಆ ಉಪಕಾರವನ್ನು ನೆನೆದು,

ಅವನ ಮಗನಾದ ನಿನ್ನನ್ನು ನಾನು ಉಪಚರಿಸಬೇಕೆಂದು ಬಂದಿದ್ದೇನೆ; ನನ್ನ ಉಪಚಾರವನ್ನು ಸ್ವೀಕರಿಸು, ಎಂದು ಕೇಳಿಕೊಂಡನು. ಈ ಪರಿಯಿಂದ ಬೇಡಿದ ಮೈನಾಕನನ್ನು ನೋಡಿ, ಹನುಮಂತನು, ಅಪ್ಪಾ, ನಾನು ಈಗ ನಿಲ್ಲುವುದಕ್ಕಾಗುವುದಿಲ್ಲ; ಕಾರ್ಯವಶದಿಂದ ಬೇಗ ಹೊರಡಬೇಕಾಗಿದೆ. ನಿನ್ನ ಮಾತನ್ನು ನಡೆಸಲಿಲ್ಲವೆಂದು, ನೀನು ಅನ್ಯಥಾ ತಿಳಿಯಕೂಡದು, ಎಂದು ಉಪಚಾರವನ್ನು ಹೇಳಿ, ಬಹುವೇಗವಾಗಿ ಹೊರಟನು.

ಹೀಗೆ, ವೇಗವಾಗಿ ಲಂಕಾಪುರದ ಕಡೆಗೆ ಧಾವಿಸುತ್ತಿದ್ದ ಹನುಮಂತನನ್ನು ನಾಗಮಾತೆಯಾದ ಸುರಸೆಯೆಂಬವಳು ತಡೆದಳು. ಅವಳನ್ನು ಜಯಿಸಿ ಮುಂದೆ ಹೊರಡಬೇಕೆಂದು, ಹನುಮಂತನು ತನ್ನ ಮೈಯ್ಯನ್ನು ಬಲು ದೊಡ್ಡದಾಗಿ ಮಾಡಿಕೊಂಡನು. ಸುರಸೆಯು ಅವನನ್ನು ನುಂಗುವುದಕ್ಕೆ ತನ್ನ ಬಾಯನ್ನು ವಿಶಾಲವಾಗಿ ತೆರೆದಳು. ಹನುಮಂತನು ಬಲು ಜಾಣ; ಇವಳನ್ನು ತಂತ್ರದಿಂದ ಗೆಲ್ಲಬೇಕೆಂದು ತನ್ನ ದೇಹವನ್ನು ತುಂಬ ಕಿರಿದುಮಾಡಿಕೊಂಡು, ಅವನು ಅವಳ ಬಾಯನ್ನು ಹೊಕ್ಕನು. ಮರಳಿ ಅವಳು ಬಾಯ ಮುಚ್ಚುವುದರೊಳಗಾಗಿ, ಈಚೆಗೆ ಬಂದು, ಅವನು ಮುಂದೆ ಪಯಣಮಾಡುತ್ತ, ತನ್ನ ಹಾದಿಯನ್ನು ತಡೆದ ಸಿಂಹಿಕೆಯೆಂಬ ರಾಹುವಿನ ತಾಯನ್ನು, ಉಗುರುಗಳಿಂದ ಸೀಳಿ ಕೊಂದು, ಬಹುವೇಗದಿಂದ ಮುಂಬರಿದನು. ಹನುಮಂತನು, ವಾಯು ವೇಗದಿಂದ ಮುಂದುವರಿಯುತ್ತ, ಸಮುದ್ರದ ಆಚೆಯ ತೀರದಲ್ಲಿರುವ ಲಂಬಪರ್ವತವನ್ನು ಸೇರಿ, ತನ್ನನ್ನು ಒಬ್ಬರೂ ಕಾಣದಂತೆ ಶರೀರವನ್ನು ಕಿರಿದುಮಾಡಿಕೊಂಡು, ಲಂಕಾಪುರದ ಉತ್ತರದಿಕ್ಕಿನ ಅಗಸೆಯ ಬಾಗಿಲ ಬಳಿಗೆ ಬಂದು, ಈಪೂರೊಳಗೆ ಹುಗುವುದು ಹೇಗೆ? ಎಂದು ಆಲೋಚನೆಯನ್ನು ಮಾಡುತ್ತಿದ್ದನು.

ಹೀಗೆ ಚಿಂತಿಸುತ್ತ ಸುಮ್ಮನೆ ಕುಳಿತರೆ, ಬಂದ ಕಾರ್ಯವು ಹೇಗೆ ಆದೀತು? ಎಂದು ಮನಸ್ಸಿಗೆ ತಂದುಕೊಂಡು, ವಾಯುಪುತ್ರನು ಕತ್ತಲಲ್ಲಿ ಊರನ್ನು ಹುಗಬೇಕೆಂದು ನಿಶ್ಚಯಿಸಿ, ಹೊತ್ತು ಮುಳುಗುವುದನ್ನೇ ಕಾಯುತ್ತ ಕುಳಿತಿದ್ದನು.

ಆಗ, ಪಶ್ಚಿಮಪರ್ವತದ ಅಡವಿಯಲ್ಲಿ ಕಾಡಕಿಚ್ಚು ಹುಟ್ಟಿ, ಅದರ ಕಾಂತಿಯಿಂದ ಆಕಾಶವೆಲ್ಲ ಕೆಂಪಾಯಿತೋ? ಸಮೀಪದಲ್ಲಿ ಮುಳುಗುತ್ತಿರುವ ಸೂರ್ಯನ ಕಿರಣಗಳು, ಸೂರ್ಯಕಾಂತಶಿಲೆಗಳ ಮೇಲೆ ಬಿದ್ದು, ಅದರಿಂದ ಹೊರಟ ತೇಜೋರಾಜಿಯಿಂದ ಅಂತರಿಕ್ಷವು ಪಾಟಲ ವರ್ಣವನ್ನು ತಾಳಿತೋ? ಪಶ್ಚಿಮಸಾಗರದ ಬಡಬಾಗ್ನಿಯು ಆಕಾಶ ಗಂಗೆಯ ನೀರಿನ ಸವಿಯನ್ನು ನೋಡಬೇಕೆಂದು ಮೇಲಕ್ಕೆ ಎದ್ದುದರಿಂದ, ಹೀಗೆ ಗಗನದಲ್ಲಿ ಕೆಂಪುಬಣ್ಣವು ತಲೆದೋರಿತೋ? ಎಂಬಂತೆ, ಪಡುಗಡೆಯಲ್ಲಿ ಆಕಾಶವು ಕೆಚ್ಚನಾಯಿತು; ಅರಳುವ ಕನ್ನೆಯ್ದಿಲೆಗಳ ವಾಸನೆಯೊಡನೆ, ಸಂಜೆಯ ಗಾಳಿಯು ಮೆಲ್ಲಮೆಲ್ಲನೆ ಬೀಸುತ್ತಿದ್ದಿತು. ಕತ್ತಲು ಎತ್ತೆತ್ತಲೂ ಕವಿಯುತ್ತ ಬಂದಿತು. ಆಕಾಶದಲ್ಲಿ ನಕ್ಷತ್ರಗಳು ಮೂಡಿದುವು. ಕೂಡಲೇ ಚಂದ್ರೋದಯವಾಯಿತು. ಕವಿದಿದ್ದ ಕಾವಳವೆಲ್ಲವೂ ಮಾಯವಾಗಿ ಹೋಯಿತು.

ಆ ರಾತ್ರಿಯಲ್ಲಿ, ಹೊರಗಣ ಜನರಾರೂ ಒಳಹುಗುವುದಕ್ಕೆ ಆಗದಿದ್ದ ಲಂಕಾನಗರವನ್ನು ಪ್ರವೇಶಿಸಬೇಕೆಂದು ಹನುಮಂತನು ಪ್ರಯತ್ನಿಸಿದನು. ಆಪುರದ ಹೆಬ್ಬಾಗಿಲಲ್ಲಿ ಕಾವಲಿದ್ದ ಲಂಖಿಣಿಯೆಂಬ ಹೆಂಗುಸು, ಅವನನ್ನು ಒಳಗೆ ಬಿಡದೆ ತಡೆದುಬಿಟ್ಟಳು. ಹನುಮಂತನಿಗೆ ಬಹುಕೋಪವು ಬಂದಿತು. ಅವನು ಲಂಖಿಣಿಯನ್ನು ಚೆನ್ನಾಗಿ ಗುದ್ದಿ, ನೆಲಕ್ಕೆ ಕೆಡವಿಬಿಟ್ಟನು.

ಹೀಗೆ, ಕಪಿಯಿಂದ ಪರಾಜಿತೆಯಾದ ಲಂಖಿಣಿಯು, ಮಾರುತಿಯನ್ನು ನೋಡಿ, ಎಲೈ ಕಪೀಶ್ವರ, ನೀನು ಎಂದು ಒಬ್ಬ ಕಪಿಯಿಂದ ಪರಾಜಿತೆಯಾಗುತ್ತೀಯೋ, ಅಂದಿನಿಂದ ಲಂಕೆಯು ಹಾಳಾಗಿಹೋಗುವುದು, ಎಂದು ನನಗೆ ಬ್ರಹ್ಮದೇವನು ಹೇಳಿದ್ದನು. ಇನ್ನು, ಲಂಕೆಯು ಉಳಿಯುವುದಿಲ್ಲ. ನೀನು ನಿನ್ನ ಕಾರ್ಯವನ್ನು ಸಾಧಿಸಿಕೊಳ್ಳುವನಾಗು, ಎಂದು ಹೇಳಿ, ಅವನನ್ನು ಪಟ್ಟಣದ ಒಳಗೆ ಬಿಟ್ಟಳು. ಬಳಿಕ ಹನುಮಂತನು, ಯಾವ ತಡೆಯೂ ಇಲ್ಲದಂತೆ, ಊರಲ್ಲೆಲ್ಲ ಸೀತೆಯನ್ನು ಹುಡುಕುತ್ತ, ರಾಕ್ಷಸರಾಜನಾದ ರಾವಣನ ಅರಮನೆಗೆ ಹೋದನು. ರಾತ್ರಿಯೆಂಬ ಹೆಂಗುಸು, ಊರಿಗೆ ಹೊಸಬನಾದ ಆಂಜನೇಯನನ್ನು

ಸತ್ಕರಿಸಿ, ಇದೇ ಲಂಕಾ ನಗರಿ. ಇಗೋ, ಇದೀಗ ಅರಮನೆಯ ಚಿನ್ನದ ಕಲಶ. ಕುಬೇರನ ಪುಷ್ಪಕವಿಮಾನವು ಈ ಕಡೆ ಇದೆ ಎಂದು, ದೀವಿಗೆಯನ್ನು ಹಿಡಿದು ಅವನಿಗೆ ಪಟ್ಟಣದ ಸೊಬಗನ್ನೆಲ್ಲ ತೋರುವಳೋ ಎಂಬಂತೆ, ಬೆಳುದಿಂಗಳಲ್ಲಿ ಹನುಮಂತನಿಗೆ ಎಲ್ಲವೂ ಪರಿಷ್ಕಾರವಾಗಿ ಕಾಣಿಸಿತು.

ಅರಮನೆಯನ್ನು ಹೊಕ್ಕು ನಾನಾ ಕಡೆಯಲ್ಲಿಯೂ ಸೀತೆಯನ್ನು ಮಾರುತಿಯು ಹುಡುಕುತ್ತಿದ್ದನು. ಒಂದೆಡೆಯಲ್ಲಿ ಬಲು ಚೆಲ್ವೆಯರಾದ ದೇವಯುವತಿಯರು ಮಲಗಿದ್ದರು. ಮಂಡೋದರಿಯೇ ಮೊದಲಾದ ರಾವಣರಾಜನ ಪಟ್ಟದ ರಾಣಿಯರು ಇನ್ನೊಂದು ತಾವಿನಲ್ಲಿ ನಿದ್ರಿಸುತ್ತಿದ್ದರು. ರಾವಣನ ಭೋಗಸ್ತ್ರೀಯರು ಹಲವರು, ಮತ್ತೊಂದೆಡೆಯಲ್ಲಿ ಪವಡಿಸಿದ್ದರು. ಹನುಮಂತನು, ಆ ಹೆಂಗಳ ತಂಡದಲ್ಲೆಲ್ಲ ಸೀತೆಯನ್ನು ಹುಡುಕಿದನು. ಅವನ ಕಾರ್ಯವು ಜಯವಾಗಲಿಲ್ಲ. ಅವನಿಗೆ ನಾನಾವಿಧವಾದ ಆಲೋಚನೆಗಳು ಉಂಟಾದುವು. ಅವನು ಕೋಟೆಯ ಗೋಡೆಯನ್ನು ದಾಟಿ, ರಾವಣನ ಉದ್ಯಾನವಾದ ಅಶೋಕವನದಲ್ಲಿಯೂ ಸೀತೆಯನ್ನು ಹುಡುಕಬೇಕೆಂದು ನಿಶ್ಚಯಿಸಿ, ತನ್ನ ಕಾರ್ಯಕ್ಕೆ, ದೇವತೆಗಳು ಜಯವುಂಟುಮಾಡಲಿ ಎಂದು, ಸಕಲ ದೇವತೆಗಳಿಗೂ ನಮಸ್ಕಾರಮಾಡಿದನು. ಮಮಕಾರವಿಲ್ಲದವನು ಮುಕ್ತಿ ಸಂಪಾದನೆಗೋಸ್ಕರ ವೈರಾಗ್ಯದಿಂದ ಸಕಲ ಪಾಪವನ್ನೂ ಹೋಗಲಾಡಿಸುವ ದಿವ್ಯೌಷಧವಾದ ವೇದವನ್ನು ಆಶ್ರಯಿಸುವಂತೆ, ಆಂಜನೇಯನು, ಅಲ್ಲಿ ಇಲ್ಲಿ ಹುಡುಕುವುದನ್ನು ಬಿಟ್ಟು, ನೆಟ್ಟಗೆ ಅಶೋಕವನವನ್ನು ಹೊಕ್ಕನು. ಆಲ, ಬೇಲ, ಬೆಲ್ಲವತ್ತ, ನೆಲ್ಲಿ, ಲವಂಗ, ಗಿರಿಮಲ್ಲಿಗೆ, ದೇವದಾರು ಮೊದಲಾದ ಹಲವು ಬಗೆಯ ಮರಗಳಿಂದ ಕಂಗೊಳಿಸುತ್ತಿರುವ ಆ ತೋಟದೊಳಗೆ ಸೀತಾದೇವಿಯನ್ನು ಹುಡುಕುತ್ತ, ಅತ್ತಿತ್ತ ಸಂಚರಿಸುತ್ತ, ಆಂಜನೇಯನು, ಕೊನೆಗೆ ಬಲು ಉದ್ದವಾಗಿ ಬೆಳೆದು, ಗಗನವನ್ನು ಮುಟ್ಟುವಂತಿದ್ದ, ಒಂದು ಶಿಂಶುಪಾ ವೃಕ್ಷವನ್ನು ಏರಿ, ಯಾರೂ ತನ್ನನ್ನು ಕಾಣದಿರುವಂತೆ, ಅದರ ಎಲೆಗಳ ಮರೆಯಲ್ಲಿ, ಅಡಗಿ ಕುಳಿತುಕೊಂಡಿದ್ದನು. ಆ ಮರದ ಬುಡದಲ್ಲಿಯೇ

ಸೆಣಬಿನ ತೋಪಿನೊಳಗೆ ಮಲ್ಲಿಗೆಯ ಹಂಬು ಇರುವಂತೆ, ರಾಕ್ಷಸಿಯರ ನಡುವೆ ಸೀತೆಯು ಇದ್ದಳು. ಅವಳನ್ನು ನೋಡಿ ಮಾರುತಿಯು, ವಿಸ್ಮಯದಿಂದ ತಲೆದೂಗಿ, ಇಂತಹ ರೂಪಲಾವಣ್ಯಯುಕ್ತೆಯಾದ ಇವಳಿಲ್ಲದೆ ರಾಮನು ಜೀವದೊಂದಿಗೆ ಹೇಗೆ ಇದ್ದಾನೋ? ಎಂದು ಚಿಂತಿಸುತ್ತಿದ್ದನು.

ಅರ್ಧರಾತ್ರವಾಯಿತು, ಚಂದ್ರನು ಮುಳುಗಿದನು. ರಾವಣನಿಗೆ ಸೀತೆಯ ಮೇಲಣ ವ್ಯಾಮೋಹದಿಂದ ನಿದ್ದೆಯು ತಿಳಿಯಿತು. ಅವನ ಕಣ್ಣುಗಳು ಕೆಂಪಾಗಿದ್ದುವು. ಅವನು ಮೈಗೆ ಕೆಂಪಾದ ಚಂದನ ರಸವನ್ನು ಬಳಿದುಕೊಂಡು, ಘುಮುಘುಮಿಸುವ ಪುಷ್ಪಮಾಲೆಯನ್ನು ಧರಿಸಿದವನಾಗಿ, ಕಿರೀಟದಲ್ಲಿರುವ ವಜ್ರಗಳ ಕಾಂತಿಯಿಂದ ನಕ್ಷತ್ರ ಕಾಂತಿಯನ್ನು ತಿರಸ್ಕರಿಸುತ್ತ ಮೆಲ್ಲಮೆಲ್ಲನೆ ಅಶೋಕವನಕ್ಕೆ ಬಂದು ಸೇರಿದನು.

ಹೀಗೆ, ಅಪರರಾತ್ರದಲ್ಲಿ ವಾರವಿಲಾಸಿನಿಯರು ದೀವಿಗೆಗಳನ್ನು ಹಿಡಿದು ಮುಂದೆ ಹಾದಿದೋರುತ್ತ ನಡೆಯುತ್ತಿರಲು, ಸ್ತ್ರೀವ್ಯಾಮೋಹದಿಂದ ಕದಡಿದ ಮನಸ್ಸುಳ್ಳ ರಾವಣನು, ಸೀತೆಯಿದ್ದ ತಾವಿಗೆ ಬಂದು, ಸಾಮಾನ್ಯಸ್ತ್ರೀಯೆಂಬ ಬುದ್ಧಿಯಿಂದ, ಅವಳೊಡನೆ ಮಾತಾಡ ತೊಡಗಿದನು.

ಅವನನ್ನು ಕಂಡು, ಸೀತೆಯು ಬೆದರಿದಳು. ತನ್ನೊಡನೆ ಆಡಬಾರದ ಮಾತಾಡಿದ, ಅವನ ನುಡಿಗಳು ಕಿವಿಗೆ ಬೀಳದಿರಲೆಂದು ಅವಳು ಕಿವಿಗಳನ್ನು ಮುಚ್ಚಿಕೊಂಡು, ಶ್ರೀರಾಮನನ್ನು ಚಿಂತಿಸುತ್ತ, ರಾವಣನಿಗೂ ತನಗೂ ನಡುವೆ ಒಂದು ಕಡ್ಡಿಯನ್ನು ಮುರಿದುಹಾಕಿ, ಈ ರೀತಿಯಿಂದ ಹೇಳಿದಳು :

ಎಲಾ, ನೀನು ಸಕಲಾಚಾರನಿರ್ವಾಹಕನಾದ ಬ್ರಹ್ಮನ ಮೊಮ್ಮಗನ ಮಗನಲ್ಲವೇ? ಅಂಥ ಶ್ರೇಷ್ಠವಾಗಿರುವ ಕುಲದಲ್ಲಿ ಹುಟ್ಟಿರುವ ನೀನು ಹೆರರ ಹೆಂಡತಿಗೆ ಆಸೆಪಟ್ಟು, ನಿನ್ನ ವಂಶಕ್ಕೇ ಕಳಂಕವನ್ನು ತರಬಹುದೇ? ಈಗಲೂ ನನ್ನನ್ನು ನೀನು ಕರೆದುಕೊಂಡುಹೋಗಿ, ಪಂಚವಟಿಯಲ್ಲಿರುವ ರಾಮನ ಬಳಿಯಲ್ಲಿ ಬಿಡು. ಅವನು ದಯಾಳು;

ನೀನು ಇಷ್ಟು ಅಪಚಾರಪಟ್ಟವನಾದರೂ, ರಾಮನು ನಿನ್ನನ್ನು ಕೊಲ್ಲು ವುದಿಲ್ಲ; ಅವನು ನಿನ್ನೊಡನೆ ಸ್ನೇಹವನ್ನು ಬಳೆಯಿಸುತ್ತಾನೆ; ನಾನು ಹೇಳಿದ ರೀತಿಯಲ್ಲಿ, ನೀನು ನಡೆಯದೆ ತಪ್ಪಿದರೆ, ನಿನಗೂ ಖರದೂಷಣಾದಿ ಗಳಿಗೆ ಆದ ಗತಿಯೇ ಆದೀತು. ಇದುವರೆಗೂ ಯುದ್ಧವಿಲ್ಲದೆ ಹಸಿದಿರುವ ಲಕ್ಷ್ಮಣನ ಬಾಣಗಳು, ನಿನ್ನ ಎದೆಯನ್ನು ತೋಡಿ, ಅಲ್ಲಿರುವ ಕೆನ್ನೀರನ್ನು ಕುಡಿಯದೆ ಬಿಡವು.

ಈ ರೀತಿಯಾಗಿ ಹೇಳಿದ ಸೀತೆಯ ಮಾತುಗಳಾವುವೂ ರಾವಣನ ಕಿವಿಗೆ ಬೀಳಲಿಲ್ಲ. ಆಯುಸ್ಸು ಮುಗಿದವನಿಗೆ ಹಾವು ಕಡಿದರೆ, ವಿಷವಿಳಿಯುವ ಮಂತ್ರಗಳನ್ನು ಜಪಿಸಿದರೂ ಪ್ರಯೋಜನವಾದೀತೇ? ತನ್ನನ್ನು ಈ ಪರಿಯಾಗಿ ನಿಂದಿಸಿ ನುಡಿದ ಸೀತೆಯ ಮಾತನ್ನು ಕೇಳಿ, ರಾವಣನ ಮುಖವು ಕೋಪದಿಂದ ಭಯಂಕರವಾಯಿತು. ಅವನು ಸೀತೆಗೆ ಕಾವಲಿದ್ದ ರಾಕ್ಷಸಿಯರನ್ನು ನೋಡಿ, ಇವಳನ್ನು ನೀವು ಹೇಗಾದರೂ ಮಾಡಿ ನನಗೆ ಅನುಕೂಲೆಯಾಗುವಂತೆ ಮಾಡಿರಿ; ಏನಮಾಡಿದರೂ ಇವಳು ನನಗೆ ವಶೆಯಾಗದೆ ಹೋದರೆ, ಇವಳನ್ನು ಬೇಯಿಸಿ, ನನ್ನ ಬೆಳಗಿನ ಊಟಕ್ಕೆ ಬಡ್ಡಿಸಿಬಿಡಿರಿ, ಎಂದು ಕಟ್ಟಪ್ಪಣೆ ಯನ್ನು ಮಾಡಿದನು. ಆ ವೇಳೆಗೆ ಬೆಳಗಾಯಿತು. ರಾವಣನು ಅರಮನೆಗೆ ಹೊರಟುಹೋದನು.

ಇತ್ತ, ರಾವಣನು ಅರಮನೆಗೆ ಹೊರಟುಹೋದ ಮೇಲೆ, ಕಾವ ಲಿದ್ದ ರಾಕ್ಷಸಿಯರು ಸೀತೆಯನ್ನು ಕೋಪದಿಂದ ನೋಡುತ್ತ, ನೀನು ನಮ್ಮ ಪ್ರಭುವನ್ನು ವರಿಸು, ಎಂದು ಹೇಳಿ, ಅವಳ ಮನಸ್ಸಿಗೆ ಸಂಕಟ ವುಂಟುಮಾಡಿದರು. ಅವಳು, ನನಗಾಗಿ ಸತ್ತ ಜಟಾಯುವಿನಿಂದ ರಾಮನು ನನ್ನ ಸುದ್ದಿಯನ್ನು ತಿಳಿದೂ ಇಲ್ಲಿಗೆ ಏಕೆ ಇನ್ನೂ ಬರಲಿಲ್ಲ? ಒಂದು ವೇಳೆ, ಈ ರಾಕ್ಷಸರ ಮೋಸದಿಂದ, ಅವನಿಗೆ ನನ್ನಲ್ಲಿ ಅನಾದರ ವುಂಟಾಗಿರಬಹುದೇ? ಈ ಖೂಳನು ನನ್ನನ್ನು ಮಾತ್ರವೇ ಅಪಹಾರ ಮಾಡಲಿಲ್ಲ; ಪರಮಕೃಪಾಳುವಾದ ರಾಮನ ದಯೆಯನ್ನೂ ಅಪಹರಿಸಿದ್ದಾನೆ. ಹೀಗಿದ್ದರೂ ರಾಮನು ಏತಕ್ಕೆ ಇನ್ನೂ ಸುಮ್ಮನೆ ಇದ್ದಾನೆ? ಎಂದು ಮರುಗಿ ಮೂರ್ಛಿತೆಯಾದಳು.

ರಾವಣನ ಅಪ್ಪಣೆಯಂತೆ, ಸೀತೆಯನ್ನು ಅಂಜಿಸುತ್ತಲೂ ಬಯ್ಯುತ್ತಲೂ ಇದ್ದ ರಾಕ್ಷಸಿಯರನ್ನು ತಡೆದು, ತ್ರಿಜಟೆಯೆಂಬ ಮುದಿರಕ್ಕಸಿಯೊಬ್ಬಳು, ಈ ದಿನ, ನಾನು ರಾವಣನಿಗೆ ಕೇಡು ತಟ್ಟಿದಂತೆಯೂ, ಈಕೆಯ ಗಂಡನಿಗೆ ಜಯವಾದಂತೆಯೂ ಕನಸನ್ನು ಕಂಡೆನು, ಎಂದು ಹೇಳಿ, ಸೀತೆಗೆ ಸಮಾಧಾನವುಂಟುಮಾಡಿದಳು. ಸೀತೆಯು ರಾಕ್ಷಸಿಯರ ಕಿರುಕುಳವನ್ನು ತಡೆಯಲಾರದೆ, ಜೀವವನ್ನು ಬಿಟ್ಟುಬಿಡಬೇಕೆಂದು ಯತ್ನಿಸಿದಳು.

ಇದನ್ನೆಲ್ಲ ನೋಡುತ್ತಿದ್ದ ಮಾರುತಿಯು, ಇನ್ನು ಸುಮ್ಮನೆ ಇದ್ದರೆ, ಇವಳು ಪ್ರಾಣಗಳನ್ನು ಬಿಟ್ಟಾಳು, ಎಂದುಕೊಂಡು, ಅವಳ ಸಮೀಪದಲ್ಲಿರುವ ಕೊಂಬೆಯ ಮೇಲೆ ಕುಳಿತು, ಶ್ರೀರಾಮನ ವಂಶ ವಿಸ್ತಾರವನ್ನು ವರ್ಣನೆಮಾಡಿದನು. ಇದುವರೆಗೂ ರಾಕ್ಷಸಿಯರ ಬಯ್ಗಳನ್ನೂ, ಬೆದರಿಕೆಯ ಮಾತುಗಳನ್ನೂ ಕೇಳಿ ಹುಣ್ಣಾಗಿದ್ದ ಸೀತೆಯ ಕಿವಿಗಳಿಗೆ, ಈ ಶ್ರೀರಾಮ ಚರಿತೆಯು ಅಮೃತವನ್ನು ಎರೆದಂತೆ ಆನಂದವುಂಟುಮಾಡಿತು. ರಾಮಕಥೆಯನ್ನು ಹೇಳುತ್ತಿರುವರು ಯಾರು? ಎಂದು ಸೀತೆಯು ನಾಲ್ಕು ಕಡೆಯನ್ನೂ ನೋಡಿದಳು. ಬಳಿಕ ತನ್ನ ಮೇಲುಗಡೆಯಲ್ಲಿ ಮರದ ಕೊಂಬೆಯ ಮೇಲೆ ಕುಳಿತಿದ್ದ ಕಪಿಯನ್ನು ಕಂಡು, ದುಸ್ವಪ್ನವನ್ನು ಕಂಡವಳಂತೆ ಹೆದರಿ, ನನ್ನ ಭರ್ತೃವಾದ ಶ್ರೀರಾಮನಿಗೂ, ಲಕ್ಷ್ಮಣನಿಗೂ ಕಲ್ಯಾಣವಾಗಲಿ, ಎಂದು ಸೀತೆಯು ಆಶಿಸುತ್ತ, ನಿದ್ರೆಯನ್ನೇ ಕಾಣದ ನನಗೆ ಕನಸಾಗುವುದು ಎಂದರೆ ಏನು? ಇದಾವುದೋ ರಾಕ್ಷಸರ ಮೋಸ, ಎಂದು ಚಿಂತಿಸಿದವಳಾಗಿ, ಹನುಮಂತನನ್ನು ನೋಡಿ ಅಂಜಿದಳು.

ಬಳಿಕ, ಹನುಮಂತನು ಮರದಿಂದ ಕೆಳಗೆ ಇಳಿದು, ಸಮಯಕ್ಕೆ ತಕ್ಕ ಮಾತಾಡಿ, ಸೀತೆಯನ್ನು ಸಂತಯಿಸಬೇಕೆಂದು ಬಗೆದು, ಅವಳ ಮುಂದೆ ಕೈಗಳನ್ನು ಜೋಡಿಸಿಕೊಂಡು ನಿಂತು, ವಿಜ್ಞಾಪಿಸಿಕೊಂಡನು.

ತಾಯೇ, ಲಾಲಿಸು. ನಿನ್ನ ಅಗಲಿಕೆಯೆಂಬ ಕಿಚ್ಚಿನಿಂದ ಬೆಂದು ತಾರಿಹೋಗಿರುವ ಶ್ರೀರಾಮನು, ನನ್ನನ್ನು ನಿನ್ನ ಬಳಿಗೆ ಕಳುಹಿಸಿದ್ದಾನೆ. ನಾನು ಅವನ ದೂತನು. ನನ್ನನ್ನು ನೀನು ಬೇರೆಯಾಗಿ ತಿಳಿಯಕೂಡದು.

ಎಲೌ ಕಲ್ಯಾಣೀ, ನಿನ್ನಲ್ಲಿಯೇ ಮನಸ್ಸಿಟ್ಟು, ನಿನ್ನಂತೆಯೇ ವಿರಹದಿಂದ ಬೆಂದು ಬಾಡಿರುವ ಶ್ರೀರಾಮನು, ನನ್ನ ಮೂಲಕವಾಗಿ ನಿನ್ನ ಕುಶಲವನ್ನು ಕೇಳಿದನು. ಲಕ್ಷ್ಮಣನು, ನಿನಗೆ ತಲೆಬಾಗಿ ನಮಸ್ಕಾರಮಾಡಿದನು. ನಮ್ಮ ರಾಜನಾದ ಸುಗ್ರೀವನು, ನಿನ್ನ ಕ್ಷೇಮಲಾಭವನ್ನು ವಿಚಾರಿಸಿದನು.

ಹನುಮಂತನು ಹೇಳಿದ ನುಡಿಗಳಿಂದ, ಸೀತೆಯು ಭಯವು ತೊಲಗಿತು. ಅವನ ಮಾತಿನಲ್ಲಿ ಅವಳಿಗೆ ನಂಬುಗೆಯುಂಟಾಯಿತು. ಸುಗ್ರೀವನಿಗೂ ರಾಮನಿಗೂ ಹೇಗೆ ಸ್ನೇಹವಾಯಿತು? ಎಂದು ಸೀತೆಯು ರಾಮದೂತನನ್ನು ಕೇಳಿದಳು. ಆಂಜನೇಯನು ಅವಳಿಗೆ, ವಾಲಿವಧೆಯಾದ ಕಾರಣವನ್ನೂ, ಸುಗ್ರೀವನೊಡನೆ ರಾಮನಿಗೆ ಸ್ನೇಹವಾದ ಸಂಗತಿಯನ್ನೂ ವಿವರಿಸಿ, ತರುವಾಯ ರಾಮನ ಮುದ್ರೆಯುಂಗುರವನ್ನು ಕೊಟ್ಟನು.

ಆ ಮುದ್ರೆಯುಂಗುರವನ್ನು ಕಂಡಾಗ ಸೀತೆಗೆ ಉಂಟಾದಷ್ಟು ಸಂತೋಷವು, ಮದುವೆಯಾದಂದಿನಿಂದಲೂ ಉಂಟಾಗಿರಲಿಲ್ಲ. ಅವಳು ಅತ್ಯಂತ ಸಂತುಷ್ಟೆಯಾಗಿ, ಆಂಜನೇಯನನ್ನು ನೋಡಿ, ಅಯ್ಯಾ ಪರೋಪಕಾರಿಯೇ, ಇನ್ನು ಈ ದುಷ್ಟನಾದ ರಾವಣನಿಗೆ ವಿನಾಶಕಾಲವು ಸಮೀಪವಾಯಿತು. ಈ ಖೂಳನು ಒಳ್ಳೆಯ ಮಾತಿಗೆ ಮಣಿಯುವವನಲ್ಲ. ಇವನನ್ನು ದಂಡಿಸಲೇ ಬೇಕು. ಈ ಮಾತನ್ನೇ, ವಿಭೀಷಣನ ಹೆಂಡತಿಯಾದ ಸರಮೆಯೂ, ತನ್ನ ಮಗಳಾದ ಅನಲೆಯೊಡನೆ ನನಗೆ ಹೇಳಿಕಳುಹಿದಳು. ನಾನು ಇನ್ನು ಒಂದು ತಿಂಗಳವರೆಗೆ ಬದುಕಿರುತ್ತೇನೆ; ಅಷ್ಟರಲ್ಲಿ ರಾಮನು ಬಂದು, ನನ್ನನ್ನು ಕರೆದುಯ್ಯದೆ ಇದ್ದರೆ, ನಾನು ಸಾಯುವೆನು, ಎಂದು ಹೇಳಿದಳು.

ಆ ಮಾತನ್ನು ಕೇಳಿ, ಹನುಮಂತನು, ಎಲೌ ಮಹಾನುಭಾವೇ, ಲಾಲಿಸು. ನೀನೇತಕ್ಕೆ ಅಂಜುತ್ತೀಯೆ? ಪೂಜ್ಯಳಾದ ನೀನು ನನ್ನ ಹೆಗಲ ಮೇಲೆ ಕೂರುವಳಾಗು; ನಾನು ನಿನ್ನನ್ನು ಹೆಗಲ ಮೇಲೆ ಏರಿಸಿಕೊಂಡು, ಈ ಕಡಲನ್ನು ದಾಟಿ, ಶ್ರೀರಾಮನ ಸನ್ನಿಧಿಯಲ್ಲಿ ಬಿಡುತ್ತೇನೆ; ನನಗೆ ಅಷ್ಟು ಶಕ್ತಿಯಿಲ್ಲವೆಂದು ತಿಳಿಯಬೇಡ, ಎಂದು ಹೇಳಿ,

ಆಕಾಶಕ್ಕೂ ಭೂಮಿಗೂ ಕೀಲನ್ನು ಕೊಟ್ಟಂತೆ ಉದ್ದವಾಗಿ ಬಳೆದನು. ಅವನ ಆ ರೂಪನ್ನು ಕಂಡು, ಸೀತೆಯು ಸಂತಸಪಟ್ಟು, ಅಣ್ಣಾ, ಈ ಸಮುದ್ರವನ್ನು ದಾಟಿ ಬಂದಿರುವ ನಿನ್ನಿಂದ, ಆಗದ ಕಾರ್ಯವೂ ಉಂಟೇ? ಆದರೆ, ನಾನು ನಿನ್ನ ಸಂಗಡ ಬರುವುದು ಸರಿಯಲ್ಲ. ಈ ರಾವಣನನ್ನು ನಾನು ನನ್ನ ಪಾತಿವ್ರತ್ಯದ ಪ್ರಭಾವದಿಂದಲೇ ಸುಟ್ಟುಬಿಡಬಲ್ಲೆನು. ಶ್ರೀರಾಮನ ಕೀರ್ತಿಗೆ ಕುಂದುಂಟಾಗಬಾರದು. ಅವನ ಬಾಣದಿಂದಲೇ ಈ ಖೂಳನು ಸಾಯಬೇಕು. ನಾನಾಗಿಯೇ ಅಲ್ಲಿಗೆ ಬರುವುದು ನ್ಯಾಯವಲ್ಲ. ರಾಮನೇ ಇಲ್ಲಿಗೆ ಬೇಗ ಬಂದು, ನನ್ನನ್ನು ಕರೆದು ಕೊಂಡು ಹೋಗುವಂತೆ ಪ್ರೋತ್ಸಾಹಿಸು, ಎಂದು ಹೇಳಿದಳು.

ಹೀಗೆ ಹೇಳಿದ ಶ್ರೀರಾಮಪತ್ನಿಯ ಮಾತ ಕೇಳಿ, ವಾಯುಪುತ್ರನು ವಿನೀತನಾಗಿ, ತಾಯೇ, ಮೋಸದಿಂದ ಇಲ್ಲಿಗೆ ತರಲ್ಪಟ್ಟಿರುವ ನೀನು ನಿನ್ನ ಭರ್ತೃವಿನ ಬಳಿಗೆ ಸಂಕೋಚದಿಂದ ಬರಲಾಗದು. ಮಹಾನುಭಾವೆಯಾದ ನೀನು ರಾಜಮಾರ್ಗದಿಂದ ಬರತಕ್ಕವಳು. ಶ್ರೀರಾಮನ ಪರಾಕ್ರಮಕ್ಕೆ ಕಿಲುಬು ಹತ್ತದಿರಲಿ; ಅವನು ರಾವಣನನ್ನು ಸಂಹಾರಮಾಡಿ, ನಿನ್ನನ್ನು ಕರೆದುಕೊಂಡು ಬರುವನಾಗಲಿ. ತಾಯೇ, ಪತಿವ್ರತೆಯರಿಗೆ ತಕ್ಕ ಮಾತನ್ನೇ ನೀನು ನುಡಿದಿದ್ದೀಯೆ. ನಿನ್ನ ಮಾತು, ರಾಜಮಹಿಷಿಯರಿಗೆ ಉಚಿತವಾದುದು, ಎಂದು ಅವಳನ್ನು ಹೊಗಳಿ, ಹೇ ಭದ್ರೇ, ಇಲ್ಲಿಗೆ ರಾಮಲಕ್ಷ್ಮಣರು ಬೇಗನೆ ಬರುವರೆಂದು ತಿಳಿ; ನನಗೆ ಹೊರಡಲಿಕ್ಕೆ ಅಪ್ಪಣೆಯನ್ನು ಕೊಡು; ರಾಮನು ಕಂಡಿರುವ ಯಾವುದಾದರೂ ವಸ್ತುವನ್ನು ನನಗೆ ದಯೆಪಾಲಿಸು. ಅವನಿಗೆ ತಿಳಿದಿರುವ ಯಾವ ಸಮಾಚಾರವನ್ನಾದರೂ ನನ್ನೊಡನೆ ಹೇಳು, ಎಂದು ಬೆಸಗೊಂಡನು.

ಆ ಮಾತಿಗೆ ಸೀತೆಯು ನಿಟ್ಟುಸಿರನ್ನು ಬಿಡುತ್ತ, ಚಿತ್ರಕೂಟದಲ್ಲಿ ರಾಮನು ತನ್ನ ತೊಡೆಯ ಮೇಲೆ ತಲೆಯಿರಿಸಿ ಮಲಗಿಕೊಂಡಿದ್ದುದನ್ನೂ, ಆಗ, ಕಾಗೆಯೊಂದು ಬಂದು, ತನ್ನ ಸ್ತನವನ್ನು ಕುಕ್ಕಿದುದನ್ನೂ, ಸ್ತನದ ಗಾಯದಿಂದ ಹರಿದ ಕೆನ್ನೀರಿಂದ ರಾಮನು ಎಚ್ಚರಗೊಂಡು, ಆ ಕಾಗೆಯನ್ನು ಬಾಣದಿಂದ ಹೊಡೆದುದನ್ನೂ, ಅದು ಎಲ್ಲೆಲ್ಲಿಯೂ ತಿರುಗಿ, ಬದುಕುವುದಕ್ಕೆ ಉಪಾಯವಿಲ್ಲದೆ, ಮರಳಿ ರಾಮನ ಕಾಲಲ್ಲಿಯೇ

ಬಿದ್ದುದನ್ನೂ, ರಾಮನು ಅದರ ಒಂದು ಕಣ್ಣನ್ನು ತೆಗೆದು ಹಾಕಿ, ಅದನ್ನು ಬದುಕಿಸಿದುದನ್ನೂ ಹೇಳಿ, ತನ್ನ ತಲೆಯಲ್ಲಿ ಬೈತಿಟ್ಟುಕೊಂಡಿದ್ದ ಚೂಡಾಮಣಿಯನ್ನು ತೆಗೆದು ಹನುಮಂತನ ಕಯ್ಯಲ್ಲಿ ಕೊಟ್ಟಳು.

ಸೀತೆಯನ್ನು ಹುಡುಕುವುದಕ್ಕಾಗಿ ಬಂದಿದ್ದ ಮಾರುತಿಯು ಮೊದಲು ಆ ಕಾರ್ಯವನ್ನು ಪರಿಷ್ಕಾರವಾಗಿ ಮಾಡಿಕೊಂಡು, ಬಳಿಕ ತಾನು ಆವೂರಿಗೆ ಬಂದಿರುವುದನ್ನು ರಾಕ್ಷಸರಾಜನಿಗೆ ತಿಳಿಸಬೇಕೆಂದು ಬಗೆದು, ಆ ಅಶೋಕವನವನ್ನೆಲ್ಲ ಲೂಟಿ ಮಾಡಿದನು. ಮರಗಳನ್ನೆಲ್ಲ ಮುರಿದನು. ಹೂಗಳನ್ನೆಲ್ಲ ಕಿತ್ತು ಈಡಾಡಿದನು. ವೃಕ್ಷಗಳಲ್ಲಿ ಕುಳಿತು, ಇಂಪಾಗಿ ದನಿಗೆಯ್ಯುತ್ತಿದ್ದ ಪಕ್ಷಿಗಳನ್ನು ಓಡಿಸಿಬಿಟ್ಟನು. ಹೀಗೆ ರಾಜನ ಉದ್ಯಾನವನ್ನು ಧಾಳಾಧೂಳಿಮಾಡಿದ ಕಪಿಯನ್ನು, ತೋಟದ ಕಾವಲುಗಾರರು ಬೆದರಿಸಿದರು. ಅವರ ಬೆದರಿಕೆಗೆ ಕಪಿಯು ಜಗ್ಗಲಿಲ್ಲ. ಅವರು ಓಡಿಹೋಗಿ, ಕಪಿಯು ಮಾಡಿದ ವನಭಂಗವನ್ನು ರಾವಣನಿಗೆ ವಿವರಿಸಿದರು. ಕಾವಲುಗಾರರು ತಂದ ಸುದ್ದಿಯನ್ನು ಕೇಳಿ ರಾವಣನಿಗೆ ಕೋಪವು ಬಂದಿತು. ಅವನು, ಪ್ರಹಸ್ತನ ಮಗನಾದ ಜಂಬುಮಾಲಿಯ ಕೈಕೆಳಗೆ, ಯಮಕಿಂಕರರ ಹಾಗಿರುವ ಕಿಂಕರರೆಂಬ ಎಂಬತ್ತುಸಾವಿರ ರಾಕ್ಷಸ ಸೇನೆಯನ್ನು, ಕಪಿಯ ನಿಗ್ರಹಕ್ಕಾಗಿ ಕಳುಹಿಸಿದನು.

ತನ್ನನ್ನು ಹಿಡಿಯಲಿಕ್ಕೆ ಬಂದ ಆ ರಾಕ್ಷಸ ಸೇನೆಯನ್ನೂ, ಜಂಬುಮಾಲಿಯನ್ನೂ ಹನುಮಂತನು ಕೊಂದುಹಾಕಿ, ತೋಟದ ಹೆಬ್ಬಾಗಿಲ ಮೇಲುಗಡೆಯಲ್ಲಿ ಕುಳಿತುಕೊಂಡನು. ಈ ಸುದ್ದಿಯು ರಾವಣನಿಗೆ ತಿಳಿಯಿತು. ಅವನು ಸಿಂಹವಿಕ್ರಮರಾದ ಪ್ರಹಸನ ಪ್ರಮುಖಪಂಚಸೇನಾಧಿಪತಿಗಳನ್ನು ಕರೆದು, ನೀವು ಆ ಕೋತಿಯನ್ನು ಜೀವದೊಡನೆ ಹಿಡಿದು ತನ್ನಿರಿ, ಎಂದು ನಿಯಮಿಸಿದನು. ಆ ಸೇನಾಧಿಪತಿಗಳು ಹನುಮಂತನ ಮೇಲೆ ಬಿದ್ದರು. ಆಂಜನೇಯನು ಆ ಹೆಬ್ಬಾಗಿಲ ಲಾಳವಿಂಡಿಗೆಯನ್ನು ಹಿರಿದುಕೊಂಡು ಅದರ ಪೆಟ್ಟಿನಿಂದ ಅವರನ್ನೆಲ್ಲ ಸದೆಬಡಿದನು. ಮತ್ತು, ನಾನು ರಾಮದೂತನು, ನಾನು ರಾಮದೂತನು, ಎಂದು ಅಡಿಗಡಿಗೆ ಹೇಳಿಕೊಳ್ಳುತ್ತಿದ್ದನು. ರಾಕ್ಷಸ

ಚಕ್ರವರ್ತಿಯಾದ ರಾವಣನು, ಆಂಜನೇಯನನ್ನು ಹಿಡಿದು ತರುವಂತೆ, ತನ್ನ ಮುಂದೆ ಕುಳಿತಿದ್ದ ಪರಾಕ್ರಮಶಾಲಿಯಾದ ಅಕ್ಷನೆಂಬ ಮಗನನ್ನು ಕಳುಹಿಸಿದನು.

ರಾಜಕುಮಾರನಾದ ಅಕ್ಷನು, ಸೇನಾಸಮೇತನಾಗಿ ತನ್ನ ಮೇಲೆ ಕವಿಯಲಾಗಿ, ಹನುಮಂತನು ತಾನು ಕುಳಿತಿದ್ದ ಹೆಬ್ಬಾಗಿಲ ಗೋಡೆಯನ್ನು ಕೆಡವಿ, ಸೈನಿಕರ ಕಣ್ಣುಗಳಿಗೆ ಮಣ್ಣನ್ನು ಎರಚಿ, ಅಕ್ಷಕುಮಾರನನ್ನೂ, ಅವನ ಸೇನೆಯನ್ನೂ ನಿರ್ಮೂಲಮಾಡಿಬಿಟ್ಟನು. ರಾಕ್ಷಸರು ನೋಡುತ್ತಿದ್ದ ಹಾಗೆಯೇ, ಆಂಜನೇಯನು ಅಲ್ಲಿ ಇದ್ದ ಒಂದು ಕಂಬವನ್ನು ಕಿತ್ತುಕೊಂಡು, ಗಿರಗಿರನೆ ತಿರುಗಿಸಿದನು. ಹಾಗೆ ತಿರುಗಿಸಿದ ವೇಗಕ್ಕೆ ಅದರಿಂದ ಬೆಂಕಿಯು ಹುಟ್ಟಿತು. ಆ ಬೆಂಕಿಯಿಂದ ಹೆಬ್ಬಾಗಿಲನ್ನು ಸುಟ್ಟು, ಮಾರುತಿಯು, ಮತ್ತೊಂದು ಹೆಬ್ಬಾಗಿಲ ಮೇಲೆ ಕುಳಿತುಕೊಂಡನು.

ಇತ್ತ, ಅಳಿದುಳಿದ ರಾಕ್ಷಸರು, ದೊರೆಯ ಬಳಿಗೆ ಓಡಿಹೋಗಿ, ಅಕ್ಷಕುಮಾರನು ಸತ್ತ ಸುದ್ದಿಯನ್ನು ಹೇಳಿದರು. ರಾವಣನಿಗೆ ಬಲು ಸಿಟ್ಟು ಬಂದಿತು. ಅವನು, ಇಂದ್ರಜಿತ್ತೆಂಬ, ತನ್ನ ಮತ್ತೊಬ್ಬ ಮಗನನ್ನು ನೋಡಿ, ಮಗನೇ, ನೀನು ಯುದ್ಧಕ್ಕೆ ಹೊರಟೆಯಾದರೆ, ನಿನ್ನ ಇದಿರಿಗೆ ಬಂದು ನಿಲ್ಲುವ ಗಂಡು, ಈ ಮೂರುಲೋಕದಲ್ಲಿಯೂ ಇಲ್ಲ. ನೀನು ಹೋಗಿ ಆ ಕೋತಿಯನ್ನು ಇಲ್ಲಿಗೆ ಬೇಗನೆ ಹಿಡಿದು ತಾ, ಎಂದು ಅಪ್ಪಣೆಮಾಡಿದನು.

ಇಂದ್ರಜಿತ್ಕುಮಾರನು ಯುದ್ಧಕ್ಕೆ ಬಂದನು. ಅವನು ಮಹಾಪರಾಕ್ರಮಿ. ಯುದ್ಧದಲ್ಲಿ, ಅವನು ಆಂಜನೇಯನ ಮೇಲೆ ಬಾಣದ ಮಳೆಯನ್ನೇ ಕರೆದನು. ತನ್ನೊಡನೆ ಕಾದುವ ಶೂರನು ದೊರೆತನಲ್ಲ ಎಂದು ಹನುಮಂತನು ಆನಂದಪಟ್ಟನು. ಇಂದ್ರಜಿತ್ತು ಹನುಮಂತನ ಮೇಲೆ ಯಾವ ಬಾಣವನ್ನು ಪ್ರಯೋಗಿಸಿದರೂ ಪ್ರಯೋಜನವಾಗಲಿಲ್ಲ. ತರುವಾಯ, ಅವನು ಬ್ರಹ್ಮಾಸ್ತ್ರವನ್ನು ಪ್ರಯೋಗಮಾಡಿ, ಅದರಿಂದ ಮಾರುತಿಯನ್ನು ಕಟ್ಟಿದನು. ಈ ರೀತಿ ದಿವ್ಯಾಸ್ತ್ರದಿಂದ ಕಟ್ಟಲ್ಪಟ್ಟ ಹನುಮಂತನನ್ನು ರಾಕ್ಷಸರು ಸೆಣಬಿನ ದಪ್ಪನಾದ ಹಗ್ಗ

ಗಳಿಂದ ಬಿಗಿದರು. ಕೂಡಲೇ ಬ್ರಹ್ಮಾಸ್ತ್ರದ ಕಟ್ಟು ಬಿಟ್ಟು ಹೋಯಿತು. ಇದನ್ನು ತಿಳಿದು, ಇಂದ್ರಜಿತ್ತು ಅವನನ್ನು ತನ್ನ ತಂದೆಯ ಬಳಿಗೆ ಕರೆದುಕೊಂಡು ಹೋದನು.

ಅಲ್ಲಿ, ಕೈಲಾಸವನ್ನು ತೋಳಿಂದ ಎತ್ತಿದ ಬಲ್ಲಾಳಾದ ರಾವಣನು, ದೇವಲೋಕದ ಚೆಲ್ವೆಯರು ಇಕ್ಕೆಲದಲ್ಲಿಯೂ ಚಾಮರವನ್ನು ಬೀಸುತ್ತಿರಲು, ಸಿಂಹಾಸನದಲ್ಲಿ ಕುಳಿತಿದ್ದನು. ಅವನ ಮೈಯ್ಯು, ಕಾರ ಮೋಡದಂತೆ ಕಪ್ಪಗಿದ್ದಿತು. ಅವನ ಕೆಂಪಾದ ತುಟಿಗಳ ನಡುವೆ ಹಲ್ಲುಗಳು ಮಿರುಮಿರುಗುತ್ತಿದ್ದುವು. ಇಂದ್ರನ ಐರಾವತವೆಂಬ ಆನೆಯು ತನ್ನ ಕೊಂಬುಗಳಿಂದ ಚುಚ್ಚಿ ಗಾಸಿಮಾಡಿದ ಗಾಯದ ಕಲೆಗಳು, ಅವನ ಅಗಲವಾದ ಎದೆಯಲ್ಲಿ ಇನ್ನೂ ಕಾಣಬರುತ್ತಿದ್ದುವು. ಅವನು ಪಾಪದ ಮೂರ್ತಿಯಂತಿದ್ದನು. ಕತ್ತಲ ಮೊತ್ತವು, ತಪಸ್ಸುಮಾಡಿ, ಚಂದ್ರಸೂರ್ಯರನ್ನು ಗೆದ್ದು, ನಿರಪಾಯವಾಗಿ ರಾಜ್ಯವಾಳುತ್ತಿದೆಯೋ? ಎಂಬಂತೆ ಅವನು ಕಾಣುತ್ತಿದ್ದನು. ಅವನನ್ನು ಆಂಜನೇಯನು ನೋಡಿದನು.

ರಾಜಾ ರಾವಣನೂ ವಾಯುಪುತ್ರನನ್ನು ಕಂಡನು. ಅವನಿಗೆ ಆಶ್ಚರ್ಯವಾಯಿತು. ನಾನು ಕೈಲಾಸವನ್ನು ಎತ್ತಿದಾಗ ನನಗೆ ಶಾಪಕೊಟ್ಟ ನಂದಿಕೇಶ್ವರನೇ ಇಲ್ಲಿಗೆ ಬಂದಿರುವ ಹಾಗೆ ತೋರುತ್ತಿದೆ ಎಂದು ಭಾವಿಸಿಕೊಂಡು ತನ್ನ ಮುಖ್ಯಾಮಾತ್ಯನಾದ ಪ್ರಹಸ್ತನ ಮುಖವನ್ನು ನೋಡಿದನು.

ತರುವಾಯ, ಪ್ರಹಸ್ತನು ಮಾರುತಿಯನ್ನು ನೋಡಿ, ನೀನು ಯಾರು? ಎಲ್ಲಿಂದ ಬಂದಿದ್ದೀಯೆ? ಏತಕ್ಕೆ ಬಂದಿದ್ದೀಯೆ? ಇಲ್ಲಿಗೆ ನಿನ್ನನ್ನು ಯಾರು ಕಳುಹಿದರು? ಎಂದು ಕೇಳಿದನು. ಅದಕ್ಕೆ ಹನುಮಂತನು, ರಾವಣನನ್ನು ನೋಡುತ್ತ, ಈ ಪರಿಯಾಗಿ ಮಾತಾಡತೊಡಗಿದನು.


ಎಲೈ ದೊರೆಯೇ, ಕೇಳು. ನಾನು ಸೂರ್ಯವಂಶದಲ್ಲಿ ಹುಟ್ಟಿದ ಪ್ರಖ್ಯಾತನಾದ ರಾಮನ ದೂತನು. ರಾಮನು ಸತ್ಯಸಂಧನು. ತಂದೆಯ ಮಾತಿಗೆ ಕಟ್ಟುಬಿದ್ದು, ಅವನು ವನವನ್ನು ಪ್ರವೇಶಿಸಿದನು. ಅಡವಿ

ಯಲ್ಲಿರುವಾಗ ಅವನನ್ನು ಶೂರ್ಪಣಖೆಯು ಕಂಡು ಮೋಹಿಸಿ ನನ್ನನ್ನು ವರಿಸು, ಎಂದು ಪೀಡಿಸಿದಳು. ಸಲ್ಲದ ಆಸೆಯನ್ನು ಮಾಡಿದ ಅವಳ ಕಿವಿಮೂಗುಗಳನ್ನು ಲಕ್ಷ್ಮಣನು ಕುಯ್ದು ವಿರೂಪವನ್ನು ಮಾಡಿದನು. ಅದನ್ನು ಕಂಡು ಕಡುಮುಳಿದು ಯುದ್ಧಕ್ಕೆ ಬಂದ ಖರದೂಷಣಾದಿಗಳನ್ನು ಅವನು ಯಮನ ನಗರಿಗೆ ಕಳುಹಿದನು. ಮಾರೀಚನಿಗೆ ಜಿಂಕೆಯ ವೇಷವನ್ನು ಹಾಕಿಸಿ, ತನ್ಮೂಲಕ ಸೀತೆಯ ಹತ್ತಿರ ರಾಮಲಕ್ಷ್ಮಣರು ಇಲ್ಲದಂತೆ ಮಾಡಿ, ನೀನು ಸೀತೆಯನ್ನು ಮೋಸದಿಂದ ಕದ್ದು ತಂದೆಯಲ್ಲವೇ? ನಿನ್ನ ನೆಲೆಯನ್ನು ಅರಿಯುವುದಕ್ಕಾಗಿ ರಾಮನು ಸುಗ್ರೀವನೊಡನೆ ಸ್ನೇಹವನ್ನು ಮಾಡಿಕೊಂಡನು. ಮಹಾಬಲಶಾಲಿಯಾದ ವಾಲಿಯನ್ನು ಕಾಲನ ಮನೆಗೆ ಕಳುಹಿದನು. ಕ್ಷತ್ರಿಯಾಂತಕನಾದ ಪರಶುರಾಮನ ಸೊಕ್ಕನ್ನು ತಿಕ್ಕಿದನು. ಸೀತೆಯನ್ನು ಹುಡುಕಿಕೊಂಡು ಬರುವುದಕ್ಕಾಗಿ ಶ್ರೀರಾಮನು, ಎಲ್ಲ ಕಡೆಗೂ ವಾನರವೀರರನ್ನು ಅಟ್ಟಿದನು. ಅವರೊಳಗೆ ನಾನೊಬ್ಬ ಸಣ್ಣವನು. ಕಡಲನ್ನು ದಾಟಿ, ಈ ನಗರಿಗೆ ಬಂದೆನು. ಇಲ್ಲಿಯ ಉದ್ಯಾನವನದಲ್ಲಿ ಸೀತೆಯನ್ನು ಕಂಡೆನು. ಅವಳಿಗೆ ನಮಸ್ಕಾರ ಮಾಡಿ, ಮರಳಿ ಹೊರಡಬೇಕೆಂದು ಬಯಸಿದೆನು. ಇಷ್ಟು ದೂರ ಬಂದು ನಿನ್ನನ್ನು ನೋಡದೆ ಹೋಗುವುದು ಸರಿಯಲ್ಲವೆಂದು ತಿಳಿದು, ನಿನ್ನ ತೋಟವನ್ನು ಹಾಳುಗೆಡವಿದೆನು. ನೀನು ನನ್ನನ್ನು ಹಿಡಿಯುವುದಕ್ಕಾಗಿ ಕಳುಹಿದ್ದ ಪಡೆಯನ್ನು ಮಡುಹಿದೆನು. ನಿನ್ನನ್ನು ಕಂಡು, ನಿನ್ನೊಡನೆ ಮಾತಾಡಬೇಕೆಂದು, ಬೇಕೆಂದೇ ಕಟ್ಟಲ್ಪಟ್ಟು, ಇಲ್ಲಿಗೆ ಬಂದಿದ್ದೇನೆ. ಮಹಾಪತಿವ್ರತೆಯಾದ ರಾಮನ ಹೆಂಡತಿಯನ್ನು ನೀನು ಇಲ್ಲಿ ತಡೆದು ಇಟ್ಟಿದ್ದೀಯೆ. ಹೊಗೆಯಾಡದ ಕೆಂಡವನ್ನು, ಕಂಡವೆಂದು ಭ್ರಮಿಸಿ, ಉಡಿಯಲ್ಲಿ ಕಟ್ಟಬೇಡ; ಎಲಾ ಮೂಢ, ಪರರ ಹೆಣ್ಣುಗಳನ್ನು ಬಯಸುವ ನೀನು ರಾಮನ ಹೆಂಡತಿಯನ್ನು ಕಾಮಿಸುತ್ತೀಯಾ? ಹಾವು ಗಾಳಿಯನ್ನು ಕುಡಿಯುತ್ತೇನೆಂದು ತಿಳಿದು, ಗರುಡನ ಉಸುರ ಗಾಳಿಯನ್ನು ಕುಡಿಯಹೋದರೆ ಬದುಕೀತೇ? ಎಲಾ ದುರುಳ, ನಿನಗೆ ಏನೋ ಕೇಡು ಮೂಡಿದೆ; ನೀನು ಶೀಘ್ರದಲ್ಲಿಯೇ

ಪ್ರಾಣಗಳನ್ನು ಬಿಡುತ್ತೀಯೆ. ನಿನ್ನ ಮೋಸದ ಜಿಂಕೆಯ ಪಾಡನ್ನು ನೋಡು; ನಿನ್ನನ್ನು ತನ್ನ ಬಾಲದಲ್ಲಿ ಕಟ್ಟಿಹಾಕಿದ್ದ ವಾಲಿಯ ಗತಿ ಏನಾಯಿತು? ನೀನು ರಾಮನನ್ನು ಶರಣುಹೊಕ್ಕರೆ, ಉಳಿಯುತ್ತೀಯೆ; ಇಲ್ಲದೆ ಹೋದರೆ, ಅಳಿಯುತ್ತೀಯೆ, ಎಂದು ಹೇಳಿದನು.

ಹೀಗೆ, ತುಂಬಿದ ಸಭೆಯಲ್ಲಿ ತನ್ನನ್ನು ನಿರ್ಭಯವಾಗಿ ನಿಂದಿಸಿ ಮಾತಾಡಿದ ಮಾರುತಿಯ ಬಿಂಕವನ್ನು ಕಂಡು, ರಾವಣನಿಗೆ ಅಪರಿಮಿತ ವಾದ ರೋಷವು ಬಂದಿತು. ಅವನು, ಈ ಕೋತಿಯನ್ನು ಕೊಲ್ಲಿರಿ, ಎಂದು ದೂತರಿಗೆ ಅಪ್ಪಣೆಮಾಡಿದನು. ಆಗ ಸಹಜವಾಗಿ ಒಳ್ಳೆಯ ಬುದ್ಧಿಯುಳ್ಳ ವಿಭೀಷಣನೆಂಬ ರಾವಣನ ತಮ್ಮನು, ಪ್ರಭುವೇ, ದೂತ ರನ್ನು ಕೊಲ್ಲಕೂಡದು; ಅದು ಶಾಸ್ತ್ರಸಮ್ಮತವಲ್ಲ, ಎಂದು ವಿಜ್ಞಾಪಿಸಿ ದನು. ವಿಭೀಷಣನ ಮಾತಿಗೆ ಒಪ್ಪಿ, ರಾವಣನು ಕಪಿಗಳಿಗೆ ಬಾಲವೇ ಮುಖ್ಯವಾದುದು; ಆದುದರಿಂದ ಇದರ ಬಾಲಕ್ಕೆ ಬಟ್ಟೆಯನ್ನು ಸುತ್ತಿ ಬೆಂಕಿಯನ್ನು ಹೊತ್ತಿಸಿ, ಈ ಊರ ಬೀದಿಯ ಚೌಕಗಳಲ್ಲೆಲ್ಲ ಉದ್ಯಾನ ವನ್ನು ಹಾಳುಮಾಡಿದ ಕಪಿಯಿದು; ಇದನ್ನು ದಂಡಿಸುತ್ತೇವೆ, ಎಂದು ಡಂಗುರವನ್ನು ಹಾಕುತ್ತ, ಊರ ಸುತ್ತ ತಿರುಗಿಸಿ, ಚೆನ್ನಾಗಿ ಹೊಡೆದು, ತರುವಾಯ, ಊರ ಹೊರಗೆ ತಳ್ಳಿಬಿಡಿರಿ, ಎಂದು ಕಂಚುಕಿಗಳಿಗೆ ಆಜ್ಞೆ ಮಾಡಿದನು.

ದೊರೆಯ ಬಾಯಿಂದ ಮಾತು ಹೊರಡುವುದೇ ತಡೆ; ಕೇಳಬೇಕೇ ಆಳುಗಳ ಸಡಗರವನ್ನು! ಅವರ ಕೂಗೆಷ್ಟು? ಬಯ್ಗುಳೆಷ್ಟು? ಆಳುಗಳು ಹನುಮಂತನನ್ನು ಹಿಡಿದುಕೊಂಡರು; ಬಯ್ದರು; ಬಡಿದರು; ಅವನ ಬಾಲವನ್ನು ಹಿಡಿದು ಎಳೆದು, ಅದಕ್ಕೆ ಹತ್ತಿಯ ಬಟ್ಟೆಗಳನ್ನು ಬಿಗಿದು ಸುತ್ತಿದರು. ಕೊನೆಗೆ ಬೆಂಕಿಯನ್ನೂ ಹೊತ್ತಿಸಿದರು. ಬಾಲಕ್ಕೆ ಬೆಂಕಿಯು ಹೊತ್ತಿಕೊಳ್ಳಲು, ಚೆಂಗಣಿಗಿಲೆಯ ಹೂಗಳ ಜೊಂಪೆಯನ್ನು ಕಟ್ಟಿ ಇರಿಸಿದಂತೆ ಉರಿಯು ಕಾಣುತ್ತಿದ್ದಿತು. ಸೀತೆಯ ಕಾವಲಿನ ರಕ್ಕಸಿ ಯರು ಅವಳನ್ನು ನೋಡಿ, ಎಲೆ ಹೆಣ್ಣೇ, ಸುದ್ದಿಯನ್ನು ಕೇಳಿದೆಯಾ? ನೆನ್ನೆ ನಿನ್ನ ಕೂಡ ಮಾತನಾಡಿ ಈ ತೋಟವನ್ನು ಲೂಟಿಮಾಡಿದ



ಕೋತಿಯನ್ನು ನಮ್ಮ ಅರಸರ ಬಳಿಗೆ ಹಿಡಿದುಕೊಂಡು ಹೋದರಂತೆ; ದೊರೆಯು ವಿಚಾರಣೆಮಾಡಿ ತಪ್ಪುಮಾಡಿದ ಆ ಕಪಿಯ ಬಾಲವನ್ನು, ಸುಟ್ಟುಬಿಡುವಂತೆ ಅಪ್ಪಣೆ ಮಾಡಿದನಂತೆ; ಈಗ ಆ ಕೋತಿಯ ಬಾಲಕ್ಕೆ ಬಟ್ಟೆಯನ್ನು ಸುತ್ತಿ ಬೆಂಕಿಯನ್ನು ಹೊತ್ತಿಸಿದ್ದಾರೆಯಂತೆ, ಎಂದು ಹೇಳಿದರು.

ಅವರ ಮಾತ ಕೇಳಿ ಸೀತೆಯು ವ್ಯಸನಾಕ್ರಾಂತೆಯಾಗಿ ಆಂಜನೇಯನಿಗೆ ಬೆಂಕಿಯಿಂದ ಏನೂ ಕೇಡಾಗದಿರಲಿ, ಎಂದು ಅಗ್ನಿಯನ್ನು ಪ್ರಾರ್ಥಿಸಿಕೊಂಡಳು. ಪತಿವ್ರತೆಯರ ಪ್ರಭಾವವನ್ನು ಬಣ್ಣಿಸುವುದಕ್ಕೆ ಆಗುವುದಿಲ್ಲ; ಸೀತೆಯ ಮಾತಿನಂತೆ ನಡೆಯದಿದ್ದರೆ ನಾನೆಲ್ಲಿ ಅವಳ ಪಾತಿವ್ರತ್ಯದ ಬೆಂಕಿಯಿಂದ ಬೆಂದುಹೋಗುವೆನೋ ಎಂದು ಹೆದರಿ, ಅಗ್ನಿಯು ಮಾರುತಿಗೆ ತಣ್ಣಗೆ ತೋರಿದನು.

ತರುವಾಯ ಹನುಮಂತನು ನಾನು ಈ ಊರನ್ನೆಲ್ಲ ಸರಿಯಾಗಿ ನೋಡಲಿಲ್ಲ. ಈಗ ಅಗ್ನಿಸಾಕ್ಷಿಯಾಗಿ ನೋಡುತ್ತೇನೆ, ಎಂದುಕೊಂಡು ತನ್ನನ್ನು ಹಿಡಿದುಕೊಂಡು ಬೊಬ್ಬೆಹಾಕುತ್ತ ಬರುತ್ತಿದ್ದ ರಾಕ್ಷಸ ದೂತರನ್ನೆಲ್ಲ ಕಯ್ಯಲ್ಲಿ ಹಿಡಿದಿದ್ದ ಲಾಳವಿಂಡಿಗೆಯಿಂದ ಹೊಡೆದು, ಯಮ ದೂತರ ಬಳಿಗೆ ಅಟ್ಟಿ, ಬೀದಿಬೀದಿಗೂ ಮನೆಮನೆಗೂ ಬೆಂಕಿಯನ್ನು ಹೊತ್ತಿಸಿದನು. ಊರೆಲ್ಲವೂ ಬೇಯತೊಡಗಿತು. ಹೊಗೆಯು ಆಕಾಶವನ್ನು ಮುಟ್ಟಿತು. ರಾಜಾರಾವಣನ ಅಪಕೀರ್ತಿಯು ಮುಗಿಲನ್ನು ಮುಟ್ಟಿತೋ? ಲಂಕೆಯೆಂಬ ಹೆಂಗುಸು ತನ್ನ ಮುಂದಣ ವೈಧವ್ಯವನ್ನು ಸೂಚಿಸುವುದಕ್ಕಾಗಿ ತಲೆಗೂದಲನ್ನು ಕೆದರಿಕೊಂಡು ಇದ್ದಾಳೆಯೋ? ರಾಕ್ಷಸ ಸ್ತ್ರೀಯರ ಮುಖಗಳಿಗೆ ಬಳಿಯುವ ಕಾಡಿಗೆಯೋ ಎಂಬಂತೆ ದಿಕ್ಕುದಿಕ್ಕಿಗೂ ಹೊಗೆಯು ಕವಿಯಿತು. ಈ ರೀತಿ ಊರು ಬೆಂಕಿಯಿಂದ ಬೇಯುತ್ತಿರಲು ಪುರನಿವಾಸಿಗಳು ಭಯಭ್ರಾಂತರಾಗಿ ಅಪ್ಪಾ, ಎಲ್ಲಿದ್ದೀಯೆ? ಅಮ್ಮಾ, ಎತ್ತಹೋದೆ? ಮಗನೇ, ಬದುಕಿದ್ದೀಯಾ? ಮಿತ್ರನೇ, ಅಯ್ಯೋ! ಸತ್ತೆಯಾ? ನನಗೇನು ಗತಿ? ಕೈ ಮೈಯ್ಯೆಲ್ಲಾ ಸುಟ್ಟುಹೋಯಿತಲ್ಲಾ! ಅಯ್ಯಯ್ಯೋ! ಬದುಕಲಾರೆನಲ್ಲ! ಎಂದು ಮನಬಂದಂತೆ ಚೀತ್ಕಾರಮಾಡುತ್ತಾ ಅಳುತ್ತಿದ್ದರು. ಹೀಗೆ ಎಲ್ಲಿ

ನೋಡಿದರೂ ಲಂಕಾಪುರದ ಜನರ ಗೋಳು ಕೇಳಿಸುತ್ತಿದ್ದಿತು. ತಮ್ಮ ಮನೆಗಳೆಲ್ಲ ಉರಿಯುತ್ತಿರುವುದನ್ನು ನೋಡಿ, ಜನರು ಕಣ್ಣೀರನ್ನು ಕರೆದರು. ಇದ್ದಕ್ಕಿದ್ದಂತೆ ಗಾಳಿಯು ಎದ್ದು ಉರಿಯು ಮತ್ತಷ್ಟು ಉಗ್ರವಾಯಿತು. ಹೆಚ್ಚು ಮಾತಾಡುವುದೇಕೆ? ರಾಮದೂತನು ಊರೊಳಗೆ ಬಂದು, ಯಮದೂತರ ಬರವಿಗೆ ಎಡೆಮಾಡಿಬಿಟ್ಟನು. ಲಂಕಾಪುರವೆಲ್ಲವೂ ಬೆಂದುಹೋಗುತ್ತಿದ್ದರೂ, ಸೀತಾದೇವಿಯು ಸುಖವಾಗಿ ಇದ್ದಾಳೆ ಎಂದು ದೇವತೆಗಳು ಮಾತಾಡುತ್ತಿದ್ದುದನ್ನು ಕೇಳಿ, ಆಂಜನೇಯನು ಸಂತಸಪಟ್ಟು, ಅವಳನ್ನು ಮತ್ತೆ ನೋಡಿ, ಅವಳಿಗೆ ನಮಸ್ಕರಿಸಿ, ಹೋಗಿಬರುತ್ತೇನೆಂದು ಹೇಳಿಕೊಂಡು, ರಾಮನ ಬಳಿಗೆ ಹೋಗುವುದಕ್ಕೆ ಅಣಿಮಾಡಿಕೊಂಡನು.

ಬಳಿಕ ವಾಯುಪುತ್ರನು ಅರಿಷ್ಟವೆಂಬ ಬೆಟ್ಟವನ್ನು ಏರಿ, ಅಲ್ಲಿಂದ ಸಾಗರವನ್ನು ದಾಟಿ, ಅಂಗದಾದಿಗಳು ಇದ್ದ ಮಹೇಂದ್ರಪರ್ವತಕ್ಕೆ ಬಂದು, ತಾನು ಮಾಡಿದ ಕೆಲಸವನ್ನೆಲ್ಲ ಅವರಿಗೆ ತಿಳಿಸಿ, ಅವರೆಲ್ಲರನ್ನೂ ಸಂತೋಷಸಾಗರದಲ್ಲಿ ಅದ್ದಿದನು.

ಹನುಮಂತನು ಹೇಳಿದ ವೃತ್ತಾಂತವನ್ನೆಲ್ಲ ಕೇಳಿ, ಅಂಗದ ನಳ ಮೊದಲಾದ ನಾಯಕರೆಲ್ಲರೂ ಸಂತುಷ್ಟರಾಗಿ, ಈ ಸಂತೋಷವಾರ್ತೆಯನ್ನು ರಾಮಲಕ್ಷ್ಮಣ ಸುಗ್ರೀವರಿಗೆ ತಿಳಿಸಬೇಕೆಂದು ಆತುರದಿಂದ ಹಿಂದಿರುಗಿ ಬರುತ್ತಿದ್ದರು. ಮಧ್ಯಮಾರ್ಗದಲ್ಲಿ ಸುಗ್ರೀವರಾಜನ ಮಧುವನವು ಸಿಕ್ಕಿತು. ಹನುಮಂತನ ಅನುಮತಿಯಿಂದ ಎಲ್ಲರೂ ವನಕ್ಕೆ ನುಗ್ಗಿದರು. ತೋಟದ ಕಾವಲುಗಾರನಾದ ದಧಿಮುಖನು ಅವರನ್ನು ತಡೆದನು. ಎಲ್ಲರೂ ಸೇರಿ, ಅವನನ್ನು ಚೆನ್ನಾಗಿ ಹೊಡೆದು, ಅಟ್ಟಿ ಯಥೇಚ್ಛೆಯಾಗಿ ಮಧುಪಾನವನ್ನು ಮಾಡಿದರು.

ಇತ್ತ, ಅವರಿಂದ ಪೆಟ್ಟು ತಿಂದ ದಧಿಮುಖನು, ಸುಗ್ರೀವನ ಬಳಿಗೆ ಓಡಿ ಬಂದು, ತನಗೆ ಅಂಗದಾದಿಗಳು ಮಾಡಿದ ಅಪಮಾನವನ್ನೂ, ಮಧುವನದಲ್ಲಿ ಅವರು ಮಾಡಿದ ಲೂಟಿಯನ್ನೂ ಬಿನ್ನವಿಸಿದನು. ಸುಗ್ರೀವನು ಆ ಸುದ್ದಿಯನ್ನು ಕೇಳಿ, ಅವರು ಸೀತೆಯ ದರ್ಶನವನ್ನು ಮಾಡಿ ಬಂದಿರಬೇಕೆಂದು ನಿಶ್ಚಯಿಸಿ ಬಹುಸಂತೋಷಪಟ್ಟನು.

ಅಷ್ಟರಲ್ಲಿ, ಹನುಮದಾದಿಗಳೆಲ್ಲರೂ ಅಲ್ಲಿಗೆ ಬಂದು ಸೇರಿದರು. ಲಕ್ಷ್ಮಣನು ಅತ್ಯಾತುರದಿಂದ ಆಂಜನೇಯನನ್ನೇ ನೋಡುತ್ತಿದ್ದನು. ಹನುಮಂತನು ಎಲ್ಲರಿಗೂ ಕಾಣುವಂತೆ, ಸೀತಾದೇವಿಯ ಚೂಡಾಮಣಿಯನ್ನು ಕಯ್ಯಲ್ಲಿ ಹಿಡಿದುಕೊಂಡು ಬಂದು, ಶ್ರೀರಾಮನ ಪಾದಗಳಿಗೆ ನಮಸ್ಕಾರಮಾಡಿ, ಸ್ವಾಮಿನ್, ಬಿನ್ನಹವನ್ನು ಲಾಲಿಸಬೇಕು. ಲಂಕಾಪಟ್ಟಣದಲ್ಲಿ, ಸೀತಾದೇವಿಯು ರಾಕ್ಷಸಿಯರ ಕಾಹಿನಲ್ಲಿ ಇದ್ದಾಳೆ. ಅವಳು ತಮ್ಮ ವಿರಹದಿಂದ ಪರಿತಪಿಸುತ್ತಿದ್ದಾಳೆ. ತಮ್ಮ ಜೀವನಚರಿತ್ರೆಯನ್ನು ಹೇಳಿಯೂ, ಮುದ್ರೆಯುಂಗುರವನ್ನು ಕೊಟ್ಟೂ, ಆಕೆಯನ್ನು ಸಂತೋಷಪಡಿಸಿದೆನು. ತಮ್ಮಲ್ಲಿ ಹೇಳತಕ್ಕುದೇನಾದರೂ ಇದ್ದರೆ ಹೇಳಬೇಕೆಂದೂ, ತಮಗೆ ಸಮರ್ಪಿಸತಕ್ಕ ವಸ್ತುವಿದ್ದರೆ ಕೊಡಬೇಕೆಂದೂ ನಾನು ಆಕೆಯನ್ನು ಬೇಡಿದೆನು. ಆಕೆಯು ದುಃಖದಿಂದ ಬಿಕ್ಕಿ ಬಿರಿಯುತ್ತ, ತಮಗೆ ತಿಳಿಸೆಂದು, ಕಾಕಾಸುರ ವೃತ್ತಾಂತವನ್ನು ಹೇಳಿದಳು. ತಮಗೆ ಕೊಡಬೇಕೆಂದು ಈ ಚೂಡಾಮಣಿಯನ್ನು ಕೊಟ್ಟಳು. ಸನ್ನಿಧಿಯಲ್ಲಿ ಮತ್ತೆ ಏನನ್ನು ವಿಜ್ಞಾಪಿಸಿಕೊಳ್ಳಲಿ? ತಾವು ಅತ್ತ ಬಿಜಯಮಾಡುವಿರೆಂಬ ಆಸೆಯಿಂದ ದೇವಿಯು ಪ್ರಾಣಗಳೊಡನೆ ಇದ್ದಾಳೆ; ತಮ್ಮ ಮುದ್ರೆಯುಂಗುರವನ್ನು ಆಕೆಗೆ ಕೊಟ್ಟು, ನಾನು ಸನ್ನಿಧಿಗೆ ಬಂದಿದ್ದೇನೆ, ಎಂದು ಅರಿಕೆಮಾಡಿದನು.

ಎಂಬಲ್ಲಿಗೆ ರಾಮಾಯಣ ಸಂಗ್ರಹದಲ್ಲಿ ಸುಂದರಕಾಂಡವು.

ಯುದ್ಧಕಾಂಡ

ಶ್ರೀರಾಮನು, ಆಂಜನೇಯನಿಂದ ಸೀತಾದೇವಿಯ ನಿರ್ದುಷ್ಟವಾದ ನಡತೆಯ ವಿಷಯವನ್ನು ಕೇಳಿ, ಅತ್ಯಾನಂದವುಳ್ಳವನಾದನು. ಅವಳನ್ನು ಕದ್ದುಕೊಂಡು ಹೋಗಿ, ಲಂಕೆಯೊಳಗೆ ಸೆರೆಯಲ್ಲಿ ಇಟ್ಟಿರುವ ರಾವಣನ ಅನ್ಯಾಯಕಾರ್ಯವನ್ನು ನೆನೆದು, ಅವನಿಗೆ ಅತ್ಯಂತ ಕೋಪವು ಉಂಟಾಯಿತು. ವೀರಾಗ್ರೇಸರನಾದ ಆತನು ಒಂದು ತಡವೆ ತನ್ನ ಬಿಲ್ಲನ್ನು ನೋಡಿದವನಾಗಿ, ಸುಗ್ರೀವಾದಿ ಕಪಿನಾಯಕರಿಗೆ ಯುದ್ಧಕ್ಕೆ ಹೊರಡಬಹುದೆಂದು ಅಪ್ಪಣೆಮಾಡಿದನು.

ಶ್ರೀರಾಮನ ಕೋಪದ ಭಾವವನ್ನು ಅರಿತು, ಸುಗ್ರೀವನ ಯುದ್ಧಮಾಡಬೇಕೆಂಬ ಕುತೂಹಲವು ಇಮ್ಮಡಿಯಾಗಲು, ಸೀತೆಯ ಸುದ್ದಿಯು ತಿಳಿದ ಬಳಿಕ ಅವಳನ್ನು ಅಪಹರಿಸಿದ ಕಳ್ಳನನ್ನು ಸಂಹರಿಸಿ, ಅವಳನ್ನು ತಂದು ಒಪ್ಪಿಸುತ್ತೇನೆ, ಎಂದು ಹೇಳಿದ್ದ ಮಾತಿನಂತೆ ನಡೆಯ ಬೇಕೆಂದು ಬಯಸಿ, ಸಮುದ್ರವನ್ನು ಒಂದು ಬಾವಿಯನ್ನು ಹಾರುವಂತೆ ಹಾರಿ ತ್ರಿಕೂಟಪರ್ವತದ ಮೇಲೆ ಕಟ್ಟಿರುವ ಲಂಕೆಗೆ ದಾಳಿಯಿಡುವುದಕ್ಕೆ ಮಹಾಪರಾಕ್ರಮಿಗಳಾದ ಅಂಗದ ಕುಮುದ ನಳ ನೀಲ ಮೊದಲಾದ ಸೇನಾಪತಿಗಳಿಗೆ ಸೇನೆಯೊಡನೆ ಸಿದ್ಧವಾಗಿರುವಂತೆ ಆಜ್ಞೆಮಾಡಿದನು. ಕಪಿಸೇನೆಯೆಲ್ಲವೂ ಶ್ರೀರಾಮನ ಕಡೆಗಣ್ಣ ನೋಟದಿಂದ ಅತ್ಯಂತವಾಗಿ ಸಂತೋಷಪಟ್ಟು, ತೆಂಕಣ ಕಡಲ ಕಡೆಗೆ ಪಯಣಮಾಡಿತು.

ಶ್ರೀರಾಮನು ಆಂಜನೇಯನ ಹೆಗಲ ಮೇಲೆ ಕುಳಿತನು. ಅಂಗದನ ಹೆಗಲ ಮೇಲೆ ಲಕ್ಷ್ಮಣನು ಕುಳಿತುಕೊಂಡನು. ಜಾಂಬವಂತನು ತನ್ನ ಕರಡಿಗಳ ಪಡೆಯನ್ನು ಕೂಡಿ ನಡೆದನು. ನಳ ನೀಲಾದಿ ಕಪಿನಾಯಕರು ತಮ್ಮ ತಮ್ಮ ಸೇನೆಯೊಡನೆ ಹೊರಟರು. ಈ ಸೈನ್ಯದ ಕೋಲಾಹಲವು ದಿಕ್ಕುಗಳಲ್ಲೆಲ್ಲಾ ತುಂಬಿಹೋಯಿತು. ಈ ಪಡೆಯ ಕಳಕಳಕ್ಕೆ ಅರಣ್ಯದಲ್ಲಿರುವ ಕೋಣಗಳ ಹಿಂಡು ಬೆದರಿದುವು ; ಸಿಂಹಗಳ ಸಮೂಹವು ಬೆರಗಾದುವು ; ಕಾಡಾನೆಗಳ ಗುಂಪು ಓಡಿಹೋದುವು ; ಹುಲಿಗಳ ಸೊಲ್ಲು ಅಡಗಿತು ; ಎರಳೆಗಳು ದಿಕ್ಕುಪಾಲಾಗಿ ಓಡಿಹೋಗಿ, ದೂರದಲ್ಲಿ ನಿಂದು

ತಮ್ಮ ಮರಿಗಳನ್ನು ನೋಡುತ್ತಿದ್ದುವು. ಈ ಅಪರಿಮಿತವಾದ ಸೇನೆಯ ಪಯಣದಿಂದ ನದಿಗಳು ಹೂಳಿಹೋಗಿ, ಸಣ್ಣ ಕೆರೆಗಳಾದುವು. ಕಾಡುಗಳೆಲ್ಲ ಹೆದ್ದಾರಿಗಳಾದುವು. ಸೇನೆಯು ಸಹ್ಯಪರ್ವತವನ್ನು ಆಕ್ರಮಿಸಿ, ಅಲ್ಲಿಂದ ಗಂಧದ ಮರದ ಕಾಡುಗಳಿರುವ ಮಲಯಾಚಲಕ್ಕೆ ಬಂದು ಸೇರಿತು.

ಮಲಯಪರ್ವತವನ್ನು ಸೇರಿದ ತರುವಾಯ, ರಾಮನು ಲಕ್ಷ್ಮಣನನ್ನು ನೋಡಿ, ತಮ್ಮಾ, ಈ ಬೆಟ್ಟದಿಂದ ಹರಿಯುವ ಹೊಳೆಗಳಲ್ಲಿ ಏಳುವ ಅಲೆಗಳನ್ನು ನೋಡು; ಅವು ದಡಕ್ಕೆ ಬಡಿದು ಎದ್ದ ತುಂತುರುಗಳಿಂದ ನೆನೆದಿರುವ ಈ ಗಂಧದ ಮರಗಳನ್ನು ಕಂಡೆಯಾ? ಇಲ್ಲಿ ಕೋಗಿಲೆಗಳು ಕುಳಿತು ಕುಹೂಂ, ಕುಹೂಂ ಎಂದು ಪಂಚಮಸ್ವರದಿಂದ ಕೂಗುತ್ತಿವೆ; ಈ ಶೀತವಾದ ಸುಗಂಧಯುಕ್ತವಾದ ವಾಯುವನ್ನು ಸೇವಿಸಿದೆಯಾ? ಹತ್ತಿರದಲ್ಲಿ ಸೀತೆಯಿಲ್ಲದಿರುವುದರಿಂದ ಇವೆಲ್ಲ ನನ್ನ ಮನಸ್ಸಿಗೆ ಸಂಕಟವುಂಟುಮಾಡುತ್ತಿವೆ, ಎಂದು ದೈನ್ಯವಚನವನ್ನು ನುಡಿಯುತ್ತ, ಸಮುದ್ರದ ದಡದಲ್ಲಿರುವ ಮಹೇಂದ್ರಪರ್ವತವನ್ನು ಏರಿ, ಸುಳಿಗಳಿಂದೊಡಗೂಡಿದ ಗಂಭೀರವಾದ ದಕ್ಷಿಣ ಸಮುದ್ರವನ್ನು ಕಂಡನು.

ಆ ಅಪಾರವಾದ ಸಾಗರವನ್ನು ಕಂಡು ರಾಮನು ಅತ್ಯಂತಾಶ್ಚರ್ಯಭರಿತನಾಗಿ, ಸುಗ್ರೀವನನ್ನು ನೋಡಿ, ಅಯ್ಯಾ ಕಪಿರಾಜ, ಬೆಟ್ಟಗಳಂತೆ ಅಲೆಗಳೇಳುತ್ತಿರುವ ಈ ಕಡಲನ್ನು ನೋಡು. ಇದರ ಆಳವನ್ನು ಇಷ್ಟೆಂದು ಹೇಳುವುದಕ್ಕೆ ಪಾತಾಳದಲ್ಲಿರುವ ಸಾವಿರ ಬಾಯ ಶೇಷನಿಂದಲೂ ಆಗುವುದಿಲ್ಲ. ನಮ್ಮ ದೃಷ್ಟಿಪಥದಿಂದಾಚೆಗೆ ಈ ಕಡಲಲ್ಲಿ ಎಷ್ಟೋ ದ್ವೀಪಗಳೂ ಮರಳ ದಿಬ್ಬಗಳೂ ಇವೆ. ಇದರ ವಿಸ್ತಾರವನ್ನು ಇಷ್ಟೆಂದು ವಿವರಿಸುವುದು ಸಾಧ್ಯವಲ್ಲ. ಇಂಥ ಅಗಾಧವೂ ಅಪಾರವೂ ಆದ ಸಾಗರವನ್ನು ನಮ್ಮ ಪೂರ್ವರಾಜನಾದ ಸಗರಸಕುಮಾರರು ತಮ್ಮ ಉಗುರುಗಳಿಂದ ಶ್ರಮವಿಲ್ಲದೆ ಬಗಿದುಬಿಟ್ಟರಲ್ಲ! ಅಂಥ ಮಹಾಮಹಿಮರಾದ ಅವರಿಗೆ ನಮಸ್ಕಾರ ಎಂದು ಹೇಳಿ, ಈ ದಿನ ಸೇನೆಯು ಈ ಬೆಟ್ಟದ ತಪ್ಪಲ ಕಾಡುಗಳಲ್ಲಿ ಬೀಡನ್ನು ಬಿಡಲಿ, ಎಂದು ಆಜ್ಞಾಪಿಸಿದನು.

ಶ್ರೀರಾಮನ ಆದೇಶದಂತೆ ಸುಗ್ರೀವನು, ಮಲಯಮಾರುತದಿಂದ ರಮ್ಯವಾಗಿರುವ ಆ ಬೆಟ್ಟದ ತಪ್ಪಲ ವನದಲ್ಲಿ ಸೈನ್ಯವು ತಂಗುವಂತೆ ಸೇನಾನಾಯಕರಿಗೆ ಸೂಚಿಸಿದನು. ಅದರಂತೆ ಸಕಲ ಸೈನ್ಯವೂ ಆ ಪ್ರದೇಶದಲ್ಲಿ ಬೀಡನ್ನು ಬಿಟ್ಟಿತು. ಗಂಧದ ವಾಸನೆಯಿಂದಲೂ, ಕಸ್ತೂರಿಯ ಕಂಪಿಂದಲೂ, ಸೊಂಪಾದ ಮಹೇಂದ್ರಪರ್ವತದ ವನ ಪ್ರದೇಶದಲ್ಲಿ ಹಲಸು, ತಾಳೆ, ಮಾವು ಮುಂತಾದ ಮರಗಳಿಂದ ಕಳಿತ ಹಣ್ಣುಗಳು ನೆಲದ ಮೇಲೆ ಹೇರಳವಾಗಿ ಬಿದ್ದು ಉರುಳಾಡುತ್ತಿದ್ದುವು. ಕಪಿಗಳೆಲ್ಲವೂ ವನದಲ್ಲಿ ಸಂಚರಿಸುತ್ತ, ಸಿಹಿಯಾದ ಹಣ್ಣುಗಳನ್ನು ತಿಂದು, ಹೊಟ್ಟೆಯನ್ನು ತುಂಬಿಕೊಂಡುವು.

ಈ ರೀತಿ ಸಮುದ್ರತೀರದಲ್ಲಿ, ನಡೆಯುವ ಕಡಲಂತೆ ಮೆರೆಯುವ ಕಪಿಸೇನೆಯನ್ನೂ, ಅದು ಸಮುದ್ರವನ್ನು ದಾಟಲು ಸಮರ್ಥವಾದುದು ಎಂಬುದನ್ನೂ, ಅದು ಯುದ್ಧಮಾಡುವುದಕ್ಕಾಗಿಯೇ ಬಂದಿದೆಯೆಂಬು ದನ್ನೂ ರಾವಣನು ಗೂಢಚಾರರಿಂದ ತಿಳಿದು, ಮುಂದೆ ಏನ ಮಾಡ ಬೇಕೆಂದು ತಿಳಿಯದವನಾಗಿ, ಸೀತೆಯನ್ನು ಬಿಡುವುದಕ್ಕೂ ಮನಸ್ಸು ಬಾರದೆ, ಮಂತ್ರಿಗಳೊಡನೆ ಆಲೋಚನೆಮಾಡಬೇಕೆಂದು, ಸಭಾ ಮಂಟಪವನ್ನು ಪ್ರವೇಶಿಸಿದನು. ಪ್ರಹಸ್ತ ಮುಂತಾದ ಮಂತ್ರಿ ಗಳೆಲ್ಲರೂ ಸೇರಿದರು.

ಆಗ, ರಾಜಾ ರಾವಣನು ಅವರೊಡನೆ, ಎಲೈ ಮಂತ್ರಿಗಳಿರಾ, ಹಗೆಗಳು ನಮ್ಮ ಮೇಲೆ ದಂಡೆತ್ತಿ ಬರುತ್ತಾರೆಂದು ನಮಗೆ ವರ್ತಮಾನವು ಬಂದಿದೆ. ನಾವು ಅಪಹಾರಮಾಡಿಕೊಂಡು ಬಂದಿರುವ ಸ್ತ್ರೀರತ್ನವನ್ನು ಕೊಟ್ಟುಬಿಡುವೆವೆಂದರೆ, ಮನಸ್ಸು ಒಪ್ಪದು. ಇದನ್ನು ನೀವೆಲ್ಲರೂ ಕೇಳಿಯೂ ಇದ್ದೀರಿ; ನಿತ್ಯವೂ ನೋಡುತ್ತಲೂ ಇದ್ದೀರಿ. ಹೀಗಿರುವಲ್ಲಿ, ಈಗ ನಾವು ಏನ ಮಾಡಬೇಕು? ಹೇಳಿರಿ, ಎಂದು ಕೇಳಿದನು.

ಅಲ್ಲಿ ಸೇರಿದ್ದ ಮಂತ್ರಿಗಳು ಅರಸನ ಪಕ್ಷದವರು. ದೊರೆಯ ಮಾತಿಗೆ ತಲೆಯಾಡಿಸುವವರು. ಅವನಿಗೆ ಬೇಕಾದಂತೆ ಮಾತನ್ನು ಆಡುವವರು. ಅವರು ರಾವಣನನ್ನು ನೋಡಿ, ಜೀಯಾ, ನಾವು

ನಿಮ್ಮ ಅಪ್ಪಣೆಯನ್ನು, ತಲೆಯಲ್ಲಿ ಹೊತ್ತು ನಡೆಸುತ್ತೇವೆ; ಮಹಾ ಬಲಶಾಲಿಗಳು ನಾವು. ಇನ್ನೂ ನಾವು ಜೀವಿಸಿರುವಾಗ ನಿಮ್ಮನ್ನು ದೂರುವವರು ಯಾರು? ತಾವು ಅಪಹರಿಸಿ ತಂದಿರುವ ಸ್ತ್ರೀರತ್ನವನ್ನು ಸರ್ವಥಾ ಬಿಡಕೂಡದು, ಎಂದು ಬಿನ್ನವಿಸಿದರು.

ಆಗ, ಅವರೊಡನೆ ರಾವಣನು ರಂಭೆಯ ಮೂಲಕ ನಲಕೂಬರ ನಿಂದ ತನಗೆ ಬಂದಿದ್ದ ಶಾಪವನ್ನೂ, ತಾನು ಕೈಲಾಸಪರ್ವತವನ್ನು ಎತ್ತಿದಾಗ ನಂದಿಯು ಕೊಟ್ಟ ಶಾಪವನ್ನೂ, ಪುಂಜಿಕಸ್ಥಲಿಯೆಂಬ ಅಪ್ಸರಸ್ಸನ್ನು ತಾನು ದುರ್ಬುದ್ಧಿಯಿಂದ ತಡೆದಾಗ, ಬ್ರಹ್ಮನು ಕೋಪಗೊಂಡು, ಎಲಾ ದುಷ್ಟ, ಇಂದು ಮೊದಲು ನೀನು ಯಾವ ಹೆಂಗುಸನ್ನಾದರೂ ಬಲಾತ್ಕಾರಮಾಡಿದರೆ, ನಿನ್ನ ತಲೆಯು ನೂರು ಹೋಳಾಗಿ ಬಿರಿದುಹೋಗಲಿ, ಎಂದು ಕೊಟ್ಟಿದ್ದ ಶಾಪವನ್ನೂ ತಿಳಿಸಿ, ಇದಾವ ಪ್ರತಿಬಂಧಕವೂ ಇಲ್ಲದಿದ್ದರೆ, ನಾನು ಆಗಲೇ ಸೀತೆಯನ್ನು ವಶಪಡಿಸಿಕೊಳ್ಳುತ್ತಿದ್ದೆನೆಂದೂ ಹೇಳಿದನು.

ಈ ರೀತಿಯಾಗಿ ತನ್ನ ಅಣ್ಣನು ಹೇಳುತ್ತಿದ್ದ ಮಾತುಗಳನ್ನು ಕೇಳಿ, ವಿನಯಶಾಲಿಯಾದ ವಿಭೀಷಣನಿಗೆ ಬಹು ಕೋಪವು ಬಂದಿತು. ಅವನು ರಾವಣನನ್ನು ನೋಡಿ, ಪ್ರಭೂ, ನನ್ನ ವಿಜ್ಞಾಪನೆಯನ್ನು ತಾವು ಚಿತ್ತಕ್ಕೆ ತಂದುಕೊಳ್ಳಬೇಕು. ತಾವು ರಾಕ್ಷಸ ಚಕ್ರವರ್ತಿಗಳು. ತಮಗೆ ಈಗ ಇತರರ ಹೆಂಡಿರಲ್ಲಿ ಸಲ್ಲದ ಬಯಕೆಯು ಉಂಟಾಗಿದೆ; ಇದೇನು ಕೇಡುಗಾಲವೋ! ಕೇಸುರಿಯನ್ನು ಮಾಂಸವೆಂದು ತಿಳಿದು ನಾಲಗೆಯನ್ನು ನೀಡಬಹುದೇ? ಕಳಂಕಹೀನವಾದ ಬ್ರಹ್ಮನ ವಂಶದಲ್ಲಿ ಹುಟ್ಟಿದವರು ಇಂಥ ಕೇಡುಬುದ್ಧಿಯನ್ನು ಮಾಡಬಹುದೇ? ಅಣ್ಣಾ, ಪರಾಂಬರಿಸಿರಿ. ಸಮುದ್ರದ ನಡುವೆಯಿರುವ ಈ ಪುರವೆಲ್ಲಿ? ಇಲ್ಲಿಗೆ ಬೇರೆ ಕಡೆಯಿಂದ, ಕೋತಿಯು ಬರುವುದೆಂದರೇನು? ಅದರಿಂದ ನಮಗೆ ಹಾನಿಯು ತಟ್ಟಿತೆಂದರೆ ಏನ ಹೇಳೋಣ? ನೀವು ತಂದಿರುವ ಸೀತೆಯು ಹೆಣ್ಣಲ್ಲ. ನಮ್ಮ ರಾಕ್ಷಸಕುಲವನ್ನೇ ನಿರ್ಮೂಲಮಾಡಲಿಕ್ಕೆ ಬಂದಿರುವ ಮಾರಿ, ಎಂದು ತಿಳಿಯಿರಿ. ಕಾರ್ತವೀರ್ಯನನ್ನು ಸಂಹರಿಸಿದ ಪರಶುರಾಮನ ಗರ್ವವನ್ನು ಮುಗ್ಗಿಸಿ, ವಾಲಿಯನ್ನು ಒಂದೇ ಬಾಣದಿಂದ

ವಧಿಸಿದ ಶ್ರೀರಾಮನ ಮುಂದೆ, ನಿಮ್ಮ ಪರಾಕ್ರಮವೆಷ್ಟು ಮಾತ್ರ? ನೀವು ಹೀಗೆ ಮಾಡಿರುವುದು ನಿಮ್ಮಂಥ ರಾಜರಿಗೆ ತಕ್ಕುದಲ್ಲ, ಎಂದು ನೀತಿಯುಕ್ತವಾಗಿಯೂ, ಹಿತವಾಗಿಯೂ ಇರುವ ಮಾತುಗಳನ್ನು ಹೇಳಿದನು.

ವಿಭೀಷಣನ ನ್ಯಾಯಸಮ್ಮತವಾದ ಮಾತುಗಳು ರಾವಣನಿಗೆ ರುಚಿಸಲಿಲ್ಲ. ಈ ಸಭೆಯಲ್ಲಿ, ಎಲ್ಲರೂ ನನ್ನ ಮಾತನ್ನು ಅನುಮೋದಿಸಿ, ಅದರಂತೆ ಕಾರ್ಯವನ್ನು ಮಾಡುತ್ತೇವೆ ಎಂದು ಹೇಳುತ್ತಿರುವಾಗ, ತ್ರಿಲೋಕಾಧೀಶ್ವರನಾದ ನನ್ನನ್ನೂ ಲೆಕ್ಕಿಸದೆ, ಅಣ್ಣನೆಂಬ ಗೌರವವನ್ನೂ ನನ್ನಲ್ಲಿ ಇಡದೆ, ಈ ವಿಭೀಷಣನು ಬಾಯಿಗೆ ಬಂದಂತೆ ಬಗುಳುತ್ತಿದ್ದಾನೆ; ಇವನು ಹಗೆಗಳ ಪಕ್ಷವನ್ನು ಹಿಡಿದು ವಾದಿಸುತ್ತಾನೆ; ಆದುದರಿಂದ ಇವನೂ ನಮಗೆ ಹಗೆವನೇ. ಇಂಥವನನ್ನು ಅವಶ್ಯವಾಗಿ ದಂಡಿಸಬೇಕು, ಎಂದು ತಮ್ಮನನ್ನು ಮನಬಂದಂತೆ ಬಯ್ದು, ನೀನು ಇಲ್ಲಿಂದ ತೊಲಗಿ ಹೋಗು, ಎಂದು ಅವನ ಮನಸ್ಸಿಗೆ ನೋವು ಉಂಟಾಗುವಂತೆ ರಾವಣನು ಕಟುವಾಗಿ ಮಾತಾಡಿದನು. ನ್ಯಾಯಸಮ್ಮತವಾಗಿಯೂ, ಅರಸನಿಗೆ ಹಿತಕಾರಿಯಾಗಿಯೂ ಇರುವಂತೆ ಮಾತಾಡಿದರೆ, ದೊರೆಯು ನನ್ನನ್ನೇ ನಿಂದಿಸುತ್ತಿದ್ದಾನೆಯಲ್ಲ, ಎಂದು ವಿಭೀಷಣನು ಸಭಾಮಂಟಪವನ್ನು ಬಿಟ್ಟು, ತನ್ನ ನಾಲ್ವರು ಮಂತ್ರಿಗಳ ಸಂಗಡ, ಆಕಾಶಮಾರ್ಗದಲ್ಲಿ ಹೊರಟು, ರಾಮನು ಬೀಡು ಬಿಟ್ಟಿರುವ, ಮಹೇಂದ್ರಪರ್ವತದ ಸಮೀಪಕ್ಕೆ ಬರುತ್ತಿದ್ದನು.

ಇತ್ತ, ಸುಗ್ರೀವಾದಿ ವಾನರವೀರರು ಲಂಕಾಪಟ್ಟಣದ ಕಡೆಯಿಂದ ತಾವಿರುವೆಡೆಗೆ ಬರುತ್ತಿರುವವರು ಯಾರೆಂದು ಕತ್ತೆತ್ತಿ ಆಕಾಶವನ್ನು ನೋಡುತ್ತಿದ್ದರು. ವಿಭೀಷಣನು ತನ್ನ ಮಂತ್ರಿಗಳೊಡನೆ ಗಗನದಲ್ಲಿಯೇ ನಿಂತು, ಅವರನ್ನು ನೋಡಿ, ಎಲೈ ವೀರರಿರಾ, ನಾನು ಪುಲಸ್ತ್ಯವಂಶದಲ್ಲಿ ಹುಟ್ಟಿರುವ ರಾವಣನ ತಮ್ಮನು; ನನ್ನನ್ನು ಅಣ್ಣನಾದ ರಾವಣನು ದುರ್ಭಾಷೆಗಳನ್ನು ಆಡಿ ನೋಯಿಸಿದನು. ಆದುದರಿಂದ, ನಾನು ನನ್ನ ಬಂಧುಗಳನ್ನೆಲ್ಲ ತ್ಯಾಗಮಾಡಿ ಬಂದಿದ್ದೇನೆ. ನನ್ನ ಹೆಸರು ವಿಭೀಷಣನು. ಶತ್ರು

ಭಯಂಕರನಾದ ರಾಮನೇ, ರಕ್ಷಕನೆಂದು ನಂಬಿ, ಅವನ ಬಳಿಗೆ ಬಂದಿದ್ದೇನೆ ಎಂದು ಹೇಳಿದನು.

ಈ ರೀತಿ, ದೈನ್ಯದಿಂದ ಹೇಳಿದ ವಿಭೀಷಣನ ಮಾತನ್ನು ಕೇಳಿ, ಮಾರುತಿಯು ರಾಮನ ಬಳಿಗೆ ಬಂದು, ಪ್ರಭೂ, ನಾನು ಲಂಕಾಪುರಕ್ಕೆ ಹೋಗಿದ್ದಾಗ ಇವನನ್ನು ಕಂಡಿದ್ದೇನೆ; ಈತನು ಧರ್ಮಿಷ್ಠನು; ನ್ಯಾಯಪಕ್ಷಪಾತಿ; ಇವನಿಂದ ನಮಗೆ ತುಂಬ ಉಪಕಾರವಾಯಿತು ಎಂದು ಬಿನ್ನವಿಸಿದನು. ಶ್ರೀರಾಮನು ವಿಭೀಷಣನನ್ನು ನೋಡಿ, ಬಹುದಯಾವಂತನಾದುದರಿಂದ, ಸುಗ್ರೀವಾದಿಗಳನ್ನು ಕುರಿತು, ಕೇಳಿರಯ್ಯಾ ವೀರರಿರಾ, ಅವನು ನಮಗೆ ಶರಣಾಗತನಾಗಿ ಬಂದಿದ್ದಾನೆ. ಅವನನ್ನು ರಕ್ಷಿಸದೆ ಇದ್ದೆನಾದರೆ, ನಮ್ಮ ವಂಶದ ನಿರ್ಮಲವಾದ ಕೀರ್ತಿಗೆ ಕಳಂಕವುಂಟಾಗದಿದ್ದೀತೇ? ಆತನು ನಮ್ಮ ಹಗೆಯ ಬೆನ್ನಲ್ಲಿ ಬಂದವನಾದರೇನು? ಹೊಟ್ಟೆಯಲ್ಲಿ ಹುಟ್ಟಿದವನಾದರೆ ತಾನೇ ಏನು? ಆತನನ್ನು ನಾನು ಅವಶ್ಯವಾಗಿ ರಕ್ಷಿಸುತ್ತೇನೆ; ಒಳ್ಳೆಯದು, ಅವನನ್ನು ನನ್ನ ಬಳಿಗೆ ಕರೆದು ತನ್ನಿರಿ, ಎಂದು ಅಪ್ಪಣೆ ಮಾಡಿದನು.

ಆಗ, ರಾಮನ ಇಂಗಿತವನ್ನು ಅರಿತು ಹನುಮಂತನು ರಾಕ್ಷಸ ಪತಿಯಾದ ವಿಭೀಷಣನನ್ನು ರಾಮನ ಬಳಿಗೆ ಕರೆದುಕೊಂಡು ಬಂದನು. ಅವನು ಬಹುವಿನಯದಿಂದ ರಾಮನಿಗೆ ನಮಸ್ಕರಿಸಿದನು.

ತನಗೆ ವಂದನೆಮಾಡಿದ ವಿಭೀಷಣನನ್ನು ನೋಡಿ, ಶ್ರೀರಾಮನು ಅಯ್ಯಾ ರಾಕ್ಷಸಪತಿಯೇ, ಕೇಳು. ನಾನು ನಿನಗೆ ಈಗಲೇ ಲಂಕಾ ರಾಜ್ಯವನ್ನು ಕೊಟ್ಟಿದ್ದೇನೆ. ಈ ನನ್ನ ನುಡಿಗೆ, ಇಲ್ಲಿರುವ ಕಪಿರಾಜ ನಾದ ಸುಗ್ರೀವನೇ ಸಾಕ್ಷಿ ಎಂದನು. ದೇವರು ಒಲಿದರೆ, ಹಜ್ಜೆ ಹಜ್ಜೆಗೂ ಸುಖಪರಂಪರೆಗಳು ಪ್ರಾಪ್ತವಾಗುತ್ತವೆ, ಎಂದು ಹೇಳ ಬೇಕಾದುದೇ ಇಲ್ಲ.

ಇತ್ತ, ವಿಭೀಷಣನು ಶ್ರೀರಾಮನ ಕರುಣಾಮೃತರಸದಿಂದ ಅಭಿಷಿಕ್ತನಾಗಿ ಮತ್ತೆ ಅವನಿಂದ ಲಂಕಾರಾಜ್ಯಾಭಿಷಿಕ್ತನಾಗಲು, ಪರಮಸಂತೋಷದಿಂದಲೂ ವಿಶ್ವಾಸದಿಂದಲೂ ಅವನಿಗೆ ಎರಡನೆಯ

ಸುಗ್ರೀವನಂತೆ ಆಗಿ, ರಾವಣನ ಬಲಾಬಲವಿಷಯಗಳನ್ನೆಲ್ಲ ತಿಳಿಸಿ, ಇನ್ನು ಲಂಕಾಪುರವನ್ನು ಮುತ್ತುವುದಕ್ಕಾಗಿ ಕಪಿಸೈನ್ಯವು ಹೊರಡುವುದಕ್ಕೆ ಅನುವಾದ ಸೇತುವನ್ನು ಕಟ್ಟುವುದಕ್ಕೋಸ್ಕರ, ನೀವು ಸಮುದ್ರರಾಜನನ್ನು ಪ್ರಾರ್ಥಿಸಬೇಕು, ಎಂದು ವಿನಯದಿಂದ ಅರಿಕೆಮಾಡಿದನು.

ಈ ರೀತಿಯಾಗಿ ವಿಭೀಷಣನು ಅರಿಕೆಮಾಡಿಕೊಳ್ಳಲು, ರಾಮನು ಸಮುದ್ರತೀರದಲ್ಲಿ ದರ್ಭೆಯನ್ನು ಹಾಸಿಕೊಂಡು ಸಮುದ್ರ ರಾಜನನ್ನು ಧ್ಯಾನಿಸುತ್ತ ಮಲಗಿದನು. ಹೀಗೆ ಮಲಗಿ ಬಹು ನಿಯಮದಿಂದ ಮೂರು ದಿನಗಳವರೆಗೆ ಧ್ಯಾನಿಸಿದರೂ, ಸಮುದ್ರನು ರಾಮನಿಗೆ ಪ್ರತ್ಯಕ್ಷನಾಗಲಿಲ್ಲ.

ರಾಮನಿಗೆ ಬಹುಕೋಪವು ಬಂದಿತು. ಇರಲಿ; ಸಮುದ್ರನು ನನ್ನ ಪ್ರಾರ್ಥನೆಗೆ ಮೆಯ್ದೋರದೆ ಹೋದನೇ? ಅವನಲ್ಲಿರುವ ನೀರನ್ನೆಲ್ಲ ಶೋಷಿಸಿಬಿಡುತ್ತೇನೆ, ಎಂದು ಹುಬ್ಬನ್ನು ಗಂಟಿಕ್ಕಿ, ಬಿಲ್ಲಿನಲ್ಲಿ ಆಗ್ನೇಯಾಸ್ತ್ರವನ್ನು ಹೂಡಿ, ಸಮುದ್ರದ ಮೇಲೆ ಪ್ರಯೋಗ ಮಾಡಿದನು. ಆ ಬಾಣದ ಬೇಗೆಯಿಂದ, ನೀರೊಳಗಿದ್ದ ದೊಡ್ಡ ಮೊಸಳೆಗಳು ಸಂಕಟಪಟ್ಟುವು. ನೀರಾನೆಗಳು ನರಳಿದುವು. ತಿಮಿಂಗಿಲಗಳು ಅಲುಗಾಡಲಾರದೆ ತತ್ತರಿಸಿದುವು. ಉಳಿದ ಹಾವು, ಮೀನು ಮುಂತಾದುವು ಕಡಲೊಳಗಿರುವ ಬೆಟ್ಟಗಳ ಗುಹೆಗಳೊಳಗೆ ಅಡಗಿಕೊಂಡುವು. ಕಡಲ ನೀರು ಉಲ್ಲೋಲಕಲ್ಲೋಲವಾಯಿತು. ಸಮುದ್ರನು ಆ ಬಾಣದ ವೇಗವನ್ನು ಸಹಿಸಲಾರದೆ, ಶ್ರೀರಾಮನನ್ನೇ ಶರಣುಹೊಕ್ಕನು. ತರುವಾಯ ಮದವಿಳಿದವನಾಗಿ ಸಮುದ್ರನು ರಾಮನಿಗೆ ಅನೇಕರತ್ನಗಳನ್ನು ಕಾಣಿಕೆಗೊಟ್ಟು, ಸ್ವಾಮಿನ್, ತಾವು ತೊಟ್ಟಿರುವ ಆಗ್ನೇಯಾಸ್ತ್ರವನ್ನು ಮರುಭೂಮಿಯಲ್ಲಿ ವಾಸವಾಗಿರುವ ಪಾಪಿಗಳ ಮೇಲೆ ಪ್ರಯೋಗಿಸಬೇಕು ಎಂದು ಪ್ರಾರ್ಥಿಸಿ, ನೀವು ನೀರಿನ ಮೇಲೆ ಸೇತುವನ್ನು ಕಟ್ಟಿರಿ. ನಾನು ತಡೆದುಕೊಳ್ಳುತ್ತೇನೆ. ನಿಮ್ಮ ಸೇನೆಯಲ್ಲಿರುವ ನಳನೆಂಬ ಶಿಲ್ಪಿಯು ಸೇತುವನ್ನು ನಿರ್ಮಿಸಲಿ ಎಂದು ಬಿನ್ನಯಿಸಿದನು.

ಬಳಿಕ, ರಾಮನು ಸಮುದ್ರಕ್ಕೆ ಸೇತುವನ್ನು ಕಟ್ಟುವುದಕ್ಕೋಸ್ಕರ ಬೆಟ್ಟಗಳನ್ನು ತನ್ನಿರಿ, ಎಂದು ಕಪಿವೀರರಿಗೆ ಅಪ್ಪಣೆಮಾಡಿದನು. ಕೂಡಲೇ ವಾನರವೀರರು ನಾಲ್ಕು ದಿಕ್ಕುಗಳಿಗೂ ಹೋಗಿ, ದೊಡ್ಡದೊಡ್ಡ ಬೆಟ್ಟಗಳನ್ನು ತಂದು, ಸೇತುವನ್ನು ಕಟ್ಟುವ ಶಿಲ್ಪಿಯಾದ ನಳನು ಹೇಳಿದ ತಾವಿನಲ್ಲಿ ಒಟ್ಟಿದರು. ನಳನು ಅವುಗಳನ್ನು ನೀರೊಳಗೆ ತಕ್ಕ ಕಡೆಗಳಲ್ಲಿ ಜೋಡಿಸಿ, ಸೇತುವನ್ನು ಕಟ್ಟುವುದಕ್ಕೆ ಉಪಕ್ರಮಿಸಿದನು. ಬೆಟ್ಟಗಳು ಬಂದು ಬೀಳುತ್ತಿದ್ದುವು. ನಳನು ಸೇತುಕಾರ್ಯವನ್ನು ಮುಂದೆ ಮುಂದೆ ಸಾಗಿಸಿ, ಸೇತುವನ್ನು ಬಹುಸ್ವಲ್ಪದಿನಗಳಲ್ಲಿಯೇ ರಚಿಸಿ ಮುಗಿಸಿದನು. ಭೂಮಿದೇವಿಯು ಲಂಕೆಯಲ್ಲಿರುವ ತನ್ನ ಮಗಳಾದ ಸೀತೆಗೆ ಹೆದರಬೇಡವೆಂದು ಹೇಳುವುದಕ್ಕಾಗಿ ನೀಡಿದ ಕಯ್ಯೋ? ಎಂಬಂತೆ ಅದು ಕಾಣುತ್ತಿದ್ದಿತು.

ಅನಂತರದಲ್ಲಿ, ಕಪಿಸೈನ್ಯವು, ತತ್ತ್ವಜ್ಞಾನದಿಂದ ಯೋಗಿಗಳು ಸಂಸಾರಸಮುದ್ರವನ್ನು ದಾಟುವ ಪ್ರಕಾರದಲ್ಲಿ, ನಳನಿರ್ಮಿತವಾದ ಸೇತುವಿನ ಮೇಲೆ ನಡೆದು, ಸಮುದ್ರವನ್ನು ದಾಟಿ, ಸುವೇಲಪರ್ವತವನ್ನು ಕಂಡು, ಪರಮಾನಂದಭರಿತವಾಯಿತು. ರಾಮನು ಆ ಬೆಟ್ಟದ ತಪ್ಪಲಲ್ಲಿ ಬೀಡು ಬಿಡುವಂತೆ ಸೇನೆಗೆ ಆಜ್ಞೆಮಾಡಿದನು. ಕಪಿವೀರರ ಕಳಕಳದಿಂದ ಆ ಪರ್ವತಪ್ರದೇಶವೆಲ್ಲವೂ ಸೀಳಿಹೋಗುವಂತೆ ಆಯಿತು.

ಆ ಸಮಯದಲ್ಲಿ, ರಾವಣನು ಶುಕನೆಂಬ ಗೂಢಚಾರನಿಂದ ರಾಮನು ಸೇನೆಯೊಡನೆ ಸಾಗರವನ್ನು ದಾಟಿ, ಸುವೇಲಪರ್ವತದಲ್ಲಿ ಇಳಿದಿದ್ದಾನೆ ಎಂಬ ಸಂಗತಿಯನ್ನು ತಿಳಿದು, ರಾಮನ ಸೈನ್ಯದ ಮರ್ಮವನ್ನು ನೋಡಿಕೊಂಡು ಬರಲಿಕ್ಕೆ ಹೋಗಿದ್ದ, ಗೂಢಪುರುಷರಾದ ತಮ್ಮ ಸುಳಿವನ್ನು, ವಿಭೀಷಣನು ಕಂಡುಹಿಡಿದು, ಕಪಿಸೇನಾನಾಯಕನಿಗೆ ತಿಳಿಸಿದನೆಂದೂ, ಆ ಸೇನಾಧಿಪತಿಯು ತಮ್ಮನ್ನು ಮರಣದಂಡನೆಗೆ ಗುರಿಮಾಡಿದನೆಂದೂ, ಅದನ್ನು ತಿಳಿದು ಶ್ರೀರಾಮನು ತಮ್ಮ ಜೀವವನ್ನು ಉಳಿಸಿ, ಇಲ್ಲಿಗೆ ಕಳುಹಿದನೆಂದೂ, ಬಿನ್ನವಿಸಿದ ಮಾತನ್ನು ಕೇಳಿ, ಶಾರ್ದೂಲನೆಂಬ ಬೇಹವನಿಂದ, ವಾನರಸೇನೆಯ ಉಳಿದ ವಾರ್ತೆಯನ್ನೆಲ್ಲ ಅರಿತವನಾಗಿ, ಮನಸ್ಸಿನಲ್ಲಿ ಈ

ಸೈನ್ಯವನ್ನು ಜಯಿಸುವ ಉಪಾಯವೇನು? ಎಂದು ಚಿಂತಿಸುತ್ತ, ಹತ್ತಿರದಲ್ಲಿ ವಿನೀತಭಾವದಿಂದ ನಿಂದಿದ್ದ ವಿದ್ಯುಜ್ಜಿಹ್ವನೆಂಬವನನ್ನು ಕರೆದು, ಅವನ ಕಿವಿಯಲ್ಲಿ ಏನನ್ನೋ ಹೇಳಿ, ಅರಮನೆಯ ಮೇಲು ಮಚ್ಚಿನಿಂದ ಇಳಿದುಬಂದನು.

ಆಗ, ವಿದ್ಯುಜ್ಜಿಹ್ವನು ರಾವಣನ ಅಪ್ಪಣೆಯ ಮೇರೆಗೆ ಶ್ರೀರಾಮನ ತಲೆಯನ್ನೂ, ಬಿಲ್ಲುಬಾಣಗಳನ್ನೂ ಮೋಸದಿಂದ ಮಾಡಿಕೊಂಡು, ಸೀತೆಯ ಬಳಿಗೆ ಹೋಗಿ, ಇಗೋ, ನೋಡು. ರಾಮನು ಯುದ್ಧದಲ್ಲಿ ಹತನಾದನು. ಇದೇ ಅವನ ಶಿರಸ್ಸು, ಇವು ಅವನ ಬಿಲ್ಲುಬಾಣಗಳು ಎಂದು ಹೇಳಿ, ಅವುಗಳನ್ನು ಅವಳ ಸಮೀಪದಲ್ಲಿ ಇರಿಸಿ, ಹೊರಟುಹೋದನು. ಅದನ್ನು ಕಂಡು, ರಾಮನು ನಿಜವಾಗಿಯೂ ಯುದ್ಧದಲ್ಲಿ ಸತ್ತಿರಬೇಕೆಂದೇ ನಂಬಿ, ಸೀತೆಯು ಬೇಸಗೆಯ ಬಿಸಿಲಲ್ಲಿ ಬೆಂದು ಕಂದಿದ ಎಳಲತೆಯಂತೆಯೂ, ಸಿಡಿಲು ಬಡಿದಂತೆಯೂ ಕಂಗೆಟ್ಟು, ಮೂರ್ಛಿತಳಾದಳು. ಬಳಿಕ, ಕೊಂಚ ಹೊತ್ತಿನ ಮೇಲೆ ಎಚ್ಚತ್ತು, ಹಾ ದೈವವೇ! ಶ್ರೀರಾಮನು ಬಂದು, ನನ್ನನ್ನು ಕರೆದುಯ್ಯುವನೆಂಬ ಆಸೆಯಿಂದ, ಈ ದುಷ್ಟನ ಊರಲ್ಲಿ ದುಷ್ಟರಾದ ರಾಕ್ಷಸ ರಾಕ್ಷಸಿಯರ ಹಿಂಸೆಯನ್ನೂ, ಲೋಕಕಂಟಕನಾದ ಇವನ ಬಯ್ಗುಳನ್ನೂ ಸಹಿಸಿಕೊಂಡು, ಪ್ರಾಣಗಳನ್ನು ತ್ಯಜಿಸದೆ ಇದ್ದೆನು. ಈಗ ರಾಮನು ಈ ಅವಸ್ಥೆಯಲ್ಲಿ ಇರುವುದನ್ನು ನೋಡಿಯೂ, ಈ ಹಾಳು ದೇಹದಲ್ಲಿ ಇನ್ನೂ ಜೀವವು ಹೋಗದೆ ಇದೆಯಲ್ಲ! ಎಂದು ಬಹುಪ್ರಕಾರದಿಂದ ಹಲುಬುತ್ತ ಪ್ರಾಣತ್ಯಾಗಮಾಡುವುದರಲ್ಲಿದ್ದಳು.

ಅವಳ ದುರವಸ್ಥೆಯನ್ನು ಕಂಡು, ಇನ್ನು ಸುಮ್ಮನೆ ಇದ್ದರೆ, ಈಕೆಯು ಸತ್ತುಹೋಗುತ್ತಾಳೆಂದು ಅರಿದು, ವಿಭೀಷಣನ ಹೆಂಡತಿಯಾದ ಸರಮೆಯು ಅವಳ ಬಳಿಗೆ ಬಂದು, ಸಖೀ, ಸೀತೇ, ನನ್ನೊಡನೆ ಮಾತಾಡು; ನನ್ನ ಮಾತನ್ನು ಕೇಳಿ, ಮನಸ್ಸಿಗೆ ಸಮಾಧಾನವನ್ನು ತಂದುಕೊಳ್ಳುವಳಾಗು. ನೀನೇಕೆ ಹೀಗೆ ಸಂಕಟಪಡುತ್ತಿದ್ದೀಯೆ? ಇದೆಲ್ಲ ಬರಿಯ ಮೋಸ; ರಾಕ್ಷಸರ ಮಾಯೆ; ಇದನ್ನು ನಿಜವೆಂದು ತಿಳಿಯಬೇಡ; ಲೋಕೈಕವೀರನಾದ ಶ್ರೀರಾಮನಿಗೆ ಈ ರಾಕ್ಷಸಕೀಟ

ಗಳಿಂದ ಅಳಿವಾಗುವುದುಂಟೇ? ನೀನು ಹದುಳಿಸುವಳಾಗು ಎಂದು ನಾನಾವಿಧದಿಂದ ಸಂತಯಿಸಿದಳು. ಪತಿಪ್ರಾಣೆಯಾದ ಸೀತೆಯು ಸರಮೆಯ ಸಾಂತ್ವವಚನಗಳನ್ನು ಕೇಳಿ, ಕೊಂಚ ಮಟ್ಟಿಗೆ ಶೋಕವನ್ನು ತಡೆದುಕೊಂಡಳು.

ಇತ್ತ, ರಾವಣನ ಸಭೆಯಲ್ಲಿದ್ದ, ಮಾಲ್ಯವಂತನೆಂಬ ಧರ್ಮಾಭಿಮಾನಿಯಾದ ಮಂತ್ರಿಯು, ರಾಜನನ್ನು ನೋಡಿ, ಜೀಯಾ, ನನ್ನ ಮಾತನ್ನು ಲಾಲಿಸಬೇಕು. ಹಗೆಗಳು ಈಗ ಲಂಕಾಪುರದ ಹೊರಗಡೆಯಲ್ಲಿ ಪಾಳೆಯವನ್ನು ಬಿಟ್ಟಿದ್ದಾರೆ. ಮಹಾರಾಜರಾದ ತಾವು ರಾಮನ ಹೆಂಡತಿಯನ್ನು ಕದ್ದು ತಂದುದು ಧರ್ಮಕ್ಕೂ ನ್ಯಾಯಕ್ಕೂ ವಿರುದ್ಧವಾದ ಕೆಲಸ. ಕಿರಿಯರಸನಾದ ವಿಭೀಷಣನು ತಮಗೆ ಈ ವಿಷಯವನ್ನು ಅರಿಕೆಮಾಡಿದನು. ಅದು ತಮ್ಮ ಚಿತ್ತಕ್ಕೆ ಬಾರದೆ ಹೋಯಿತು. ಈ ಪ್ರಹಸ್ತಾದಿ ಮಂತ್ರಿಗಳು ತಮ್ಮ ಮನೋಗತವನ್ನು ಅರಿತು, ಅದಕ್ಕೆ ತಕ್ಕಂತೆ ಮಾತಾಡಿದ್ದಾರೆ. ಅದು ಸರಿಯಲ್ಲ. ಶತ್ರುಪಕ್ಷಕ್ಕೆ ನ್ಯಾಯವಿರುವುದರಿಂದ ಅವರಿಗೇ ಜಯವು ಪ್ರಾಪ್ತವಾಗುತ್ತದೆ. ಅದಿರಲಿ, ಈಗಲೂ ಕಾಲವು ಮೀರಿಹೋಗಿಲ್ಲ. ತಾವು ಸೀತೆಯನ್ನು ರಾಮನಿಗೆ ಒಪ್ಪಿಸಿ, ಅವನ ಕ್ಷಮೆಯನ್ನು ಬೇಡಿದರೆ, ನಮಗೆಲ್ಲರಿಗೂ ಕ್ಷೇಮವು ಉಂಟಾಗುತ್ತದೆ. ಇಲ್ಲದಿದ್ದರೆ, ಶೀಘ್ರದಲ್ಲಿಯೇ ನಾವೆಲ್ಲರೂ ಅಳಿದುಹೋಗುತ್ತೇವೆ. ವಿಷಯವನ್ನು ತಾವು ಚೆನ್ನಾಗಿ ಪರ್ಯಾಲೋಚಿಸಬೇಕು ಎಂದು ಬಿನ್ನಯಿಸಿದನು. ಅವನ ಮಾತುಗಳೂ ವಿಭೀಷಣನ ಮಾತಿನಂತೆಯೇ ನಿಷ್ಫಲವಾದುವು.

ಇತ್ತ, ಶ್ರೀರಾಮನು ಪಕ್ಷಿಗಳಂತೆ ವೇಷಧಾರಿಗಳಾಗಿ, ಲಂಕಾಪುರಕ್ಕೆ ಹೋಗಿ, ಅಲ್ಲಿಯ ರಕ್ಷಣೆಯ ವಿಷಯದಲ್ಲಿ ಏರ್ಪಡಿಸಿರುವ ಕ್ರಮವನ್ನೆಲ್ಲ ತಿಳಿದುಬಂದಿದ್ದ ವಿಭೀಷಣನ ಮಂತ್ರಿಗಳಿಂದ ಸುದ್ದಿಯನ್ನು ಅರಿತು, ಲಂಕೆಯ ಮೂಡಲ ಬಾಗಿಲನ್ನು ರಕ್ಷಿಸುತ್ತಿರುವ ಪ್ರಹಸ್ತನನ್ನು ಇದುರಿಸುವಂತೆ ನೀಲನನ್ನೂ, ತೆಂಕಣ ದ್ವಾರವನ್ನು ಪಾಲಿಸುವ ಮಹೋದರಮಹಾಪಾರ್ಶ್ವರನ್ನು ಪ್ರತಿಭಟಿಸುವಂತೆ ಮಹಾಬಲಶಾಲಿಯಾದ ವಾಲಿಯ ಮಗನನ್ನೂ, ಪಡುವಣ ದ್ವಾರವನ್ನು

ರಕ್ಷಿಸುವ ಇಂದ್ರಜಿತ್ತನ್ನು ನಿರೋಧಿಸುವಂತೆ ಪರಾಕ್ರಮಿಯಾದ ಹನುಮಂತನನ್ನೂ, ಅಂತರ್ವ್ಯೂಹ ಸಂರಕ್ಷಣೆಯಲ್ಲಿರುವ ವಿರೂಪಾಕ್ಷನನ್ನು ನಿಗ್ರಹಿಸುವುದಕ್ಕೆ ವಿಭೀಷಣ ಸುಗ್ರೀವ ಜಾಂಬವಂತರನ್ನೂ ನಿಯಮಿಸಿ, ಲಕ್ಷ್ಮಣ ಸಹಿತನಾಗಿ, ಉತ್ತರದ್ವಾರವನ್ನು ರಕ್ಷಿಸುತ್ತಿದ್ದ ರಾವಣನಿಗೆ ಅಭಿಮುಖನಾಗಿ ತಾನೇ ನಿಂತನು. ಈ ರೀತಿ ಲಂಕಾಪುರವೆಲ್ಲವೂ ಕಪಿಸೇನೆಯಿಂದ ಆವರಿಸಲ್ಪಡಲಾಗಿ, ರಾವಣನ ಕಡೆಯವರು ಊರ ಹೆಬ್ಬಾಗಿಲುಗಳನ್ನೆಲ್ಲ ಮುಚ್ಚಿ ಭದ್ರಪಡಿಸಿದರು.

ತದನಂತರದಲ್ಲಿ, ಶ್ರೀರಾಮನು ಲಕ್ಷ್ಮಣನೊಡನೆಯೂ, ಕಪಿಸೇನೆಯೊಡನೆಯೂ ಸುವೇಲಪರ್ವತವನ್ನು ಏರಿ, ಸಿಂಹಳದ್ವೀಪದ ನಡುವೆ ಇರುವ ತ್ರಿಕೂಟಪರ್ವತದ ಮೇಲೆ ವಿಶ್ವಕರ್ಮನು ನಿರ್ಮಿಸಿರುವ ರಾಕ್ಷಸಾವಾಸವಾದ ಲಂಕಾಪುರದ ಸೊಬಗನ್ನು ನೋಡುತ್ತ, ಅಲ್ಲಿಯ ಒಂದು ಉನ್ನತವಾದ ಉಪ್ಪರಿಗೆಯ ಮೇಲೆ, ಕತ್ತಲೇನಾದರೂ ಕೈಕಾಲುಗಳನ್ನು ತಳೆದಿದೆಯೋ ಎಂಬಂತೆ, ಕರಿಯ ಬಣ್ಣವುಳ್ಳವನಾಗಿ ತಲೆಯ ಮೇಲೆ ಬೆಳ್ಗೊಡೆಯನ್ನು ಹಿಡಿಸಿಕೊಂಡು, ಎರಡು ಕಡೆಗಳಲ್ಲಿಯೂ ದೇವತಾಸ್ತ್ರೀಯರು ಚಾಮರವನ್ನು ಬೀಸುತ್ತಿರಲು, ಕೆಂಪಾದ ವಸನವನ್ನು ಧರಿಸಿಕೊಂಡು ಕುಳಿತಿರುವ ರಾವಣನನ್ನು ನೋಡಿದನು. ಹಾಗೆ ರಾಜಮರ್ಯಾದೆಯಿಂದ ಕುಳಿತಿದ್ದ ರಾಕ್ಷಸರಾಜನನ್ನು ಕಂಡು, ಸುಗ್ರೀವನಿಗೆ ಹಿಡಿಯಲಾರದಷ್ಟು ಕೋಪವು ಬಂದಿತು. ಅವನು ಒಡನೆಯೇ ರಾವಣನಿದ್ದ ಉಪ್ಪರಿಗೆಗೆ ಹಾರಿ, ಅವನ ತಲೆಯ ಕಿರೀಟಗಳನ್ನೆಲ್ಲ ತಳ್ಳಿ, ಕುಪಿತನಾದ ರಾವಣನನ್ನು ಮುಷ್ಟಿಯಿಂದ ಪ್ರಹಾರಮಾಡಿ, ಅವನು ಮಾಯೆಯಿಂದ ತನ್ನೊಡನೆ ಯುದ್ಧಮಾಡುವನೆಂಬ ಸುಳಿವನ್ನರಿತು, ಅಲ್ಲಿಂದ ರಾಮನ ಸಮೀಪಕ್ಕೆ ಸುಖವಾಗಿ ಬಂದು ಸೇರಿದನು.

ಹೀಗೆ ತನ್ನೊಡನೆ ಯಾವುದನ್ನೂ ಆಲೋಚನೆಮಾಡದೆ, ಸುಗ್ರೀವನು, ರಾವಣನ ಬಳಿಗೆ ಹೋಗಿ, ಅವನ ಮೇಲೆ ಬಿದ್ದುದು ರಾಜನೀತಿಗೆ ವಿರುದ್ಧವಾದುದೆಂದು ರಾಮನು ಅಸಮಾಧಾನಪಟ್ಟು, ವಿಭೀಷಣನೇ ಮುಂತಾದ ಬುದ್ಧಿವಂತರ ಸಂಗಡ ಆಲೋಚಿಸಿ, ರಾವಣನ

ಬಳಿಗೆ ದೂತರನ್ನು ಕಳುಹುವುದು ಧರ್ಮವೆಂದು ತಿಳಿದು, ಮಹಾ ಬಲಶಾಲಿಯಾದ ಅಂಗದನನ್ನು ಕಳುಹಿದನು.

ಇತ್ತ ಅಂಗದನು, ಲಂಕಾಪಟ್ಟಣದ ಪ್ರಾಕಾರದ ಗೋಡೆಯನ್ನು ಹಾಯ್ದು, ಲಂಕೆಗೆ ಹೋಗಿ, ದುಷ್ಟನಾದ ರಾವಣನನ್ನು ಕಂಡು, ಕೊಂಚವೂ ದಿಗಿಲಿಲ್ಲದೆ, ಅವನೊಡನೆ ಇಂತೆಂದನು.

ಎಲೈ, ಪುಲಸ್ತ್ಯರ ಕುಲದಲ್ಲಿ ಹುಟ್ಟಿದ ರಾವಣನೇ, ಕೇಳು. ನಿನ್ನನ್ನು ಬಾಲದಿಂದ ಬಿಗಿದುಹಾಕಿದ್ದ ಬಲಶಾಲಿಯಾದ ವಾಲಿಗೆ ನಾನು ಮಗನಾಗಬೇಕು; ಖರದೂಷಣತ್ರಿಶಿರಸ್ಸುಗಳನ್ನು ಯಮ ಪುರಿಗೆ ಸಾಗಿಸಿದ ಶ್ರೀರಾಮಚಂದ್ರನಿಗೆ ನಾನು ದೂತನು. ಶ್ರೀರಾಮನ ಪ್ರಿಯಪತ್ನಿಯನ್ನು ನೀನು ಅನ್ಯಾಯದಿಂದ ಕದ್ದು ತಂದಿದ್ದೀಯೆ; ನೀನು ಕಾರ್ತವೀರ್ಯಾರ್ಜುನನಿಂದ ಸೋಲಿಸಲ್ಪಟ್ಟೆ; ಅದರಿಂದ, ನಿನ್ನ ವಂಶಕ್ಕೆ ಮೂಲಪುರುಷನಾದ ಬ್ರಹ್ಮನು ತನ್ನ ಒಂದು ತಲೆಯನ್ನು ಬಾಗಿಸಿದನು. ನೀನು ಬಹುಪಾಪಿಯಾಗಿ ಸಜ್ಜನರನ್ನು ಬಾಧಿಸು ತ್ತಿರುವುದರಿಂದ, ಬ್ರಹ್ಮನ ಎರಡನೆಯ ತಲೆಯೂ ತಗ್ಗಿತು. ನೀನು ನನ್ನ ತಂದೆಯ ಬಾಲದ ಕಟ್ಟಿಗೆ ಸಿಕ್ಕಿ ನರಳುತ್ತಿದ್ದುದರಿಂದ, ಪಿತಾಮಹನ ಮೂರನೆಯ ತಲೆಯೂ ತಗ್ಗಬೇಕಾಯಿತು. ಅನ್ಯರ ಹೆಂಡಿರನ್ನು ಕದ್ದು ತರುವುದೆಂಬ ಪಾಪಕಾರ್ಯವನ್ನು ಮಾಡಿ, ಅವನ ನಾಲ್ಕನೆಯ ತಲೆ ಯನ್ನೂ ತಗ್ಗಿಸಿಬಿಡಬೇಡ. ನೀನು ಸೀತೆಯನ್ನು ತಂದು, ರಾಮನಿಗೆ ಒಪ್ಪಿಸಿಬಿಟ್ಟು ಸುಖದಿಂದ ಬಾಳು. ಕುಬೇರನ ಪುಷ್ಪಕವನ್ನು ಕಿತ್ತು ಕೊಂಡು ಬಂದೆನೆಂದು, ಏಕೆ ಹೇಳಿಕೊಳ್ಳುತ್ತೀಯೆ? ಕೈಲಾಸವನ್ನು ಎತ್ತಿಬಿಟ್ಟೆನೆಂದು ಏತಕ್ಕೆ ನಿನಗೆ ಹೆಮ್ಮೆ? ಯಾರೂ ಇಲ್ಲದಿದ್ದಾಗ ಕಾವಿಯನ್ನುಟ್ಟು, ಆಶ್ರಮಕ್ಕೆ ನುಗ್ಗಿ, ಏಕಾಕಿನಿಯಾದ ಸೀತೆಯನ್ನು ಕದ್ದು ತಂದುದು, ನಿನ್ನ ಶೌರ್ಯಕ್ಕೆ ನೀನೇ ಮಂಗಳಾರತಿಯನ್ನು ಮಾಡಿಕೊಂಡಹಾಗಾಯಿತು. ನೀನು ಈಶ್ವರನನ್ನು ಕುರಿತು ತಪಸ್ಸನ್ನು ಮಾಡಿದಾಗ, ನಿನ್ನ ಒಂಬತ್ತು ತಲೆಗಳನ್ನೂ ತರಿದು, ತತ್ಪ್ರೀತ್ಯರ್ಥವಾಗಿ ಬಲಿಗೊಟ್ಟೆಯಲ್ಲವೇ? ಈಗ ರಾಮನು ನಿನ್ನ ಆ ಹತ್ತನೆಯ ತಲೆ ಯನ್ನು ರಣದೇವತೆಗೆ ಬಲಿಗುಡುತ್ತಾನೆ. ನೀನೂ, ನಿನ್ನವರೂ

ಇನ್ನೂ ಬದುಕಿರಬೇಕೆಂಬ ಆಸೆಯಿದ್ದರೆ, ಸೀತಾದೇವಿಯನ್ನು ಶ್ರೀರಾಮನಿಗೆ ತಂದು ಒಪ್ಪಿಸಿ, ಅವನ ಕ್ಷಮೆಯನ್ನು ಬೇಡುವುದೀಗ ಸರಿಯಾದ ಮಾರ್ಗ, ಎಂದು ಹೇಳಿದನು.

ಈ ಪರಿಯಾಗಿ ಹೇಳಿದ ಅಂಗದನ ಮಾತ ಕೇಳಿ, ದಶಮುಖನು ಕುಪಿತನಾಗಿ, ಬಾಯಿಗೆ ಬಂದಂತೆ ಬಗುಳುವ, ಈ ಕುನ್ನಿಯನ್ನು ಹಿಡಿಯಿರಿ, ಎಂದು ದೂತರಿಗೆ ಅಪ್ಪಣೆಮಾಡಿದನು. ಕೂಡಲೇ ನಾಲ್ಕು ಮಂದಿ ರಾಕ್ಷಸವೀರರು ಬಂದು, ಅಂಗದನ ಎರಡು ತೋಳುಗಳನ್ನೂ ಹಿಡಿದುಕೊಂಡರು. ಮಹಾಪರಾಕ್ರಮಿಯಾದ ಅಂಗದನು ತನ್ನನ್ನು ಹಿಡಿದುಕೊಂಡಿದ್ದ ರಾಕ್ಷಸರ ಸಮೇತನಾಗಿ, ಆಕಾಶಕ್ಕೆ ನೆಗೆದು, ಆ ನಾಲ್ವರನ್ನೂ ನೆಲಕ್ಕೆ ಒಗೆದು, ರಾವಣನು ಕುಳಿತಿದ್ದ ಸೌಧದ ಶಿಖರವನ್ನು ಒದ್ದು ಕೆಡಹಿ, ಶ್ರೀರಾಮನ ಬಳಿಗೆ ಬಂದು ನಡೆದ ವೃತ್ತಾಂತವನ್ನೆಲ್ಲ ವಿವರಿಸಿದನು.

ತಾನು ಕಳುಹಿದ ದೌತ್ಯವು ಫಲಕಾರಿಯಾಗದಿರಲು, ಶ್ರೀರಾಮನು ಇನ್ನು ದಂಡೋಪಾಯವೇ ಸಾಧುವೆಂದು ಬಗೆದು, ಲಂಕೆಯನ್ನು ಮುತ್ತಿರಿ ಎಂದು ಸೇನಾನಾಯಕರಿಗೆ ಅಪ್ಪಣೆಮಾಡಿದನು. ಪ್ರಳಯಸಮಯದಲ್ಲಿ ಸಮುದ್ರವು ಬಹುರಭಸದಿಂದ ಉಕ್ಕಿಬರುವಂತೆ ಕಪಿಸೈನ್ಯವು ಲಂಕಾಪುರವನ್ನು ಆವರಿಸಿಕೊಂಡಿತು. ಕಪಿಸೇನೆಯ ಕಳಕಳವನ್ನು ಕೇಳಿ, ರಾಕ್ಷಸರು ಯುದ್ಧಭೇರಿಯನ್ನು ಎಡೆಬಿಡದೆ ತಾಡಿಸಿದರು. ಆ ರಣಭೇರಿಯ ಸದ್ದನ್ನೂ, ಕಪಿವೀರರ ಕೋಲಾಹಲವನ್ನೂ ಕೇಳಿ, ರಾಕ್ಷಸರು ಕೋಪಾವೇಶದಿಂದ ಪರವಶರಾಗಿ, ಹೋಗಬೇಡವೆಂದು ಗೋಳಿಡುವ ಹೆಂಡಿರನ್ನು ಒತ್ತರಿಸಿ, ಹೊರಡುವಾಗ, ಎಲ್ಲಿಗೆ ಹೋಗುತ್ತಿರುವೆಯೆಂಬರ ಸೊಲ್ಲಿಗೆ ಕಿವಿಗುಡದೆ, ಅಡಿಗಡಿಗೆ ತಲೆದೋರುವ ದುಶ್ಶಕುನಗಳನ್ನು ಲೆಕ್ಕಿಸದೆ, ನಾನಾವಿಧವಾದ ಆಯುಧಗಳನ್ನು ಧರಿಸಿ, ಉಕ್ಕಿನ ಕವಚಗಳನ್ನೂ, ಟೊಪ್ಪಿಗೆಗಳನ್ನೂ ಅಳವಡಿಸಿಕೊಂಡು, ಸಿಂಹನಾದವನ್ನು ಮಾಡುತ್ತ, ಕಪಿಸೇನೆಯ ಮೇಲೆ ಬಿದ್ದರು. ರಾಕ್ಷಸರು ತಮ್ಮ ಮೇಲೆ ಪ್ರಯೋಗಿಸಿದ ಕಯ್ದುಗಳನ್ನು ಕಪಿವೀರರು ಉಗುರುಗಳಿಂದ ಹಾರಿಸುತ್ತ, ಗುಂಡುಕಲ್ಲು

ಗಳನ್ನೂ ಮರಗಳನ್ನೂ ಎಸೆದು, ಆನೆ ಕುದುರೆ ರಥಗಳನ್ನು ಧ್ವಂಸ ಮಾಡಿ, ರಾಕ್ಷಸರನ್ನು ಮುಷ್ಟಿಪ್ರಹಾರದಿಂದಲೂ, ಪಾದಪ್ರಹಾರ ದಿಂದಲೂ ಸಂಹಾರಮಾಡಿದರು. ರಾಕ್ಷಸರೂ ಹಲವು ಕಯ್ದುಗಳನ್ನು ಪ್ರಯೋಗಿಸಿ, ವಾನರವೀರರನ್ನು ಕೊಂದರು. ಹೀಗೆ ಇತ್ತಂಡ ದಲ್ಲಿಯೂ ಸೇನೆಯು ನಷ್ಟವಾಯಿತು. ಅಷ್ಟು ಹೊತ್ತಿಗೆ ಸೂರ್ಯನು ಮುಳುಗಿದನು. ಕತ್ತಲು ಎತ್ತೆತ್ತಲೂ ಕವಿಯಿತು. ಆಕಾಶದಲ್ಲಿ ನಕ್ಷತ್ರ ಗಳು ಮೂಡಿದುವು. ಇಂದ್ರಜಿತುವು ರಾಮನ ಸೈನ್ಯದ ಮೇಲೆ, ಬಾಣಗಳನ್ನು ಮಳೆಯಂತೆ ಸುರಿಸಿ, ಅನೇಕ ವಾನರರನ್ನು ಸಂಹರಿಸಿ ದನು. ಆಗ ಅಂಗದನು ಕಡುಮುಳಿದು, ಒಂದು ದೊಡ್ಡ ಮರವನ್ನು ತೆಗೆದುಕೊಂಡು, ಅದರಿಂದ, ಇಂದ್ರಜಿತುವಿನ ತೇರು ಸಾರಥಿ ಕುದುರೆ ಗಳನ್ನು ಬಡಿದು, ಅವನನ್ನು ಬರಿಗಾಲಲ್ಲಿ ನಿಲ್ಲುವಂತೆ ಮಾಡಿದನು. ಬಳಿಕ, ಇಂದ್ರಜಿತುವು ಯಾರ ಕಣ್ಣಿಗೂ ತಿಳಿಯದಂತೆ ಆಕಾಶದಲ್ಲಿ ಅಡಗಿಕೊಂಡು, ಕೋಪವು ನೆಗ್ಗಳಿಸಲು, ಸರ್ಪಾಸ್ತ್ರವನ್ನು ಕಪಿ ಸೇನೆಯ ಮೇಲೆ ಎಸೆದನು. ಆ ಬಾಣದ ಪ್ರಭಾವದಿಂದ, ಕಪಿಸೇನೆ ಯೆಲ್ಲವೂ ಮೂರ್ಛೆಹೋಯಿತು. ರಾಮಲಕ್ಷ್ಮಣರೂ ಅದರಿಂದ ಕಟ್ಟುವಡೆದು ಪರವಶರಾದರು.

ಇಂದ್ರಜಿತುವು ವಾನರ ಸೇನೆಯನ್ನು ಈ ಪರಿಯಾಗಿ ಮೂರ್ಛೆ ಗೊಳಿಸಿ, ಲಂಕೆಗೆ ಹೋದನು. ಅತ್ತ, ರಾವಣನು ಸೀತೆಯನ್ನು ಪುಷ್ಪಕದಲ್ಲಿ ಕೂರಿಸಿ, ರಾಮಲಕ್ಷ್ಮಣರ ಸ್ಥಿತಿಯನ್ನು ಅವಳಿಗೆ ತೋರುವಂತೆ ಕಂಚುಕಿಗಳಿಗೆ ಆಜ್ಞೆಮಾಡಿದನು. ಅಷ್ಟರಲ್ಲಿ ರಣಭೂಮಿಗೆ ಬಂದ ಗರುಡನ ಗರಿಯ ಗಾಳಿಯ ಸೋಂಕಿಂದ, ರಾಮ ಲಕ್ಷ್ಮಣರನ್ನೂ, ಕಪಿಸೇನೆಯನ್ನೂ ಮೂರ್ಛೆಗೊಳಿಸಿದ್ದ ಹಾವುಗಳೆಲ್ಲವೂ ದಿಕ್ಕು ದಿಕ್ಕಿಗೆ ಓಡಿಹೋದುವು. ನಾಗಪಾಶದಿಂದ ಮುಕ್ತವಾದ ಕಪಿಸೇನೆಯು ಮತ್ತೆ, ರಾಕ್ಷಸರೊಡನೆ ಹೋರುವುದಕ್ಕೆ ಉಪಕ್ರಮಿಸಿತು.

ಆ ಯುದ್ಧದಲ್ಲಿ, ಪ್ರಕಂಪನನನ್ನೂ, ಧೂಮ್ರಾಕ್ಷನನ್ನೂ ಆಂಜನೇಯನು ಸಂಹರಿಸಿದನು. ಅಂಗದನಿಂದ ವಜ್ರದಂಷ್ಟ್ರನು

ನಷ್ಟನಾದನು. ಪ್ರಹಸ್ತನು ನೀಲನಿಂದ ಕಾಲನ ಮನೆಯನ್ನು ಸೇರಿದನು. ಹೀಗೆ ರಾಕ್ಷಸನಾಯಕರೆಲ್ಲರೂ ಮಡಿದು ಹೋಗಲು, ಸೇನೆಯು ಹೆದರಿತು. ದೂತರು ರಾವಣನಿಗೆ ಯುದ್ಧದ ಸುದ್ದಿಯನ್ನು ಅರುಹಿದರು.

ಸೇನಾಧಿಪತಿಯಾದ ಪ್ರಹಸ್ತನು ಯುದ್ಧದಲ್ಲಿ ವಿಧ್ವಸ್ತನಾದುದನ್ನು ತಿಳಿದು, ರಾವಣನು ಕ್ರೋಧಪರವಶನಾದನು. ರಣಭೇರಿಯು ಮೊಳಗುತ್ತಿರಲು, ಅವನು ಕಯ್ಯಲ್ಲಿ ಬಲವಾಗಿರುವ ಬಿಲ್ಲನ್ನು ಹಿಡಿದು, ದೊಡ್ಡದಾಗಿರುವ ರಥದಲ್ಲಿ ಕುಳಿತು ಸಕಲ ಸೇನಾಸಮೇತನಾಗಿ ಊರ ಹೆಬ್ಬಾಗಿಲಿಂದ ಈಚೆಗೆ ಬಂದು, ಯುದ್ಧಕ್ಕೆ ಸಿದ್ಧವಾಗಿ ನಿಂತಿರುವ ಕಪಿಸೇನೆಯನ್ನು ನೋಡಿದನು.

ಈ ರೀತಿಯಲ್ಲಿ, ತನ್ನ ಇದಿರಿಗೆ ಬಂದು ನಿಂದ ಮಹಾಪರಾಕ್ರಮಿಯೂ, ರಾಕ್ಷಸಸಾರ್ವಭೌಮನೂ ಆದ ರಾವಣನನ್ನು ನೋಡಿ, ಶ್ರೀರಾಮನು ತಲೆದೂಗಿದನು; ಉತ್ತರಕ್ಷಣದಲ್ಲಿಯೇ ಬಿಲ್ಲು ಬಾಣಗಳನ್ನು ಹಿಡಿದು, ಅವನೊಡನೆ ಯುದ್ಧಮಾಡಲಿಕ್ಕೆ ಅನುವಾದನು.

ಇತ್ತ, ರಾವಣನು ತನ್ನ ಸಿಂಹನಾದದಿಂದ, ದಿಕ್ಕುಗಳನ್ನೆಲ್ಲ ತುಂಬಿದವನಾಗಿ ವಿಚಿತ್ರವಾದ ಗತಿವಿಶೇಷದಿಂದ ಯುದ್ಧದಲ್ಲಿ ಕಪಿಸೇನೆಗೆ ತಲ್ಲಣವುಂಟುಮಾಡಿದನು. ಮತ್ತು ಕೋಪವು ಅತಿಶಯವಾಗಲು, ತನ್ನನ್ನು ಕಲ್ಗಳಿಂದಿಡುವ ಸುಗ್ರೀವನನ್ನು ಜಗ್ಗಿಸಿ, ಹೊಡೆಯುವುದಕ್ಕೆ ಬಂದ ಹನುಮಂತನ ಪೆಟ್ಟನ್ನು ಲಾಘವದಿಂದ ತಪ್ಪಿಸಿಕೊಂಡು, ಸಕಲಲೋಕಗಳನ್ನೂ ಜಯಿಸಿದ ಬಲದಿಂದ, ನೀಲನನ್ನು ತೂಲದಂತೆ ಹಾರಿಸಿ, ಇದಿರಲ್ಲಿ ನಿಂದು, ತನ್ನ ಮೇಲೆ ಎಡೆಬಿಡದೆ ಬಾಣಗಳನ್ನು ಕರೆಯುತ್ತಿದ್ದ, ಲಕ್ಷ್ಮಣನ ಮೇಲೆ ಬ್ರಹ್ಮದತ್ತವಾದ ಶಕ್ತಿಯೆಂಬ ಕ್ರೂರವಾದ ಆಯುಧವನ್ನು ಪ್ರಯೋಗಿಸಿದನು. ಶಕ್ತಿಯಿಂದ ಹೊಡೆಯಲ್ಪಟ್ಟು, ಮೂರ್ಛಿತನಾದ ತಮ್ಮನನ್ನು ನೋಡಿ, ರಾಮನು ದುಃಖಪಟ್ಟು, ರಾವಣನ ಮೇಲೆ ಅಪರಿಮಿತವಾದ ಬಾಣಗಳನ್ನು ಎಸೆದು ಅವನನ್ನು ಕಂಗೆಡಿಸಿದನು.

ಇಷ್ಟರಲ್ಲಿ, ಲಕ್ಷ್ಮಣನು ಮೂರ್ಛೆಯಿಂದ ಎಚ್ಚತ್ತು, ಶತ್ರುವನ್ನು ಸಂಹರಿಸಬೇಕೆಂದು ಉದ್ಯುಕ್ತನಾದನು. ಆ ವೇಳೆಗೆ ತನ್ನ ಬಾಣಘಾತದಿಂದ ನೊಂದಿದ್ದ ರಾವಣನನ್ನು ಕಂಡು, ಶ್ರೀರಾಮನು ಅವನ ಮೇಲೆ ಕೈಮಾಡಲಿಲ್ಲ. ಹೀಗೆ ರಾಮನ ಸಂಗಡ ಯುದ್ಧವನ್ನು ತೊಡಗಿ, ಸೋಲಿನ ಸಂಬಳವನ್ನು ಗಳಿಸಿಕೊಂಡ ರಾವಣನು, ಕಳೆಗೆಟ್ಟು ಲಂಕೆಗೆ ಹೋಗಿ, ತನ್ನ ತಮ್ಮನಾದ ಕುಂಭಕರ್ಣನನ್ನು ನಿದ್ದೆಯಿಂದ ಎಬ್ಬಿಸಿದವನಾಗಿ ಯುದ್ಧಕ್ಕೆ ಕಳುಹಿದನು.

ಕಾಡಿಗೆಯ ಬೆಟ್ಟವು ನಡೆದು ಬರುವಂತೆ ತೋರುತ್ತ, ಆ ಕುಂಭಕರ್ಣನು ಕರದಲ್ಲಿ ದೊಡ್ಡದಾದ ತ್ರಿಶೂಲವನ್ನು ತಿರುಹುತ್ತ, ಪ್ರಳಯ ಕಾಲದ ರುದ್ರನಂತೆ ಕಾಣಿಸುತ್ತಿದ್ದನು. ಆ ಭೀಕರ ಸ್ವರೂಪವನ್ನು ಕಂಡು, ಕಪಿಸೇನೆಯು ಹೆದರಿ, ಬಿರುಗಾಳಿಗೆ ತರಗೆಲೆಗಳು ದಿಕ್ಕು ದಿಕ್ಕಿಗೆ ಹಾರಿಹೋಗುವಂತೆ, ದಿಕ್ಕು ದಿಕ್ಕಿಗೆ ಓಡಿಹೋಯಿತು. ಪಡೆಯು ಹೀಗೆ ಅಂಜಿ ಓಡಿಹೋಗುವುದನ್ನು ನೋಡಿ, ಅಂಗದನು, ಎಲೈ ವೀರರಿರಾ, ಏಕೆ ಓಡಿಹೋಗುತ್ತಿದ್ದೀರಿ? ಬರುತ್ತಿರುವ ಈ ಭಯಂಕರಾಕಾರನು ರಾವಣನ ತಮ್ಮನು. ನೀವು ಧೈರ್ಯವಾಗಿ ಇವನ ಸಂಗಡ ಯುದ್ಧ ಮಾಡಿರಿ; ಹೇಡಿಗಳಂತೆ ಓಡಬೇಡಿರಿ, ಎಂದು ಹುರಿದುಂಬಿಸಿದನು. ಅತ್ತ ಇತ್ತ ಚೆದರಿಹೋಗಿದ್ದ ವಾನರರು ಒಟ್ಟುಗೂಡಿ, ಬೆಟ್ಟದಂತೆ ಕದಲದೆ ನಿಂದಿದ್ದ ಕುಂಭಕರ್ಣನ ಮೇಲೆ, ನಾಲ್ಕು ಕಡೆಗಳಿಂದಲೂ ಕಲ್ಲುಗಳನ್ನೂ, ಗುಂಡುಗಳನ್ನೂ, ಮರಗಳನ್ನೂ ಎಸೆದರು. ಅವರು ಪ್ರಯೋಗಿಸಿದ ಮರಗಳು, ಅವನ ಎದೆಗೆ ತಗುಲಿ ಹಿಟ್ಟು ಹಿಟ್ಟಾಗಿ ಹೋದುವು. ಬೆಟ್ಟಗಳು ಅವನ ತೋಳ ಸೋಂಕಿನಿಂದ ಪುಟಹಾರಿ ಪ್ರಯೋಗಿಸಿದವರ ಮೇಲೆಯೇ ಬಿದ್ದು, ಗಾಸಿಮಾಡಿದುವು. ಯುದ್ಧೋನ್ಮತ್ತನಾದ ಕುಂಭಕರ್ಣನು ಹೊಳೆ ಹೊಳೆವ ತ್ರಿಶೂಲವನ್ನು ತಿರುಹುತ್ತ, ನೀಲ ಶರಭ ಋಷಭರೆಂಬ ಕಪಿನಾಯಕರನ್ನು ಚೆನ್ನಾಗಿ ಮರ್ದಿಸಿದನು. ಗಂಧಮಾದನನನ್ನು ಬಹುವಾಗಿ ಪ್ರಹರಿಸಿದನು. ಗವಾಕ್ಷನನ್ನು ಬಿಗಿಯಾಗಿ ಕಟ್ಟಿಹಾಕಿದನು. ಆಗ ಸೇನೆಯೆಲ್ಲವೂ ಹೆದರಿ, ರಾಮನ ಮರೆಹುಗುವುದನ್ನು ಕಂಡು, ಕಪಿರಾಜನಾದ ಸುಗ್ರೀವನು ವಾನರ

ವನ್ನು ಸಂತಯಿಸಿ, ಕುಂಭಕರ್ಣನ ಮೇಲೆ ಪರ್ವತಗಳನ್ನು ಪ್ರಯೋಗಿಸಿ, ವಿಚಿತ್ರತರವಾದ ಯುದ್ಧವನ್ನು ಮಾಡಿದನು. ಕುಂಭಕರ್ಣನು ಕೋಪದಿಂದ ಸುಗ್ರೀವನನ್ನು ದೊಡ್ಡ ಕೋಡುಗಲ್ಲಿಂದಿಡಲು, ಅದರ ಪೆಟ್ಟಿನಿಂದ ಸುಗ್ರೀವನು ಮೂರ್ಛಿತನಾದನು.

ಮೆಯ್ಯ ಮೇಲೆ ಎಚ್ಚರಿಕೆಯಿಲ್ಲದೆ ಬಿದ್ದಿದ್ದ ಸುಗ್ರೀವನನ್ನು ತೋಳಲ್ಲಿ ಇರುಕಿಕೊಂಡು ಕುಂಭಕರ್ಣನು ಲಂಕೆಗೆ ನಡೆದನು. ರಾಕ್ಷಸ ಸೇನೆಯು ಸಂತೋಷದಿಂದ ಉಬ್ಬಿತು. ಜಯಶಾಲಿಯಾಗಿ ಬರುತ್ತಿರುವ ಕುಂಭಕರ್ಣನಿಗೆ ಅತಿಶಯವಾದ ಶೈತ್ಯೋಪಚಾರಗಳನ್ನು ಮಾಡಿ, ಪುರಜನರು ಅವನನ್ನು ಸತ್ಕರಿಸಿದರು. ಅವನಿಗೆ ಮಾಡಿದ ಉಪಚಾರದಿಂದ ಸುಗ್ರೀವನು ಚೇತರಿಸಿಕೊಂಡು, ಬಳಿಕ ತೀಕ್ಷ್ಣವಾದ ತನ್ನ ಉಗುರುಗಳಿಂದ ಕುಂಭಕರ್ಣನ ಕಿವಿಮೂಗುಗಳನ್ನು ಕತ್ತರಿಸಿ ಬಂದುಬಿಟ್ಟನು. ಕುಂಭಕರ್ಣನು ಪುರಜನರ ಉಪಚರಣೆಯಿಂದ ಮೆಯ್ಯುಬ್ಬಿ, ಕಿವಿಮೂಗುಗಳಿಂದ ಮೆಯ್ಯ ಮೇಲೆಲ್ಲ ನೆತ್ತರು ಸುರಿಯುತ್ತಿರಲು, ಕೋಟೆಯ ಗೋಡೆಯನ್ನು ದಾಟಿ, ಒಳಹುಗುವಾಗ, ಹಿಡಿದು ತಂದಿದ್ದ ಹಗೆಯು ತಪ್ಪಿಸಿಕೊಂಡು ಹೋದುದನ್ನು ತಿಳಿದು, ಮತ್ತೆ ಯುದ್ಧಭೂಮಿಗೇ ಬಂದನು. ಅವನ ಕಣ್ಣುಗಳು ಕೆಂಡವನ್ನು ಉಗಿಯುತ್ತಿದ್ದುವು. ಮತ್ತನಾದ ಆ ರಾಕ್ಷಸನು ಕಪಿಗಳ ಪಡೆಯನ್ನೂ, ರಾಕ್ಷಸರ ಸೇನೆಯನ್ನೂ ಕಬಳಿಸುತ್ತ, ತನ್ನನ್ನು ಇದಿರಿಸಿದ ಲಕ್ಷ್ಮಣನನ್ನು ಲೆಕ್ಕಿಸದೆ, ಬೇಗ ಬೇಗನೆ, ರಾಮನ ಬಳಿಗೆ ಬಂದು, ಅವನ ಸಂಗಡ ಹೋರುವುದಕ್ಕೆ ಅನುವಾದನು.

ಶ್ರೀರಾಮನು, ವಾಲಿ ಮಾರೀಚ ಖರಾದಿಗಳನ್ನು ಸಂಹಾರ ಮಾಡಿದ ಬಾಣಗಳನ್ನು ಕುಂಭಕರ್ಣನ ಮೇಲೆ ಎಸೆದು, ಅವನು ಇಟ್ಟ ಬೆಟ್ಟವನ್ನು ಅರ್ಧಚಂದ್ರಬಾಣದಿಂದ ಹುಡಿಗುಟ್ಟಿದನು. ರಾಮನು ಎಸೆದ ಬಾಣಗಳಿಂದ ಕುಂಭಕರ್ಣನಿಗೆ ಯಾವ ಹಾನಿಯೂ ಆಗಲಿಲ್ಲ. ಈ ರಾಕ್ಷಸನು ಬಹು ಬಲಶಾಲಿಯೆಂದು ತಿಳಿದು, ಶ್ರೀರಾಮನು ವಾಯುವ್ಯಾಸ್ತ್ರಪ್ರಯೋಗವಮಾಡಿ, ಕುಂಭಕರ್ಣನ ತೋಳುಗಳನ್ನೂ, ಇಂದ್ರಾಸ್ತ್ರದಿಂದ ಅವನ ತಲೆಯನ್ನೂ ಕಡಿದುಬಿಟ್ಟನು. ಅವನ

ಒಂದು ತೋಳು, ಶತ್ರುಸೈನ್ಯದಲ್ಲಿ ಬಿದ್ದಿತು. ಮತ್ತೊಂದು ಸಮುದ್ರದಲ್ಲಿ ಬಿದ್ದಿತು. ತಲೆಯು ಆಕಾಶಕ್ಕೆ ಹಾರಿಹೋಯಿತು. ಅದನ್ನು ಕಂಡು ವಾನರ ಸೇನೆಯು ಸಂತೋಷದಿಂದ ಕೋಲಾಹಲ ಮಾಡಿತು.

ರಾಮಸೈನ್ಯದ ಸಂತೋಷ ಘೋಷವನ್ನು ಕೇಳಿ, ಕುಂಭಕರ್ಣನು ಬಿದ್ದುಹೋದನೆಂದರಿತು, ರಾವಣನು ಕಾಂತಿಹೀನನಾಗಿ, ತನ್ನ ಒಡಹುಟ್ಟಿದ ಮಹೋದರ ಮಹಾಪಾರ್ಶ್ವರನ್ನೂ, ದೇವಾಂತಕ ನರಾಂತಕ ಅತಿಕಾಯ ತ್ರಿಶಿರಸ್ಸೆಂಬ ತನ್ನ ಮಕ್ಕಳನ್ನೂ, ರಣಭೂಮಿಗೆ ಪಯಣಮಾಡಿಸಿದನು.

ಮತ್ತೆ, ರಾಕ್ಷಸರಿಗೂ, ಕಪಿಗಳಿಗೂ ಯುದ್ಧವು ಕೈಗಟ್ಟಿತು. ಎರಡು ಬಲದವರೂ ಪರಾಕ್ರಮದಿಂದ ಕಾದಿದರು. ಉಭಯ ಸೈನ್ಯದಲ್ಲಿಯೂ ಮಿತಿಯಿಲ್ಲದೆ ಮರಣಗಳಾದುವು. ಬಳಿಕ, ಅಂಗದನು ಒಂದು ದೊಡ್ಡ ಬಂಡೆಯನ್ನು ನರಾಂತಕನ ಮೇಲೆ ಎಸೆದು ಅವನನ್ನು ಕೊಂದನು. ಹನುಮಂತನ ಸಂಗಡ ಹೋರಿ, ದೇವಾಂತಕನು ಅಂತಕನ ನಗರಿಗೆ ನಡೆದನು. ಬಲಶಾಲಿಯಾದ ನೀಲನ ಕರಹತಿಯಿಂದ ಮಹೋದರನು ಗತಾಸುವಾದನು. ಆಂಜನೇಯನು ತ್ರಿಶಿರಸ್ಸಿನ ತಲೆಗಳನ್ನು ಕಿತ್ತು ಒಗೆದನು. ಮಹಾಪಾರ್ಶ್ವಾದಿ ರಾಕ್ಷಸವೀರರು ಋಷಭನೆಂಬ ಕಪಿನಾಯಕನಿಂದ ಪಂಚತ್ವವನ್ನೈಯ್ದಿದರು.

ಹೀಗೆ, ರಾಕ್ಷಸನಾಯಕರೆಲ್ಲರೂ ರಣದಲ್ಲಿ ಮರಣವನ್ನು ಪಡೆದುದನ್ನು ಕಂಡು, ಕೋಪದಿಂದ ತಾಮ್ರಾಕ್ಷನಾಗಿ, ಅತಿಕಾಯನೆಂಬ ರಾವಣನ ಮಗನು ಲಕ್ಷ್ಮಣನ ಕೂಡ ಅತ್ಯಾಶ್ಚರ್ಯಕರವಾಗಿ ಯುದ್ಧವನ್ನು ಆರಂಭಿಸಿದನು. ಲಕ್ಷ್ಮಣನು ಅವನೊಡನೆ ಬಹುಕಾಲದ ವರೆಗೆ ಹೋರಿದರೂ ಅವನನ್ನು ವಧಿಸಲಿಕ್ಕೆ ಆಗಲಿಲ್ಲ. ಆಗ, ಅವನು ಅತಿಕಾಯನ ಮೇಲೆ ಬ್ರಹಾಸ್ತ್ರವನ್ನು ಪ್ರಯೋಗಿಸಿದನು. ಕೂಡಲೇ ಅತಿಕಾಯನು ಗತಕಾಯನಾಗಿಹೋದನು.

ಅನುಜತನುಜರೆಲ್ಲರೂ ಯುದ್ಧದಲ್ಲಿ ಹತರಾಗಿ ಹೋದುದರಿಂದ, ರಾವಣನು ತುಂಬ ಸಂಕಟಪಟ್ಟನು. ಆಗ, ಇಂದ್ರಜಿತ್ಕುಮಾರನು

ಅವನ ಬಳಿಗೆ ಬಂದು, ಅಪ್ಪಾ, ನೀವು ಹೀಗೆ ಸಂಕಟಪಡಬಾರದು ಎಂದು ಹೇಳಿ, ಸಂತಯಿಸಿ, ತಾನು ರಥವನ್ನು ಏರಿ, ಬಿಲ್ಲು ಬಾಣಗಳನ್ನು ಧರಿಸಿದವನಾಗಿ, ರಾಕ್ಷಸ ಸೇನೆಯೊಡನೆ ರಾಮಲಕ್ಷ್ಮಣರ ಸಂಗಡ ಯುದ್ಧಕ್ಕೆ ಹೊರಟು, ರಣಭೂಮಿಯಲ್ಲಿ ರಾಕ್ಷಸವೀರರು ತನ್ನ ರಥವನ್ನು ರಕ್ಷಿಸುತ್ತಿರಲು, ಮಂತ್ರದಿಂದ ಅಗ್ನಿಯಲ್ಲಿ ಹೋಮಾದಿಗಳನ್ನು ಮಾಡಿ, ಕರಗತವಾದ ಮಂತ್ರಾಸ್ತ್ರಗಳನ್ನು ಧರಿಸಿ, ಯಾರಿಗೂ ಕಾಣ ದಂತೆ, ಗಗನದಲ್ಲಿ ನಿಂದು ಮೊನೆಯಾದ ಬಾಣಗಳಿಂದ, ಸಕಲಕಪಿಗಳನ್ನೂ ಗಾಯಗಾಣಿಸಿ, ರಾಮಲಕ್ಷ್ಮಣರನ್ನೂ ಬಲಗುಂದಿಸಿ, ಲಂಕೆಗೆ ಹೊರಟುಹೋದನು. ಈ ಯುದ್ಧದಲ್ಲಿ ಸುಗ್ರೀವನು ದುರ್ಬಲನಾದನು. ಶ್ರೀರಾಮನು ಕಳೆಗೆಟ್ಟನು. ನಳನೀಲಕುಮುದಾದಿಗಳು ಜೀವಹೋದವ ರಂತೆ ಬಿದ್ದಿದ್ದರು. ಈ ಪ್ರಕಾರ, ಕಪಿಸೈನ್ಯವೆಲ್ಲವೂ ನಿಶ್ಚೇಷ್ಟಿತ ವಾಗಿರಲು, ಬುದ್ಧಿವಂತನಾದ ಜಾಂಬವಂತನು, ಹನುಮಂತನನ್ನು ನೋಡಿ ಸಂಜೀವನಪರ್ವತವನ್ನು ತರುವಂತೆ ಹೇಳಿದನು. ಅವನು ಹೇಳಿದ ಹಾಗೆ, ಆಂಜನೇಯನು ಸಂಜೀವನಗಿರಿಯನ್ನು ತರಲು, ಅದರಲ್ಲಿರುವ ಮೂಲಿಕೆ ಗಳ ಪ್ರಭಾವದಿಂದ ಸಕಲ ಸೇನೆಯೂ ಚೇತರಿಸಿಕೊಂಡು, ಮತ್ತೆ ಹುರಿಗೊಂಡು, ಯುದ್ಧಕ್ಕೆ ಸಿದ್ಧವಾಯಿತು.

ಅದನ್ನು ತಿಳಿದು, ರಾವಣನು ಅಕಂಪನಪ್ರಜಂಘರೆಂಬ ಬಹು ಪರಾಕ್ರಮಿಗಳಾದ ರಾಕ್ಷಸನಾಯಕರನ್ನು ಯುದ್ಧಭೂಮಿಗೆ ಕಳುಹಿ ಸಿದನು. ಅವರು ರಣರಂಗದಲ್ಲಿ ಕಪಿಸೇನೆಯನ್ನು ತಮ್ಮ ಪರಾ ಕ್ರಮಾತಿಶಯದಿಂದ ತಲ್ಲಣಗೊಳಿಸಿದರು. ವಾಲಿಪುತ್ರನಾದ ಅಂಗದನು, ಅವರಿಬ್ಬರ ಸಂಗಡವೂ ಕಾದಿ, ಇಬ್ಬರನ್ನೂ ಯಮನ ಮನೆಗೆ ಸಾಗಿಸಿಬಿಟ್ಟನು. ಯೂಪಾಕ್ಷಶೋಣಿತಾಕ್ಷರೆಂಬ ರಾಕ್ಷಸವೀರರು ಮೈಂದದ್ವಿವಿದರೆಂಬ ಕಪಿನಾಯಕರಿಂದ ಹತರಾದರು. ಅದನ್ನು ಕಂಡು, ಕುಂಭಕರ್ಣನ ಮಕ್ಕಳಾದ ಕುಂಭನಿಕುಂಭರೆಂಬವರು, ಮಹಾ ಕೋಪದಿಂದ, ಕಾಳೆಗಕ್ಕೆ ಬಂದರು. ಸುಗ್ರೀವನು, ಕುಂಭನನ್ನು ಕೊಂದನು. ನಿಕುಂಭನು, ಹನುಮಂತನಿಂದ ಸಂಹೃತ ನಾದನು.

ಕಾಳೆಗಕ್ಕೆ ಹೋದ ರಾಕ್ಷಸವೀರರೆಲ್ಲರೂ ಕಾಲನ ಊರ ದಾರಿಯನ್ನು ಹಿಡಿದರೆಂಬ ಸುದ್ದಿಯು ರಾವಣನಿಗೆ ತಿಳಿಯಿತು. ಅವನು ಅತ್ಯಂತ ಕೋಪಾಕ್ರಾಂತನಾಗಿ, ಖರನ ಮಗನಾದ ಮಕರಾಕ್ಷನೆಂಬ ರಾಕ್ಷಸನನ್ನು ಯುದ್ಧರಂಗಕ್ಕೆ ಕಳುಹಿದನು. ಅವನ ಸಂಗಡ ಶ್ರೀರಾಮನು ಯುದ್ಧಕ್ಕೆ ನಿಂದು, ನಿಶಿತಬಾಣಪ್ರಯೋಗದಿಂದ ಅವನನ್ನು ಖರನ ಬಳಿಗೇ ಕಳುಹಿಸಿಬಿಟ್ಟನು.

ಬಳಿಕ ರಾವಣನು ಇಂದ್ರಜಿತ್ಕುಮಾರನನ್ನು ಯುದ್ಧಕ್ಕೆ ಕಳುಹಿದನು. ಅವನು ಯುದ್ಧಭೂಮಿಗೆ ಬಂದು, ದಿವ್ಯಮಂತ್ರಾಸ್ತ್ರಗಳನ್ನು ಧರಿಸಿ, ಮಾಯೆಯಿಂದ ಸಕಲ ವಾನರಸೇನೆಯನ್ನೂ ಕೆಡಹಿ, ರಾಮನ ಬಾಣಘಾತಿಗೆ ಹೆದರಿ, ಪಡುವಣ ಬಾಗಿಲಿಂದ ಲಂಕೆಯನ್ನು ಹೊಕ್ಕು, ಕಪಿನಾಯಕರಾರೂ ತನ್ನ ಹಿಂದೆ ಬಾರದಿರುವಂತೆ, ಮಾಯಾಸೀತೆಯನ್ನು ಕತ್ತಿಯಿಂದ ಕತ್ತರಿಸಿ, ಆಂಜನೇಯನ ಮುಂದೆ ಬಿಸುಟನು.

ಆಂಜನೇಯನು ಮಾಯಾಸೀತೆಯನ್ನೇ ನಿಜವಾದ ಸೀತೆಯೆಂದು ನಂಬಿ, ರಾಮನ ಬಳಿಗೆ ಬಂದು, ಈ ವೃತ್ತಾಂತವನ್ನು ತಿಳಿಸಿದನು. ರಾಮನು ಆ ಸಮಾಚಾರವನ್ನು ಕೇಳಿ, ಎದೆಯೊಡೆದವನಾಗಿ, ನಿಟ್ಟುಸಿರನ್ನು ಬಿಡುತ್ತ, ಹಾ ಸೀತೇ! ನೀನು ಯಜ್ಞಭೂಮಿಯಲ್ಲಿ ದೊರೆತ ಪರಮಪವಿತ್ರೆಯಲ್ಲವೇ? ನಿನ್ನನ್ನು ಜನಕರಾಜನು ಪೋಷಿಸಿದನಲ್ಲವೇ? ನೀನು ಸೂರ್ಯವಂಶದ ಅರಸಾದ ದಶರಥನ ಸೊಸೆಯಲ್ಲವೇ? ನನ್ನ ಪ್ರಿಯಪತ್ನಿಯಲ್ಲವೇ? ಹೀಗಿದ್ದರೂ ದೈವೇಚ್ಛೆಯಿಂದ, ನಾನು ನಿನ್ನಂಥ ಹೆಂಡತಿಯನ್ನು ಕಳೆದುಕೊಳ್ಳಬೇಕಾಯಿತಲ್ಲ! ಈ ದುಃಖಸಮುದ್ರವನ್ನು ಹನುಮಂತನು ಹೇಗೆ ದಾಟಲಾಪನು? ಇದಕ್ಕೆ ನಳನು ಹೇಗೆ ಸೇತುವನ್ನು ಕಟ್ಟಲಾಪನು? ಇದನ್ನು ನನ್ನ ಅಗ್ನಿಬಾಣವೂ ಶೋಷಿಸಲಾರದು. ಹಾಹಾ! ಇದನ್ನು ದಾಟುವ ಬಗೆಯು ಹೇಗೆ? ಎಂದು ಹಲುಬಿದನು.

ಹೀಗೆ ಹಲುಬುತ್ತಿರುವ ರಾಮನ ಸಮೀಪಕ್ಕೆ ವಿಭೀಷಣನು ಬಂದು, ಜೀಯಾ, ತಾವೇಕೆ ಬರಿದೆ ದುಃಖಿಸುತ್ತೀರಿ? ತಾನು ಮಾಡುವ

ಮಾರಣಹೋಮವು ನಿರ್ವಿಘ್ನವಾಗಿ ನೆರವೇರಬೇಕೆಂದು ಇಂದ್ರಜಿತುವು, ಕೃತಕ ಸೀತೆಯನ್ನು ಸಂಹಾರಮಾಡಿದ್ದಾನೆ; ಇದರಿಂದ, ನಿಮ್ಮ ಮನಸ್ಸು ತನ್ನ ಕಡೆಗೆ ಸುಳಿಯದಿರಬೇಕೆಂಬುದೇ ಅವನ ಅಭಿಪ್ರಾಯ. ತಾವು ಧೈರ್ಯವನ್ನು ತಂದುಕೊಳ್ಳಿರಿ, ಎಂದು ರಾಮನನ್ನು ಸಂತೈಸಿದನು.

ಇತ್ತ, ಇಂದ್ರಜಿತುವು ಮಾಯಾಸೀತೆಯನ್ನು ಕತ್ತರಿಸಿ ಬಿಸುಟು, ಪಶ್ಚಿಮದ್ವಾರದಿಂದ ಲಂಕೆಗೆ ಹೋಗಿ, ನಿಕುಂಭಿಲೆಯೆಂಬ ರಹಸ್ಯವಾದ ಪ್ರದೇಶದಲ್ಲಿ ಶತ್ರುಸಂಹಾರಕ್ಕೋಸ್ಕರ, ಮಾರಣಹೋಮವನ್ನು ಮಾಡುವುದಕ್ಕೆ ಉಪಕ್ರಮಿಸಿದನು.

ವಿಭೀಷಣನು ರಾಮನನ್ನು ಸಂತೈಸಿ, ಇಂದ್ರಜಿತುವಿನ ನಿಗ್ರಹಕ್ಕಾಗಿ, ಲಕ್ಷ್ಮಣನನ್ನು ಮುಂದುಮಾಡಿಕೊಂಡು, ಕಪಿಬಲವು ಕೂಡ ಬರಲು, ನಿಕುಂಭಿಲೆಯನ್ನು ಮುತ್ತಿ, ಆ ಮಾರಣಹೋಮವು ಪೂರ್ತಿಯಾಗದಂತೆ ಭಂಗವುಂಟುಮಾಡಿದನು. ತನ್ನ ರಹಸ್ಯಸ್ಥಲವನ್ನು ಶತ್ರುಗಳು ಆಕ್ರಮಿಸಿರುವುದನ್ನು ಕಂಡು, ಇಂದ್ರಜಿತುವು ಕೋಪೋದ್ದೀಪಿತನಾಗಿ ಕಪಿಸೈನ್ಯವನ್ನು ದಿಕ್ಕುದಿಕ್ಕಿಗೆ ಚದರಿಸಿ, ಪ್ರಳಯಕಾಲದ ಯಮನಂತೆ ಭಯಂಕರನಾಗಿ ತೇರನ್ನೇರಿ, ಯುದ್ಧಕ್ಕೆ ಹೊರಟನು. ಲಕ್ಷ್ಮಣನು ಆಂಜನೇಯನ ಹೆಗಲ ಮೇಲೆ ಕುಳಿತು, ಅವನನ್ನು ತಡೆದನು. ಇಬ್ಬರಿಗೂ ಅದ್ಭುತವಾದ ಯುದ್ಧವಾಯಿತು. ಕಪಟೋಪಾಯನಿಪುಣನಾದ ಇಂದ್ರಜಿತುವು ಕಾಳೆಗದಲ್ಲಿ ಬಹುಸಾಹಸವನ್ನು ಮಾಡಿದನು. ಲಕ್ಷ್ಮಣನ ತೀಕ್ಷ್ಣವಾದ ಬಾಣಗಳಿಂದ ಇಂದ್ರಜಿತುವಿನ ತೇರೂ, ಸಾರಥಿಯೂ, ಬಿಲ್ಲೂ, ಬಾಣಗಳೂ ಬಯಲಾಗಿ ಹೋದುವು. ಇಬ್ಬರೂ ಎಡೆಬಿಡದೆ, ಮೂರು ದಿನಗಳ ವರೆಗೆ ಕಾದಿದರು. ಇಂದ್ರಜಿತುವು ವಿಭೀಷಣನ ಮೇಲೆ ಪ್ರಯೋಗಿಸಿದ ಶಕ್ತಿಯನ್ನು ಲಕ್ಷ್ಮಣನು ಅರ್ಧಚಂದ್ರಬಾಣದಿಂದ ಕಡಿದು ಬಿಸುಟು, ಶತ್ರುವನ್ನು ಸಂಹಾರಮಾಡಬೇಕೆಂದು, ಬಿಲ್ಲಿನಲ್ಲಿ ಐಂದ್ರಾಸ್ತ್ರವನ್ನು ಹೂಡಿ, ಹಗೆಯ ಮೇಲೆ ಪ್ರಯೋಗಿಸಿದನು. ಅದರ ವೇಗದಿಂದ ಇಂದ್ರಜಿತುವಿನ ತಲೆಯು ಕತ್ತರಿಸಿಹೋಯಿತು. ದೇವತೆಗಳು ಆನಂದದಿಂದ ಲಕ್ಷ್ಮಣನ ತಲೆಯ ಮೇಲೆ ಹೂಮಳೆಯನ್ನು ಕರೆದರು.

ಇಂದ್ರಜಿತುವಿನ ಮರಣವಾರ್ತೆಯು ರಾವಣನಿಗೆ ತಿಳಿಯಿತು. ಅವನು ರೋಷದಿಂದ ಹುಬ್ಬನ್ನು ಗಂಟಿಕ್ಕಿ, ಹಲ್ಲುಗಳನ್ನು ಕಡಿದನು. ಇಂದ್ರಜಿತುಮುಖರಾದ ಮಕ್ಕಳೆಲ್ಲರೂ ಹತರಾದರು. ಕುಂಭಕರ್ಣ ಮೊದಲಾದ ಒಡಹುಟ್ಟಿದವರೆಲ್ಲರೂ ಮಡಿದರು. ಪ್ರಹಸ್ತಮುಂತಾದ ಮಂತ್ರಿಗಳೆಲ್ಲರೂ ನಾಶವಾದರು. ವಿರೂಪಾಕ್ಷ ಮೊದಲಾದ ಸೇನಾ ಪತಿಗಳೆಲ್ಲರೂ ಕೀನಾಶನ ಮನೆಗೆ ತೆರಳಿದರು. ಬಲವೆಲ್ಲವೂ ಅಳಿದು ಹೋಯಿತು. ಲಂಕಾನಗರದಲ್ಲಿ ಎತ್ತ ನೋಡಿದರೂ ಹೆಂಗುಸರ ಅಳುವಿಕೆಯು ಕಿವಿದಾಗುತ್ತಿದ್ದಿತು. ಈ ರೀತಿಯಾಗಿ, ಆಪತ್ತುಗಳು ಒಂದರ ಮೇಲೆ ಒಂದರಂತೆ ಘಟಿಸಿದುದರಿಂದ, ರಾವಣನು ಇದೆಲ್ಲ ಸೀತೆಯ ಕಾರಣದಿಂದಲೇ ಉಂಟಾದುದೆಂದು ಅವಳ ಮೇಲೆ ಕೋಪಗೊಂಡು, ಅವಳನ್ನು ಕೊಂದು ಬಿಡುತ್ತೇನೆ, ಎಂದು ಉರುಬಿದನು. ಹತ್ತಿರದಲ್ಲಿದ್ದ ಮಂತ್ರಿಯೊಬ್ಬನು ಹಾಗೆ ಮಾಡುವುದು ಸರಿಯಲ್ಲ, ಎಂದು ರಾವಣನನ್ನು ತಡೆದನು.

ಬಳಿಕ, ರಾವಣನು ಕಾಳಗದಲ್ಲಿ ರಾಮನನ್ನು ಜಯಿಸುವೆನೆಂದು ಪ್ರತಿಜ್ಞೆಮಾಡಿ, ಬಿಲ್ಲು, ಬಾಣ, ಕತ್ತಿ, ಗದೆ, ದೊಣ್ಣೆ, ಮೊದಲಾದ ವಿವಿಧಾಯುಧಗಳನ್ನು ಹಿಡಿದು, ರಥವೇರಿ, ರಣಭೂಮಿಗೆ ಬಂದು, ಕತ್ತಿಯ ಪೆಟ್ಟಿನಿಂದ ಕಪಿಸೇನೆಯನ್ನು ಅಪರಿಮಿತವಾಗಿ ಸವರಿಬಿಟ್ಟನು. ಹೀಗೆ ಕೋಟಿಗಟ್ಟಲೆಯಾಗಿ ಕಪಿಗಳು ಅಳಿದು, ಸೇನೆಯು ನಷ್ಟ ವಾದುದನ್ನು ಕಂಡು, ಲಕ್ಷ್ಮಣನು ಕೋಪಪರವಶನಾಗಿ ತನ್ನ ಬಿಲ್ಗಾರತನದ ಜಾಣ್ಮೆಯಿಂದ ರಾವಣನ ರಥದ ಧ್ವಜವನ್ನು ಕೆಡಹಿ, ಕಯ್ಯ ಬಿಲ್ಲನ್ನು ಕತ್ತರಿಸಿ, ಸಾರಥಿಯ ಜೀವವನ್ನು ಕೊಂಡು, ನೋಡು ವವರಿಗೆ ವಿಸ್ಮಯವಾಗುವಂತೆ ಅವನೊಡನೆ ಕಾದಿದನು. ಲಕ್ಷ್ಮಣನ ಕಯ್ಯ ಚಳಕವನ್ನು ಕಂಡು, ರಾವಣನು ಕಡುಮುಳಿದು, ತನಗೆ ಮಯನು ಕೊಟ್ಟಿದ್ದ ಶಕ್ತಿಯೆಂಬ ಆಯುಧವನ್ನು ಅವನ ಮೇಲೆ ಪ್ರಯೋಗಿಸಿದನು. ಅದು ಲಕ್ಷ್ಮಣನ ಎದೆಗೆ ನಾಟಿ, ಅವನನ್ನು ನೆಲದಲ್ಲಿ ಕೆಡಹಿಬಿಟ್ಟಿತು. ತಮ್ಮನು ಮೂರ್ಛಿತನಾಗಿ ಬಿದ್ದುದನ್ನು ಕಂಡು, ರಾಮನು ರೋಷಭೀಷಣನಾಗಿ ಹೆದೆಯನ್ನು ಕಿವಿಯ ವರೆಗೆ

ಸೆಳೆದು, ಹಗೆಗಳ ಮೇಲೆ ಬಾಣವನ್ನು ಸುರಿಸಿಬಿಟ್ಟನು. ಯುದ್ಧಕ್ಕೆ ಬಂದ ಶತ್ರುಗಳಲ್ಲಿ ಒಬ್ಬನಾದರೂ ಜೀವದೊಂದಿಗೆ ಉಳಿಯಲಿಲ್ಲ. ಆಂಜನೇಯನು ಮತ್ತೊಂದು ಸಲ, ಸಂಜೀವನಗಿರಿಯನ್ನು ತಂದನು. ಆ ಮೂಲಿಕೆಯ ಸಾಮರ್ಥ್ಯದಿಂದ, ಲಕ್ಷ್ಮಣನು ಚೇತರಿಸಿಕೊಂಡನು. ಅದನ್ನು ಕಂಡು, ರಾಮನಿಗೆ ಬಹುಸಂತೋಷವಾಯಿತು. ರಾವಣನೊಡನೆ ಯುದ್ಧಮಾಡುವುದಕ್ಕಾಗಿ ಇಂದ್ರನು ತನ್ನ ಕವಚವನ್ನೂ ರಥವನ್ನೂ ಮಾತಲಿಯೊಡನೆ ರಾಮನಿಗೆ ಕಳುಹಿದನು.

ರಾಮನು ಇಂದ್ರನ ರಥವನ್ನು ಏರಿ, ರಾವಣನೊಡನೆ ಯುದ್ಧವನ್ನು ತೊಡಗಿದನು. ಇಬ್ಬರೂ ಶಸ್ತ್ರಯುದ್ಧದಲ್ಲಿ ಹೆಣಗಿದರು. ಇಬ್ಬರೂ ಪರಸ್ಪರವಾಗಿ ಒಬ್ಬರೊಬ್ಬರ ಸಾಹಸವನ್ನು ಕೊಂಡಾಡಿದರು. ಎಡೆಬಿಡದೆ ಇಬ್ಬರೂ ಹೋರಿದರು. ರಾವಣನ ಬಾಣಗಳನ್ನು ರಾಮನೂ, ರಾಮನ ಮಾರ್ಗಣವನ್ನು ರಾವಣನೂ ಕತ್ತರಿಸಿದರು. ರಾಮನು ತೊಟ್ಟಿದ್ದ ಇಂದ್ರನ ಕವಚವು, ರಾವಣನ ಬಾಣಗಳ ಪೆಟ್ಟಿನಿಂದ ತೂತುಗಳಾಗಿ ಒಂದೊಂದು ರಂಧ್ರದಿಂದಲೂ ರಕ್ತವು ಚಿಮ್ಮುತ್ತಿದ್ದಿತು. ಅವರಿಬ್ಬರೂ ಬಿಲ್ಲಿನಲ್ಲಿ ಬಾಣವನ್ನು ಹೂಡುವ, ಬಿಡುವ, ಚಮತ್ಕಾರವು ಯುದ್ಧನಿಪುಣರನ್ನೂ ಬೆರಗುಮಾಡುತ್ತಿದ್ದಿತು. ವೀರವಾದವನ್ನು ಒಕ್ಕಣಿಸುತ್ತ, ಬಾಣಪ್ರಯೋಗವನ್ನು ಮಾಡುತ್ತಿದ್ದ ದಶಮುಖನ ತಲೆಗಳನ್ನು, ರಾಮನು ಲಾಘವದಿಂದ ತರಿದನು. ಕೂಡಲೇ ತರಿದ ತಲೆಗಳ ಸ್ಥಾನದಲ್ಲಿ ಹೊಸ ತಲೆಗಳು ಹುಟ್ಟಿದುವು. ಈ ರೀತಿ, ರಾಮ ರಾವಣರು ಕೊಂಚವೂ ವಿರಾಮವಿಲ್ಲದೆ ಏಳು ದಿನಗಳವರೆಗೆ ಕಾದಿದರು. ಬಳಿಕ, ರಾಮನು ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿ, ರಾವಣನನ್ನು ಸಂಹಾರಮಾಡಿದನು. ದೇವತೆಗಳು, ತಮ್ಮ ಪೀಡೆಯು ಇಂದಿಗೆ ಹರಿಯಿತೆಂದು ಸಂತೋಷದಿಂದ, ಪುಷ್ಪಗಳನ್ನು ಶ್ರೀರಾಮನ ತಲೆಯ ಮೇಲೆ ಸುರಿದರು.

ಬಾಣಗಳಿಂದ ಗಾಯಗಂಡು, ಬತ್ತಳಿಕೆಯೇ ತಲೆಗಿಂಬಾಗಿ, ನೆಲದ ಮೇಲೆ ಸತ್ತುಬಿದ್ದಿದ್ದ ರಾವಣನನ್ನು ನೋಡಿ, ವಿಭೀಷಣನು ಭ್ರಾತೃವಾತ್ಸಲ್ಯದಿಂದ ಮನಗರಗಿ, ಅಯ್ಯೋ! ನನ್ನ ಜೀವವನ್ನು ಉಳಿಸಿ

ಕೊಳ್ಳುವುದಕ್ಕೋಸ್ಕರ ಅಣ್ಣನನ್ನು ಕೊಲ್ಲಿಸಿ, ಪಾಪವನ್ನು ಕಟ್ಟಿಕೊಂಡೆನಲ್ಲ! ಅಣ್ಣಾ, ನಿನ್ನನ್ನೂ ಇತರ ಬಂಧುಗಳನ್ನೂ ಇಟ್ಟುಕೊಂಡು, ಒಟ್ಟಿಗೆ ಸುಖದುಃಖಗಳನ್ನು ನಾನು ಅನುಭವಿಸುತ್ತ ಇರಬೇಕಾದುದು ನ್ಯಾಯ. ಹೀಗಿರುವಲ್ಲಿ, ಮೂರ್ಖನಾದ ನಾನು ಎಲ್ಲರನ್ನೂ ತೊರೆದು, ನನ್ನೊಬ್ಬನ ಜೀವಕ್ಕೋಸ್ಕರ ಹಗೆಗಳನ್ನು ಸೇರಿ, ಇಷ್ಟು ಮಂದಿ ಬಂಧುಗಳನ್ನೂ ನಿನ್ನನ್ನೂ ಕೊಲ್ಲಿಸಿ, ಅಳಿಯದ ಅಪಕೀರ್ತಿಯನ್ನು ಸಂಪಾದಿಸಿದೆನಲ್ಲ! ನಿನ್ನ ಅನ್ನವನ್ನು ಉಂಡು, ನಿನಗೆ ಕೇಡೆಣಿಸಿದ ನನ್ನ ಬಾಳು ಬಾಳೇ? ನಿನಗಾಗಿ ದೇಹತ್ಯಾಗವನ್ನು ಮಾಡಿದ ಕುಂಭಕರ್ಣನೇ ಧನ್ಯನು. ನನ್ನಂಥ ಹತಭಾಗ್ಯನು ಜೀವಿಸಿರಬಹುದೇ? ಎಂದು ಬಹುವಾಗಿ ಪ್ರಲಾಪಿಸಿದನು.

ಹೀಗೆ, ವಿಭೀಷಣನು ಪ್ರಲಾಪಿಸುತ್ತಿರಲಾಗಿ, ಅತ್ತ, ಮಂಡೋದರಿಯು ರಾವಣನ ವಧೆಯನ್ನು ಕೇಳಿ, ಹಾ! ಹಾ! ನಾಥ, ಕೆಟ್ಟೆನು, ಕೆಟ್ಟೆನು, ಎಂದು ರೋದಿಸುತ್ತ, ಅಂತಃಪುರದಿಂದ ಹೊರಟು, ರಣಭೂಮಿಗೆ ಬಂದು, ಸತ್ತುಬಿದ್ದಿರುವ ಗಂಡನನ್ನು ಕಂಡು, ಬೇರು ಕಡಿದ ಮರದಂತೆ, ದೊಪ್ಪನೆ ನೆಲದಲ್ಲಿ ಬಿದ್ದು, ಹಾ ಪ್ರಿಯ! ದಿಗ್ವಿಜಯಕಾಲದಲ್ಲಿ, ನೀನು ಯಮನ ನಗರಿಗೆ ಹೋಗಿ, ಅವನನ್ನು ಜಯಿಸಿ ಬಂದೆಯಲ್ಲ. ಈಗ ಆ ಶೌರ್ಯವೆಲ್ಲಿ ಹೋಯಿತು? ದುರ್ದೈವವು ಈಗ ನಿನ್ನನ್ನು ಯಮಪುರಕ್ಕೆ ಅಟ್ಟಿ, ಮತ್ತೆ ಇಲ್ಲಿಗೆ ಬಾರದಂತೆ ಮಾಡಿಬಿಟ್ಟಿತೇ? ನನ್ನ ತಂದೆಯಾದ ಮಯನು ದನುಜ ವಂಶಕ್ಕೇ ತಿಲಕಪ್ರಾಯನು. ಕಯ್ಯನ್ನು ಹಿಡಿದ ನೀನೋ, ರಾಕ್ಷಸಸಾರ್ವಭೌಮನು. ಹೊಟ್ಟೆಯಲ್ಲಿ ಹುಟ್ಟಿದ ಮಗನಾದರೋ ದೇವೇಂದ್ರನನ್ನೇ ಗೆದ್ದವನು, ಎಂದು ನನಗೆ ತುಂಬ ಹೆಮ್ಮೆಯಿದ್ದಿತು. ಅದೆಲ್ಲ, ಒಂದೇ ನಿಮಿಷದಲ್ಲಿ ಧ್ವಂಸವಾಗಿಹೋಯಿತು. ಇನ್ನು ನಾನು ನಿನ್ನನ್ನು ಬಿಟ್ಟು ಹೇಗೆ ಬದುಕಲಿ? ಈ ದೇಹವನ್ನು ಬೆಂಕಿಯಲ್ಲಿ ಕೆಡಹಿ ನಿನ್ನ ಬಳಿಗೇ ಬರುತ್ತೇನೆ, ಎಂದು ಅತ್ಯಂತ ದುಃಖದಿಂದ ಅಳುತ್ತ, ಸಹಗಮನವನ್ನು ಮಾಡುವುದಕ್ಕೆ ಉದ್ಯುಕ್ತಳಾದಳು.

ಹೀಗೆ, ದೀನೆಯಾಗಿ ಅಳುತ್ತಿರುವ ಅತ್ತಿಗೆಯನ್ನು ಸಾಂತ್ವವಚನಗಳಿಂದ ಸಮಾಧಾನಪಡಿಸಿ, ಸಹಗಮನವನ್ನು ಮಾಡಬೇಡವೆಂದು ಹೇಳಿ, ವಿಭೀಷಣನು ಶ್ರೀರಾಮನ ಅಪ್ಪಣೆಯಂತೆ ರಣದಲ್ಲಿ ಮಡಿದ ರಾವಣನಿಗೆ ಶಾಸ್ತ್ರಮರ್ಯಾದೆಯಿಂದ ಪರಲೋಕಕ್ರಿಯೆಗಳನ್ನೆಲ್ಲ ಸಾಂಗವಾಗಿ ಮಾಡಿದನು.

ತರುವಾಯ, ಶೋಕಾಕುಲನಾಗಿರುವ ವಿಭೀಷಣನಿಗೆ ಶ್ರೀರಾಮನು ಸಕಲತೀರ್ಥಗಳಿಂದ ತಂದ ನೀರಿಂದ ಅಭಿಷೇಕಮಾಡಿ, ಲಂಕಾನಗರಿಯಲ್ಲಿ ರಾಜಪಟ್ಟವನ್ನು ಕಟ್ಟಿದನು. ರಾಜನಾದ ಬಳಿಕ, ವಿಭೀಷಣನ ಸಚ್ಚರಿತ್ರದಿಂದ, ಆ ರಾಜ್ಯವು, ದಿನೇ ದಿನೇ ಸಕಲವಿಧದಲ್ಲಿಯೂ ಅಭಿವೃದ್ಧವಾಗುತ್ತ ಬಂದಿತು.

ಆ ಮೇಲೆ, ಪರಿಶುದ್ಧಾತ್ಮನಾದ ವಿಭೀಷಣನು ದಶಕಂಠನಿಂದ ಅಪಹೃತಳಾಗಿದ್ದ ಪತಿವ್ರತೆಯರ ತಲೆಮಣಿಯಾದ ಸೀತೆಯನ್ನು, ರಾಮನಿಗೆ ತಂದು ಒಪ್ಪಿಸಿದನು. ಅವಳನ್ನು ಕಂಡ ಕೂಡಲೇ, ರಾಮನ ಮನಸ್ಸಿಗೆ ಸಂತೋಷ ದುಃಖಗಳೆರಡೂ ಉಂಟಾದುವು. ಬಳಿಕ, ಅರುಂಧತಿಯಂತೆ ಪರಿಶುದ್ಧಚರಿತೆಯೂ, ಪತಿದೇವತೆಯೂ ಆದ ಸೀತಾದೇವಿಯು, ತನ್ನ ನಲ್ನಡತೆಯನ್ನು ಸಕಲಜನರಿಗೂ ತೋರುವುದಕ್ಕಾಗಿ, ಬ್ರಹ್ಮಾದಿ ದೇವತೆಗಳೆಲ್ಲರೂ ಸಾಕ್ಷಿಗಳಾಗಿ ನೋಡುತ್ತಿರಲು, ಉರಿಯುತ್ತಿದ್ದ ಬೆಂಕಿಯ ಕೊಂಡದಲ್ಲಿ ಬಿದ್ದಳು. ಚಿರಕಾಲದಿಂದ ಸರ್ವಭಕ್ಷಕನಾಗಿದ್ದುದರಿಂದ ತನಗೆ ಬಂದಿದ್ದ ದೋಷವನ್ನೆಲ್ಲ ಅಗ್ನಿಯು, ಸೀತಾದೇವಿಯ ಸಾನ್ನಿಧ್ಯದಿಂದ, ನೀಗಿಕೊಂಡನು.

ಹೀಗೆ, ಅಗ್ನಿಸಂಸ್ಕಾರದಿಂದ ಶುದ್ಧೆಯಾದ ಸೀತೆಯನ್ನು ಶ್ರೀರಾಮನು ಪರಮಾದರದಿಂದ ಸ್ವೀಕರಿಸಿದನು. ಆಗ, ಬ್ರಹ್ಮನು ದಶರಥನನ್ನು ರಾಮನಿಗೆ ತೋರಿದನು. ರಾಮನು ತಂದೆಗೆ ನಮಸ್ಕರಿಸಿದನು. ಅವನ ತಲೆಯ ಮೇಲೆ ಕಯ್ಯನ್ನಿರಿಸಿ, ದಶರಥನು ಮಗನೇ, ನೀನು ಅತ್ಯಂತ ಶ್ಲಾಘ್ಯವಾದ ಕಾರ್ಯವನ್ನು ಮಾಡಿದ್ದೀಯೆ. ಇನ್ನು, ತಮ್ಮಂದಿರೊಡನೆ ರಾಜ್ಯವನ್ನು ಪಾಲಿಸುತ್ತ, ದೀರ್ಘಾಯುವಾಗಿರು, ಎಂದು ಹರಸಿದನು. ಬಳಿಕ, ಇಂದ್ರನು ರಣದಲ್ಲಿ ಸತ್ತಿದ್ದ ಕಪಿಗಳನ್ನೆಲ್ಲ ಅಮೃತವರ್ಷದಿಂದ

ಬದುಕಿಸಿದನು. ಶ್ರೀರಾಮನು ಬಹುಸಂತುಷ್ಟಚಿತ್ತನಾಗಿ, ವಿಭೀಷಣನನ್ನು ಕಟಾಕ್ಷಿಸುತ್ತ, ಸುಗ್ರೀವನ ಸಂಗಡ ಮಾತನಾಡುತ್ತ, ಸೀತಾಲಕ್ಷ್ಮಣಸಮೇತನಾಗಿ ಸಕಲಕಪಿಸೇನೆಯೂ ಕೂಡ ಬರಲು, ಪುಷ್ಪಕವೆಂಬ ಕುಬೇರನ ವಿಮಾನವನ್ನು ಏರಿ, ಅಯೋಧ್ಯಾಪುರಿಗೆ ಪಯಣಮಾಡಿದನು.

ಬಳಿಕ, ಶ್ರೀರಾಮನು ಎರಳೆಗಣ್ಣ ಸೀತೆಗೆ, ತಾನು ರಾವಣನ ಸಂಗಡ ಯುದ್ಧಮಾಡಿದ ಪ್ರದೇಶವನ್ನೂ, ಅಗಾಧವಾದ ಸಾಗರವನ್ನೂ, ತಾನು ಸಮುದ್ರದಲ್ಲಿ ಕಟ್ಟಿಸಿದ ಸೇತುವನ್ನೂ ತೋರುತ್ತ, ಎಲೌ ಸೀತೇ, ಈ ವಿಮಾನವು ಮೇಲ ಮೇಲಕ್ಕೆ ಹೋದಹಾಗೆಲ್ಲ, ಆಕಾಶವು ಅಷ್ಟಷ್ಟು ವಿಸ್ತಾರವಾಗಿ ತೋರುತ್ತಿದೆ. ಭೂಮಿಯ ಮೇಲಿರುವ ಸಮುದ್ರವು ಒಂದು ಸಣ್ಣ ಕೆರೆಯೋಪಾದಿಯಲ್ಲಿ ಕಾಣಿಸುತ್ತಿದೆ. ಆಹಾ! ಈ ವಿಮಾನವು ಎಷ್ಟು ವೇಗವಾಗಿ ಹೋಗುತ್ತಿದೆ! ನೋಡು; ಮುಂದೆ ಕಾಣುವ ಪ್ರದೇಶಗಳನ್ನು ನಿನಗೆ ತೋರಬೇಕೆಂಬುವಷ್ಟರಲ್ಲಿಯೇ, ಅವೆಲ್ಲ ಹಿಂದಾಗಿ ಹೋಗುತ್ತಿವೆ. ಆದರೂ, ಕೆಲವನ್ನು ವಿವರಿಸುತ್ತೇನೆ, ಕೇಳು: ಅಗೋ, ಆ ಬೆಟ್ಟವು ಋಷ್ಯಮೂಕಪರ್ವತ; ಇದು ಪಂಪಾ ಸರೋವರ; ಇಲ್ಲಿ ನಾವು ಕಬಂಧನನ್ನು ಕೊಂದೆವು; ಈ ಕಡೆ ನೋಡು; ಇಲ್ಲಿ ಖರಾದಿ ರಾಕ್ಷಸರನ್ನು ಸಂಹಾರಮಾಡಿದೆನು. ಇದೇ ನನ್ನ ಪರ್ಣಶಾಲೆ; ಈ ಸ್ಥಳದಲ್ಲಿ ನಾನು ಮಾಯಾಮೃಗವನ್ನು ಹೊಡೆದೆನು. ಇದೇ ಗೋದಾವರೀ ನದಿ; ಇದು ಅಗಸ್ತ್ಯರ ಆಶ್ರಮ; ಇತ್ತ, ವಿರಾಧನನ್ನು ಕೊಂದುಹಾಕಿದ ಪ್ರದೇಶವನ್ನು ನೋಡು; ಈ ಪಕ್ಕದಲ್ಲಿ ಅತ್ರಿಮುನಿಗಳ ಆಶ್ರಮವನ್ನು ಕಂಡೆಯಾ? ಇದೇ ಚಿತ್ರಕೂಟಪರ್ವತ, ಎಂದು ಒಂದೊಂದಾಗಿ ತೋರಿಸುತ್ತಾ, ಮಾತನಾಡುತ್ತಿದ್ದನು. ಆ ವೇಳೆಗೆ ವಿಮಾನವು ಗಂಗಾತೀರದಲ್ಲಿರುವ ಭರದ್ವಾಜ ಮುನಿಗಳ ಆಶ್ರಮಕ್ಕೆ ಬಂದಿತು. ಆಗ ರಾಮನು ಸೀತೆಯೊಡನೆ ಎಲೇ, ಮೈಥಿಲೀ, ಇತ್ತ ನೋಡು, ನಿದ್ದಿಸುವ ನವಿಲಿನ ಉಸಿರ ಗಾಳಿಯನ್ನು, ಹಾವುಗಳು ಕುಡಿಯುತ್ತಿವೆ; ಜಿಂಕೆಗಳ ಮೈಯ್ಯ ತಿನಿಸನ್ನು ಸಿಂಹಗಳು ತಮ್ಮ ಉಗುರುಗಳಿಂದ ನಿವಾರಣೆ ಮಾಡುತ್ತಿವೆ,

ಎಂದು ಆಶ್ರಮಪ್ರದೇಶದ ಶಾಂತತೆಯನ್ನೂ, ನಿರ್ವೈರತ್ವವನ್ನೂ, ಕೊಂಡಾಡಿದನು.

ಭರದ್ವಾಜಮುನಿಗಳು ತಮಗೆಲ್ಲರಿಗೂ ಮಾಡಿದ ಸತ್ಕಾರವನ್ನು ಅಂಗೀಕರಿಸಿ, ಬಹುದೂರದ ಹಾದಿಯನ್ನು ಹಾದು, ಅಯೋಧ್ಯಾ ನಗರದ ಹತ್ತಿರಕ್ಕೆ ಬಂದು, ರಾಮನು ತಾವೆಲ್ಲರೂ ಬಂದಿರುವ ಸುದ್ದಿಯನ್ನು ಭರತನಿಗೆ ತಿಳಿಯಿಸುವಂತೆ ಆಂಜನೇಯನನ್ನು ಕಳುಹಿದನು. ಈ ಶುಭವಾರ್ತೆಯನ್ನು ಕೇಳಿ, ಕಣ್ಣುಗಳಿಂದ ಸುಖ ಬಾಷ್ಪವು ಕೋಡಿವರಿಯುತ್ತಿರಲು, ವಸಿಷ್ಠ ಮುಂತಾದ ಮಂತ್ರಿ ಜನರು ಸಂಗಡ ಬರುತ್ತಿರಲು, ಜಟಾಧಾರಿಯಾಗಿ, ನಾರ ಬಟ್ಟೆಯುಟ್ಟು, ಬ್ರಹ್ಮಚರ್ಯ ವ್ರತದಲ್ಲಿದ್ದ ರಾಮಭಕ್ತಿರತನಾದ ಭರತನು ರಾಮನ ಸಮೀಪಕ್ಕೆ ಬರುತ್ತಿದ್ದನು.

ಅವನನ್ನು ಕಂಡು, ಬಹುಪ್ರೀತಿಯಿಂದ ರಾಮನು ವಿಮಾನದಿಂದ ಇಳಿಯಬೇಕೆಂದು ಬಯಸಿದನು. ಕೂಡಲೇ ವಿಮಾನವು ನೆಲಕ್ಕೆ ಇಳಿಯಿತು. ಆಗ ಸುಗ್ರೀವನು ರಾಮನಿಗೆ ಕೈಲಾಗನ್ನು ಕೊಟ್ಟನು. ಜೀಯಾ, ಪರಾಕು, ಇತ್ತ ಪಾದವನ್ನು ಬೆಳೆಸಬೇಕು, ಎಂದು ವಿಭೀಷಣನು ಉಗ್ಗಡಿಸಿದನು. ಶ್ರೀರಾಮನು ವಿಮಾನದಿಂದಿಳಿದು, ಭರತನು ಒಪ್ಪಿಸಿದ ಹಾವುಗೆಗಳನ್ನು ಮೆಟ್ಟಿ, ಅವನನ್ನು ವಾತ್ಸಲ್ಯದಿಂದ ಆಲಿಂಗಿಸಿ, ತಾರಿಹೋಗಿದ್ದ ಅವನ ಮೆಯ್ಯನ್ನು ತನ್ನ ಕಯ್ಯಿಂದ ಸವರಿದನು. ತರುವಾಯ ಭರತನು, ರಾಮನ ಸುಖದುಃಖಗಳಲ್ಲಿ ಭಾಗಿಯಾಗಿದ್ದ ಲಕ್ಷ್ಮಣನನ್ನು, ತನ್ನ ಎರಡು ಕಯ್ಗಳಿಂದಲೂ ತಕ್ಕೈಸಿ ಸಂತಸಗೊಂಡನು. ತನಗೆ ನಿರಾಯಾಸವಾಗಿ ಸಿಕ್ಕಿದ ರಾಜ್ಯವನ್ನು ತ್ಯಾಗಮಾಡಿ, ಶ್ರೀರಾಮನು ಊರಿಗೆ ಬರುವ ವರೆಗೂ ತಪೋವೃತ್ತಿಯಿಂದಿದ್ದ ಭರತನನ್ನು, ಲಕ್ಷ್ಮಣನು ಪ್ರೀತಿಯಿಂದ ಆಲಿಂಗನೆಮಾಡಿಕೊಂಡು ಕೊಂಡಾಡಿದನು.

ಬಳಿಕ, ಭರತನು ಶತ್ರುಘ್ನನೊಡನೆ ಸೀತಾದೇವಿಗೆ ಅಂತಃಪುರದ ಸ್ತ್ರೀಯರೊಡಗೂಡಿ ನಮಸ್ಕಾರಮಾಡಿ, ಸುಗ್ರೀವವಿಭೀಷಣಾದಿಗಳನ್ನೂ, ಅವರ ಪರಿವಾರಗಳನ್ನೂ ಉಪಚರಿಸಿ, ಅಧಿಕಾರಿಗಳಿಗೂ,

ಪುರಜನರಿಗೂ ಸೀತಾರಾಮರ ದರ್ಶನವನ್ನು ಮಾಡಿಸಿ, ಶ್ರೀರಾಮಾದಿಗಳನ್ನು ಬಹುಮರ್ಯಾದೆಯಿಂದ ವಿಮಾನದಲ್ಲಿ ಕುಳ್ಳಿರಿಸಿಕೊಂಡು ನಂದಿಗ್ರಾಮಕ್ಕೆ ಕರೆದುಯ್ದನು.

ಅಲ್ಲಿ, ಶ್ರೀರಾಮನು ಸೀತಾಲಕ್ಷ್ಮಣರೊಡನೆ ಪುತ್ರವತ್ಸಲೆಯಾದ ಕೌಸಲ್ಯೆಗೂ, ಅತಿದುಃಖಿತೆಯಾದ ಕೈಕೇಯಿಗೂ, ಅತ್ಯಂತಸ್ನೇಹಪೂರ್ಣೆಯಾದ ಸುಮಿತ್ರೆಗೂ ನಮಸ್ಕಾರಮಾಡಿ, ಅವರಿಂದ ಅಡಿಗಡಿಗೆ ಆಲಿಂಗಿತನಾಗಿ ಪರಮಾನಂದಭರಿತನಾದನು.

ಬಳಿಕ, ಕುಲಗುರುಗಳಾದ ವಸಿಷ್ಠಮುನಿಗಳ ಅಪ್ಪಣೆಯಂತೆ, ಸಮಸ್ತಜನರೂ ಆನಂದಪಡುವ ರೀತಿಯಲ್ಲಿ, ಶ್ರೀರಾಮನಿಗೆ ಪಟ್ಟಾಭಿಷೇಕವನ್ನು ನೆರವೇರಿಸಬೇಕೆಂದು ನಿಶ್ಚಯವಾಯಿತು. ಕಪಿನಾಯಕರೆಲ್ಲರೂ ನಾನಾಕಡೆಗಳಿಂದ ಪುಣ್ಯತೀರ್ಥಗಳನ್ನು ತಂದರು. ತರುವಾಯ ಮಂತ್ರಿ ಪುರೋಹಿತರು ಶ್ರೀರಾಮನಿಗೆ ರಾಜ್ಯಾಭಿಷೇಕವನ್ನು ಮಾಡಿದರು. ಶ್ರೀರಾಮನು ಜಡೆಯನ್ನೂ ನಾರಬಟ್ಟೆಯನ್ನೂ ವಿಸರ್ಜನೆಮಾಡಿ, ದಿವ್ಯವಾದ ಪೀತಾಂಬರಾಭರಣಗಳನ್ನೂ ಕಿರೀಟವನ್ನೂ ಧರಿಸಿ, ರಥವನ್ನು ಏರಿ, ಅಯೋಧ್ಯಾಪುರದ ಬೀದಿಗಳಲ್ಲಿ ಪ್ರದಕ್ಷಿಣವಾಗಿ ಮೆರವಣಿಗೆ ಹೊರಟನು. ಸೇವಾವಿಚಕ್ಷಣರಾದ ಶತ್ರುಘ್ನಲಕ್ಷ್ಮಣರು ಬೀಸಣಿಗೆಯಿಂದ ಬೀಸಿದರು. ಭರತನು ದಿವ್ಯವಾದ ಬೆಳ್ಗೊಡೆಯನ್ನು ಎತ್ತಿ, ರಾಮನ ತಲೆಯ ಮೇಲೆ ಹಿಡಿದನು. ಕಪಿನಾಯಕರೂ ರಾಕ್ಷಸನಾಯಕರೂ ಸಿಂಗರಿಸಲ್ಪಟ್ಟಿದ್ದ ಗಜಗಳ ಮೇಲೆಯೂ, ರಥಗಳಲ್ಲಿಯೂ ಕುಳಿತು, ಶ್ರೀರಾಮನ ಹಿಂದೆ ಹೊರಟರು. ಊರಲ್ಲಿರುವ ಸುಮಂಗಲೆಯರು ಬಿಳಿಯ ಅಕ್ಷತೆಗಳನ್ನು ರಾಮನ ಮೇಲೆ ಚೆಲ್ಲಿದರು. ಕಯ್ಯ ಬಳೆಗಳೂ, ಕಾಲ ಅಂದುಗೆಗಳೂ ಅಂದವಾಗಿ ದನಿಗುಡುತ್ತಿರಲು, ಯುವತಿಯರು ಇಕ್ಕೆಲದ ಮನೆಗಳ ಮಹಡಿಯ ಉಬ್ಬು ಕೈಸಾಲೆಗಳಲ್ಲಿ ನಿಂದು, ರಘುನಂದನನ ಮೇಲೆ ಹೂಗಳನ್ನು ಎರಚಿದರು. ಮಂಗಳವಾದ್ಯಗಳು ಮೊಳಗಿದುವು. ಹೊಗಳುಭಟ್ಟರು ರಾಮನ ದಿವ್ಯಗುಣಗಳನ್ನು ಹೊಗಳಿದರು. ಪುರಜನರು ಸಂತಸದಿಂದ ಜಯ ಜಯ, ಎಂದು ಉದ್ಘೋಷಿಸಿದರು.



ಈ ಪ್ರಕಾರ ಮಹೋತ್ಸವದಿಂದ ಪುರಪ್ರದಕ್ಷಿಣೆಯನ್ನು ಮಾಡಿ, ಅರಮನೆಯನ್ನು ಹೊಕ್ಕು, ಸುಗ್ರೀವವಿಭೀಷಣಾದಿ ಸ್ನೇಹಿತರಿಗೆ ಯಥೋಚಿತವಾಗಿ ಉಪಚಾರಮಾಡಿ, ಅವರವರನ್ನು ಅವರವರ ನಾಡುಗಳಿಗೆ ಬೀಳುಕೊಟ್ಟು, ಶ್ರೀರಾಮಚಂದ್ರನು ತಮ್ಮಂದಿರೊಡನೆಯೂ, ಸೀತೆಯೊಡನೆಯೂ ಬಹುಕಾಲದ ವರೆಗೆ ಸುಖದಿಂದ ರಾಜ್ಯವನ್ನು ಆಳುತ್ತಿದ್ದನು.

ಎಂಬಲ್ಲಿಗೆ ರಾಮಾಯಣ ಸಂಗ್ರಹದಲ್ಲಿ ಯುದ್ಧಕಾಂಡವು.

ಟಿಪ್ಪಣಿ

ಬಾಲಕಾಂಡ

ರಾಮಾಯಣ—ರಾಮನ ಹಾದಿ, ಎಂದರೆ ರಾಮನ ನಡೆವಳಿಯನ್ನು ತಿಳಿಸುವ ಗ್ರಂಥ.

ಪುಟ ೧. ಉತ್ತರಕೋಸಲ—ಈ ರಾಜ್ಯವು ಅಯೋಧ್ಯೆಗೆ ಉತ್ತರದಲ್ಲಿ ಇದ್ದಿತು. ನಾಡು—ದೇಶ. ಅಯೋಧ್ಯೆ—ಇದು ಸರಯೂ (ಗೋಗ್ರಾ) ನದಿಯ ತೀರದಲ್ಲಿದೆ. ಇದು ೪೮ ಮೈಲಿಗಳ ಉದ್ದವೂ ೧೨ ಮೈಲಿಗಳ ಅಗಲವೂ ಇದ್ದಿತು. ಇದಕ್ಕೆ ಸಾಕೇತವೆಂದೂ ಹೆಸರು ಇದೆ. ನಂದಿಗ್ರಾಮವೆಂಬುದು ಇದರ ಮುಖ್ಯ ಶಾಖಾನಗರ. ದಶರಥ—ಹತ್ತು ದಿಕ್ಕುಗಳಲ್ಲಿಯೂ ತಡೆಯಿಲ್ಲದೆ ರಥವನ್ನು ನಡೆಸುವ ಶೂರ. ಕೌಸಲ್ಯೆ, ಕೈಕೇಯೀ, ಇವು ಕ್ರಮವಾಗಿ ಕೋಸಲರಾಜನ ಮಗಳು, ಕೇಕಯರಾಜನ ಮಗಳು ಎಂದು ಅರ್ಥವಾಗುತ್ತದೆ. ಅವರ ನಿಜವಾದ ಹೆಸರು ತಿಳಿದಿಲ್ಲ. ವಯಸ್ಸು ಕಳೆಯುತ್ತ ಬಂದಿದೆ—ಮುಪ್ಪು ತಟ್ಟುತ್ತಿದೆ. ಕುಲಪುರೋಹಿತರು—ವಂಶದಲ್ಲಿ ಹುಟ್ಟುವ ರಾಜರ ಹಿತವನ್ನು ಬಯಸಿ ಕೆಲಸಮಾಡುವವರು. ಪುತ್ರಕಾಮೇಷ್ಟಿ—ಮಕ್ಕಳಾಗಬೇಕೆಂದು ಬಯಸಿ ಮಾಡುವ ಇಷ್ಟಿ. ಇಷ್ಟಿಯಲ್ಲಿ ಚರುವನ್ನು ಹೋಮಮಾಡುತ್ತಾರೆ; ಯಜ್ಞದಲ್ಲಿ ಪಶುವನ್ನು ಹೋಮಮಾಡುತ್ತಾರೆ.

ಪುಟ ೨. ಕೊಂಡ—ಕುಂಡ. ಬಂಗಾರ—ಚಿನ್ನ. ಪಾಯಸ—ಹಾಲಿಂದ ಮಾಡಿದ ಪದಾರ್ಥ, ಪರಮಾನ್ನ. ಅಮೃತ—ಸಾಯದಿರುವುದು, ದೇವತೆಗಳ ಅನ್ನ. ಸುಮಿತ್ರೆಯು ಕ್ಷತ್ರಿಯಜಾತಿಯವಳಲ್ಲವಾದುದರಿಂದ, ದೊರೆಯು ಅವಳಿಗೆ ಪಾಯಸವನ್ನು ಹಂಚಲಿಲ್ಲವೆಂದು ಜಯಮಂಗಳಾಕಾರನು ಹೇಳಿದ್ದಾನೆ, ಎಂದು ರಘುವಂಶವ್ಯಾಖ್ಯಾನದಲ್ಲಿ ಹೇಮಾದ್ರಿಯು ಬರೆದಿದ್ದಾನೆ. ಅವರ ಹೊಟ್ಟೆಯು ಆಲದೆಲೆಯಂತೆ ಆಯಿತು—ಇದರಿಂದ ಅವರು ಗಂಡು ಮಕ್ಕಳನ್ನು ಹಡೆಯುತ್ತಾರೆ, ಎಂದು ಸಾಮುದ್ರಿಕಶಾಸ್ತ್ರದಲ್ಲಿ ಹೇಳಿದೆ.

ಪುಟ ೩. ಹಡೆ—ಹೆರು. ಅವಳಿ—ಒಂದೇಸಾರಿ ಎರಡು ಮಕ್ಕಳು ಹುಟ್ಟಿದರೆ ಅವನ್ನು ಅವಳಿಮಕ್ಕಳು ಎನ್ನುತ್ತಾರೆ. ಬಳೆ—ಇದು ಮಕ್ಕಳು ದೊಡ್ಡದಾದುವು, ಎಂಬ ಅರ್ಥದಲ್ಲಿ ಉಪಯೋಗವಾಗುತ್ತದೆ. ಸಸ್ಯವು ದೊಡ್ಡದಾಯಿತು, ಎನ್ನುವ ಅರ್ಥದಲ್ಲಿ ಬೆಳೆ ಎಂದು ಪ್ರಯೋಗವಾಗುತ್ತದೆ. ವಿಶ್ವಾಮಿತ್ರ—ಪ್ರಪಂಚಕ್ಕೆ ಮಿತ್ರ. 'ಮಿತ್ರೇಚರ್ಷೌ' ಎಂಬ ಸೂತ್ರದಿಂದ ವಿಶ್ವಶಬ್ದವು ದೀರ್ಘವಾಗಿದೆ. ಕೃತಾರ್ಥನಾಗು—ಪ್ರಯೋಜನವನ್ನು ಪಡೆ. ಹಾಲುಗಲ್ಲದ ಹಸುಳೆ—ಎಳೆಯ ಮಗು. ಮಗನಿಗೆ ಈ ವೇಳೆಗೆ ಹನ್ನೆರಡು ವಯಸ್ಸು ತುಂಬಿದ್ದರೂ ಅವನ ಮೇಲಣ ಪ್ರೀತಿಯಿಂದ ದೊರೆಯು ಹೀಗೆ ಹೇಳಿದ್ದಾನೆ.

ಪುಟ ೪. ಅಂಗಲಾಚಿಕೊಳ್ಳು—ದೈನ್ಯದಿಂದ ಬೇಡಿಕೊಳ್ಳು. ಮಹಾಭಾಗ್ಯ

ಶಾಲಿ—ಕ್ಷತ್ರಿಯನಾಗಿದ್ದರೂ ಬ್ರಹ್ಮತೇಜಸ್ಸನ್ನು ಸಂಪಾದಿಸಿದ ಸಾಹಸಿಗ. ಬಲೆ—ಉತ್ಸಾಹವೂ ಬಲವೂ ಹೆಚ್ಚುವುದು, ಹಗೆಯ ಹೊಡೆತವನ್ನು ಸಹಿಸುವುದು, ಹಸಿವೂ ಬಾಯಾರಿಕೆಯೂ ಇಲ್ಲದಿರುವುದು. ಅತಿಬಲೆ—ಇದರಿಂದ ಹಗೆಗಳ ದೃಷ್ಟಿ, ಮನಸ್ಸು, ದೇಹ, ಕೆಲಸಗಳನ್ನು ಹದಗೆಡಿಸುವುದು, ತನ್ನ ಉಪಾಯವು ಹದಗೆಡದಿರುವುದು.

ಪುಟ ೫. ಹತನಾಗು—ಕೊಲ್ಲಲ್ಪಡು. ಕಡುಮುಳಿ—ತುಂಬ ಕೋಪಗೊಳ್ಳು. ಶಪಿಸು—ಬಯ್ಯು. ಚೆಲ್ವಿಕೆ—ಸೌಂದರ್ಯ. ಶಂಕಿಸು—ಸಂದೇಹಪಡು. ಕಿರುಕುಳ—ತೊಂದರೆ. ಪೂರ್ವವೃತ್ತಾಂತ—ಹಿಂದೆ ನಡೆದ ಸುದ್ದಿ. ಕೆನ್ನೀರು—ರಕ್ತ. ಅಡ್ಡಗಿಸು—ತಡೆ. ಅಂಕುರಾರ್ಪಣ—ಮೊದಲು ಮಾಡುವ ಕಾರ್ಯ.

ಪುಟ ೬. ಅಸ್ತ್ರ—ಮಂತ್ರದಿಂದ ಪ್ರಯೋಗಿಸುವ ಬಾಣ. ತಾಪತ್ರಯಗಳು—ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕವೆಂಬ ಮೂರು ತಾಪಗಳು. ಆಶ್ರಮ—ಋಷಿಗಳು ವಾಸಮಾಡುವ ಸ್ಥಳ. ಅಂತರಿಕ್ಷ—ಆಕಾಶ. ಯಮಭಟರು—ಸಾವಿಗೆ ಒಡೆಯನಾದ ಯಮನ ಕಿಂಕರರು. ಸಮಿತ್ತು—ಬೆಂಕಿಯಲ್ಲಿ ಹೋಮಮಾಡುವುದಕ್ಕಾಗಿ ಇಟ್ಟುಕೊಂಡಿರುವ ಅರಳಿ ಮುತ್ತುಗದ ಪುಳ್ಳೆಗಳು.

ಪುಟ ೭. ತೊದಲುತ್ತ—ಅಸ್ಪಷ್ಟವಾಗಿ ಹೇಳುತ್ತ. ನಡುಗಡಲು—ಸಮುದ್ರ ಮಧ್ಯ. ಯಮಪಟ್ಟಣಕ್ಕೆ ಹೋಗು—ಸತ್ತುಹೋಗು. ಮಂಗಳಸ್ನಾನ—ಯಜ್ಞವನ್ನು ಮುಗಿಸಿದ ಮೇಲೆ ಮಾಡುವ ಸ್ನಾನ; ಇದಕ್ಕೆ ಅವಭೃತವೆಂದೂ ಹೆಸರು. ಜಯಲಕ್ಷ್ಮಿ ಒಡಗೂಡು—ಗೆಲ್ಲು. ಯೌವನವತಿಯರು—ಹರೆಯದ ಹೆಣ್ಣುಗಳು.

ಪುಟ ೮. ಉತ್ತರವಿತ್ತರು—ಬದಲನ್ನು ಹೇಳಿದರು. ನಿಮಿಷ—ರೆಪ್ಪೆಯನ್ನು ಬಡಿಯುವ ಹೊತ್ತು. ಪ್ರಾತಃಕಾಲ—ಬೆಳಿಗ್ಗೆ. ಶುದ್ಧವಾದ—ಕೊಳೆಯಿಲ್ಲದ. ವೇದಪ್ರತಿಪಾದ್ಯ—ವೇದದಲ್ಲಿ ಹೊಗಳಲ್ಪಟ್ಟ. ಕೌಶಿಕಮುನಿ—ವಿಶ್ವಾಮಿತ್ರ. ಉಪಕ್ರಮವಾಡು—ತೊಡಗು.

ಪುಟ ೯. ಮೇರು—ಇದು ಚಿನ್ನದ ಬೆಟ್ಟ. ಇದರಲ್ಲಿ ದೇವತೆಗಳು ವಾಸಮಾಡುತ್ತಾರೆ. ಇದು ಭೂಮಧ್ಯದಲ್ಲಿ ಇದೆ ಎಂದು ಹೇಳುತ್ತಾರೆ. ಹಿಮವಂತ—ಹಿಮಾಲಯಪರ್ವತ. ತೇಜಸ್ಸು—ವೀರ್ಯ. ಸೇನಾನಿ—ಷಣ್ಮುಖ, ದೇವತೆಗಳ ಸೇನಾನಾಯಕ. ಮಂದಾಕಿನೀ—ಆಕಾಶಗಂಗೆ. ಕುಮಾರ—ಮಗ, ಷಣ್ಮುಖ. ಸಗರ—ವಿಷದೊಡಗೂಡಿದವನು.

ಪುಟ ೧೦. ಕಂಟಕ—ಮುಳ್ಳು, ಶತ್ರು. ಪದವಿ—ಅಧಿಕಾರ. ತಮ—ತಮೋಗುಣ, ಕತ್ತಲು. ಕಂಬನಿಗರೆ—ಅಳು. ಜಲತರ್ಪಣಮಾಡು—ಸತ್ತವರ ಹೆಸರನ್ನು ಹೇಳಿ ಎಳ್ಳನ್ನೂ ನೀರನ್ನೂ ಬಿಡು.

ಪುಟ ೧೧. ರಾಶಿ—ಒಟ್ಟಿಲು, ಮೇಷಾದಿ ರಾಶಿಗಳು. ಮೃತ್ಯುವಶನಾಗು—ಸತ್ತುಹೋಗು. ಪೂರ್ವಜರು—ಹಿಂದೆ ಇದ್ದವರು. ಮಹಾದೇವ—ಈಶ್ವರ. ಜಡೆ

ಗಾಡು—ಕಾಡಿನಂತೆ ಪೊದೆಯಾಗಿ ಬೆಳೆದಿರುವ ಜಡೆ. ಇದಕ್ಕೆ ಕಪರ್ದವೆಂದು ಹೆಸರು. ದುಮ್ಮಿಕ್ಕು—ಹಾರಿಬೀಳು. ಆರ್ಭಟ—ಸದ್ದು, ವೇಗ. ಸೊಕ್ಕು—ಹೆಮ್ಮೆ, ಅಹಂಕಾರ.

ಪುಟ ೧೨. ಕವಲು—ಭಾಗ. ಪಾತಾಳ—ಭೂಮಿಯ ಕೆಳಗಿರುವ ಏಳನೆಯ ಲೋಕ. ಸಂಕಲ್ಪ—ಮನಸ್ಸಿನಲ್ಲಿ ಮಾಡಬೇಕೆಂದು ಉದ್ದೇಶಿಸಿದ ಕೆಲಸ. ಉತ್ಪತ್ತಿ—ಹುಟ್ಟುವಿಕೆ. ಮರುಳುಮಾಡಿ—ಬುದ್ಧಿಯನ್ನು ಕೆಡಿಸಿ.

ಪುಟ ೧೩. ಶುಶ್ರೂಷೆ—ಉಪಚಾರ. ಏಳು ಮರುತ್ತುಗಳು—ಆವಹ, ಪ್ರವಹ ಸಂವಹ, ಉದ್ವಹ, ವಿವಹ, ಪರೀವಾಹ, ಪರಾವಹ ಎಂಬವುಗಳು. ಇರುಳು—ರಾತ್ರಿ.

ಪುಟ ೧೪. ಸ್ವೀಕರಿಸು—ತನ್ನದೆಂದು ತೆಗೆದುಕೊಳ್ಳು. ವಿದೇಹರಾಜ—ಮಿಥಿಲಾಪುರದ ಅರಸು. ಮಿಥಿಲೆಗೆ ವಿದೇಹವೆಂಬ ಹೆಸರೂ ಉಂಟು. ಕಾಮಧೇನು—ಕೇಳಿದುದನ್ನು ಕೊಡುವ ಶಕ್ತಿಯುಳ್ಳ ಹಸು, ದೇವತೆಗಳ ಹಸು.

ಪುಟ ೧೫. ನಿರ್ಬಂಧಪಡಿಸು—ತೊಂದರೆಮಾಡು. ಕಾಡು—ತೊಂದರೆಪಡಿಸು. ಕೋರಿಕೆ—ಆಸೆ.

ಪುಟ ೧೬. ನೀಲವಸ್ತ್ರವುಟ್ಟದ್ದ—ಚಂಡಾಲರು ಪೂರ್ವಕಾಲದಲ್ಲಿ ನೀಲವಸ್ತ್ರವನ್ನು ಉಡುತ್ತಿದ್ದರು. ಶ್ವಾನಭಕ್ಷಕರಾಗಿರಿ—ನಾಯನ್ನು ತಿನ್ನಿರಿ. ಮೇನಕೆ—ಇವಳು ದೇವತೆಗಳ ಸೂಳೆ. ಇವಳ ಗರ್ಭದಲ್ಲಿ ವಿಶ್ವಾಮಿತ್ರರಿಂದ ಶಕುಂತಲೆಯು ಹುಟ್ಟಿದಳು. ಹಿಮವಂತನ ಹೆಂಡತಿಗೂ ಮೇನಕೆಯೆಂದು ಹೆಸರು. ಅವಳ ಗಂಡುಮಗನು ಮೈನಾಕನು. ಹೆಣ್ಣುಮಗಳು ಪಾರ್ವತಿ.

ಪುಟ ೧೭. ಅಪ್ಸರಸ್ಸು—ದೇವತೆಗಳ ಸೂಳೆಯರು. ಊರ್ವಶಿ, ಮೇನಕೆ, ರಂಭೆ, ಘೃತಾಚೀ, ತಿಲೋತ್ತಮೆ, ಸುಕೇಶೀ, ಮಂಜುಘೋಷೆ, ಎಂಬುದು ಅವರ ಹೆಸರು. ಕಮಲಾಸನ—ಬ್ರಹ್ಮ. ಜಿತೇಂದ್ರಿಯ—ಮನಸ್ಸನ್ನೂ, ಕೈಕಾಲು ಕಣ್ಣು ಮೂಗುಗಳೆಂಬ ಬಾಹ್ಯೇಂದ್ರಿಯಗಳನ್ನೂ ವಶಮಾಡಿಕೊಂಡಿರುವವನು. ಪ್ರತಿಕಕ್ಷಿ—ಹಗೆ. ಉಪನಯನ—ಗುರುವಿನಿಂದ ಬ್ರಹ್ಮೋಪದೇಶವನ್ನು ಪಡೆಯುವಿಕೆ. ಇಕ್ಕೆಲ—ಎರಡು ಕಡೆಗಳು. ಗವಾಕ್ಷ—ಕಿಟಕಿ. ರತ್ನಗರ್ಭೆ—ಹೊಟ್ಟೆಯಲ್ಲಿ ರತ್ನಗಳನ್ನು ಇರಿಸಿಕೊಂಡಿರುವವಳು, ಭೂಮಿ. ಗರ್ಭದಲ್ಲಿ ರತ್ನವನ್ನು ಇರಿಸಿಕೊಂಡಿರುವವಳು ರತ್ನವನ್ನು ಹೆರುವುದು ಏನು ಆಶ್ಚರ್ಯ? ಹುಟ್ಟಿದುದರಲ್ಲಿ ಅತ್ಯಂತಶ್ರೇಷ್ಠವಾದುದನ್ನು ರತ್ನವೆಂದು ಕರೆಯುತ್ತಾರೆ. ಕನ್ಯಾರತ್ನ—ಶ್ರೇಷ್ಠಳಾದ ಹೆಣ್ಣು.

ಪುಟ ೧೮. ಈ ಪುರವು ಭೂಮಿದೇವಿಗೆ ಹೆರಿಗೆಯ ಮನೆಯಾಯಿತು—ಈ ಊರ ನೆಲದಲ್ಲಿ ಹೆಣ್ಣು ಮಗುವು ಸಿಕ್ಕಿತು. ವರಪರೀಕ್ಷೆ—ಮದುವೆಗೆ ಬಂದ ಹುಡುಗರ ವಿದ್ಯಾಬುದ್ಧಿಗಳನ್ನು ಪರೀಕ್ಷಿಸುವುದು. ಪರಾಂಬರಿಸು—ನೋಡು. ಸ್ವಯಂವರ—ಹೆಣ್ಣುಮಕ್ಕಳು, ನೆರೆದ ರಾಜಸಭೆಯಲ್ಲಿ ತಮಗೆ ಇಷ್ಟಬಂದವರನ್ನು ವರಿಸಿ ಮದುವೆಯಾಗುವ ಸಂಪ್ರದಾಯಕ್ಕೆ ಸ್ವಯಂವರವೆಂದು ಹೆಸರು.

ಪುಟ ೧೯. ಕುಶಧ್ವಜನ ಹುಡುಗಿಯರು—ಮಾಂಡವೀ ಶ್ರುತಕೀರ್ತಿಯರು. ವಿವಾಹದೀಕ್ಷಾಂಗ—ಮದುವೆಯ ಕಂಕಣವನ್ನು ಕಟ್ಟಿಕೊಳ್ಳುವುದಕ್ಕೆ ಮೊದಲು ಮಾಡುವ ಕಾರ್ಯ. ನಿರ್ವಿಘ್ನ—ತಡೆಯಾಗದೆ ಇರುವುದು. ಕೋಪಶೀಲ—ಕೋಪವೇ ಹುಟ್ಟುಗುಣವಾದವನು.

ಪುಟ ೨೧. ಕಿವಿಗೊಡು—ಕೇಳು. ಕೊಡಲಿಗಡಿತ—ಕೊಡಲಿಯಿಂದ ಕಡಿಯುವ ಕೆಲಸ. ಸವಿ—ರುಚಿ. ಮರುಕ—ದಯೆ. ಪರಗತಿ—ಉತ್ತಮವಾದ ಮಾರ್ಗ. ಆಮುಷ್ಮಿಕಮಾರ್ಗ—ದೇಹಾಂತದಲ್ಲಿ ಜೀವರು ಪಡೆಯುವ ಪುಣ್ಯಮಾರ್ಗ. ವಾಸನಿಸು—ಮೂಸು. ಮಡದಿಯರು—ಹೆಂಡಿರು.

ಅಯೋಧ್ಯಾಕಾಂಡ

ಪುಟ ೨೨. ಪುತ್ರ—ಪುತ್ ಎಂಬ ನರಕದಿಂದ ತಂದೆತಾಯಿಗಳನ್ನು ರಕ್ಷಿಸುವವನು, ಮಗ. ವೃದ್ಧನಾದ—ಮುದುಕನಾದ. ಕೇಕಯರಾಜ—ಅಶ್ವಪತಿರಾಜ. ಮಗಳ ಮಗ—ದೌಹಿತ್ರ, ಇಲ್ಲಿ ಭರತ. ಕೇಕಯಪುರ—ಇದು ಸಿಂಧುದೇಶಕ್ಕೆ ಉತ್ತರದಲ್ಲಿ ಇದ್ದಿತು. ಸೋದರಮಾವ—ತಾಯಿಯ ಕೂಡ ಹುಟ್ಟಿದ ಅಣ್ಣತಮ್ಮಂದಿರು. ಹಳಬರು—ಮುದುಕರು. ಪ್ರಜಾಮುಖಂಡರು—ಪ್ರಜೆಗಳಿಗೆ ಮುಂದಾಳಾದವರು. ದೇವಲೋಕಕ್ಕೆ ಹೋಗು—ಸಾಯುವುದು ಎಂದರೆ, ಸ್ವರ್ಗಸ್ಥರಾಗುವುದು. ಶಾಸ್ತ್ರಮರ್ಯಾದೆ—ಶಾಸ್ತ್ರದಲ್ಲಿ ಹೇಳಿರುವ ಕ್ರಮ.

ಪುಟ ೨೩. ಸಾವಧಾನ—ಎಚ್ಚರಿಕೆ. ಕೀರ್ತಿ—ಒಳ್ಳೆಯ ಹೆಸರು. ದೊರೆಯು ಹೇಳುವ ಮಾತಾದುದರಿಂದ ಬಹುವಚನದಲ್ಲಿ ಹೇಳಿರುತ್ತದೆ. ಮಟ್ಟುಗೊಳಿಸು—ಅಹಂಕಾರವನ್ನು ತಗ್ಗಿಸು. ಮಾತ್ಸರ್ಯ—ಹೊಟ್ಟೆಯ ಕಿಚ್ಚು; ಇತರರ ಏಳಿಗೆಯನ್ನು ನೋಡಿ ಸಹಿಸದೆ ಇರುವುದು. ಕೋಲಾಹಲ—ಗದ್ದಲ. ಅಭಿಪ್ರಾಯ—ಆಸೆ. ಆನಂದಪರವಶನಾಗು—ಸಂತೋಷದಿಂದ ಮೆಯ್ ಮರೆಯು.

ಪುಟ ೨೪. ಪ್ರಶ್ನೆಮಾಡು—ಕೇಳು. ಚಕೋರ—ಇದು ಬೆಳುದಿಂಗಳನ್ನು ಕುಡಿದು ಬದುಕುವ ಹಕ್ಕಿ. ಸಡಗರ—ಸಂಭ್ರಮ. ಕಂಕಣ—ಮಂಗಳಕಾರ್ಯವನ್ನು ತೊಡಗುವುದಕ್ಕೆ ಮೊದಲು ಯಜಮಾನನು ಕಯ್ಗೆ ಕಟ್ಟಿಕೊಳ್ಳುವ ನೂಲು. ಮೊಳಗು—ಸದ್ದಾಗು, ಗುಡುಗು.

ಪುಟ ೨೫. ಕಠಿಣ—ಗಟ್ಟಿ. ವರ—ಅಳಿಯ, ನಿಜ, ಆಸೆಯನ್ನು ಕೇಳಿಕೊಳ್ಳುವುದು. ತಲೆಯ ಮೇಲೆ ಕಲ್ಲನ್ನು ಎಳೆ—ಅಭಿವೃದ್ಧಿಗೆ ಬಾರದಂತೆ ಅಡ್ಡಿಮಾಡು. ಒಡತಿ—ಸ್ವಾಮಿನಿ, ಯಜಮಾನಿ. ಕಿವಿಯಲ್ಲಿ ಮಾತನ್ನು ಹಿಂಡು—ಒತ್ತಿಹೇಳು.

ಪುಟ ೨೬. ಮಟ್ಟು—ಕಮ್ಮಿ. ಕೋಪದ ಕೋಣೆ—ಅರಮನೆಯಲ್ಲಿ ಅರಸಿತಿ

ಯರು ಕೋಪಬಂದಾಗ ಮಲಗಿರುವ ಕೊಟ್ಟಡಿ. ಮೊಗವಡಿಯಾಗು—ನೆಲಕ್ಕೆ ಮುಖವನ್ನು ಮಾಡಿಕೊಳ್ಳು. ರೊಟ್ಟಿಯು ಜಾರಿ ತುಪ್ಪದಲ್ಲಿ ಬೀಳು—ಬಯಸಿದ ಕೆಲಸ ಅನುಕೂಲ ವಾಗು. ವೇಷದ ಮುನಿಸು—ಹುಸಿಮುನಿಸು. ಮಂದಹಾಸ—ಸದ್ದಾಗದಂತೆ ನಗುವಿಕೆ. ಕಾದ ಸೀಸವನ್ನು ಸುರಿದಂತೆ ಆಯಿತು—ಬಹು ಸಂಕಟವಾಯಿತು. ಮೂರ್ಛಿತ ನಾಗು—ಮೆಯ್ಯ ಮೇಲೆ ಎಚ್ಚರಿಕೆಯಿಲ್ಲದೆ ಬೀಳು.

ಪುಟ ೨೭. ಒಳ್ಳೆಯ ಕೆಲಸಕ್ಕೆ ಕಲ್ಲ ಹಾಕು—ಒಳ್ಳೆಯ ಕೆಲಸವು ಆಗದ ಹಾಗೆ ಮಾಡು. ದೂರು—ಅಪವಾದ. ಪಲತೆರ—ನಾನಾವಿಧ. ಹಂಬಲಿಸು—ದುಃಖಪಡು. ಮರುಗು—ದಯೆದೋರು. ಕಂಡ—ಮಾಂಸ. ಕಲ್ಲಿನಲ್ಲಿ ಕೆತ್ತಿದ ಅಕ್ಷರ—ಯಾವಾಗಲೂ ಅಳಿಯದ ಅಕ್ಷರ. ಲಿಪಿ—ಅಕ್ಷರ.

ಪುಟ ೨೮. ಗೌರವ—ದೊಡ್ಡಸ್ತಿಕೆ. ಅಪರಕರ್ಮ—ಸತ್ತವರಿಗೆ ಮಾಡುವ ಶ್ರಾದ್ಧಾದಿ ಕಾರ್ಯ. ತೊಗಟೆ—ಮರದ ಮೇಲಣ ಸಿಪ್ಪೆ.

ಪುಟ ೨೯. ಕಳೆಗೆಡು—ಬಣ್ಣವಿಳಿದು ಹೋಗು. ಮಮತೆ—ನನ್ನದು, ನನ್ನದು, ಎಂಬ ತಿಳುವಳಿಕೆ. ಸ್ವಾರ್ಥಪರರು—ತಮ್ಮ ನಲ್ಮೆಯನ್ನೇ ಬಯಸುವವರು. ಪ್ರತಿಜ್ಞಾ ಕಾರ್ಯ—ಮಾಡುತ್ತೇನೆಂದು ಮನಸ್ಸಿನಲ್ಲಿ ನಿಶ್ಚಯಿಸಿ ಅದರಂತೆ ನಡೆಸುವ ಕಾರ್ಯ.

ಪುಟ ೩೦. ಹೇರಳವು—ಹೆಚ್ಚಾದ ಪ್ರಮಾಣ. ಪಕ್ಷಪಾತ—ಒಂದು ಕಡೆಗೆ ಓಲುವುದು. ನಂಜೂಡಿದ—ವಿಷವನ್ನು ಬಳಿದ. ಪ್ರಲಾಪಿಸು—ಅಳು.

ಪುಟ ೩೧. ವರ್ಣಾಶ್ರಮ—ಬ್ರಹ್ಮ, ಕ್ಷತ್ರಿಯ, ವೈಶ್ಯ, ಶೂದ್ರರೆಂದು ನಾಲ್ಕು ವರ್ಣಗಳು, ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ, ಸನ್ಯಾಸೀ ಎಂಬಿವು ಆಶ್ರಮಗಳು. ಸ್ವಪೌರುಷ—ತನ್ನ ಪ್ರಯತ್ನ. ಪುರುಷಾರ್ಥ—ಧರ್ಮ, ಅರ್ಥ, ಕಾಮ, ಮೋಕ್ಷವೆಂಬ ನಾಲ್ಕು ಪುರುಷಾರ್ಥಗಳು. ತೊಳಲು—ತಿರುಗು. ಪಾದಾರವಿಂದ—ತಾವರೆಯ ಹೂವಂತೆ ಮೆತ್ತಗಿರುವ ಕಾಲು. ತಿಳಿಗೇಡಿ—ವಿವೇಕವಿಲ್ಲದವನು. ಪೂರು—ಹಿಂದೆ, ಶುಕ್ರಾಚಾರ್ಯರ ಶಾಪದಿಂದ ಅಕಾಲದಲ್ಲಿ ಪ್ರಾಪ್ತವಾದ ಮುದುಕತನದಿಂದ ಬಳಲುತ್ತಿದ್ದ ಯಯಾತಿರಾಜನ ಅಪ್ಪಣೆಯಂತೆ, ಅವನ ಮಗನಾದ ಪೂರುವು ತನ್ನ ಪ್ರಾಯವನ್ನು ತಂದೆಗೆ ಕೊಟ್ಟು, ಅವನ ಮುಪ್ಪನ್ನು ತಾನು ವಹಿಸಿಕೊಂಡನೆಂದು ಮಹಾಭಾರತದ ಕಥೆ. ಯೌವನವಿನಿಮಯ—ಹರೆಯತನವನ್ನು ಬದಲಾವಣೆ ಮಾಡುವುದು.

ಪುಟ ೩೨. ಪುತ್ರವತ್ಸಲೆ—ಮಗನಲ್ಲಿ ಪ್ರೀತಿಯುಳ್ಳವಳು. ತಾರಿಹೋದ—ಬಡವಾದ. ಅಂತಃಪುರ—ಅರಮನೆಯಲ್ಲಿ ರಾಣಿವಾಸದವರಿರುವ ಭಾಗ. ಅಣಿಯಾಗು—ಸಿದ್ಧವಾಗು. ಕೋಮಲವಾದ—ತುಂಬ ಮೆತ್ತಗಿರುವ, ಎಂದರೆ ಕಷ್ಟವನ್ನು ಸಹಿಸಲಾರದ.

ಪುಟ ೩೩. ಬತ್ತಳಿಕೆ—ಬಾಣವನ್ನು ಇರಿಸುವ ಚರ್ಮದ ಚೀಲ. ಗೋವ್ರಜ—ಆಕಳ ಹಿಂಡು. ಪೂರ್ವಕಾಲದಲ್ಲಿ ಈಗಣ ಕಾಲದಂತೆ ಹಣವಾಗಲಿ, ಅವನ್ನು ಇರಿಸುವ

ಬ್ಯಾಂಕುಗಳಾಗಲಿ ಇರಲಿಲ್ಲ. ಯಾರು ಹೆಚ್ಚಾಗಿ ಗೋಗಳನ್ನು ಇರಿಸಿಕೊಂಡಿದ್ದರೋ ಅವರೀಗ ಸಂಪತ್ತುಳ್ಳವರೆಂದು ಭಾವಿಸಲ್ಪಡುತ್ತಿದ್ದರು. ಸೀತೆಯನ್ನು....ಮುಚ್ಚಿಬಿಟ್ಟನು—ಸೀತೆಯು ಕಾಡಿಗೆ ಹೋಗುವುದನ್ನು ಕಂಡು ಊರವರೆಲ್ಲರೂ ಅತ್ತರು.

ಪುಟ ೩೪. ಮರುಳು ಹಿಡಿದವನಂತೆ—ಪಿಶಾಚವು ಮೆಟ್ಟಿಕೊಂಡಿರುವನ ಹಾಗೆ.

ಪುಟ ೩೫. ವಲ್ಕಲ—ಮರದ ತೊಗಟೆ. ಇದರಿಂದ ಬಟ್ಟೆಮಾಡಿ ಕಾಡಿನಲ್ಲಿ ವಾಸಮಾಡುವ ಮುನಿಗಳು ಉಡುತ್ತಾರೆ. ಅಡಿಯಿಡು—ಹಜ್ಜೆಯನ್ನು ಇರಿಸು. ಬಸವಳಿ—ಮೂರ್ಛೆಹೋಗು.

ಪುಟ ೩೬. ಹೊತ್ತು—ಸೂರ್ಯ. ಸೂರ್ಯನ ಗತಿಯಿಂದ ಕಾಲವನ್ನು ಹಿಂದಣವರು ಕಂಡುಹಿಡಿಯುತ್ತಿದ್ದರು. ಆದರಿಂದ ಸೂರ್ಯನಿಗೂ ಹೊತ್ತು ಎಂದು ಹೇಳುತ್ತಾರೆ. ಈಗಣ ಹಾಗೆ ಪೂರ್ವದಲ್ಲಿ ಗಡಿಯಾರಗಳು ಇರಲಿಲ್ಲ. ತಮಸಾನದಿ—ಇದು ಸರಯೂ (ಗೋಗ್ರಾ) ನದಿಯ ಉಪನದಿ. ಇದನ್ನು ಈಗ ಟಾನ್ಸ್ ಎಂದು ಕರೆಯುತ್ತಾರೆ. ವೇದಶ್ರುತಿ—ಇದಕ್ಕೆ ಸಾಟ್ ಅಥವಾ ಸತಿ ಎಂದು ಹೆಸರು. ಇದು ತಮಸಾನದಿಯ ಉಪನದಿ. ಸ್ಯಂದಿಕಾ—ಇದಕ್ಕೆ ಸರ್ಪಿಕಾ ಎಂದೂ ಹೆಸರು. ಈಗ ಇದನ್ನು ಸೆಯ್ ಎಂದು ಕರೆಯುತ್ತಾರೆ.

ಪುಟ ೩೭. ಬೀಡುಬಿಡು—ತಂಗು. ಸೊಗಸುಗಂಪು—ಸುವಾಸನೆ. ಅರಣ್ಯವಾಸಕ್ಕಾಗಿ.... ಮರೆಯಾದನು—ಹೊತ್ತು ಮುಳುಗಿತು. ಪವಡಿಸು—ಮಲಗು. ಸಗರನ ಮಕ್ಕಳಿಗೆ ಇತ್ಯಾದಿ—ಬಾಲಕಾಂಡದಲ್ಲಿರುವ ಗಂಗಾವತರಣದ ಕಥೆಯನ್ನು ನೋಡಿರಿ. ಗುಹ—ಷಣ್ಮುಖ, ನಿಷಾದರಾಜ. ನಾವೆ—ತೆಪ್ಪ, ದೋಣಿ. ಭರದ್ವಾಜಾಶ್ರಮ—ಇದು ಗಂಗಾ ಯಮುನಾ ನದಿಗಳ ಮಧ್ಯದ ಕಾಡಿನಲ್ಲಿ ಇದ್ದಿತು. ಚಿತ್ರಕೂಟ—ಇದು ಮಂದಾಕಿನೀ ಅಥವಾ ಮಾಲಿನೀ ನದಿಯ ತೀರದಲ್ಲಿ ಇದ್ದಿತು. ಈ ಮಾಲಿನಿಯು ಗಂಗಾ ಯಮುನಾ ಸಂಗಮಸ್ಥಳಕ್ಕೆ ೨೪ ಮೈಲಿಗಳ ದೂರದಲ್ಲಿ ಇದೆ. ಈ ನದಿಯನ್ನು ಈಗ ಪೈಷುನೀ ಎಂದು ಕರೆಯುತ್ತಾರೆ.

ಪುಟ ೩೯. ನಿರ್ವೈರ—ಹಗೆತನವಿಲ್ಲದ. ತಾವು—ಸ್ಥಳ. ಕೋಗಿಲೆಗಳು.. ಕೂಗುತ್ತಿರಲು—ಚೈತ್ರಮಾಸವು ಬರಲು. ರಾಜಭೋಗ—ಅರಸರು ಅನುಭವಿಸುವ ಸುಖ. ರಾಮವಿರಹ—ರಾಮನ ಅಗಲಿಕೆ.

ಪುಟ ೪೦. ಚಾಪಪಾಣಿ—ಬಿಲ್ಲನ್ನು ಹಿಡಿದ ಕಯ್. ಅಂಬು—ಬಾಣ. ನಾಟು—ಚುಚ್ಚು. ಶಬ್ದಭೇದಿ—ಸದ್ದು ಕೇಳಿದ ಕಡೆಗೆ ಬಿಟ್ಟರೆ ಸದ್ದನ್ನು ಮಾಡಿದ ಪ್ರಾಣಿಯನ್ನು ಕೊಲ್ಲುವ ಬಾಣ. ಬ್ರಹ್ಮಹತ್ಯೆ—ಬ್ರಾಹ್ಮಣನನ್ನು ಕೊಂದ ಪಾಪ.

ಪುಟ ೪೧. ದುಸ್ಸ್ವಪ್ನ—ಕೆಟ್ಟ ಕನಸು. ಸಂಭ್ರಮ - ಸಡಗರ. ಕಳಂಕ—ಕಜ್ಜಿ. ವಂಶ—ಬಿದಿರು, ಕುಲ. ನಾಗಿಣಿ—ಹೆಣ್ಣು ನಾಗ ಹಾವು. ಅಪರಕಾರ್ಯ—ಸತ್ತವರಿಗಾಗಿ ಮಾಡುವ ಶ್ರಾದ್ಧಾದಿಗಳು.

ಪುಟ ೪೨. ಇಂಬು—ಸ್ಥಲ. ಅಬ್ಬರಿಸು—ಗಟ್ಟಿಯಾಗಿ ಹೇಳು. ತೊತ್ತು—ದಾಸಿ, ಗೌಡಿ. ಸದೆಬಡಿ—ಸಾಯುವಂತೆ ಹೊಡೆ. ಮಾತೃವರ್ಗ—ತಾಯಿಯರ ಗುಂಪು. ದಶರಥರಾಯನಿಗೆ ಆರು ನೂರು ಮಂದಿ ಹೆಂಡತಿಯರು ಇದ್ದರು. ಆದುದರಿಂದ ಅವರೆಲ್ಲರನ್ನೂ ಮಾತೃವರ್ಗವೆಂದು ಹೇಳಿರುತ್ತದೆ. ಆತಿಥ್ಯ—ಮನೆಗೆ ಬಂದು ಇಳಿಯುವ ಜನರಿಗೆ ಮಾಡುವ ಆಹಾರದಾನ ಮುಂತಾದ ಉಪಚಾರ. ಪರ್ಣಶಾಲೆ—ಎಲೆಮನೆ. ಕಂದಮೂಲ—ಗೆಡ್ಡೆ ಬೇರು.

ಪುಟ ೪೩. ನೀರುಂಡ ಮೇಘ—ನೀರಿನಿಂದ ತುಂಬಿರುವ ಮೋಡ. ಬೇಗೆ—ತಾಪ. ಬಾಯಾರಿದ—ಬಾಯಿಯು ಒಣಗಿದ. ಪ್ರಾರ್ಥಿಸು—ಬೇಡು. ವತ್ಸ—ಮಗು, ಎದೆ, ಕರು. ಪಾದುಕೆ—ಕಾಲಿಗೆ ಹಾಕಿಕೊಳ್ಳುವ ಮೆಟ್ಟು. ರಾಜಭೋಗ—ಅರಸರ ಸುಖ. ನಂದಿಗ್ರಾಮ—ಇದು ಅಯೋಧ್ಯೆಯ ಶಾಖಾನಗರ (Extension). ಸುಜನ ಬಾಧಾಕರ—ಒಳ್ಳೆಯವರಿಗೆ ಕೇಡನ್ನು ಮಾಡುವವ. ದಂಡಕಾರಣ್ಯ—ಇದು ವಿಂಧ್ಯ ಪರ್ವತದ ಪ್ರಾಂತ್ಯದಿಂದ ಕೃಷ್ಣಾನದಿಯ ದಕ್ಷಿಣತೀರದ ವರೆಗೂ ಹಬ್ಬಿದ್ದ ದೊಡ್ಡ ಕಾಡಿನ ಸೀಮೆ.

ಅರಣ್ಯಕಾಂಡ

ಪುಟ ೪೫. ಪೀಡೆ—ಕಾಟ. ಹೋಮಧೂಮ—ಬೆಂಕಿಯ ಕೊಂಡದಲ್ಲಿ ಸುರಿಯುವ ತುಪ್ಪ ಅನ್ನ ಮುಂತಾದುವುಗಳಿಂದ ಹೊರಡುವ ಹೊಗೆ. ದಣಿವು—ಬಳಲಿಕೆ. ಜಲಾಶಯ—ಕೆರೆ, ಕೊಳ, ಬಾವಿ ಮುಂತಾದ ನೀರು ನಿಲ್ಲುವ ಸ್ಥಳ. ವಿಚಿತ್ರ—ಆಶ್ಚರ್ಯ. ಆಚಾರ—ನಡತೆ. ಸುಂದರಿ—ಹೆಂಗುಸು. ಮೊಂಡಾಗು—ಮೊನೆಯು ಮುರಿದುಹೋಗು.

ಪುಟ ೪೬. ಅನುವಾಗು —ಅಣಿಯಾಗು. ಜಾಲಂದರ—ಒಂದರಿ.

ಪುಟ ೪೭. ಮೆಯ್ದೋರು—ಕಾಣಿಸಿಕೊಳ್ಳು. ಹೋಮಾಗ್ನಿ . . . . ಮಾಡಿದರು —ಬೆಂಕಿಯ ಕೊಂಡದಲ್ಲಿ ಬಿದ್ದು ಉರಿದುಹೋದರು. ಕಡಲು—ಸಮುದ್ರ. ಕಟಾಕ್ಷ—ಕಡೆಗಣ್ಣ ನೋಟ. ನಿಡುನಾಲಗೆ—ಉದ್ದವಾದ ನಾಲಗೆ. ಇಲ್ಲಿ ಮರ, ಹೆಬ್ಬಾವು ಮುಂತಾದುವುಗಳನ್ನು ವರ್ಣಿಸುವ ನೆಪದಿಂದ, ಅಗಸ್ತ್ಯರು ಕಡಲನ್ನು ಕುಡಿದು, ವಿಂಧ್ಯಪರ್ವತವನ್ನು ಮೆಟ್ಟಿ, ಇಲ್ವಲವಾತಾಪಿಗಳೆಂಬ ರಾಕ್ಷಸರನ್ನು ಸಂಹರಿಸಿದ ಕಾರ್ಯಗಳು ವರ್ಣಿತವಾಗಿವೆ. ಇವುಗಳನ್ನು ಸವಿಸ್ತಾರವಾಗಿ ಮೂಲರಾಮಾಯಣದಲ್ಲಿ ತಿಳಿಯಬಹುದು.

ಪುಟ ೪೮. ಪಂಚವಟೀ—ಇದು ಗೋದಾವರಿಯ ತೀರದಲ್ಲಿರುವ ಪ್ರದೇಶ. ಇಲ್ಲಿ ವಿಶಾಲವಾದ ಐದು ಆಲದ ಮರಗಳಿವೆ. ಆದುದರಿಂದ ಈ ಸ್ಥಲಕ್ಕೆ ಈ ಹೆಸರು

ಬಂದಿದೆ. ಪರ್ವತಾಕಾರ—ಬೆಟ್ಟದಂತೆ ಎತ್ತರವಾಗಿರುವ ಮೊರ್ಸ್. ವಿಸ್ಮಿತನಾಗಿ—ಆಶ್ಚರ್ಯಪಟ್ಟು.

ಪುಟ ೪೯. ಪಿತೃಭಾವ—ತಂದೆಯೆಂಬ ಅಭಿಪ್ರಾಯ. ೬ನೆಯ ಪಙ್ಕ್ತಿಯಿಂದ ೧೩ನೆಯದರ ವರೆಗೆ ಮಾಗಿಯ ಕಾಲದ ವರ್ಣನೆ. ಶೂರ್ಪಣಖಿ—ಶೂರ್ಪವೆಂದರೆ ರಕ್ತವನ್ನು ತುಂಬಿದ ಗಡಿಗೆ, ಅದರಿಂದ ಯಜ್ಞಶಾಲೆಯನ್ನು ಹೊಲಸುಮಾಡುವವಳು, ಎಂದು ಅರ್ಥ. ಅಥವಾ, ಶೂರ್ಪವೆಂದರೆ ಮೊರದ ಹಾಗಿರುವ ನಖ—ಉಗುರುಗಳಿರುವವಳು, ಎಂದೂ ಹೇಳುವರು. ಹರೆಯ—ಪ್ರಾಯ. ರಸಿಕ—ಸುಖವನುಭವಿಸುವುದನ್ನು ತಿಳಿದವನು. ಶೂರ್ಪಣಖಿಯು ಪುರುಷರ ಬಯಕೆಯಲ್ಲಿ ಇದ್ದಳೆಂಬುದು ಇದರಿಂದ ತಿಳಿಯುತ್ತದೆ.

ಪುಟ ೫೦. ವೈರಾಗ್ಯಶಿಖಾಮಣಿ—ಹೆಂಗುಸರ ಬಯಕೆಯಿಲ್ಲದವರಲ್ಲಿ ಶ್ರೇಷ್ಠ. ಪಿತಾಮಹ—ಬ್ರಹ್ಮ, ತಂದೆಯ ತಂದೆ. ಇಂಗಿತ—ಮನಸ್ಸಿನ ಅಭಿಪ್ರಾಯ. ಮುಂದುವರಿ—ಮುಂದಕ್ಕೆ ನುಗ್ಗು. ಜನಸ್ಥಾನ—ಇದು ಈಗಣ ಪಲ್ನಾವಂ ಪ್ರಾಂತ್ಯದ ಹತ್ತಿರವಿದ್ದಿರಬೇಕು. ಮಾನಭಂಗಮಾಡು—ಅವಮಾನಪಡಿಸು. ಖರ—ಇವನು ಜನಸ್ಥಾನದಲ್ಲಿ ರಾವಣನ ಪ್ರತಿನಿಧಿಯಾಗಿದ್ದನು.

ಪುಟ ೫೧. ದಳವಾಯಿ—ದಳಪತಿ. ಅಂಗವಿಕಾರಮಾಡು—(ಇಲ್ಲಿ) ಕಿವಿ ಮೂಗುಗಳನ್ನು ಕತ್ತರಿಸು. ಕಟ್ಟುಮಾಡು—ಅಪ್ಪಣೆ ಮಾಡು. ಯಮನ ಊರು—ಸತ್ತವರು ಹೋಗುವ ಊರು, ಸಂಯಮಿನೀಪುರ. ಬಿಡಾರಬಿಡಿಸು—ಮನೆಮಾಡಿ ಕೊಡು. ಪಡೆ—ದಂಡು. ಅಷ್ಟು ಮಂದಿ ರಾಕ್ಷಸರನ್ನೂ ಯುದ್ಧದಲ್ಲಿ ಕತ್ತರಿಸಿ ಕೆಡಹಿ ಹದ್ದು ಕಾಗೆಗಳು ತಿನ್ನುವಂತೆ ಮಾಡಿದನು, ಎಂದು ಅಭಿಪ್ರಾಯ. ಬಣಬೆ, ಒಟ್ಟಿಲು, ಮೆದೆ, ಈ ಮೂರು ಮಾತುಗಳೂ ದೊಡ್ಡದಾಗಿ ಹಾಕಿರುವ ರಾಶಿ, ಎಂದು ಅರ್ಥವನ್ನು ಕೊಡುತ್ತವೆ.

ಪುಟ ೫೨. ಗತಪ್ರಾಣನಾಗು—ಸಾಯು. ಅಸಹಾಯಶೂರ—ಇನ್ನೊಬ್ಬರ ಸಹಾಯವನ್ನು ಕೋರದ ಬಲಶಾಲಿ. ನಿರ್ನಾಮ—ಹೆಸರಿಲ್ಲದೆ ಹೋಗು. ಬಿಲ್ಗಾರ—ಬಿಲ್ಲನ್ನು ಹಿಡಿದು ಯುದ್ಧಮಾಡುವವನು. ಸರಿಮಿಗಿಲು—ಸಮಹೆಚ್ಚು. ಖರ—ತೀಕ್ಷ್ಣವಾದ, ಕತ್ತೆ, ರಾಕ್ಷಸ. ಪರಿಭವ—ಅವಮಾನ. ಭೀಷಣ—ಭಯಂಕರವಾದ. ಮಾರೀಚ—ಇವನು ತಾಟಕೆಯ ಮಗ. ಬಾಲಕಾಂಡದಲ್ಲಿ ಇವನ ವಿಚಾರವು ವರ್ಣಿತವಾಗಿದೆ.

ಪುಟ ೫೪. ಹಿತವಚನ—ಸದ್ಯದಲ್ಲಿ ಕೇಳುವುದಕ್ಕೆ ಕಟುವಾಗಿದ್ದರೂ ಕೊನೆಯಲ್ಲಿ ಸವಿಯಾಗುವಂತೆ ಕೆಲಸಮಾಡೆಂದು ಹೇಳುವ ಮಾತು. ನನಗೂ. . . . ದಕ್ಕೀತು—ನಾನೂ ತಮ್ಮನ ಹಾಗೆಯೇ ಸತ್ತೇನು. ಹೊಂಬಣ್ಣ—ಬಂಗಾರದ ಬಣ್ಣ. ಠಕ್ಕಿಸು—ಮೋಸಮಾಡು. ಹೇಡಿ—ನಪುಂಸಕ, ಗಂಡಸಲ್ಲದವನು. ಜರೆ—ದೂಷಿಸು.

ಪುಟ ೫೫. ವಿಪತ್ತು—ಕೇಡು. ಆರ್ತನಾದ—ಹಿಂಸೆಯಿಂದ ಗಟ್ಟಿಯಾಗಿ ಗೋಳಾಡುವುದು. ಪ್ರಾಣಕಾಂತ—ಗಂಡ. ದುರಭಿಪ್ರಾಯ—ಕೆಟ್ಟ ಆಸೆ. ಮಟ್ಟು ಮೀರು—ಮರ್ಯಾದೆಯನ್ನು ಉಲ್ಲಂಘಿಸು. ಕಟೂಕ್ತಿ—ಕಹಿಯಾದ ಮಾತು.

ಪುಟ ೫೬. ವಿಧಿವಿಪರ್ಯಾಸ—ಅದೃಷ್ಟದ ಬದಲಾವಣೆ. ರಾಗ—ಪ್ರೀತಿ. ಎರಕೆ—ಇದನ್ನು ರೆಕ್ಕೆ ಎಂದು ಹೇಳುತ್ತಾರೆ. ಉಪಟಳ—ತೊಂದರೆ. ಪಕ್ಷವಿಚ್ಛೇದನ—ಎರಕೆಯನ್ನು ಕಡಿದುಹಾಕುವಿಕೆ.

ಪುಟ ೫೭. ಅಗಲಿಕೆ—ವಿರಹ. ಹುಲುಮೃಗ—ಹುಲ್ಲಿನಂತೆ ಹಗುರವಾದ ಮೃಗ. ಎರಳೆ—ಜಿಂಕೆ. ನೆತ್ತರ್—ರಕ್ತ. ಕಂಠಗತಪ್ರಾಣ—ಕತ್ತಿನ ವರೆಗೆ ಬಂದಿರುವ ಪ್ರಾಣ, ಸಾಯುವುದರಲ್ಲಿದ್ದ.

ಪುಟ ೫೮. ತಿಲತರ್ಪಣಮಾಡು—ಸತ್ತವರ ಹೆಸರನ್ನು ಹೇಳಿಕೊಂಡು ಎಳ್ಳನ್ನೂ ನೀರನ್ನೂ ಬಿಡು. ಇದರಿಂದ ಪಿತೃದೇವತೆಗಳಿಗೆ ತೃಪ್ತಿಯಾಗುತ್ತದೆಯೆಂದು ವೇದಮತದಲ್ಲಿ ಶ್ರದ್ಧೆಯುಳ್ಳವರು ನಂಬುತ್ತಾರೆ. ಅಯೋಮುಖಿ—ಉಕ್ಕಿನ ಹಾಗೆ ಕಠಿಣವಾದ ಮುಸುಡಿನವಳು. ಅವನು . . . . ಶೂರ್ಪಣಖಿಯು . . . . ಕಾಣಿಸಿದನು—ಅವನು ಇವಳ ಕಿವಿಮೂಗುಗಳನ್ನೂ ಕುಯ್ದುಬಿಟ್ಟನು. ಅರ್ಪಿಸು—ನೀಡು. ಭುಜಿಸು—ತಿನ್ನು.

ಪುಟ ೫೯. ಇಂಚರ—ಇಂಪಾದ ದನಿ. ವಿಹರಣ—ಆಟ. ನೀರ್ವಕ್ಕಿ—ನೀರಲ್ಲಿ ಓಡಾಡುವ ಹಕ್ಕಿ.

ಕಿಷ್ಕಿಂಧಾಕಾಂಡ

ಪುಟ ೫೯. ಇನ್ಮಾವು—ಸಿಹಿಮಾವು. ಪರಿಮಳ—ವಾಸನೆ. ಮಂದಮಂದ—ಮೆಲ್ಲಮೆಲ್ಲನೆ. ವಸಂತಋತು—ಚೈತ್ರವೈಶಾಖಮಾಸ. ನಲ್ಮಾತು—ಹಿತವಾದ ಮಾತು. ಜಾನಕಿ—ಜನಕರಾಜನ ಮಗಳು. ಮೈಥಿಲಿ—ಮಿಥಿಲೆಯ ಅರಸುಮಗಳು. ಪ್ರಲಾಪಿಸು—ಅಳು. ಪ್ರಾಕೃತರು—ಅಸಂಸ್ಕೃತರು, ಒರಟರು.

ಪುಟ ೬೧. ಆಶಯ—ಅಭಿಪ್ರಾಯ. ನಿಮ್ಮ ಮಾತಿನ . . . . ಆತುರಗೊಂಡಿವೆ—ನನಗೆ ನಿಮ್ಮ ಮಾತನ್ನು ಕೇಳಬೇಕೆಂಬ ಆತುರವಿದೆ.

ಪುಟ ೬೨. ಅಗ್ನಿಸಾಕ್ಷಿಯಾಗಿ—ಬೆಂಕಿಯನ್ನು ಮುಂದುಗಡೆ ಇರಿಸಿಕೊಂಡು. ಅಪಹೃತಳಾದ—ಕದಿಯಲ್ಪಟ್ಟ. ಹಗೆತನ—ವೈರ. ಎದೆಗೆಡು—ಅಂಜು.

ಪುಟ ೬೩. ಕೆನ್ನೀರು—ರಕ್ತ. ಪಲಾಯನಮಾಡು—ಓಡಿಹೋಗು.

ಪುಟ ೬೪. ಸಖ್ಯ—ಸ್ನೇಹ.

ಪುಟ ೬೫. ಕೂರಂಬು—ಮೊನೆಯಾದ ಬಾಣ.

ಪುಟ ೬೬. ಕುತ್ತಿಗೆ—ಕೊರಲು. ಒಸರು—ಜಿನುಗು. ಇಂಗಿಹೋಗು—ಬತ್ತಿ ಹೋಗು. ಒಡನಾಡಿ—ಸಂಗಡವಿರುವವನು.

ಪುಟ ೬೭. ಪ್ರೇತಕರ್ಮ—ಸತ್ತವರಿಗೆ ಮಾಡುವ ದಹನ ಸಂಚಯನ ಮೊದಲಾದ ಕಾರ್ಯಗಳು. ಯಥಾವಿಧಿ—ಶಾಸ್ತ್ರದಲ್ಲಿ ಹೇಳಿರುವಂತೆ. ಜಾಂಬವಂತ—ಈತನು ಕರಡಿಗಳ ಪಡೆಯ ಯಜಮಾನ. ದಟ್ಟವಾಗಿ—ಒತ್ತಾಗಿ.

ಪುಟ ೬೮. ಸೀತಾವಿಯೋಗ—ಸೀತೆಯ ಅಗಲಿಕೆ. ಕಾಲೋಚಿತವಾದ—ಸಮಯಕ್ಕೆ ತಕ್ಕ. ಆಡಂಬರ—ಗಲಭೆ. ಜೈತ್ರಯಾತ್ರೆ—ಹಗೆಗಳನ್ನು ಜಯಿಸುವುದಕ್ಕೆ ಹೊರಡುವುದು. ಬಿಂಕ—ಗರ್ವ. ಅಂತಃಪುರ—ಅರಮನೆಯಲ್ಲಿ ಹೆಂಗುಸರು ವಾಸಮಾಡುವ ಸ್ಥಳ. ವಿಷಯಸುಖಾನುಭವ—ಹೆಂಗುಸರೊಡನೆ ಕ್ರೀಡಿಸುತ್ತ ಸಂತೋಷವಾಗಿರುವಿಕೆ. ಮೈಮರೆ—ಎಚ್ಚರದಪ್ಪು. ತಾಮಸ—ಸಾವಕಾಶ.

ಪುಟ ೬೯. ಉಪಶಮಿಸು—ಕಮ್ಮಿಮಾಡು. ತಳುವಿದರೆ—ಸಾವಕಾಶ ಮಾಡಿದರೆ. ಅಭಿಲಾಷೆ—ಆಸೆ. ನಿಗುದಿ—ಕ್ಲುಪ್ತವಾಗಿರುವ ಕಾಲ.

ಪುಟ ೭೦. ನಿರಾಹಾರಮಾಡಿ—ಏನನ್ನೂ ತಿನ್ನದೆ.

ಪುಟ ೭೨. ಅಮೋಘ—ಎಂದಿಗೂ ವ್ಯರ್ಥವಾಗದ. ಅಭಿಮಾನಶಾಲಿ—ದೊಡ್ಡಸ್ತಿಕೆಯುಳ್ಳವನು. ಪೌರುಷ—ಸಾಹಸ. ಅಪಕೀರ್ತಿ—ದೂರು. ಆಗ ಅಪಕೀರ್ತಿ . . . . ದಾಟಲಾಪಿರಿ—ದೂರನ್ನು ಹೇಗೆ ತಪ್ಪಿಸಿಕೊಂಡೀರಿ? ಒಕ್ಕಣಿಸು—ಹೇಳು. ದೀರ್ಘಾಯುಸ್ಸು—ಬಹುಕಾಲದ ವರೆಗೆ ಬದುಕಿರುವುದು.

ಪುಟ ೭೩. ಪ್ರಶಂಸೆಮಾಡು—ಹೊಗಳು. ವಾಮನನು ತ್ರಿವಿಕ್ರಮನಾಗಿ ಬಳೆದ ರೀತಿ—ಹಿಂದೆ ದೇವರಾಜ್ಯವನ್ನು ಆಕ್ರಮಿಸಿಕೊಂಡಿದ್ದ ಬಲಿಯನ್ನು ಗೆಲ್ಲುವುದಕ್ಕಾಗಿ ವಿಷ್ಣುವು ವಾಮನರೂಪದಿಂದ ಅವನ ಬಳಿಗೆ ಹೋಗಿ, ಅವನಿಂದ ಮೂರ ಹಜ್ಜೆಗಳ ನೆಲವನ್ನು ದಾನವಾಗಿ ತೆಗೆದುಕೊಂಡು, ತರುವಾಯ ತ್ರಿವಿಕ್ರಮನಾಗಿ ಬಳೆದು ಒಂದು ಅಡಿಯಿಂದ ಭೂಮಿಯನ್ನೂ, ಇನ್ನೊಂದು ಅಡಿಯಿಂದ ಆಕಾಶವನ್ನೂ ಆಕ್ರಮಿಸಿ, ಮೂರನೆಯ ಅಡಿಯಿಂದ ಅವನನ್ನು ಪಾತಾಳಕ್ಕೆ ತುಳಿದುಬಿಟ್ಟನು, ಎಂದು ಪೂರ್ವಕಥೆ.

ಸುಂದರಕಾಂಡ

ಪುಟ ೭೪. ಒಯ್ಯಲ್ಪಟ್ಟ—ತೆಗೆದುಕೊಂಡುಹೋದ. ಹಾರುವುದಕ್ಕಾಗಿ . . . . ಬೋಧೆಯಾಯಿತು—ಬಹುಭಾರವಾದ ಪದಾರ್ಥವನ್ನು ಎತ್ತುವ ಮನುಷ್ಯನು ರಕ್ತವನ್ನು ಕಾರುತ್ತ ನಿಟ್ಟುಸಿರನ್ನು ಬಿಡುತ್ತಾನೆ. ಹೀಗೆ ಹೇಳಿದುದರಿಂದ ಹನುಮಂತನು ಬಲು ದೊಡ್ಡ ಭಾರವಾದ ದೇಹವುಳ್ಳವನಾಗಿದ್ದನು, ಎಂದು ಅಭಿಪ್ರಾಯ.

ಮೈನಾಕ—ಇವನು ಹಿಮವತ್ಪರ್ವತನ ಮಗ. ಮಾರುತಿ—ವಾಯುವಿನ ಮಗ. ಇದರಿಂದ ಆಂಜನೇಯನು ವೇಗಶಾಲಿಯೆಂದು ಹೇಳಿದ ಹಾಗೆ ಆಯಿತು. ದಣಿವು—ಬಳಲಿಕೆ. ಕಾಪಿಡು—ರಕ್ಷಿಸು. ಕಾ ಪಾಲನೇ ಎಂದು ಧಾತು.

ಪುಟ ೭೫. ಸ್ವೀಕರಿಸು—ಒಪ್ಪಿಕೊಳ್ಳು. ಧಾವಿಸು—ಓಡು. ವಿಶಾಲವಾಗಿ—ಅಗಲವಾಗಿ. ತಂತ್ರ—ಉಪಾಯ. ಅಗಸೆಯ ಬಾಗಿಲು—ಊರ ದೊಡ್ಡ ಬಾಗಿಲು.

ಪುಟ ೭೬. ಪಶ್ಚಿಮ ಪರ್ವತ—ಸೂರ್ಯನು ಮುಳುಗುವ ಕಡೆಯ ಬೆಟ್ಟ. ಸೂರ್ಯಕಾಂತಶಿಲೆ—ಸೂರ್ಯನ ಬಿಸಿಲನ್ನು ಹೀರಿ ಜ್ವಲಿಸುವ ಒಂದು ಬಗೆಯ ಕಲ್ಲು. ತೇಜೋರಾಜಿ—ಬೆಳಕಿನ ಗುಂಪು. ಪಾಟಲವರ್ಣ—ಕೊಂಚ ಬಿಳುಪಾದ ಕೆಂಪು ಬಣ್ಣ. ಪಡುಗಡೆ—ಪಶ್ಚಿಮ ದಿಕ್ಕು. ಕೆಚ್ಚನಾಗು—ಕೆಂಪಾಗು. ಕನ್ನೈದಿಲೆ—ಕರಿಯ ತಾವರೆ. ಮೂಡಿದುವು—ಹುಟ್ಟಿದುವು. ಕಾವಳ—ಕತ್ತಲೆ. ಪರಾಜಿತೆಯಾಗು—ಸೋತುಹೋಗು. ರಾತ್ರಿಯೆಂಬ ಹೆಂಗುಸು . . . . ಕಾಣಿಸಿತು—ಹೊಸದಾಗಿ ಊರಿಗೆ ಬಂದ ಪರಿಚಿತರಿಗೆ ಊರ ಅಂದವನ್ನೆಲ್ಲ ದೀವಿಗೆಯನ್ನು ಹಿಡಿದು ತೋರುವುದು ಪದ್ಧತಿ. ದಟ್ಟವಾದ ಬೆಳುದಿಂಗಳಲ್ಲಿ ಅವನು ಊರನ್ನೆಲ್ಲ ಚೆನ್ನಾಗಿ ನೋಡಿದನು, ಎಂದು ಅಭಿಪ್ರಾಯ.

ಪುಟ ೭೭. ಭೋಗಸ್ತ್ರೀಯರು—ಪಟ್ಟದ ರಾಣಿಯರಲ್ಲದೆ ದೊರೆಯ ಉಪಭೋಗಕ್ಕಾಗಿಯೇ ಇರುವ ಹೆಂಗುಸರು. ಉದ್ಯಾನ—ತೋಟ. ಮಮಕಾರ—ನನ್ನದು, ಎಂಬ ತಿಳುವಳಿಕೆ. ವೈರಾಗ್ಯ—ಎಲ್ಲ ಬಗೆಯ ದೇಹಸುಖದ ಆಸೆಯನ್ನೂ ಬಿಟ್ಟಿರುವಿಕೆ. ಬೆಲ್ಲವತ್ತ—ಬಿಲ್ವಪತ್ರೆ.

ಪುಟ ೭೮. ವಿಸ್ಮಯ—ಆಶ್ಚರ್ಯ. ರೂಪ—ಚೆಲುವಿಕೆ. ಲಾವಣ್ಯ—ಹೊಳಪು. ವ್ಯಾಮೋಹ—ಅತ್ಯಾಸೆ. ತಿರಸ್ಕರಿಸು—ಕೀಳಾಗುವಂತೆ ಮಾಡು. ಅಪರರಾತ್ರ—ರಾತ್ರಿಯ ಎರಡನೆಯ ಅರ್ಧಭಾಗ. ವಾರವಿಲಾಸಿನೀ—ಸೂಳೆ. ಸಕಲಾಚಾರನಿರ್ವಾಹಕ—ಸಮಸ್ತವಾದ ಒಳ್ಳೆಯ ನಡತೆಯನ್ನೂ ನಡೆಯಿಸುವವನು.

ಪುಟ ೭೯. ಅಪಚಾರಪಡು—ತಪ್ಪನ್ನು ಮಾಡು. ಇದುವರೆಗೂ . . . . ಬಿಡವು—ಯುದ್ಧಾತುರನಾದ ಲಕ್ಷ್ಮಣನು ನಿನ್ನನ್ನು ಕೊಂದುಹಾಕುತ್ತಾನೆ. ಅನುಕೂಲೆಯಾಗು—ಆಸೆಗೆ ತಕ್ಕಂತೆ ನಡೆದುಕೊಳ್ಳು. ಪ್ರಭು—ದೊರೆ. ಖೂಳ—ದುಷ್ಟ.

ಪುಟ ೮೦. ಇದುವರೆಗೂ . . . . ಆನಂದವುಂಟುಮಾಡಿತು—ರಾಕ್ಷಸಿಯರ ಅಂಜಿಕೆಯ ಮಾತನ್ನು ಕೇಳಿ ಬೇಸತ್ತಿದ್ದ ಸೀತೆಯು ತನ್ನ ಗಂಡನ ಸುದ್ದಿಯನ್ನು ಕೇಳಿ ಸಂತೋಷಪಟ್ಟಳು. ದುಸ್ಸ್ವಪ್ನ—ಕೆಟ್ಟ ಕನಸು. ಕನಸಿನಲ್ಲಿ ಕೋತಿಯನ್ನು ಕಾಣಬಾರದು, ಎಂದು ಹಿರಿಯರು ಹೇಳುತ್ತಾರೆ. ತಾರಿಹೋಗು—ಬಡವಾಗು.

ಪುಟ ೮೧. ಮಣಿಯುವನಲ್ಲ—ತಗ್ಗುವನಲ್ಲ.

ಪುಟ ೮೨. ಪ್ರಭಾವ—ಶಕ್ತಿ. ಭರ್ತೃ—ಗಂಡ. ಕಿಲುಬು ಹತ್ತು—ಮಂಕಾಗು.

ಪುಟ ೮೩. ಚೂಡಾಮಣಿ—ತಲೆಗೆ ಇರಿಸಿಕೊಳ್ಳುವ ಒಡವೆ. ಧಾಳಾಧೂಳಿ ಮಾಡು—ಚೆಲ್ಲಾಡು. ನಿಗ್ರಹ—ಚೆನ್ನಾಗಿ ಹಿಡಿಯುವಿಕೆ. ಸಿಂಹವಿಕ್ರಮರು—ಸಿಂಹಗಳಂತೆ ಸಾಮರ್ಥ್ಯಶಾಲಿಗಳು.

ಪುಟ ೮೪. ಕವಿ—ಮೇಲೆ ಬೀಳು. ನಿರ್ಮೂಲಮಾಡು—ಬೇರು ಇಲ್ಲದಂತೆ ಮಾಡು, ಕೊಲ್ಲು. ಅಳಿದುಳಿದ—ಸತ್ತು ಬದುಕಿದ. ದಿವ್ಯಾಸ್ತ್ರ—ದೇವತಾಮಂತ್ರದಿಂದ ಬಿಡುವ ಬಾಣ.

ಪುಟ ೮೫. ಬಲ್ಲಾಳು—ಬಹುಬಲಶಾಲಿ. ಇಕ್ಕೆಲ—ಎರಡು ಪಕ್ಕ. ಕಾರಮೋಡ—ಮಳೆಗಾಲದ ಮೋಡ, ಕಪ್ಪು ಮೋಡ. ಮೂರ್ತಿ—ಮೆಯ್. ಮೊತ್ತ—ಗುಂಪು. ನಂದಿಕೇಶ್ವರ—ಮಹಾದೇವನ ಸೇನಾಪತಿ.

ಪುಟ ೮೬. ವಿರೂಪ—ವಿಕಾರರೂಪ. ನೆಲೆ—ಇರುವ ಸ್ಥಳ. ಸೊಕ್ಕು—ಗರ್ವ. ಮಡುಹು—ಕೊಲ್ಲು. ಕಂಡ—ಮಾಂಸ.

ಪುಟ ೮೭. ಬಿಂಕ—ಹೆಮ್ಮೆ. ಡಂಗುರಹಾಕು—ಸಾರು. ಕಂಚುಕಿ—ಆಳು. ಚೆಂಗಣಿಗಿಲೆ—ಕೆಂಪು ಕಣಿಗಿಲೆ. ಜೊಂಪೆ—ಗೊಂಚಲು.

ಪುಟ ೮೯. ಬೊಬ್ಬೆಹಾಕು—ಗಟ್ಟಿಯಾಗಿ ಕಿರಿಚು. ಯಮದೂತರ ಬಳಿಗೆ ಅಟ್ಟು—ಸಾಯಿಸು. ಅಪಕೀರ್ತಿ—ದೂರು. ಇದನ್ನು ಕರಿದಾಗಿದೆಯೆಂದು ವರ್ಣಿಸುತ್ತಾರೆ. ಮುಗಿಲು—ಮೋಡ, ಅಂತರಿಕ್ಷ. ವೈಧವ್ಯ—ಗಂಡನನ್ನು ಕಳೆದುಕೊಂಡಿರುವಿಕೆ. ವಿಧವೆಯರು ತಲೆಯನ್ನು ಕೆದರಿಕೊಂಡಿರುವುದು ಪದ್ಧತಿ. ಚೀತ್ಕಾರ ಮಾಡು—ಕಿರಿಚು.

ಪುಟ ೯೦. ಉಗ್ರವಾಗು—ಹೆಚ್ಚು. ರಾಮದೂತ. . . . ಎಡೆಮಾಡಿಬಿಟ್ಟನು—ಹನುಮಂತನು ಲಂಕೆಗೆ ಕಾಲಿಟ್ಟ ಕೂಡಲೇ ಊರವರು ಸಾಯಲಿಕ್ಕೆ ಮೊದಲಾಯಿತು. ಯಥೇಚ್ಛೆಯಾಗಿ—ಮನಬಂದಂತೆ.

ಪುಟ ೯೧. ಕಾಹು—ಕಾವಲು.

ಯುದ್ಧಕಾಂಡ

ಪುಟ ೯೨. ನಿರ್ದುಷ್ಟವಾದ—ಕೆಟ್ಟುದಲ್ಲದ. ವೀರಾಗ್ರೇಸರ—ವೀರರಲ್ಲಿ ಶ್ರೇಷ್ಠ. ವೀರರು ಬಿಲ್ಲನ್ನು ನೋಡಿದರೆ ಅವರಿಗೆ ಯುದ್ಧಾಭಿಲಾಷೆಯುಂಟೆಂದು ಸೂಚಿತವಾಗುತ್ತದೆ. ಭಾವ—ಮನದಲ್ಲಿರುವ ಅಭಿಪ್ರಾಯ. ದಾಳಿಯಿಡು—ಮುತ್ತು. ಅರಣ್ಯ—ಕಾಡು. ಸೊಲ್ಲು—ಸದ್ದು.

ಪುಟ ೯೩. ಈ ಅಪರಿಮಿತ. . . . ಹೆದ್ದಾರಿಗಳಾದುವು—ಲೆಕ್ಕವಿಲ್ಲದ ಅಪಾರವಾದ ಕಪಿಸೇನೆಯು ಹೊರಟಿತು. ತುಂತುರು—ಸಣ್ಣ ಹನಿ. ಸಾವಿರ ಬಾಯ ಶೇಷ

ನಿಂದಲೂ ಆಗುವುದಿಲ್ಲ—ವರ್ಣಿಸುವುದಕ್ಕೆ ಯಾರಿಗೂ ಶಕ್ತಿಯಿಲ್ಲ. ದಿಬ್ಬ—ರಾಶಿ. ದೃಷ್ಟಿಪಥ—ಕಣ್ಣಿಗೆ ಕಾಣುವಷ್ಟು ದೂರ (Horizon). ಅಗಾಧ—ಆಳ.

ಪುಟ ೯೪. ಆದೇಶ—ಅಪ್ಪಣೆ. ಮಲಯಮಾರುತ—ಗಂಧದ ಮರದ ವಾಸನೆಯೊಡನೆ ಬೀಸುವ ಗಾಳಿ. ಗೂಢಚಾರರು—ಬೇಹಿನವರು (Spies). ತಲೆಯಾಡಿಸು—ಸರಿಯೆಂದು ಒಪ್ಪು.

ಪುಟ ೯೫. ಪ್ರತಿಬಂಧಕ—ತಡೆ. ವಿನಯಶಾಲಿ—ತುಂಬ ನಯವಾದ ಗುಣದವನು. ಸಲ್ಲದ ಬಯಕೆ—ಅಯೋಗ್ಯವಾದ ಆಸೆ. ಕೇಸುರಿ—ಕೆಂಪಗಿರುವ ಉರಿ. ಮುಗ್ಗಿಸು—ಕಮ್ಮಿ ಮಾಡು.

ಪುಟ ೯೬. ವಧಿಸು—ಕೊಲ್ಲು. ತ್ರಿಲೋಕಾಧೀಶ್ವರ—ಸ್ವರ್ಗ, ಮರ್ತ್ಯ, ಪಾತಾಳಗಳೆಂಬ ಮೂರುಲೋಕಗಳಿಗೆ ಒಡೆಯ. ಬಗುಳು—ಹೇಳು. ಇದು ನಿಂದಾರ್ಥದಲ್ಲಿ ಪ್ರಯೋಗಿಸಲ್ಪಡುತ್ತದೆ. ಹಗೆ—ದ್ವೇಷಿ. ಕಟು—ಕಹಿ. ದುರ್ಭಾಷೆ—ಕೆಟ್ಟ ಮಾತು. ತ್ಯಾಗಮಾಡು—ಬಿಡು.

ಪುಟ ೯೭. ಶರಣಾಗತ—ನೀನೇ ನನ್ನನ್ನು ಕಾಪಿಡಬೇಕೆಂದು ಬಂದವನು. ಹಗೆಯ ಬೆನ್ನಲ್ಲಿ ಬರುವುದು—ಹಗೆಯ ಒಡಹುಟ್ಟಿದವರಾಗಿರುವುದು. ಇಂಗಿತ—ಹೃದಯದಲ್ಲಿರುವ ಅಭಿಪ್ರಾಯ.

ಪುಟ ೯೮. ಮೆಯ್ದೋರು—ಪ್ರತ್ಯಕ್ಷನಾಗು. ಶೋಷಿಸು—ಒಣಗಿಸು. ಬೇಗೆ—ದಾಹಕಶಕ್ತಿ. ಉಲ್ಲೋಲಕಲ್ಲೋಲ—ದೊಡ್ಡ ದೊಡ್ಡ ಅಲೆಗಳು. ಮದವಿಳಿ—ಸೊಕ್ಕು ಅಡಗು. ಮರುಭೂಮಿ—ಮರಳ ಕಾಡು. ಶಿಲ್ಪಿ—ಇಂಜನಿಯರ್.

ಪುಟ ೯೯. ಒಟ್ಟು—ಗುಡ್ಡೆಹಾಕು. ತತ್ತ್ವಜ್ಞಾನ—ನಿಶ್ಚಯವಾದ ಅರಿವು. ಮರ್ಮ—ಒಳಗುಟ್ಟು.

ಪುಟ ೧೦೦. ಲೋಕೈಕವೀರ—ಪ್ರಪಂಚಕ್ಕೆಲ್ಲ ಮುಖ್ಯನಾದ ವೀರ.

ಪುಟ ೧೦೧. ಹದುಳಿಸು—ಸಂತೈಸಿಕೊಳ್ಳು. ಸಾಂತ್ವವಚನ—ಮನಸ್ಸಿಗೆ ಸಮಾಧಾನವುಂಟುಮಾಡುವ ಮಾತು. ಮನೋಗತ—ಮನದಲ್ಲಿರುವ ಅಭಿಪ್ರಾಯ.

ಪುಟ. ೧೦೨. ರಾಕ್ಷಸಾವಾಸ—ರಾಕ್ಷಸರು ವಾಸಮಾಡುವ ಊರು. ಸೊಬಗು—ಸೊಗಸು. ಬೆಳ್ಗೊಡೆ—ಬಿಳಿಯ ಕೊಡೆ.

ಪುಟ ೧೦೩. ಪ್ರಾಕಾರ—ಕೋಟೆಯ ಗೋಡೆ. ಯಮಪುರಿಗೆ ಸಾಗಿಸು—ಕೊಲ್ಲು. ತಲೆಬಾಗಿಸು—ಅವಮಾನಪಡು. ಪಿತಾಮಹ—ಬ್ರಹ್ಮ, ತಂದೆಯ ತಂದೆ. ತಾಯ ತಂದೆಗೆ ಮಾತಾಮಹನೆಂದು ಹೆಸರು. ಕಾವಿಯುಡು—ಸನ್ಯಾಸಿಯಾಗು.

ಪುಟ ೧೦೪. ಸೌಧ—ಅರಮನೆ. ಶಿಖರ—ಗೋಪುರ. ದೌತ್ಯ—ದೂತಕಾರ್ಯ. ದಂಡೋಪಾಯ—ನಾಲ್ಕನೆಯ ಉಪಾಯ, ಸಾಮ ದಾನ ಭೇದ ದಂಡವೆಂದು

ನಾಲ್ಕು ಉಪಾಯಗಳು. ಪ್ರಳಯ ಸಮಯ—ನಾಶವಾಗುವ ಸಮಯ. ರಭಸ—ವೇಗ. ಹೋಗಬೇಡವೆನ್ನುವುದೂ, ಹೊರಟಾಗ ಎಲ್ಲಿಗೆ ಹೋಗುತ್ತೀಯೆ ಎನ್ನುವುದೂ, ಅಪ ಶಕುನ.

ಪುಟ ೧೦೪. ಟೊಪ್ಪಿಗೆ—ಕುಲಾವಿ. ಕವಚ—ಅಂಗಿ. ಕಯ್ದು—ಆಯುಧ.

ಪುಟ ೧೦೫. ಮುಷ್ಟಿಪ್ರಹಾರ—ಕಯ್ಯಿಂದ ಗುದ್ದುವಿಕೆ. ಪಾದಪ್ರಹಾರ—ಒದೆ. ಇತ್ತಂಡ—ಎರಡು ಕಡೆ. ವೆಗ್ಗಳಿಸು—ಹೆಚ್ಚು. ಸರ್ಪಾಸ್ತ್ರ—ಹಾವಿನ ಬಾಣ. ನಾಗಪಾಶ—ಹಾವುಗಳೆಂಬ ಹಗ್ಗ. ಹೋರು—ಯುದ್ಧಮಾಡು.

ಪುಟ ೧೦೬. ಕಾಲನ ಮನೆ ಸೇರು—ಸತ್ತುಹೋಗು. ಮಡಿ—ಸಾಯುವುದು. ಗತಿವಿಶೇಷ—ನಾನಾವಿಧವಾಗಿ ತಿರುಗುವಿಕೆ. ತೂಲ—ಹತ್ತಿ.

ಪುಟ ೧೦೭. ಬಾಣಘಾತ—ಬಾಣದ ಹೊಡೆತ. ಕೈಮಾಡು—ಯುದ್ಧಮಾಡು. ಸೋಲಿನ ಸಂಬಳವನ್ನು ಗಳಿಸು—ಸೋತುಹೋಗು.

ಪುಟ ೧೦೮. ಶೈತ್ಯೋಪಚಾರ—ಕೆಲಸಮಾಡಿ ದಣಿದು ಬಂದವರಿಗೆ ಪಾನಕ ಮುಂತಾದುವನ್ನು ಕೊಟ್ಟು ಬೀಸಿ ದಣಿವಾರಿಸುವ ಕೆಲಸ.

ಪುಟ ೧೦೯. ಘೋಷ—ಸದ್ದು. ಅಂತಕನ ನಗರಿಗೆ ನಡೆ—ಸತ್ತುಹೋಗು. ಗತಾಸುವಾಗು—ಸಾಯು. ಪಂಚತ್ವ—ಮರಣ. ಗತಕಾಯ—ಸತ್ತ ದೇಹ.

ಪುಟ ೧೧೦. ನಿಶ್ಚೇಷ್ಟಿತವಾಗಿರು—ಸತ್ತವರಂತೆ ಇರು.

ಪುಟ ೧೧೧. ಕಾಲನ ಊರ ದಾರಿಯನ್ನು ಹಿಡಿ—ಸತ್ತುಹೋಗು. ನಿಶಿತ ಬಾಣ—ಮೊನೆಯಾದ ಬಾಣ. ಮಾಯೆ—ಮೋಸ.

ಪುಟ ೧೧೨. ಮಾರಣಹೋಮ—ಹಗೆಗಳು ಸಾಯುವುದಕ್ಕಾಗಿ ಮಾಡುವ ಯಜ್ಞ. ನಿಕುಂಭಿಲಾ—ಇದು ಲಂಕಾನಗರದಲ್ಲಿದ್ದ ರಹಸ್ಯವಾದ ಸ್ಥಲ. ಕಪಟೋಪಾಯನಿಪುಣ—ಮೋಸಮಾಡುವುದರಲ್ಲಿ ಬಲು ಜಾಣನು.

ಪುಟ ೧೧೩. ಕೀನಾಶ—ಯಮ. ವಿಸ್ಮಯ—ಆಶ್ಚರ್ಯ. ಹೆದೆ—ಬಿಲ್ಲನ್ನು ಬಾಗಿಸಿ ಕಟ್ಟುವ ಹಗ್ಗ.

ಪುಟ ೧೧೪. ಮಾರ್ಗಣ—ಬಾಣ. ರಂಧ್ರ—ತೂತು. ಬತ್ತಳಿಕೆ—ಬಾಣಗಳನ್ನು ಇರಿಸುವ ಚೀಲ. ಭ್ರಾತೃವಾತ್ಸಲ್ಯ—ಅಣ್ಣನೆಂಬ ಪ್ರೀತಿ.

ಪುಟ ೧೧೫. ಹತಭಾಗ್ಯ—ದುರದೃಷ್ಟ. ಹೆಮ್ಮೆ—ಅಹಂಕಾರ. ಸಹಗಮನ—ಸತ್ತ ಗಂಡನ ಸಂಗಡ ಹೆಂಡತಿಯೂ ಬೆಂಕಿಯಲ್ಲಿ ಬಿದ್ದು ಸಾಯುವುದು.

ಪುಟ ೧೧೬. ತಲೆಮಣಿ—ಶಿರೋರತ್ನ. ಅರುಂಧತಿ—ವಸಿಷ್ಠರ ಹೆಂಡತಿ. ಚಿರಕಾಲ—ಬಹುಕಾಲ.

ಪುಟ ೧೧೭. ಮಾಯಾಮೃಗ—ಮೋಸದ ಜಿಂಕೆಯಾಗಿದ್ದ ಮಾರೀಚ.

ಪುಟ ೧೧೮. ಶುಭವಾರ್ತೆ—ಒಳ್ಳೆಯ ಸುದ್ದಿ. ಸುಖಬಾಷ್ಪ—ಸಂತೋಷದ ಹೆಚ್ಚಿಗೆಯಿಂದ ಬರುವ ಕಣ್ಣೀರು. ಇದು ತಣ್ಣಗೆ ಇದೆ, ಎಂದು ಹೇಳುತ್ತಾರೆ. ಹಾವುಗೆ—ಪಾದುಕೆ. ತಕ್ಕಯಿಸು—ಅಪ್ಪಿಕೊಳ್ಳು.

ಪುಟ ೧೧೯. ವಿಸರ್ಜನೆಮಾಡು—ತೆಗೆದುಹಾಕು. ಪೀತಾಂಬರ—ಹಳದಿಯ ಪಟ್ಟೆಯ ಮಡಿ. ಸೇವಾವಿಚಕ್ಷಣ—ಊಳಿಗಮಾಡುವುದರಲ್ಲಿ ಜಾಣ.

ಪುಟ ೧೨೧. ನಾಡು—ದೇಶ.

2093—35 ಬೆಂಗಳೂರು ಸಿಟಿ ಬೆಂಗಳೂರು ಪ್ರೆಸ್ಸಿನಲ್ಲಿ ಸೂಪರಿಂಟೆಂಡೆಂಟರಾದ
ಟಿ. ಸುಬ್ರಹ್ಮಣ್ಯ ಅಯ್ಯರವರಿಂದ ಮುದ್ರಿಸಲ್ಪಟ್ಟಿತು.

THE BANGALORE PRESS
LAKE VIEW
MYSORE ROAD
BANGALORE CITY
2093—32